ಶನಿವಾರ, ಜನವರಿ 13, 2024 | ₹ 7.00

www.prajavani.net

prajavani.net prajavani prajavani prajavani

# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

**ಭರತನಾಟ್ಯ**
ಬೆಂಗಳೂರಿನ ಎಡಿಎ ರಂಗಮಂದಿರದಲ್ಲಿ
ಸಪ್ತಸ್ವರ ಆರ್ಟ್ಸ್ ಮತ್ತು ಕ್ರಿಯೇಷನ್ಸ್
ಶುಕ್ರವಾರ ಆಯೋಜಿಸಿದ್ದ
ರಂಗಪ್ರವೇಶ ಕಾರ್ಯಕ್ರಮದಲ್ಲಿ
ವಿಭಾ ಎಸ್. ಪ್ರಸಾದ್ ಅವರು
ಭರತನಾಟ್ಯ ಪ್ರದರ್ಶಿಸಿದರು




In a world gone tame, the new Sonet is here to set you free. Sleek in design, throbbing with power, gloriously polished and spacious on the inside; it's packed with tech & features you'll be hard-pressed to find anywhere else in the segment. So, climb into the new Sonet and let your wild side come out to play.

**Technology. Redefined.** Leading the segment, yet again.

Star Map LED Connected Tail Lamps

make the rear look impressive and distinctive as you drive away

26.03 cm (10.25'') HD Touchscreen Navigation + 26.04 cm (10.25'') Full Digital Cluster

offer detailed car information so that you are always in charge

4-Way Power Driver's Seat




helps you get the perfect driving stance and maximum comfort at the touch of a button

360 Degree Camera

keeps you aware of your surroundings at all times

Smart Pure Air Purifier with Virus and Bacteria Protection˜




ensures you and your loved ones breathe the cleanest of air inside

Bose Premium 7-speaker System

lets your favourite tracks calm you through the chaos on the streets, with the finest music quality

**Safety. Redefined.** The beast with 10 Autonomous ADAS Features# + Robust 15 Standard Safety Features across variants

**Forward Collision Warning (FCW)** alerts the driver and prevents imminent collision

**Forward Collision-Avoidance Assist (FCA)** alerts the driver of imminent collision with a car/ cyclist/ pedestrian ahead, and applies brakes

**Lane Departure Warning, Lane Keep & Follow Assist (LDW, LKA & LFA)** alerts the driver whenever the car is out of its lane, and counter steers to keep it centered

**High Beam Assist (HBA)** automatically adjusts the high beam/ low beam based on the oncoming vehicle's headlamp intensity

**Leading Vehicle Departure Alert (LVDA)** informs the driver if the vehicle in front starts moving and driver does not react

**Driver Attention Warning (DAW)** alerts the driver based on driver's attention level

**Host of Other Wild Features:** Electric Sunroof | Find My Car with Surround View Monitoring | Powerful Smartstream G1.0 T-GDi Petrol Engine (88 kW & 6 000 rpm) | Refined 1.5 l CRDi VGT Diesel Engine (85 kW & 4 000 rpm) | Rear Disc Brakes | Advance Kia Connect˘˘ with Alexa Home to Car Connectivity | Sleek LED Fog Lamps | LED Ambient Sound Lighting | GT Line & X-Line Differentiated Body Kit | Exclusive Matte Graphite Exterior Color

**Kia Service**
Connected · Adaptive · Responsive · Engage

| 3 Years Unlimited km Warranty | Extended Warranty Up to 5 Years | My Convenience Plus Best-in-class Cost of Ownership^^ | Scratch Care Program˘ | IoT Based Smart Services## | 24x7 \| 3 Years Nationwide RSA** |
|---|---|---|---|---|---|

**Book now** Call 1800 108 5000 | 093195 91407 | Visit www.kia.com | Kia Sonet | kiacare@kiaindia.net | Look for "Kia India" @

Scan to know more

Terms & Conditions Apply. *Ex-showroom price all India. The product & feature images shown in this ad are for representation purpose only. Features and specifications as shown may not be part of standard fitment and may vary. The colors shown are subject to availability and may not be available across all variants and may differ slightly from those shown in this ad. Segment is defined as vehicle with length between 3 990 mm – 3 999 mm and height - 1 570 mm. ˜The tests of protection from virus & bacteria are conducted with a defined process, under particular circumstances in a controlled environment and the results may vary. #Available only with GTX+ and X-Line variants. Advanced Driver Assistance System (ADAS) is not a substitute for human eye and driver vigilance. It is an assistance feature that enhances driving experience and safety. Effectiveness of ADAS may vary based on actual situation and all objects around vehicle may not be detected. The driver shall remain responsible for safe, vigilant, and attentive driving. ˘˘Kia Connect comes with 3 years free subscription. Amazon Alexa and smartwatch device are not standard car accessories & the customer needs to purchase from a third party. Kia Connect features may vary depending on the variant, device compatibility, software and network availability both in the vehicle and Alexa device. Kia Connect skill is only available in India and can be interacted with in English and Hindi. ^^Computed cumulatively with all benefits from comprehensive coverage. ˘Program coverage includes 1 scratch repair free of cost in an ownership period of 12 month from date of sale, applicable for new Sonet retailed up to 30th April. 2024. ##IoT based workshops for live vehicle tracking for digital experience. **RSA coverage across India except Andaman & Nicobar Islands and Lakshadweep. The specifications and features may vary depending on models/ variants. Kia India Pvt. Ltd. (Formerly known as Kia Motors India Private Limited) reserves the right to make any changes with respect to the trims, colors, specifications, Kia Connect features and other details of any model as mentioned in this brochure or to discontinue any model without prior notice. For more details visit your local Kia dealership. Kia India Pvt. Ltd. (Formerly known as Kia Motors India Private Limited) urges you to follow traffic rules, these are meant to keep you safe on roads.

**FOR INFORMATION CONTACT: BENGALURU: ADVAITH KIA,** LALBAGH MAIN ROAD, PH: 9611006006, **EPITOME KIA,** WHITEFIELD: PH: 9606970216, YELAHANKA, PH: 7406343339, **JSP KIA,** HOSUR ROAD, PH: 9606011244, BELLANDUR, PH: 9071077717, **NAARA KIA,** J.P NAGAR, PH: 7406528200, **PPS KIA,** MYSORE ROAD, PH: 6309990010, **TAAPASI KIA,** KALYAN NAGAR, PH: 8095537777, **VST KIA,** PALACE ROAD, PH: 9606988123, YESHWANTHPUR, PH: 9606988124, **BELGAUM: MIRACULUM KIA,** PH: 08312439111, **BELLARY: ATHENA KIA,** PH: 6364922832, **BIJAPUR: KUMAR KIA,** PH: 080 45849192, **DAVANGERE: JANSI KIA,** PH: 9538018155, **GULBARGA: KUMAR KIA,** PH: 080 45849191, **HASSAN: AADARSH KIA,** PH: 9606034050, **HOSPET: BHADRA KIA,** PH: 7760888885, **HUBLI: NAGSHANTI KIA,** PH: 9148432469, **KUSHALNAGAR: ARM KIA,** PH: 9606055314, **KOLAR: EPITOME KIA,** PH: 8951903224, **MANGALORE: ARM KIA,** PH: 9606013152, **MANDYA: AADARSH KIA,** PH: 9606034070, **MYSORE: AADARSH KIA,** PH: 9606034060, **SHIMOGA: JANSI KIA,** PH: 9538416666, **TUMKUR: PPS KIA,** PH: 6303622210, **UDUPI: ARM KIA,** PH: 9606055296

INNOCEAN-001/24

ದೇಶದ ಅತಿ ಉದ್ದದ ಸೇತುವೆ ಸಾರ್ವಜನಿಕರ ಬಳಕೆಗೆ ಮುಕ್ತ ● ಗಣನೀಯವಾಗಿ ತಗ್ಗಲಿದೆ ಪ್ರಯಾಣ ಅವಧಿ

# ಅಟಲ್ ಸೇತು ನಿರ್ಮಾಣ 'ಮೋದಿ ಗ್ಯಾರಂಟಿ': ಪ್ರಧಾನಿ

ಮುಂಬೈ (ಪಿಟಿಐ): ದಕ್ಷಿಣ ಮುಂಬೈ ಹಾಗೂ ಉಪನಗರ ನವಿ ಮುಂಬೈ ನಡುವೆ ಹೊಸದಾಗಿ ನಿರ್ಮಿಸಲಾಗಿರುವ 'ಅಟಲ್ ಸೇತು'ವನ್ನು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಉದ್ಘಾಟಿಸಿದರು.

ಅಟಲ್ ಸೇತು ಯೋಜನೆಯನ್ನು ಪೂರ್ಣಗೊಳಿಸಿರುವುದು 'ಮೋದಿಯ ಗ್ಯಾರಂಟಿ' ಎಂದು ಹೇಳುವ ಮೂಲಕ ಅವರು ಲೋಕಸಭಾ ಚುನಾವಣಾ ಪ್ರಚಾರಕ್ಕೆ ಕಹಳೆ ಮೊಳಗಿಸಿದರು.

ಈ ಸೇತುವೆಯು ಭಾರತದ ಅತಿ ಉದ್ದದ ಸೇತುವೆ. ಇದು ದೇಶದಲ್ಲಿ ಸಮುದ್ರದ ಮೇಲೆ ಸಾಗುವ ಅತಿ ಉದ್ದದ ಸೇತುವೆ ಎಂಬ ಹೆಗ್ಗಳಿಕೆಯನ್ನೂ ಹೊಂದಿದೆ.

ಈ ಸೇತುವೆಗೆ ಶಂಕುಸ್ಥಾಪನೆಯನ್ನು ಮೋದಿ ಅವರು 2016ರ ಡಿಸೆಂಬರ್‌ನಲ್ಲಿ ನಡೆಸಿದ್ದರು. 'ಈ ಸೇತುವೆಯ ಶಂಕುಸ್ಥಾಪನೆಗೆ ನಾನು 2016ರ ಡಿಸೆಂಬರ್‌ನಲ್ಲಿ ಬಂದಿದ್ದಾಗ, ದೇಶದಲ್ಲಿ ಬದಲಾವಣೆ ತರುವ ನಿರ್ಣಯ ಕೈಗೊಂಡಿದ್ದೆ. ಕೋವಿಡ್–19 ಸಾಂಕ್ರಾಮಿಕದ ನಡುವೆಯೂ ಈ ಸೇತುವೆ ಕಾರ್ಯ ಪೂರ್ಣಗೊಳಿಸಿರುವುದು ಬಹಳ ಮಹತ್ವದ್ದು' ಎಂದು ಅವರು ಪನ್ವೇಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೇಳಿದರು.

'ಬೃಹತ್ ಯೋಜನೆಗಳ ಕೆಲಸ ಸ್ಥಗಿತಗೊಂಡಿದ್ದನ್ನು ಕಂಡು ಜನ ರೋಸಿಹೋಗಿದ್ದರು. ಬೃಹತ್ ಯೋಜನೆಗಳು ಪೂರ್ಣಗೊಳ್ಳುತ್ತವೆ ಎಂಬ ಭರವಸೆಯನ್ನೇ ಅವರು ಕಳೆದುಕೊಂಡಿದ್ದರು. ಆದರೆ, ದೇಶದಲ್ಲಿ ಬದಲಾವಣೆ ತರುವುದು ಮೋದಿಯ ಗ್ಯಾರಂಟಿ ಆಗಿತ್ತು' ಎಂದರು.

'ಸಮುದ್ರದ ಮೇಲೆ ಸಾಗುವ ಸೇತುವೆಯು ವಿಕಸಿತ ಭಾರತದ ಪ್ರತಿಬಿಂಬ... ಇದು ಭಾರತದ ಮೂಲಸೌಕರ್ಯ ವಲಯದ ಶಕ್ತಿಯನ್ನು ಹಾಗೂ ಭಾರತವು ಅಭಿವೃದ್ಧಿ ಹೊಂದಿದ ದೇಶ ಆಗುವೆಡೆ ಸಾಗುತ್ತಿರುವುದನ್ನು ತೋರಿಸುತ್ತಿದೆ' ಎಂದು ಹೇಳಿದರು. ಇದೇ ವೇದಿಕೆಯಿಂದ ಮೋದಿ ಅವರು ಇನ್ನೂ ಕೆಲವು ಸ್ಥಳೀಯ ಮೂಲಸೌಕರ್ಯ ಯೋಜನೆಗಳಿಗೆ ಚಾಲನೆ ನೀಡಿದರು.

ದೇಶದ ಅಭಿವೃದ್ಧಿಗೆ ಪ್ರತಿಯೊಂದು ಬೃಹತ್ ಯೋಜನೆಯೂ ಮಹತ್ವದ್ದು ಎಂದು ಹೇಳಿದ ಅವರು, 'ನಮ್ಮ ಪಾಲಿಗೆ ಇದು ಒಂದು ದಿನದ ಕಾರ್ಯಕ್ರಮ ಅಲ್ಲ ಅಥವಾ ಮಾಧ್ಯಮಗಳ ಮೂಲಕ ಪ್ರಚಾರ ಪಡೆಯುವ ಕೆಲಸವೂ ಅಲ್ಲ' ಎಂದರು.

'ನಮ್ಮ ಉದ್ದೇಶ ಸ್ಪಷ್ಟವಾಗಿದೆ, ನಮ್ಮ ನಿಷ್ಠೆಯು ದೇಶದ ಅಭಿವೃದ್ಧಿಯ ಕಡೆ ಇದೆ. ಆದರೆ ಹಿಂದಿನ ಸರ್ಕಾರದ ಉದ್ದೇಶವು ಮತಬ್ಯಾಂಕ್ ಬಗ್ಗೆ ಕಾಳಜಿ ವಹಿಸುವುದು ಹಾಗೂ ತನ್ನ ಕಿಸೆ ಭರ್ತಿ ಮಾಡಿಕೊಳ್ಳುವುದಾಗಿತ್ತು. ಅವರ ಬದ್ಧತೆಯು ದೇಶಕ್ಕಾಗಿ ಇರದೆ ಕುಟುಂಬದ ಸದಸ್ಯರ ಬಗ್ಗೆ 'ಇತ್ತು' ಎಂದು ದೂರಿದರು.




**ಹತ್ತು ವರ್ಷಗಳ ಹಿಂದೆ ಬೃಹತ್ ಹಗರಣಗಳು ಸುದ್ದಿ ಮಾಡುತ್ತಿದ್ದವು. ಆದರೆ ಈಗ ಬೃಹತ್ ಯೋಜನೆಗಳು ಪೂರ್ಣಗೊಳ್ಳುತ್ತಿರುವುದರ ಬಗ್ಗೆ ಜನ ಮಾತನಾಡಿಕೊಳ್ಳುತ್ತಿದ್ದಾರೆ**
**ನರೇಂದ್ರ ಮೋದಿ,** ಪ್ರಧಾನಿ

**1.70** ಲಕ್ಷ ಟನ್ ಸೇತುವೆ ನಿರ್ಮಾಣದಲ್ಲಿ ಬಳಕೆ ಆಗಿರುವ ಉಕ್ಕಿನ ಕಂಬಿಗಳ ಒಟ್ಟು ತೂಕ. ಇದು ಪ್ಯಾರಿಸ್‌ನಲ್ಲಿ ಇರುವ ಐಫೆಲ್ ಗೋಪುರದ ಒಟ್ಟು ತೂಕಕ್ಕಿಂತ 17 ಪಟ್ಟು ಹೆಚ್ಚು

ಏಕತೆಯ ಪ್ರತಿಮೆಯ ನಿರ್ಮಾಣದಲ್ಲಿ ಬಳಕೆ ಆಗಿರುವ ಕಾಂಕ್ರೀಟ್‌ಗಿಂತ ಸರಿಸುಮಾರು ಆರು ಪಟ್ಟು ಹೆಚ್ಚು ಕಾಂಕ್ರೀಟನ್ನು ಈ ಸೇತುವೆ ನಿರ್ಮಾಣದಲ್ಲಿ ಬಳಕೆ ಮಾಡಲಾಗಿದೆ.

## ಸುದ್ದಿ 2 ನಿಮಿಷ

### ಇ.ಡಿ ವಿಚಾರಣೆಗೆ ಕಾರ್ತಿ ಚಿದಂಬರಂ ಹಾಜರು

ನವದೆಹಲಿ (ಪಿಟಿಐ): ಚೀನಾದ ಪ್ರಜೆಗಳಿಗೆ 2011ರಲ್ಲಿ ವೀಸಾ ಕೊಡಿಸಿದ್ದ ಪ್ರಕರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿ ಕಾಂಗ್ರೆಸ್ ಸಂಸದ ಕಾರ್ತಿ ಚಿದಂಬರಂ ಅವರು ಇಲ್ಲಿನ ಜಾರಿ ನಿರ್ದೇಶನಾಲಯದ (ಇ.ಡಿ) ಕಚೇರಿಗೆ ಶುಕ್ರವಾರ ವಿಚಾರಣೆಗೆ ಹಾಜರಾದರು. ಡಿಸೆಂಬರ್ 23ರಂದು ಮತ್ತು ಜನವರಿ 2ರಂದು ಕೂಡ ಕಾರ್ತಿ ಅವರು ವಿಚಾರಣೆಗೆ ಹಾಜರಾಗಿದ್ದರು ಎಂದು ಮೂಲಗಳು ತಿಳಿಸಿವೆ.

ಈ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐ ದಾಖಲಿಸಿದ್ದ ಎಫ್‌ಐಆರ್ ಅನ್ನು ಆಧರಿಸಿ, ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆಯ (ಪಿಎಂಎಲ್‌ಎ) ಅಡಿ ಇ.ಡಿ ಕಾರ್ತಿ ಅವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿತ್ತು.

'ಚುನಾವಣೆ ಹತ್ತಿರ ಬರುವಾಗ ಇ.ಡಿ ಸಮನ್ಸ್ ನೀಡುವುದು ಸಹಜ' ಎಂದು ಕಾರ್ತಿ ಅವರು ಈಚೆಗೆ ಪ್ರತಿಕ್ರಿಯಿಸಿದ್ದರು. ವೀಸಾಗಾಗಿ ಕಾರ್ತಿ ಮತ್ತು ಅವರ ಆಪ್ತ ಎಸ್. ಭಾಸ್ಕರರಾಮನ್ ಅವರಿಗೆ ತಲವಂಡಿ ಸಾಬೊ ಪವರ್ ಲಿ. ಕಂಪನಿಯು ₹50 ಲಕ್ಷ ನೀಡಿತ್ತು ಎಂದು ಸಿಬಿಐ ಆರೋಪಿಸಿತ್ತು.

### 31ರಿಂದ ಬಜೆಟ್ ಅಧಿವೇಶನ

ನವದೆಹಲಿ: 17ನೇ ಲೋಕಸಭೆಯ ಕೊನೆಯ ಅಧಿವೇಶನವೂ ಆಗಿರುವ 'ಬಜೆಟ್ ಅಧಿವೇಶನ' ಜನವರಿ 31ರಿಂದ ಫೆಬ್ರುವರಿ 9ರವರೆಗೆ ನಡೆಯಲಿದೆ ಎಂದು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಈ ಬಗ್ಗೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ಜನವರಿ 31ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಂಸತ್‌ನಲ್ಲಿ ಭಾಷಣ ಮಾಡಲಿದ್ದಾರೆ. ಫೆಬ್ರುವರಿ 1ರಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಧ್ಯಂತರ ಬಜೆಟ್ ಮಂಡಿಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಏಪ್ರಿಲ್ ಹಾಗೂ ಮೇ ತಿಂಗಳಿನಲ್ಲಿ ಲೋಕಸಭಾ ಚುನಾವಣೆ ನಡೆಯಲಿದೆ. ನಂತರ ಅಸ್ತಿತ್ವಕ್ಕೆ ಬರಲಿರುವ ಹೊಸ ಸರ್ಕಾರವು ಪೂರ್ಣ ಪ್ರಮಾಣದ ಬಜೆಟ್ ಮಂಡಿಸಲಿದೆ. 17ನೇ ಲೋಕಸಭೆಯ ಅವಧಿ ಜೂನ್ 16ರಂದು ಕೊನೆಗೊಳ್ಳಲಿದೆ.

2019ರಲ್ಲಿ ಲೋಕಸಭಾ ಚುನಾವಣೆಯ ವೇಳಾಪಟ್ಟಿ ಮಾರ್ಚ್ 10ರಂದು ಪ್ರಕಟವಾಗಿತ್ತು. ಏಪ್ರಿಲ್ 11ರಿಂದ ಮಾರ್ಚ್ 19ರ ನಡುವೆ ಏಳು ಹಂತದಲ್ಲಿ ಮತದಾನ ನಡೆದಿತ್ತು.

## ಸಾವಿರ ಗಡಿ ದಾಟಿದ ಜೆಎನ್‌.1 ಸೋಂಕು ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಈವರೆಗೆ ದೃಢಪಟ್ಟ ಕೋವಿಡ್–19 ರೂಪಾಂತರಿ ಜೆಎನ್‌.1 ಪ್ರಕರಣಗಳ ಸಂಖ್ಯೆ 1,000 ಗಡಿ ದಾಟಿದೆ ಎಂದು ವೈರಾಣು ಸಂರಚನೆ ವಿಶ್ಲೇಷಣೆ ಸಂಸ್ಥೆ (ಐಎನ್‌ಎಸ್‌ಎಸಿಒಜಿ ) ತಿಳಿಸಿದೆ.

16 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಟ್ಟು 1,013 ಜೆಎನ್‌.1 ಪ್ರಕರಣಗಳು ಕಂಡುಬಂದಿವೆ. ಈ ಪೈಕಿ ಕರ್ನಾಟಕದಲ್ಲಿ ಅತಿ ಹೆಚ್ಚು ಅಂದರೆ 214 ಪ್ರಕರಣಗಳು ಪತ್ತೆಯಾಗಿವೆ. ಉಳಿದಂತೆ, ಮಹಾರಾಷ್ಟ್ರದಲ್ಲಿ 170, ಕೇರಳದಲ್ಲಿ 154, ಆಂಧ್ರ ಪ್ರದೇಶದಲ್ಲಿ 189, ಗುಜರಾತ್‌ನಲ್ಲಿ 76 ಮತ್ತು ಗೋವಾದಲ್ಲಿ 66 ಪ್ರಕರಣಗಳು ದೃಢಪಟ್ಟಿವೆ ಎಂದು ಅದು ತಿಳಿಸಿದೆ.

ಪ್ರಕರಣಗಳ ಸಂಖ್ಯೆ ಏರುಗತಿಯಲ್ಲಿರುವ ಕಾರಣ ಎಚ್ಚರಿಕೆ ವಹಿಸುವಂತೆ ಕೇಂದ್ರ ಸರ್ಕಾರ ಸೂಚಿಸಿದೆ.

# ವಂಶಾಡಳಿತದ ಪ್ರಭಾವ ತಗ್ಗಿಸಿ: ಮೋದಿ

ನಾಸಿಕ್, ಮಹಾರಾಷ್ಟ್ರ (ಪಿಟಿಐ): ದೇಶದಲ್ಲಿ ಕುಟುಂಬ ರಾಜಕಾರಣದ ಪ್ರಭಾವ ತಗ್ಗಿಸಲು ಚುನಾವಣಾ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಯುವ ಸಮೂಹಕ್ಕೆ ಕರೆ ನೀಡಿದರು.

ಶುಕ್ರವಾರ ಇಲ್ಲಿ 27ನೇ ರಾಷ್ಟ್ರೀಯ ಯುವ ಮೇಳವನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದ ಇಂದಿನ ಯುವ ಸಮೂಹವು 21ನೇ ಶತಮಾನದ ಅತ್ಯಂತ ಅದೃಷ್ಟಶಾಲಿ ಪೀಳಿಗೆ ಎಂದು ಬಣ್ಣಿಸಿದರು.

'ಭಾರತ ದೇಶವು ಪ್ರಜಾಪ್ರಭುತ್ವದ ತಾಯಿ ಇದ್ದಂತೆ. ಯುವಕರು ಮತದಾನ ಮೂಲಕ ತಮ್ಮ ರಾಜಕೀಯ ನಿಲುವನ್ನು ವ್ಯಕ್ತಪಡಿಸಿದರೆ ದೇಶದ ಭವಿಷ್ಯ ಉಜ್ವಲವಾಗಿರಲಿದೆ' ಎಂದರು.

ಸ್ಥಳೀಯ ಉತ್ಪನ್ನಗಳಿಗೆ ಉತ್ತೇಜನ ನೀಡುವಂತೆ ಕರೆ ನೀಡಿದ ಅವರು, ಮಾದಕ ವಸ್ತುಗಳಿಂದ ದೂರವಿರುವಂತೆ ಕಿವಿಮಾತು ಹೇಳಿದರು.

ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ನಾಸಿಕ್‌ನ ಕಾಳಾರಾಮ್ ದೇವಸ್ಥಾನದ ಆವರಣ ಸ್ವಚ್ಛಗೊಳಿಸಿದರು —ಪಿಟಿಐ ಚಿತ್ರ

**ಸ್ವಚ್ಛತಾ ಅಭಿಯಾನಕ್ಕೆ ಮನವಿ:** ಜನವರಿ 22 ರಂದು ಅಯೋಧ್ಯೆಯಲ್ಲಿ ರಾಮನ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದ ಹಿನ್ನೆಲೆಯಲ್ಲಿ ದೇಶದಾದ್ಯಂತವಿರುವ ದೇವಸ್ಥಾನಗಳು ಮತ್ತು ಯಾತ್ರಾ ಕೇಂದ್ರಗಳಲ್ಲಿ ಸ್ವಚ್ಛತಾ ಅಭಿಯಾನ ಕೈಗೊಳ್ಳುವಂತೆ ಪ್ರಧಾನಿ ಅವರು ಜನರಿಗೆ ಮನವಿ ಮಾಡಿದರು.

### ಕಾಳಾರಾಮ್ ದೇಗುಲದಲ್ಲಿ ಪೂಜೆ

ನಾಸಿಕ್: ಪ್ರಧಾನಿ ಮೋದಿ ಅವರು ಶುಕ್ರವಾರ ಇಲ್ಲಿನ ಪ್ರಸಿದ್ಧ ಕಾಳಾರಾಮ್ ದೇವಸ್ಥಾನದಲ್ಲಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡರು. ಪಂಚವಟಿ ಪ್ರದೇಶದಲ್ಲಿ ಗೋದಾವರಿ ನದಿ ದಡದಲ್ಲಿರುವ ದೇವಸ್ಥಾನಕ್ಕೆ ಭೇಟಿ ನೀಡುವ ಮುನ್ನ ಅವರು ನಗರದಲ್ಲಿ ರೋಡ್ ಶೋದಲ್ಲಿ ಭಾಗವಹಿಸಿದರು.

ಕಾಳಾರಾಮ್ ದೇವಸ್ಥಾನದ ಟ್ರಸ್ಟಿಗಳಾದ ಅಂಕಿತ್ ನಿಕಮ್ ಮತ್ತು ಧನಂಜಯ ಪೂಜಾರಿ ಅವರು ಪ್ರಧಾನಿ ಅವರನ್ನು ಬರಮಾಡಿಕೊಂಡರು. ದೇವಸ್ಥಾನಕ್ಕೆ ಪ್ರದಕ್ಷಿಣೆ ಹಾಕಿದ ಅವರು ಇತರ ಭಕ್ತರ ಜತೆ ಭಜನೆ ಹಾಗೂ ಕೀರ್ತನೆಯಲ್ಲಿ ಪಾಲ್ಗೊಂಡರು. ಪ್ರಧಾನ ಅರ್ಚಕ ಮಹಂತ ಸುಧೀರ್‌ದಾಸ್ ಪೂಜಾರಿ ಅವರು ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಿದರು. 'ಸ್ವಚ್ಛತಾ ಅಭಿಯಾನ'ದ ಅಂಗವಾಗಿ ಪ್ರಧಾನಿ ಅವರು ದೇವಸ್ಥಾನದ ಆವರಣದ ಒಂದು ಭಾಗವನ್ನು ಸ್ವಚ್ಛಗೊಳಿಸಿದರು.

**ಪರಂಪರೆಯ ರಕ್ಷಣೆ ಮತ್ತು ದೇಶವನ್ನು ಅಭಿವೃದ್ಧಿಯತ್ತ ಮುನ್ನಡೆಸಲು ಯುವ ಸಮೂಹವು ಗಮನಹರಿಸಬೇಕು**
**ನರೇಂದ್ರ ಮೋದಿ,** ಪ್ರಧಾನಿ

## ಸೇನಾ ವಾಹನದ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಜಮ್ಮು ಕಾಶ್ಮೀರದ ಗಡಿ ಭಾಗದ ಪೂಂಚ್ ಜಿಲ್ಲೆಯ ಕವಾರಿಯನ್ ಪ್ರದೇಶದಲ್ಲಿ ಉಗ್ರರು ಸೇನಾ ವಾಹನದ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಗುರುವಾರ ಸಂಜೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಘಟನೆಯಲ್ಲಿ ಯಾವುದೇ ಪ್ರಾಣಹಾನಿ ಅಥವಾ ಗಾಯಗೊಂಡವರ ಬಗ್ಗೆ ವರದಿಯಾಗಿಲ್ಲ ಎಂದು ಅವರು ಹೇಳಿದ್ದಾರೆ.

ಪೂಂಚ್–ಮೆಂದಾರ್ ರಸ್ತೆಯ ಗಡಿ ನಿಯಂತ್ರಣ ರೇಖೆಯ ಬಳಿ ಉಗ್ರರು ಸೇನಾ ವಾಹನದ ಮೇಲೆ ಗುಂಡಿನ ದಾಳಿ ಆರಂಭಿಸಿದರು. ತಕ್ಷಣ ರಕ್ಷಣಾ ಪಡೆಗಳು ಪೂಂಚ್–ಮೆಂದಾರ್ ರಸ್ತೆಯನ್ನು ಬಂದ್ ಮಾಡಿ ಉಗ್ರರಿಗಾಗಿ ಹುಡುಕಾಟ ನಡೆಸಿದವು.

# 'ನರಳಬೇಡಿ, ಹೆದರಬೇಡಿ'; 'ಕೈ' ಯಾತ್ರೆಯ 'ನ್ಯಾಯ ಗೀತೆ'

ನವದೆಹಲಿ(ಪಿಟಿಐ): ಕಾಂಗ್ರೆಸ್ ಪಕ್ಷವು ತಾನು ಆರಂಭಿಸಲಿರುವ 'ಭಾರತ ಜೋಡೊ ನ್ಯಾಯ ಯಾತ್ರೆ'ಗೆ ಸಂಬಂಧಿಸಿದ 'ನ್ಯಾಯ ಗೀತೆ'ಯನ್ನು ಶುಕ್ರವಾರ ಬಿಡುಗಡೆ ಮಾಡಿದೆ.

ರಾಹುಲ್ ಗಾಂಧಿ

'ನರಳಬೇಡಿ, ಹೆದರಬೇಡಿ' (ಸಹೋ ಮತ್, ಡರೋ ಮತ್) ಎಂಬುದು ಈ 'ನ್ಯಾಯ ಗೀತೆ'ಯ ಘೋಷವಾಕ್ಯವಾಗಿದೆ.

ಈ 'ನ್ಯಾಯ ಗೀತೆ'ಯನ್ನು ಪಕ್ಷವು ತನ್ನ ಎಲ್ಲ ಸಾಮಾಜಿಕ ಮಾಧ್ಯಮ ಖಾತೆಗಳಲ್ಲಿ ಹಂಚಿಕೊಂಡಿದೆ. ಗೀತೆಯೊಂದಿಗೆ ವಿಡಿಯೊ ಕೂಡ ಇದೆ. ರಾಹುಲ್ ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಕೈಗೊಂಡಿದ್ದ ಭಾರತ ಜೋಡೊ ಯಾತ್ರೆಗೆ ಸಂಬಂಧಿಸಿದ ಕೆಲ ದೃಶ್ಯಗಳು, ಮಹಿಳಾ ಕುಸ್ತಿಪಟುಗಳ ಪ್ರತಿಭಟನೆ ಹಾಗೂ ರೈತರು ಮತ್ತು ಕಾರ್ಮಿಕರೊಂದಿಗೆ ಕಾಂಗ್ರೆಸ್ ಮುಖಂಡರು ನಡೆಸಿದ್ದ ಸಂವಾದದ ದೃಶ್ಯಗಳು ಈ ವಿಡಿಯೊದಲ್ಲಿವೆ.

'ನಮಗೆ ನ್ಯಾಯದ ಹಕ್ಕು ಸಿಗುವವರೆಗೆ ಪ್ರತಿಯೊಂದು ಮನೆಗೂ ನಾವು ಹೋಗುತ್ತೇವೆ. ನ್ಯಾಯಕ್ಕಾಗಿ ಬೀದಿಯಿಂದ ಸಂಸತ್ ಭವನದವರೆಗೂ ಹೋರಾಟ ನಡೆಸುತ್ತೇವೆ. ನರಳಬೇಡಿ, ಹೆದರಬೇಡಿ' ಎಂದು 'ಎಕ್ಸ್'ನಲ್ಲಿ ಹಿಂದಿ ಭಾಷೆಯಲ್ಲಿ ಪೋಸ್ಟ್ ಮಾಡಿದ್ದಾರೆ.

ಈ ಯಾತ್ರೆ ಕುರಿತು ಪಕ್ಷದ ಮತ್ತೊಬ್ಬ ಹಿರಿಯ ನಾಯಕ ಜೈರಾಮ್ ರಮೇಶ್ ಅವರೂ ಪೋಸ್ಟ್ ಮಾಡಿದ್ದಾರೆ. 'ಕಳೆದ ಹತ್ತು ವರ್ಷಗಳಲ್ಲಿ ಆಗಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತುವುದಕ್ಕೆ ಈ ಯಾತ್ರೆ ಹಮ್ಮಿಕೊಳ್ಳಲಾಗಿದೆ' ಎಂದು ಹೇಳಿದ್ದಾರೆ.

### ಮಣಿಪುರದಿಂದ ನಾಳೆ ಆರಂಭ

ಇಂಫಾಲ್(ಪಿಟಿಐ): ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಹಮ್ಮಿಕೊಂಡಿರುವ 'ಭಾರತ ಜೋಡೊ ನ್ಯಾಯ ಯಾತ್ರೆ'ಯು ಜ.14ರಂದು ಮಣಿಪುರದ ಥೌಬಲ್ ಜಿಲ್ಲೆಯಿಂದ ಆರಂಭವಾಗಲಿದೆ ಎಂದು ಕಾಂಗ್ರೆಸ್ ಶುಕ್ರವಾರ ಹೇಳಿದೆ.

'ಇಂಫಾಲ್ ನಗರದ ಹಪ್ತಾ ಕಂಗ್‌ಜೀಬಂಗ್ ಮೈದಾನದಿಂದ ಯಾತ್ರೆ ಆರಂಭಿಸಲು ಪಕ್ಷವು ಅನುಮತಿ ಕೋರಿತ್ತು. ಈ ಸ್ಥಳದಿಂದ ಆರಂಭಕ್ಕೆ ರಾಜ್ಯ ಸರ್ಕಾರ ಅನುಮತಿ ನೀಡಲಿಲ್ಲ. ಆದರೆ, ಬೇರೆ ಸ್ಥಳದಿಂದ ಯಾತ್ರೆಗೆ ಚಾಲನೆ ನೀಡಬೇಕು ಎಂಬ ಷರತ್ತಿನೊಂದಿಗೆ ಅನುಮತಿ ನೀಡಲಾಗಿದೆ. ಹೀಗಾಗಿ, 34 ಕಿ.ಮೀ. ದೂರದ ಥೌಬಲ್ ಜಿಲ್ಲೆಯಿಂದ ಈ ಯಾತ್ರೆ ಆರಂಭಿಸಲಿದ್ದೇವೆ' ಎಂದು ಮಣಿಪುರದ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಕೀಶಮ್ ಮೇಘಚಂದ್ರ ಹೇಳಿದ್ದಾರೆ.

'ಥೌಬಲ್ ಜಿಲ್ಲೆಯ ಖೋಂಗ್‌ಜೋಮ್ ಪ್ರದೇಶದ ಖಾಸಗಿ ಜಾಗವೊಂದರಿಂದ ಯಾತ್ರೆ ಆರಂಭಿಸಲು ಜಿಲ್ಲಾಧಿಕಾರಿ ಗುರುವಾರ ರಾತ್ರಿ ಅನುಮತಿ ನೀಡಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಯಾತ್ರೆಗೆ ಚಾಲನೆ ನೀಡುವರು' ಎಂದು ಅವರು ಹೇಳಿದ್ದಾರೆ.

### ಹೋರಾಟಕ್ಕೆ ವೇದಿಕೆ: ರಾಹುಲ್

ನವದೆಹಲಿ(ಪಿಟಿಐ): 'ಪಕ್ಷ ಕೈಗೊಂಡಿರುವ ಭಾರತ ಜೋಡೊ ನ್ಯಾಯ ಯಾತ್ರೆ ಮೂಲಕ ನಾನು ನ್ಯಾಯಕ್ಕಾಗಿ ಹೋರಾಟ ಹೋರಾಡುತ್ತೇನೆ. ಇದೇ ಉದ್ದೇಶಕ್ಕಾಗಿ ಹೋರಾಟ ನಡೆಸುತ್ತಿರುವವರು ಈ ಯಾತ್ರೆಯನ್ನು ವೇದಿಕೆಯಾಗಿ ಬಳಸಿಕೊಳ್ಳಬೇಕು' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ಆಹ್ವಾನ ನೀಡಿದ್ದಾರೆ.

ಮಣಿಪುರದಿಂದ ಇದೇ ಭಾನುವಾರ ಆರಂಭವಾಗಲಿರುವ ಯಾತ್ರೆ ಹಿನ್ನೆಲೆಯಲ್ಲಿ ನಾಗರಿಕ ಸಂಘಟನೆಗಳು ಹಾಗೂ ಜನಪರ ಚಳವಳಿಗಳ ಪ್ರತಿನಿಧಿಗಳ ಜೊತೆ ನಡೆಸಿದ ಸಂವಾದದ ವೇಳೆ ಅವರು ಈ ಮನವಿ ಮಾಡಿದ್ದಾರೆ.

'ಭಾರತ ಜೋಡೊ ಅಭಿಯಾನ' ಎಂಬ ನಾಗರಿಕ ಸಂಘಟನೆಗಳ ವೇದಿಕೆ ಈ ಸಂವಾದ ಆಯೋಜಿಸಿತ್ತು ಎಂದು ಕಾಂಗ್ರೆಸ್‌ನ ಪ್ರಕಟಣೆ ತಿಳಿಸಿದೆ. 'ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನಿಂದ ಆಗುತ್ತಿರುವ ಅನ್ಯಾಯ ಎದುರಿಸುವಲ್ಲಿ ನ್ಯಾಯಕ್ಕಾಗಿ ಹೋರಾಡುತ್ತಿರುವ ರಾಜಕೀಯ ಪಕ್ಷಗಳು, ಸಂಘಟನೆಗಳು ಹಾಗೂ ವ್ಯಕ್ತಿಗಳು ಒಂದಾಗುವುದು ನಿರ್ಣಾಯಕವಾಗಲಿದೆ ಎಂಬುದಾಗಿ ರಾಹುಲ್ ಗಾಂಧಿ ವಿವರಿಸಿದರು' ಎಂದು ಪ್ರಕಟಣೆಯಲ್ಲಿ ಹೇಳಲಾಗಿದೆ.

ದಲಿತರು, ಆದಿವಾಸಿಗಳು, ಒಬಿಸಿಗಳು, ಮಹಿಳೆಯರು, ನಿರುದ್ಯೋಗಿ ಯುವ ಜನತೆ ಹಾಗೂ ಅಸಂಘಟಿತ ವಲಯದ ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂವಾದದಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಪ್ರತಿನಿಧಿಗಳು ಪ್ರಸ್ತಾಪಿಸಿದರು.

# ಪ್ರಧಾನಿಯಿಂದ 11 ದಿನ ಧಾರ್ಮಿಕ ವ್ರತ

ನವದೆಹಲಿ (ಪಿಟಿಐ): ಅಯೋಧ್ಯೆಯ ರಾಮ ಮಂದಿರದಲ್ಲಿ ರಾಮಲಲ್ಲಾ ವಿಗ್ರಹದ ಪ್ರಾಣ ಪ್ರತಿಷ್ಠಾಪನೆಯ ದಿನ ಹತ್ತಿರವಾಗುತ್ತಿರುವ ಹೊತ್ತಿನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು 11 ದಿನಗಳ ವಿಶೇಷ ಧಾರ್ಮಿಕ ವ್ರತವನ್ನು ಆರಂಭಿಸಿದ್ದಾರೆ. ಪ್ರಾಣ ಪ್ರತಿಷ್ಠಾಪನೆಯು ಜನವರಿ 22ರಂದು ನಡೆಯಲಿದೆ.

'ನಾನು ಭಾವುಕನಾಗಿದ್ದೇನೆ. ಇದೇ ಮೊದಲ ಬಾರಿಗೆ ನನ್ನ ಜೀವನದಲ್ಲಿ ಇಂತಹ ಅನುಭವ ಆಗುತ್ತಿದೆ' ಎಂದು ಅವರು ಹೇಳಿದ್ದಾರೆ. ಹಲವು ತಲೆಮಾರುಗಳ ಜನರು ದೃಢನಿಶ್ಚಯದ ರೀತಿಯಲ್ಲಿ ತಮ್ಮ ಹೃದಯದಲ್ಲಿ ಇರಿಸಿಕೊಂಡಿದ್ದ ಕನಸೊಂದು ನನಸಾಗುವುದಕ್ಕೆ ತಾವು ಸಾಕ್ಷಿ ಆಗುತ್ತಿರುವುದಾಗಿ ಅವರು ಹೇಳಿದ್ದಾರೆ.

ತಮ್ಮ ಅಂತರಂಗದ ಪಯಣವನ್ನು ಅನುಭವಿಸಬಹುದೇ ವಿನಾ ಅದನ್ನು ಅಭಿವ್ಯಕ್ತಿಸಲು ಆಗುವುದಿಲ್ಲ ಎಂದು ಮೋದಿ ಅವರು ಎಕ್ಸ್ ಖಾತೆಯ ಮೂಲಕ ಹಂಚಿಕೊಂಡಿರುವ ಧ್ವನಿ ಸಂದೇಶದಲ್ಲಿ ಹೇಳಿದ್ದಾರೆ. ತಮ್ಮಲ್ಲಿನ ಭಾವನೆಗಳು ಅವೆಷ್ಟು ಗಾಢವಾಗಿವೆ, ತೀವ್ರವಾಗಿವೆ ಎಂಬುದನ್ನು ಮಾತುಗಳಲ್ಲಿ ಹೇಳಲು ಆಗದು ಎಂದಿದ್ದಾರೆ.

ಎಲ್ಲ ಭಾರತೀಯರಿಗೆ, ರಾಮನ ಭಕ್ತರಿಗೆ ಇದು ಪವಿತ್ರವಾದ ಸಂದರ್ಭ. ರಾಮಭಕ್ತರು ರಾಮನ ಜನ್ಮಸ್ಥಳ ಎಂದು ನಂಬಿರುವಲ್ಲಿ ರಾಮನ ವಿಗ್ರಹದ ಪ್ರಾಣ ಪ್ರತಿಷ್ಠಾಪನೆ ನಡೆಯಲಿರುವ ಐತಿಹಾಸಿಕ ಸಂದರ್ಭಕ್ಕಾಗಿ ಎಲ್ಲರೂ ಕಾಯುತ್ತಿದ್ದಾರೆ. ಪ್ರಾಣ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಭಾರತೀಯರೆಲ್ಲರನ್ನು ಪ್ರತಿನಿಧಿಸಲು ದೇವರು ತಮ್ಮನ್ನು ಆಯ್ಕೆ ಮಾಡಿದ್ದಾನೆ, ಇದನ್ನು ಮನಸ್ಸಿನಲ್ಲಿ ಇರಿಸಿಕೊಂಡು 11 ದಿನಗಳ ವಿಶೇಷ ಧಾರ್ಮಿಕ ವ್ರತಕ್ಕೆ ಮುಂದಾಗುತ್ತಿರುವುದಾಗಿ ಎಕ್ಸ್ ವೇದಿಕೆಯಲ್ಲಿ ಬರೆದಿದ್ದಾರೆ. ಮೋದಿ ಅವರು ನಾಸಿಕ್‌ನ ಪಂಚವಟಿಯಿಂದ ವ್ರತ ಆರಂಭಿಸಿದ್ದಾರೆ.

ಅಯೋಧ್ಯೆಯಲ್ಲಿ ರಾರಾಜಿಸುತ್ತಿರುವ ಕೇಸರಿ ಧ್ವಜಗಳು. ಶ್ರೀರಾಮ, ಹನುಮಾನ್ ಚಿತ್ರಗಳನ್ನು ಒಳಗೊಂಡಿರುವ ಕೇಸರಿ ಧ್ವಜಗಳಿಗೆ ಇಲ್ಲಿ ಬೇಡಿಕೆ ಹೆಚ್ಚಾಗಿದೆ ಪಿಟಿಐ ಚಿತ್ರ

### ವ್ರತ ಆಚರಣೆ ಹೇಗೆ?

ಬಿಡುವಿಲ್ಲದ ಕೆಲಸ ಹಾಗೂ ಹೊಣೆಗಾರಿಕೆಗಳ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಅವರು ಧಾರ್ಮಿಕ ಗ್ರಂಥಗಳಲ್ಲಿ ಹೇಳಿರುವ ಎಲ್ಲ ಮಾರ್ಗಸೂಚಿಗಳನ್ನು ಪಾಲಿಸಲು ತೀರ್ಮಾನಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. 'ಇದಕ್ಕಾಗಿ ಪ್ರಧಾನಿಯವರು 11 ದಿನಗಳ ಯಮ–ನಿಯಮ ಆಚರಣೆಯನ್ನು ಪಾಲಿಸಲಿದ್ದಾರೆ' ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

'ಯಮ ನಿಯಮ ಅಡಿಯಲ್ಲಿ ಯೋಗ, ಧ್ಯಾನ, ಬೇರೆ ಬೇರೆ ಕೆಲಸಗಳಲ್ಲಿ ಶಿಸ್ತು ಸೇರಿದಂತೆ ಹಲವು ಕಠಿಣ ನಿಯಮಗಳನ್ನು ಪಾಲಿಸಬೇಕಾಗುತ್ತದೆ. ಇವುಗಳಲ್ಲಿ ಹಲವನ್ನು ಮೋದಿ ಅವರು ಈಗಾಗಲೇ ಪಾಲಿಸುತ್ತಿದ್ದಾರೆ.' ಎಂದು ಅವರು ವಿವರಿಸಿದ್ದಾರೆ.

### ರಾಮನಿಗೆ ಚಿನ್ನ ಲೇಪಿತ ಬಿಲ್ಲು

ಲಖನೌ/ಅಯೋಧ್ಯೆ (ಪಿಟಿಐ): 'ಅಯೋಧ್ಯೆಯಲ್ಲಿ ಈ ತಿಂಗಳ 22ರಂದು ನಡೆಯಲಿರುವ ರಾಮಲಲ್ಲಾ ಪ್ರಾಣ ಪ್ರತಿಷ್ಠಾಪನೆಗೆ ಮುಂಚಿತವಾಗಿಯೇ ರಾಮನ ಬಿಲ್ಲು– ಬಾಣ ಸಿದ್ಧಗೊಂಡಿದೆ. ಬಿಲ್ಲು– ಬಾಣವನ್ನು ಈ ತಿಂಗಳ 19ರಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ಗೆ ಕೊಡುಗೆಯಾಗಿ ನೀಡಲಾಗುವುದು.

'ಚೆನ್ನೈನಿಂದ ಇವನ್ನು ತರಲಾಗುತ್ತಿದೆ. ಬಿಲ್ಲು 2.5 ಕೆ.ಜಿ ತೂಕವಿದೆ. ಇದಕ್ಕೆ 600–700 ಗ್ರಾಂವರೆಗೆ 23 ಕ್ಯಾರಟ್ ಚಿನ್ನವನ್ನು ಬಳಸಲಾಗಿದೆ' ಎಂದು ಅಮಾವಾ ರಾಮ ಮಂದಿರದ ಟ್ರಸ್ಟಿ ಸಯಾನ್ ಕುಲಾನ್ ತಿಳಿಸಿದ್ದಾರೆ.

### ವಿಧಿಯ ತೀರ್ಮಾನ: ಅಡ್ವಾಣಿ

ನವದೆಹಲಿ (ಪಿಟಿಐ): 'ಅಯೋಧ್ಯೆಯಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಆಗುವುದು ವಿಧಿಯ ತೀರ್ಮಾನ ಆಗಿತ್ತು. ವಿಧಿಯು ಅದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಯ್ಕೆ ಮಾಡಿದೆ' ಎಂದು ಬಿಜೆಪಿ ನಾಯಕ ಎಲ್‌.ಕೆ.ಅಡ್ವಾಣಿ ಹೇಳಿದ್ದಾರೆ.



ಎಲ್‌.ಕೆ.ಅಡ್ವಾಣಿ

'ರಾಮಮಂದಿರ ನಿರ್ಮಾಣಕ್ಕಾಗಿ 33 ವರ್ಷಗಳ ಹಿಂದೆ ಕೈಗೊಂಡಿದ್ದ ರಥಯಾತ್ರೆಯು ತಮ್ಮ ರಾಜಕೀಯ ಜೀವನದ 'ಅತ್ಯಂತ ನಿರ್ಣಾಯಕ ಮತ್ತು ಪರಿವರ್ತನೆಯ ಘಟನೆ ಆಗಿತ್ತು' ಎಂದು ಹಿಂದಿ ನಿಯತಕಾಲಿಕೆ 'ರಾಷ್ಟ್ರಧರ್ಮ'ಕ್ಕೆ ಬರೆದ ವಿಶೇಷ ಲೇಖನದಲ್ಲಿ ಅವರು ತಿಳಿಸಿದ್ದಾರೆ.

- ಮಧ್ಯಪ್ರದೇಶದ ಉಜ್ಜೈನ್‌ನ ಮಹಾಕಾಲೇಶ್ವರ ದೇವಾಲಯದಿಂದ ಅಯೋಧ್ಯೆಗೆ ಇದೇ 22ರಂದು 5 ಲಕ್ಷ ಲಡ್ಡುಗಳನ್ನು ಕಳುಹಿಸಲಾಗುವುದು ಎಂದು ಮುಖ್ಯಮಂತ್ರಿ ಮೋಹನ್ ಯಾದವ್ ಹೇಳಿದ್ದಾರೆ.
- ಅಯೋಧ್ಯೆಯಲ್ಲಿ ಸುರಕ್ಷತೆಗಾಗಿ 10,000 ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಲಾಗುವುದು ಮತ್ತು ಡ್ರೋನ್‌ಗಳನ್ನು ನಿಯೋಜಿಸಲಾಗುವುದು ಎಂದು ಉತ್ತರ ಪ್ರದೇಶದ ಪೊಲೀಸರು ತಿಳಿಸಿದ್ದಾರೆ.

# ಶಂಕರಾಚಾರ್ಯರ ಸಲಹೆ ಕಡೆಗಣನೆ: ಕಾಂಗ್ರೆಸ್

ನವದೆಹಲಿ (ಪಿಟಿಐ): ರಾಮಲಲ್ಲಾ ಪ್ರತಿಷ್ಠಾಪನೆಯ ವಿಷಯವನ್ನು ಬಿಜೆಪಿಯು ರಾಜಕೀಯಕರಣಗೊಳಿಸಿದೆ. ಧಾರ್ಮಿಕ ಪ್ರಕ್ರಿಯೆಗಳನ್ನು ಅನುಸರಿಸದೆ ಮತ್ತು ಶಂಕರಾಚಾರ್ಯ ಅವರ ಸಲಹೆಗಳನ್ನು ಕಡೆಗಣಿಸಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ಕಾಂಗ್ರೆಸ್ ಶುಕ್ರವಾರ ಆರೋಪಿಸಿದೆ.

ಧರ್ಮವು ವೈಯಕ್ತಿಕ ನಂಬಿಕೆಯ ವಿಚಾರ. ಯಾರು ಬೇಕಾದರೂ ಅವರಿಗೆ ಅನಿಸಿದಾಗ ಅಯೋಧ್ಯೆಗೆ ತೆರಳಬಹುದಾಗಿದೆ ಎಂದು ಪಕ್ಷವು ಒತ್ತಿ ಹೇಳಿದೆ. ಅಲ್ಲದೆ ಬಿಜೆಪಿ– ಆರ್‌ಎಸ್‌ಎಸ್ ಈ ಕಾರ್ಯಕ್ರಮವನ್ನು 'ರಾಜಕೀಯ ವ್ಯವಹಾರದ' ವಿಷಯವಾಗಿ ಪರಿವರ್ತಿಸಿದ್ದರಿಂದ ಕಾಂಗ್ರೆಸ್‌ನ ಉನ್ನತ ನಾಯಕರು ಸಮಾರಂಭದಿಂದ ದೂರ ಉಳಿದಿದ್ದಾರೆ ಎಂದೂ ಸ್ಪಷ್ಟಪಡಿಸಿದೆ.

ಪಕ್ಷವು ಈಗಾಗಲೇ ತನ್ನ ನಿಲುವನ್ನು ಸ್ಪಷ್ಟಪಡಿಸಿದೆ. ಬಿಜೆಪಿ ಮತ್ತೆ ಮತ್ತೆ ಈ ವಿಷಯವನ್ನು ಯಾಕೆ ಪ್ರಸ್ತಾಪಿಸುತ್ತಿದೆ? ರಾಮನ ಭಕ್ತರು ಅವರಿಗೆ ಬೇಕೆನಿಸಿದಾಗ ಅಯೋಧ್ಯೆಗೆ ಹೋಗುತ್ತಾರೆ. ಬಿಜೆಪಿಯು ಪಿತೂರಿಯ ಅಂಗವಾಗಿ ಇಂತಹ ಹೇಳಿಕೆಗಳನ್ನು ನೀಡುತ್ತಿದೆ ಎಂದು ಪಕ್ಷದ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ.

'ಇದು ಧಾರ್ಮಿಕ ಕಾರ್ಯಕ್ರಮವೇ ಆಗಿದ್ದರೆ, ಶಂಕರಾಚಾರ್ಯರು ನೀಡಿದ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಧಾರ್ಮಿಕ ಪ್ರಕ್ರಿಯೆಗಳು ನಡೆಯುತ್ತಿರಲಿಲ್ಲವೇ? ಎಂದು ಕಾಂಗ್ರೆಸ್ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಪ್ರಶ್ನಿಸಿದ್ದಾರೆ.

### ಶಂಕರ ಪರಂಪರೆ ಮಠಗಳಿಗೆ ಅಸಮಾಧಾನ ಇಲ್ಲ

ಚಿಕ್ಕಮಗಳೂರು: 'ಅಯೋಧ್ಯೆ ರಾಮಮಂದಿರ ಲೋಕಾರ್ಪಣೆ ವಿಷಯದಲ್ಲಿ ಶಂಕರ ಗುರು ಪರಂಪರೆ ಮಠಗಳಿಗೆ ಕಿಂಚಿತ್ತೂ ಭಿನ್ನಾಭಿಪ್ರಾಯ ಇಲ್ಲ. ವದಂತಿಗಳಿಗೆ ಯಾರೂ ಕಿವಿಗೊಡಬಾರದು' ಎಂದು ಹರಿಹರಪುರ ಮಠದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ತಿಳಿಸಿದ್ದಾರೆ.



ಈ ಸಂಬಂಧ ವಿಡಿಯೊ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಈ ವಿಷಯದಲ್ಲಿ ಯಾರಿಗೂ ಅಸಮಾಧಾನ ಇಲ್ಲ. ಯಾರಾದರೂ ಅಸಮಾಧಾನಗೊಂಡಿದ್ದರೆ ಅದು ಅವರ ವೈಯಕ್ತಿಕ ವಿಷಯ' ಎಂದು ಸ್ಪಷ್ಟಪಡಿಸಿದ್ದಾರೆ.

'ಶ್ರೀರಾಮನಿಗೂ, ಶಂಕರ ಪರಂಪರೆಗೂ ಏನು ಸಂಬಂಧ ಎಂಬುದನ್ನು ತಿಳಿದುಕೊಳ್ಳಬೇಕು. ಶಂಕರ ಪರಂಪರೆಯ ಮೂಲ ಪುರುಷರಾದ ಆದಿ ಶಂಕರರು ತಮ್ಮ ಅದ್ವೈತ ಸಿದ್ಧಾಂತದ ಮೂಲಕ ಪರಮಾತ್ಮನನ್ನು ತತ್ವ ಸ್ವರೂಪದಲ್ಲಿ ಆರಾಧಿಸುವ ಪದ್ಧತಿಯನ್ನು ಜಗತ್ತಿಗೆ ಕೊಟ್ಟಿದ್ದಾರೆ. ಹರಿ–ಹರ ಇಬ್ಬರು ಸಮಾನವಾದ ರೂಪಗಳು ಎಂದು ತಿಳಿಸಿದ್ದಾರೆ. ಈ ಇಬ್ಬರನ್ನು ಸಮಾನವಾಗಿ ಶ್ರದ್ಧಾ ಭಕ್ತಿಯಿಂದ ಆಚರಿಸುವ ಏಕೈಕ ಪರಂಪರೆ ಎಂದರೆ ಶಂಕರ ಪರಂಪರೆ' ಎಂದರು.

'ರಾಮಮಂದಿರ ಲೋಕಾರ್ಪಣೆಗೊಳ್ಳುವ ದಿನ ಎಲ್ಲಾ ಮಠಗಳಲ್ಲೂ ಶ್ರೀರಾಮಚಂದ್ರನ ಆರಾಧನೆ ಮಾಡಲು ಸಂಕಲ್ಪ ಮಾಡಿದ್ದೇವೆ. ಇದರಲ್ಲಿ ಜಾತಿ ಮತ್ತು ಪಕ್ಷವನ್ನು ಯಾವುದೇ ಕಾರಣಕ್ಕೂ ತರಬಾರದು' ಎಂದು ತಿಳಿಸಿದ್ದಾರೆ.

### 'ಅಪಸ್ವರ ಸರಿ'

ರಾಯಚೂರು: 'ಅಯೋಧ್ಯೆ ರಾಮ ಮಂದಿರ ಉದ್ಘಾಟನೆ ವಿಚಾರದಲ್ಲಿ ಶಂಕರಾಚಾರ್ಯ ಪೀಠಗಳು ಅಪಸ್ವರ ಎತ್ತಿರುವುದು ಸರಿ ಎನಿಸುತ್ತದೆ' ಎಂದು ತಿಂಥಣಿ ಬ್ರಿಡ್ಜ್ ಕಾಗಿನೆಲೆ ಕನಕ ಗುರುಪೀಠದ ಸಿದ್ಧರಾಮಾನಂದ ಸ್ವಾಮೀಜಿ ಹೇಳಿದರು.

'ಯಾವುದೇ ದೇವಸ್ಥಾನ ಪೂರ್ಣವಾಗಿ ನಿರ್ಮಾಣವಾದ ನಂತರ ಉದ್ಘಾಟನೆ ಮಾಡಬೇಕು. ತರಾತುರಿಯಲ್ಲಿ ಉದ್ಘಾಟನೆ ಮಾಡಿದರೆ ಬೇರೆ ಉದ್ದೇಶ ಹೊಂದಿರುವುದು ಕಾಣುತ್ತದೆ' ಎಂದು ದೇವದುರ್ಗ ತಾಲ್ಲೂಕಿನ ಸಂಸ್ಥಾನ ಮಠದಲ್ಲಿ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

### 'ಸಂಪ್ರದಾಯಕ್ಕೆ ಅನುಗುಣವಾಗಿಲ್ಲ'

ಲಖನೌ: ಈ ತಿಂಗಳ 22ರಂದು ಅಯೋಧ್ಯೆಯಲ್ಲಿ ನಡೆಯುತ್ತಿರುವ ಪ್ರತಿಷ್ಠಾಪನೆ ಕಾರ್ಯಕ್ರಮವು 'ರಾಮನಂದಿ' ಸಂಪ್ರದಾಯದ ಪ್ರಕಾರ ಇಲ್ಲ. ಮಿಶ್ರ ಸಂಪ್ರದಾಯವನ್ನು ಟ್ರಸ್ಟ್ ಅನುಸರಿಸುತ್ತಿದೆ. ಇದು ಸರಿಯಲ್ಲ ಎಂದು ನಿರ್ಮೋಹಿ ಅಖಾಡ ಶುಕ್ರವಾರ ಹೇಳಿದೆ.

**ಅಪೂರ್ಣಗೊಂಡಿರುವ ಮಂದಿರದಲ್ಲಿ ಪ್ರತಿಷ್ಠಾಪನೆ ಮಾಡಲು ಸಾಧ್ಯವಿಲ್ಲ ಎಂದು ನಾಲ್ವರು ಶಂಕರಾಚಾರ್ಯರೂ ಸ್ಪಷ್ಟವಾಗಿ ಹೇಳಿದ್ದಾರೆ.**
**ಪವನ್ ಖೇರಾ,** ಕಾಂಗ್ರೆಸ್ ಮುಖಂಡ

**'ಬಿಜೆಪಿಯು ಶ್ರೀರಾಮಚಂದ್ರನ ಹೆಸರು ಬಳಸಿಕೊಂಡು ಮಾಡುತ್ತಿರುವ ರಾಜಕೀಯವನ್ನು ನಾವು (ಕಾಂಗ್ರೆಸ್) ವಿರೋಧಿಸುತ್ತೇವೆ. ಜನವರಿ 22ರ ನಂತರ ಅಯೋಧ್ಯೆಗೆ ಭೇಟಿ ನೀಡುತ್ತೇವೆ'**
**ಸಿದ್ದರಾಮಯ್ಯ,** ಮುಖ್ಯಮಂತ್ರಿ

ಶನಿವಾರ, ಜನವರಿ 13, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 13 | ಪುಟ 20
www.prajavani.net
prajavani.net prajavani prajavani prajavani

# ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚರ್ಚೆ
ತೆರಿಗೆ ಆದಾಯ ಹಂಚಿಕೆ: ಕೇಂದ್ರದಿಂದ ರಾಜ್ಯಕ್ಕೆ ತಾರತಮ್ಯ ಆಗಿದೆಯೇ?
'ಸಚಿವರಿಗೆ ಗೆಲುವಿನ ಹೊಣೆ' 6
5 ವರ್ಷ: 50 ಲಕ್ಷ ಜನರಿಗೆ 'ಆಯುಷ್ಮಾನ್' 4B

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 72,568 ▲ | 21,894 ▲ | ₹64,280 (ಬೆಂಗಳೂರು) ▲ | ₹73,300 (ಬೆಂಗಳೂರು) ▼ | 82.95 ▲ |

### ಕಾವೇರಿ ಕಣಿವೆಯ 12,850 ಚದರ ಕಿ.ಮೀ. ಹಸಿರು ನಾಶ • ಕರ್ನಾಟಕದಲ್ಲೇ ಅತಿ ಹೆಚ್ಚು ಹಾನಿ

# ಸರ್ಕಾರಕ್ಕೆ ಎನ್‌ಜಿಟಿ ನೋಟಿಸ್

ಪ್ರಜಾವಾಣಿ ವಾರ್ತೆ

**ನವದೆಹಲಿ:** ಐವತ್ತು ವರ್ಷಗಳಲ್ಲಿ (1965ರಿಂದ 2016) ಕಾವೇರಿ ಕಣಿವೆಯ 12,850 ಚದರ ಕಿ.ಮೀ. ವ್ಯಾಪ್ತಿಯಲ್ಲಿ ಹಸಿರು ನಾಶವಾಗಿದೆ ಎಂಬ ಭಾರತೀಯ ವಿಜ್ಞಾನ ಸಂಸ್ಥೆಯ ವರದಿಯ ಆಧಾರದಲ್ಲಿ ಕರ್ನಾಟಕ, ತಮಿಳುನಾಡು ಹಾಗೂ ಕೇರಳ ಸರ್ಕಾರಗಳಿಗೆ ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ನೋಟಿಸ್ ನೀಡಿದೆ.

ಈ ಸಂಬಂಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ನೇತೃತ್ವದ ತ್ರಿಸದಸ್ಯ ಪೀಠವು ಕೇಂದ್ರ ಪರಿಸರ, ಅರಣ್ಯ ಹಾಗೂ ತಾಪಮಾನ ಬದಲಾವಣೆ ಸಚಿವಾಲಯದ ಮಹಾನಿರ್ದೇಶಕರು, ಫಾರೆಸ್ಟ್ ಸರ್ವೆ ಆಫ್ ಇಂಡಿಯಾವನ್ನು ಪ್ರತಿವಾದಿಗಳನ್ನಾಗಿ ಮಾಡಿ ನೋಟಿಸ್ ಕೊಟ್ಟಿದೆ.



ಕಾವೇರಿ ಕಣಿವೆಯ ಜಲಾನಯನ ಪ್ರದೇಶದ ಶೇ 73.5ರಲ್ಲಿ ಕೃಷಿ ಹಾಗೂ ತೋಟಗಾರಿಕೆ ಚಟುವಟಿಕೆಗಳು ನಡೆಯುತ್ತಿವೆ. ಶೇ 18 ಪ್ರದೇಶದಲ್ಲಿ ಅರಣ್ಯವಿದೆ. ದಟ್ಟ ಅರಣ್ಯ ಇರುವುದು ಶೇ 13 ರಷ್ಟು ಪ್ರದೇಶದಲ್ಲಿ ಮಾತ್ರ. 1965ರಿಂದ 2016ರ ಅವಧಿಯಲ್ಲಿ ನೈಸರ್ಗಿಕ ಹಸಿರು ಪ್ರದೇಶ 28,154 ಚದರ ಕಿ.ಮೀ.ಯಿಂದ 15,345 ಚದರ ಕಿ.ಮೀ.ಗೆ ಇಳಿದಿದೆ. ಕರ್ನಾಟಕದಲ್ಲಿ ಶೇ 57ರಷ್ಟು ಹಸಿರು (9,664 ಚ.ಕಿ.ಮೀ) ನಾಶವಾಗಿದೆ. ತಮಿಳುನಾಡಿನಲ್ಲಿ ಶೇ 29 (2905 ಚ.ಕಿ.ಮೀ) ಹಾಗೂ ಕೇರಳದಲ್ಲಿ ಶೇ 27 (279 ಚ.ಕಿ.ಮೀ) ಹಸಿರು ಕಣ್ಮರೆಯಾಗಿದೆ ಎಂದು ವರದಿಯಲ್ಲಿದೆ.

**ಮುಖ್ಯಾಂಶಗಳು**
- ಸ್ವಯಂಪ್ರೇರಿತ ಪ್ರಕರಣ ದಾಖಲಿಸಿರುವ ನ್ಯಾಯ ಮಂಡಳಿ
- ನ್ಯಾಯ ಮಂಡಳಿಯ ಚೆನ್ನೈ ಪೀಠಕ್ಕೆ ಪ್ರಕರಣ ವರ್ಗಾವಣೆ
- ಬಂಡೀಪುರ, ನಾಗರಹೊಳೆ, ಬಿಆರ್‌ಟಿಯಲ್ಲಿ ಅರಣ್ಯ ಪ್ರಮಾಣ ಕುಸಿತ

50 ವರ್ಷಗಳಲ್ಲಿ ಬಂಡೀಪುರ ರಾಷ್ಟ್ರೀಯ ಉದ್ಯಾನದಲ್ಲಿ ಶೇ 15.19ರಷ್ಟು ಅರಣ್ಯ ಪ್ರದೇಶ ಕಡಿಮೆಯಾಗಿದೆ. ಅಭಿವೃದ್ಧಿ ಚಟುವಟಿಕೆಗಳು ಹಾಗೂ ಕಾಳ್ಗಿಚ್ಚಿನಿಂದಾಗಿ ರಾಷ್ಟ್ರೀಯ ಉದ್ಯಾನದ ಪೂರ್ವಭಾಗದಲ್ಲಿ ಅರಣ್ಯ ಗಣನೀಯವಾಗಿ ಕಡಿಮೆಯಾಗಿದೆ. ನಾಗರಹೊಳೆ ರಾಷ್ಟ್ರೀಯ ಉದ್ಯಾನದಲ್ಲಿ ಅರಣ್ಯ ಪ್ರಮಾಣ ಶೇ 11ರಷ್ಟು ಕಡಿಮೆಯಾಗಿದೆ. ಇದಕ್ಕೆ ಮಾನವನ ಹಸ್ತಕ್ಷೇಪ ಕಾರಣ. ಮೀಸಲು ಪ್ರದೇಶದಲ್ಲಿ ತೋಟಗಾರಿಕೆ ಚಟುವಟಿಕೆಗಳು ಭಾರಿ ಹೆಚ್ಚಳ ಆಗಿವೆ. ಬಿಳಿಗಿರಿ ರಂಗನಾಥಸ್ವಾಮಿ ಹುಲಿ ಅಭಯಾರಣ್ಯದಲ್ಲಿ (ಬಿಆರ್‌ಟಿ) ಅರಣ್ಯ ಪ್ರದೇಶ ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದ್ದು, ಕುರುಚಲು ಕಾಡುಗಳು ಹೆಚ್ಚುತ್ತಿವೆ. ಜತೆಗೆ ಅರಣ್ಯ ಒತ್ತುವರಿ ಜಾಸ್ತಿ ಆಗಿದೆ ಎಂದು ವರದಿಯಲ್ಲಿ ಕಳವಳ ವ್ಯಕ್ತಪಡಿಸಲಾಗಿದೆ.

ಕಾವೇರಿ ವನ್ಯಜೀವಿ ಧಾಮದಲ್ಲಿ ಪರಿಸ್ಥಿತಿ ಭಿನ್ನವಾಗಿಲ್ಲ. ಜನಸಂಖ್ಯೆ ಹೆಚ್ಚಳ ಹಾಗೂ ಒತ್ತುವರಿಯಿಂದಾಗಿ ಕಾಡಿಗೆ ಆಪತ್ತು ಉಂಟಾಗಿದೆ. 1973ರಿಂದ 2016ರ ಅವಧಿಯಲ್ಲಿ ಶೇ 18.43ರಷ್ಟು ಹಸಿರು ನಾಶವಾಗಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ವ್ಯಾಪ್ತಿಯಲ್ಲಿ 1973ರಷ್ಟು ಶೇ 50.40ರಷ್ಟು ದಟ್ಟ ಕಾಡು ಇತ್ತು. 2016ರಲ್ಲಿ ಶೇ 28ಕ್ಕೆ ಕುಸಿದಿದೆ. ಇಲ್ಲಿ ಕೃಷಿ ಚಟುವಟಿಕೆ ಶೇ 7ರಿಂದ ಶೇ 15ಕ್ಕೆ ಏರಿದೆ. ಗಣಿಗಾರಿಕೆ, ಅಭಿವೃದ್ಧಿ ಚಟುವಟಿಕೆಗಳಿಂದಾಗಿ ಈ ಉದ್ಯಾನದ ಮೇಲೆ ಒತ್ತಡ ಹೆಚ್ಚಾಗಿದೆ ಎಂದೂ ವರದಿಯಲ್ಲಿ ಬೆಳಕು ಚೆಲ್ಲಲಾಗಿದೆ.

ಇದು ಪರಿಸರದ ಕಾನೂನಿಗೆ ಸಂಬಂಧಿಸಿದ ವಿಚಾರ ಎಂದು ಅಭಿಪ್ರಾಯಪಟ್ಟಿರುವ ನ್ಯಾಯ ಮಂಡಳಿ, 'ಇಂತಹ ಪ್ರಕರಣಗಳ ಕುರಿತು ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಪ್ರತಿವಾದಿಗಳು ನ್ಯಾಯ ಮಂಡಳಿಗೆ ಆದಷ್ಟು ಶೀಘ್ರದಲ್ಲಿ ಪ್ರತಿಕ್ರಿಯೆ ನೀಡಬೇಕು' ಎಂದು ಸೂಚಿಸಿದೆ.

ಈ ಪ್ರಕರಣ ನ್ಯಾಯ ಮಂಡಳಿಯ ಚೆನ್ನೈ ಪೀಠದ ವ್ಯಾಪ್ತಿಗೆ ಬರುತ್ತಿದೆ. ಹಾಗಾಗಿ ಮುಂದಿನ ವಿಚಾರಣೆಯನ್ನು ಚೆನ್ನೈ ಪೀಠ ನಡೆಸಲಿದೆ ಎಂದು ಪ್ರಧಾನಪೀಠ ತಿಳಿಸಿದೆ.

ಒಳ ಪುಟ
ಎನ್‌ಪಿಎಸ್ ಹೂಡಿಕೆಗೆ ಸ್ತ್ರೀಯರ ನಿರಾಸಕ್ತಿ 10

'ಯುವನಿಧಿ' ಯೋಜನೆಗೆ ಚಾಲನೆ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಫಲಾನುಭವಿಗಳಿಗೆ ಚೆಕ್ ವಿತರಿಸಿದರು. ಸಚಿವ ಡಾ.ಶರಣಪ್ರಕಾಶ ಪಾಟೀಲ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಮಧು ಬಂಗಾರಪ್ಪ, ಎಂ.ಸಿ.ಸುಧಾಕರ್, ಬಿ.ನಾಗೇಂದ್ರ, ಸಂಸದ ಬಿ.ವೈ.ರಾಘವೇಂದ್ರ, ಶಾಸಕ ಎಸ್‌.ಎನ್‌.ಚನ್ನಬಸಪ್ಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

### ಸರ್ವರಿಗೂ ಮೂಲ ಆದಾಯ ತತ್ವ ಅಳವಡಿಕೆ: ಸಿ.ಎಂ

# 'ಯುವನಿಧಿ'ಗೆ ಚಾಲನೆ

ಪ್ರಜಾವಾಣಿ ವಾರ್ತೆ

**ಶಿವಮೊಗ್ಗ:** ಡಿಪ್ಲೊಮಾ ಮತ್ತು ಪದವಿ ಪೂರೈಸಿರುವ ಯುವಕರಿಗೆ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ನೀಡುವ ಸರ್ಕಾರದ 5ನೇ ಗ್ಯಾರಂಟಿ 'ಯುವನಿಧಿ' ಯೋಜನೆಗೆ ಶುಕ್ರವಾರ ಚಾಲನೆ ದೊರೆಯಿತು.

ರಾಜ್ಯದ ವಿವಿಧೆಡೆಗಳಿಂದ ಬಂದಿದ್ದ ಸಾವಿರಾರು ಯುವಜನರ ಪೈಕಿ ಆಯ್ದ 15 ಜನ ಫಲಾನುಭವಿಗಳಿಗೆ ಸಾಂಕೇತಿಕವಾಗಿ ಚೆಕ್ ವಿತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಯುವನಿಧಿ ಯೋಜನೆಯಡಿ ನಿರುದ್ಯೋಗ ಭತ್ಯೆ ಮಾತ್ರವಲ್ಲ, ಮಾರುಕಟ್ಟೆಯಲ್ಲಿ ಬೇಡಿಕೆ ಇರುವ ಉದ್ಯೋಗಕ್ಕೆ ಸಂಬಂಧಿಸಿದ ಕೌಶಲದ ತರಬೇತಿ ಕೊಡಲಿದ್ದೇವೆ. ಉದ್ಯೋಗ ಮೇಳ ಏರ್ಪಡಿಸಿ ಯುವಸಮೂಹಕ್ಕೆ ದೇಶ ಮಾತ್ರವಲ್ಲ ವಿದೇಶಗಳಲ್ಲೂ ಕೆಲಸ ಸಿಗುವಂತೆ ಮಾಡಲಿದ್ದೇವೆ' ಎಂದರು.

'ಯೋಜನೆಯಡಿ ಇಲ್ಲಿಯವರೆಗೆ 70,000 ನಿರುದ್ಯೋಗಿಗಳು ನೋಂದಣಿ ಮಾಡಿಸಿದ್ದಾರೆ. ಈ ವರ್ಷ 4.08 ಲಕ್ಷ ಫಲಾನುಭವಿಗಳು ಇದರ ಲಾಭ ಪಡೆಯಲಿದ್ದಾರೆ. ಯುವಕ-ಯುವತಿಯರು ಈ ಯೋಜನೆಯಡಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿ ಮಾಡಿಸಿ ತರಬೇತಿ ಪಡೆದು ನಿರುದ್ಯೋಗ ಸಮಸ್ಯೆ ಪರಿಹರಿಸಿಕೊಳ್ಳಿ' ಎಂದು ಸಿದ್ದರಾಮಯ್ಯ ಸಲಹೆ ನೀಡಿದರು.

4B ಪುಟ ನೋಡಿ

### ವನ್ಯಜೀವಿ ಅಂಗಾಂಗಗಳ ಅವಶೇಷ ಮರಳಿಸಲು ನಿಯಮ ಪ್ರಕಟ

# ಹುಲಿ ಉಗುರು ವಾಪಸ್: ತನಿಖೆಯೂ ಇದೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಹುಲಿ ಉಗುರು, ಆನೆ ದಂತ ಸೇರಿದಂತೆ ವನ್ಯಜೀವಿ ಅಂಗಾಂಗಗಳ ಅವಶೇಷಗಳನ್ನು ಮರಳಿಸಲು ಮೂರು ತಿಂಗಳ ಕಾಲಾವಕಾಶ ನೀಡಲು ನಿಯಮ ಪ್ರಕಟಿಸಿರುವ ರಾಜ್ಯ ಸರ್ಕಾರ, ಕಳ್ಳಬೇಟೆಯ ಕುರಿತು ತನಿಖೆಗೂ ಅವಕಾಶ ಕಲ್ಪಿಸಿದೆ.

ಸಾರ್ವಜನಿಕರು ಪರವಾನಗಿ ಇಲ್ಲದೇ ತಮ್ಮ ಬಳಿ ಇರಿಸಿಕೊಂಡಿರುವ ವನ್ಯಜೀವಿಗಳ ಅಂಗಾಂಗಗಳ ಅವಶೇಷಗಳನ್ನು ಮರಳಿಸಲು ಮೂರು ತಿಂಗಳ ಕಾಲಾವಕಾಶ ನೀಡಲು ಸಂಪುಟ ಸಭೆಯಲ್ಲಿ ತೀರ್ಮಾನಿಸಲಾಗಿತ್ತು.

**'ಹೊಸ ನಿಯಮಗಳಿಗೆ ಅವಕಾಶವಿಲ್ಲ'**

ವನ್ಯಜೀವಿ ಅಂಗಾಂಗಗಳ ಅವಶೇಷಗಳನ್ನು ಮರಳಿಸಲು ಕಾಲಾವಕಾಶ ನೀಡಿ ಹೊಸ ನಿಯಮಗಳನ್ನು ಜಾರಿಗೊಳಿಸಲು ಅವಕಾಶವಿಲ್ಲ ಎಂದು ವೈಲ್ಡ್‌ಲೈಫ್ ಫಸ್ಟ್‌ನ ಟ್ರಸ್ಟಿ ಪ್ರವೀಣ್ ಭಾರ್ಗವ್ ಅವರು ಅರಣ್ಯ ಸಚಿವ ಈಶ್ವರ ಖಂಡ್ರೆ ಅವರಿಗೆ ಆಕ್ಷೇಪಣೆ ಸಲ್ಲಿಸಿದ್ದಾರೆ.

'ಈ ರೀತಿ ವನ್ಯಜೀವಿ ಅಂಗಾಂಗಗಳ ಅವಶೇಷಗಳನ್ನು ಮರಳಿಸಲು ಅವಕಾಶ ಕಲ್ಪಿಸುವ ನಿಯಮಗಳನ್ನು ಕೇಂದ್ರ ಸರ್ಕಾರ 2003ರಲ್ಲಿ ಜಾರಿಗೊಳಿಸಿತ್ತು. 2022ರಲ್ಲಿ ವನ್ಯಜೀವಿ ಸಂರಕ್ಷಣಾ ಕಾಯ್ದೆಗೆ ತಂದಿರುವ ತಿದ್ದುಪಡಿಯಲ್ಲಿ ಈ ಬಗ್ಗೆ ಯಾವುದೇ ಉಲ್ಲೇಖವಿಲ್ಲ. ಕಾಯ್ದೆಗೆ ವಿರುದ್ಧವಾಗಿ ರಾಜ್ಯ ಸರ್ಕಾರವು ನಿಯಮ ರೂಪಿಸಲು ಸಾಧ್ಯವಿಲ್ಲ. ಕಾನೂನಿನ ಅಂಶಗಳನ್ನು ಪರಿಶೀಲಿಸಿ ಮುಂದುವರಿಯಬೇಕು' ಎಂದು ಕೋರಿದ್ದಾರೆ.

**ಯಾರ್‍ಯಾರು ಒಪ್ಪಿಸಬಹುದು**
- ಮನೆಗಳಲ್ಲಿ ಇರುವ ಅಂತಹ ಅವಶೇಷಗಳನ್ನು ಕುಟುಂಬದವರು ಒಪ್ಪಿಸಬಹುದು.
- ಕ್ಲಬ್, ಸೊಸೈಟಿ, ಕಂಪನಿ ಮತ್ತು ಸಂಸ್ಥೆಗಳಲ್ಲಿರುವ ವಸ್ತುಗಳನ್ನು ಆ ಸಂಸ್ಥೆಯ ಸದಸ್ಯರು, ನಿರ್ದೇಶಕರು ಅಥವಾ ಅಧಿಕೃತ ಪ್ರತಿನಿಧಿ ಸಲ್ಲಿಸಬಹುದು.

4B ಪುಟ ನೋಡಿ

## ರಸ್ತೆಗಳಲ್ಲಿ ದೇಗುಲ, ಮಸೀದಿ, ಚರ್ಚ್: ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸಾರ್ವಜನಿಕ ರಸ್ತೆಗಳಲ್ಲಿ ದೇವಾಲಯ, ಮಸೀದಿ, ಚರ್ಚ್‌ಗಳನ್ನೆಲ್ಲಾ ನಿರ್ಮಿಸುತ್ತಾ ಹೋದರೆ ಶ್ರೀಸಾಮಾನ್ಯರು ಏನು ಮಾಡಬೇಕು' ಎಂದು ಹೈಕೋರ್ಟ್, ಮೌಖಿಕವಾಗಿ ಆಕ್ರೋಶ ವ್ಯಕ್ತಪಡಿಸಿದೆ.



'ನಗರದ ಸುಂಕದಕಟ್ಟೆ ವ್ಯಾಪ್ತಿಯಲ್ಲಿ ಸಾರ್ವಜನಿಕ ರಸ್ತೆ ಒತ್ತುವರಿ ಮಾಡಿ ದೇವಾಲಯ ನಿರ್ಮಿಸಲಾಗಿದೆ' ಎಂದು ಆಕ್ಷೇಪಿಸಿ ಸುಂಕದಕಟ್ಟೆ ಗಜಾನನ ನಗರದ ಸಿ.ಹೊನ್ನಯ್ಯ ಸೇರಿದಂತೆ ಒಟ್ಟು ನಾಲ್ವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

4B ಪುಟ ನೋಡಿ

**ಚಿನಕುರಳಿ**

ಪ್ರಕಾಶ್ ಶೆಟ್ಟಿ

ಸುಧಾ, ಮಯೂರ ಓದಿ

ಬಿಲ್ ಬಾಕಿ: ವಿದ್ಯುತ್ ಸಂಪರ್ಕ ಕಡಿತಗೊಳಿಸಿದ ಬೆಸ್ಕಾಂ • ನಾಗರಿಕರ ಪರದಾಟ

## ಹಾಲೇನಹಳ್ಳಿ: ಕುಡಿಯುವ ನೀರಿನ ಘಟಕ ಸ್ಥಗಿತ

ಪ್ರಜಾವಾಣಿ ವಾರ್ತೆ

**ದಾಬಸ್‌ಪೇಟೆ:** ನೆಲಮಂಗಲ ತಾಲ್ಲೂಕು ನರಸೀಪುರ ಗ್ರಾಮ ಪಂಚಾಯಿತಿ ಹಾಲೇನಹಳ್ಳಿ ಗ್ರಾಮದ ಶುದ್ಧ ಕುಡಿಯುವ ನೀರಿನ ಘಟಕ ಸ್ಥಗಿತಗೊಂಡಿದೆ.

'ಮಾರುತಿ ಸುಜುಕಿ' ಕಂಪನಿಯು ಕೆಲ ವರ್ಷಗಳ ಹಿಂದೆ ಈ ಘಟಕವನ್ನು ನಿರ್ಮಾಣ ಮಾಡಿದ್ದು, 'ವಾಟರ್ ಲೈಫ್ ಇಂಡಿಯಾ ಕಂಪನಿ' ನಿರ್ವಹಣೆ ಮಾಡುತ್ತಿತ್ತು. ಘಟಕ ಕಾರ್ಯ ನಿರ್ವಹಿಸಲು ಬಳಸಿಕೊಂಡಿರುವ ವಿದ್ಯುತ್ ಬಿಲ್ ಪಾವತಿ ಮಾಡದೇ ಇರುವುದರಿಂದ ಬೆಸ್ಕಾಂ ಇಲಾಖೆ ಘಟಕಕ್ಕೆ ವಿದ್ಯುತ್ ಸಂಪರ್ಕ ಕಡಿತ ಮಾಡಿದೆ.

ಗ್ರಾಮದ ನೂರಕ್ಕೂ ಹೆಚ್ಚು ಕುಟುಂಬಗಳು ಹಾಗೂ ಅಕ್ಕಪಕ್ಕದ ಜಾಜೂರು, ಲಕ್ಷ್ಮೀಪುರ, ಸಾಲಹಟ್ಟಿ, ಪಾಂಡವಪುರ ಗ್ರಾಮಗಳ ಜನರು ಕುಡಿಯುವ ನೀರಿಗೆ ಇದೇ ಘಟಕವನ್ನು ಅವಲಂಬಿಸಿದ್ದರು. ಘಟಕದ ಬಾಗಿಲು ಹಾಕಿರುವುದರಿಂದ ಅನಿವಾರ್ಯವಾಗಿ ದೂರದ ಊರುಗಳಿಗೆ ಹೋಗಿ ನೀರು ತರಬೇಕಿದೆ.

'ಘಟಕ ಸ್ಥಗಿತಗೊಂಡು ನಾಲ್ಕು ತಿಂಗಳು ಕಳೆದು ಹೋಗಿರುವುದರಿಂದ ನಾವು ಕುಡಿಯುವ ನೀರಿಗಾಗಿ ದ್ವಿಚಕ್ರ ವಾಹನಗಳಲ್ಲಿ ದೂರದ ಊರುಗಳಿಗೆ ಹೋಗಿ ನೀರು ತರುತ್ತಿದ್ದೇವೆ. ಇದರಿಂದ ಸಮಯ, ಇಂಧನ ವ್ಯಯವಾಗುತ್ತಿದೆ' ಎಂದು ಸಾರ್ವಜನಿಕರು ಬೇಸರ ವ್ಯಕ್ತಪಡಿಸಿದರು.

ಘಟಕ ಆರಂಭವಾಗಿನಿಂದಲೂ ಆಗಾಗ ವಿದ್ಯುತ್ ಪಾವತಿ ಮಾಡದೆ ಸ್ಥಗಿತಗೊಳ್ಳುತ್ತಲೇ ಇದೆ. ಈ ಘಟಕವನ್ನು ಸಮರ್ಪಕವಾಗಿ ನಿರ್ವಹಿಸದೆ ಹೋದರೆ, ವಿದ್ಯುತ್ ಬಾಕಿ ಎಲ್ಲ ಪಾವತಿಸಿ ಸ್ಥಳೀಯ ಪಂಚಾಯಿತಿ ಆಡಳಿತಕ್ಕೆ ನೀಡಲಿ' ಎಂದರು ಗ್ರಾಮದ ಪವನ್.

ಘಟಕದ ನಿರ್ವಹಣೆ ಖಾಸಗಿಯವರು ನಿರ್ವಹಿಸುತ್ತಿದ್ದು, ತಮಗೆ ಬರುವುದಿಲ್ಲ ಎಂದು ಪಂಚಾಯಿತಿಯವರು ಹೇಳುತ್ತಿದ್ದಾರೆ. ಅವರು ಬಂದು ಏನಾಗಿದೆ ಎಂದು ನೋಡುತ್ತಿಲ್ಲ ಎಂದು ಸ್ಥಳೀಯ ಗೃಹಿಣಿ ವನಿತಾ ತಿಳಿಸಿದರು.

ವಿದ್ಯುತ್ ಬಿಲ್ ಪಾವತಿ ಮಾಡದೇ ಸ್ಥಗಿತಗೊಂಡಿರುವ ಹಾಲೇನಹಳ್ಳಿ ಗ್ರಾಮದ ಕುಡಿಯುವ ನೀರಿನ ಘಟಕ

'ಘಟಕ ಸ್ಥಗಿತಗೊಂಡಿರುವುದು ಕೆಲವು ದಿನಗಳ ಹಿಂದೆ ನನ್ನ ಗಮನಕ್ಕೆ ಬಂದಿತ್ತು. ನಿರ್ವಹಣೆ ಮಾಡುವ ಶಿವಕುಮಾರ್ ಗಮನಕ್ಕೆ ತಂದಿದ್ದೆ. ಎರಡು ಮೂರು ದಿನಗಳಲ್ಲಿ ಸರಿ ಮಾಡುವುದಾಗಿ ತಿಳಿಸಿದ್ದರು. ಇದುವರೆಗೆ ಬಂದು ಸಮಸ್ಯೆ ಬಗೆಹರಿಸಿಲ್ಲ. ವಿದ್ಯುತ್ ಬಾಕಿ ಪಾವತಿಸಿ ಪಂಚಾಯಿತಿ ವಶಕ್ಕೆ ನೀಡಿದರೆ ನಾವೇ ನಿರ್ವಹಿಸುತ್ತೇವೆ' ಎಂದು ನರಸೀಪುರ ಪಂಚಾಯಿತಿ ಅಧ್ಯಕ್ಷ ರಾಮಾಂಜನೇಯ ಮಾಹಿತಿ ನೀಡಿದರು.

ಘಟಕ ನಿರ್ವಹಣೆ ಮಾಡುವವರು, ಅದರಿಂದ ಲಾಭ ಪಡೆದುಕೊಂಡಿದ್ದಾರೆ. ಸಕಾಲಕ್ಕೆ ವಿದ್ಯುತ್ ಬಿಲ್ ಪಾವತಿ ಮಾಡಿದ್ದರೆ, ಘಟಕ ಬಂದ್ ಆಗುವ ಸಂಭವವೇ ಇರುತ್ತಿರಲಿಲ್ಲ ಎಂದು ಹಾಲೇನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ತರನಂ ಬಾನು ಆಕ್ರೋಶ ವ್ಯಕ್ತಪಡಿಸಿದರು.

## ಅವೈಜ್ಞಾನಿಕ ಆಸ್ತಿ ತೆರಿಗೆ: ಮುನಿರಾಜು ಆರೋಪ

**ಪೀಣ್ಯ ದಾಸರಹಳ್ಳಿ:** ಬಿಬಿಎಂಪಿ ವ್ಯಾಪ್ತಿಯ ಆಸ್ತಿ ಮಾಲೀಕರಿಗೆ ಅವೈಜ್ಞಾನಿಕವಾಗಿ ಎರಡು ಪಟ್ಟು ದಂಡ ಹಾಗೂ ಬಡ್ಡಿ ವಿಧಿಸಿ ನೋಟಿಸ್ ಜಾರಿ ಮಾಡಿ ಮಳಿಗೆಗಳಿಗೆ ಬೀಗ ಹಾಕುತ್ತಿದ್ದಾರೆ ಎಂದು ಶಾಸಕ ಎಸ್. ಮುನಿರಾಜು ಆರೋಪಿಸಿದರು.

'ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಈಗಾಗಲೇ ತೆರಿಗೆ ಪಾವತಿಸಿದ 388 ಮಳಿಗೆಗಳಿಗೆ ನೋಟಿಸ್ ನೀಡಿ ಬೀಗ ಹಾಕಲಾಗಿದೆ. ಇದು ಜನ ವಿರೋಧಿ ಸರ್ಕಾರ ಭ್ರಷ್ಟ ಸರ್ಕಾರದ ಅವೈಜ್ಞಾನಿಕ ನೀತಿ. ಈ ರೀತಿ ಬೀಗ ಹಾಕಿದರೆ ಬೀಗ ಒಡೆದು ಹಾಕಿ' ಎಂದು ಶಾಸಕ ಎಸ್. ಮುನಿರಾಜು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಬಿಬಿಎಂಪಿ, ಕಾಯ್ದೆಗಳನ್ನು ಗಾಳಿಗೆ ತೂರಿ ಬೇಜವಾಬ್ದಾರಿತನದಿಂದ ಸಾರ್ವಜನಿಕರನ್ನು ಸುಲಿಗೆ ಮಾಡುತ್ತಿದೆ. ರಸ್ತೆ, ನೀರು, ಚರಂಡಿ ಸಮಸ್ಯೆಗಳಿದ್ದರೂ ಸರ್ಕಾರ ಸ್ಪಂದಿಸುತ್ತಿಲ್ಲ. ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಹಾಲಿನ ಬೆಲೆ, ಲಿಕ್ಕರ್, ಆಸ್ತಿ ತೆರಿಗೆ, ವಿದ್ಯುತ್ ಬಿಲ್, ಕೆಲವೊಂದು ದಿನ ಬಳಕೆ ವಸ್ತುಗಳನ್ನು ಏರಿಕೆ ಮಾಡಿ ಸಾರ್ವಜನಿಕರಿಗೆ ಶಾಕ್ ನೀಡಿದೆ' ಎಂದು ಆರೋಪಿಸಿದರು.

'ಬಿಬಿಎಂಪಿ ವ್ಯಾಪ್ತಿಯ ಅವೈಜ್ಞಾನಿಕ ಆಸ್ತಿ ತೆರಿಗೆ ಖಂಡಿಸಿ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವ, ಬಿಬಿಎಂಪಿ ಆಯುಕ್ತರಿಗೆ ಹಾಗೂ ಆಡಳಿತಾಧಿಕಾರಿಗಳಿಗೆ ಪತ್ರ ಬರೆಯುತ್ತೇನೆ. ನಾನೇ ಖುದ್ದಾಗಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿ ತಡೆಯಾಜ್ಞೆ ತರುವ ಕೆಲಸ ಮಾಡುತ್ತೇನೆ' ಎಂದು ತಿಳಿಸಿದರು.

## ಅನ್ನಭಾಗ್ಯ ಅಕ್ಕಿ, ರಾಗಿ ಕಳ್ಳತನ: ಇಬ್ಬರ ಅಮಾನತು

**ಚನ್ನಪಟ್ಟಣ (ರಾಮನಗರ):** ಪಟ್ಟಣದ ತಾಲ್ಲೂಕು ವ್ಯವಸಾಯೋತ್ಪನ್ನಗಳ ಸಹಕಾರ ಸಂಘದ (ಟಿಎಪಿಸಿಎಂಎಸ್) ಗೋದಾಮಿನಿಂದ ಕಳೆದ ನವೆಂಬರ್‌ನಲ್ಲಿ ಅನ್ನಭಾಗ್ಯ ಯೋಜನೆಯ 1543 ಕ್ವಿಂಟಲ್ ಅಕ್ಕಿ ಮತ್ತು 70 ಕ್ವಿಂಟಲ್ ರಾಗಿ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯು ಕರ್ತವ್ಯ ಲೋಪಕ್ಕಾಗಿ ಇಬ್ಬರು ಅಧಿಕಾರಿಗಳನ್ನು ಶುಕ್ರವಾರ ಅಮಾನತುಗೊಳಿಸಿದೆ.

ಚನ್ನಪಟ್ಟಣದ ಆಹಾರ ನಿರೀಕ್ಷಕ ಚೇತನ್‌ಕುಮಾರ್ ಕೆ. ಮತ್ತು ಆಹಾರ ಶಿರಸ್ತೇದಾರ್ ಶಾಂತಕುಮಾರಿ ಅವರನ್ನು ಅಮಾನತುಗೊಳಿಸಿ ಇಲಾಖೆಯ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಯೂ ಆಗಿರುವ ವಾಸಿರೆಡ್ಡಿ ವಿಜಯ ಜ್ಯೋತ್ಸ್ನಾ ಆದೇಶ ಹೊರಡಿಸಿದ್ದಾರೆ. ಗೋದಾಮಿನಿಂದ ಅಕ್ಕಿ ಮತ್ತು ರಾಗಿ ಕಳ್ಳತನವಾಗಿರುವ ಕುರಿತು ಕಳೆದ ನ.22ರಂದು ಆಹಾರ ನಿರೀಕ್ಷಕ ಚೇತನ್‌ಕುಮಾರ್ ನೀಡಿದ್ದ ದೂರಿನ ಮೇರೆಗೆ ಚನ್ನಪಟ್ಟಣ ಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


**ನೈಋತ್ಯ ರೈಲ್ವೆ** G20

ಟೆಂಡರು ಅಧಿಸೂಚನೆ ಸಂ. 45/2023, ದಿನಾಂಕ: 08.01.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

| ಕ್ರಸಂ. | ಟೆಂಡರು ಸಂ. | ಸಂಕ್ಷಿಪ್ತವಾದ ವಿವರಣೆ |
|---|---|---|
| 1 | ಎಲ್8236973 | ಫಿಯಟ್ ಬೋಗಿಯನ್ನೊಳಗೊಂಡ ಎಲ್‌ಹೆಚ್‌ಬಿ ಕೋಚ್‌ಗಳಿಗೆ ಬೇಕಾದ ಉನ್ನತ ಸಾಮರ್ಥ್ಯದ ಏರ್ ಸ್ಪ್ರಿಂಗ್ ಅಸೆಂಬ್ಲಿ (160 ಕೆಎನ್) ನ ಪೂರೈಕೆ. ನಿರ್ದಿಷ್ಟತೆ: ಆರ್‌ಡಿಎಸ್‌ಓ/ಸಿಜಿ/ಎಸ್/23002 ರೆವ್. ಶೂನ್ಯ. ಪರಿಮಾಣ: 32 ಸಂ. |
| 2 | ಎಲ್8245057 | ಪವರ್ / ಪ್ಯಾಂಟ್ರಿ ಕಾರ್‌ಗಳಲ್ಲಿ ಉಪಯೋಗವಾಗುತ್ತಿರುವ ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/2013/ಸಿಜಿ–06 ಮಾದರಿಯ ಹಸ್ತಚಾಲಿತ ನಿಗ್ರಹ ವ್ಯವಸ್ಥೆಯೊಂದಿಗೆ ಬೆಂಕಿ ಪತ್ತೆ ಹಚ್ಚುವ ವ್ಯವಸ್ಥೆಯನ್ನು ಆರ್‌ಡಿಎಸ್‌ಓ ನಿರ್ದಿಷ್ಟತೆ ಸಂ. ಆರ್‌ಡಿಎಸ್‌ಓ/2013/ಸಿಜಿ–06 ರೆವ. 02 ಮಾದರಿಯ ಸ್ವಯಂಚಾಲಿತ ವ್ಯವಸ್ಥೆಯೊಂದಿಗೆ ಬೆಂಕಿ ಪತ್ತೆ ಹಚ್ಚುವ ವ್ಯವಸ್ಥೆಯನ್ನಾಗಿ ಮಾರ್ಪಡಿಸುವುದು / ಉನ್ನತೀಕರಿಸುವುದು. ಪರಿಮಾಣ: 44 ಸಂ. |

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ/ಟೆಂಡರ್‌ನ ಕೊನೆಯ ದಿನಾಂಕ: 30.01.2024, 10.30 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/620/AAD/PRB/SWR/2023-24 ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**

ರಾಮನಗರ ವಿಭಾಗ, ಸಂಚಾರ ಶಾಖೆ

ಮೊದಲನೇ ಮಹಡಿ, ವಾಹನ ನಿಲ್ದಾಣ, ಐಜೂರು ವೃತ್ತ, ರಾಮನಗರ–562159.

ಸಂ: ಕರಾಸಾ/ರಾನವಿ/ಸಂ/ವಾ/2163/2164/2165/23–24 ದಿನಾಂಕ: 12.01.2024

**ಇ–ಟೆಂಡರ್ ಪ್ರಕಟಣೆ ಸಂಖ್ಯೆ: 13 & ಸಂಧಾನ ಪ್ರಕಟಣೆ ಸಂಖ್ಯೆ: 14 & 15/2023–24**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ, ಇವರು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಕನಕಪುರ, ಆನೇಕಲ್, ಚನ್ನಪಟ್ಟಣ, ಕೋಡಂಬಳ್ಳಿ, ಕೋಡಿಹಳ್ಳಿ ಹಾಗೂ ಮಾಗಡಿ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗೆ 03 ವರ್ಷಗಳವರೆಗೆ ಮತ್ತು ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಖಾಲಿ ಇರುವ ಗ್ಲೋಸೈನ್/ಪ್ಲಾಟ್ ಫಾರಂ ಫಲಕಗಳ ಜಾಹೀರಾತುಗಳಿಗೆ 05 ವರ್ಷಗಳವರೆಗೆ ಸಂಧಾನದ ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡುವ ಸಲುವಾಗಿ **ದಿ: 01.02.2024 ರಂದು 15:00 ಗಂಟೆಗೆ ವಿಭಾಗೀಯ ಕಛೇರಿಯಲ್ಲಿ ಅರ್ಜಿದಾರರು/ಪ್ರತಿನಿಧಿಗಳ ಎದುರು ಸಂಧಾನ ಸಭೆಯನ್ನು** ನಡೆಸಲಾಗುವುದು. ಸಂಧಾನ ಅರ್ಜಿಗಳನ್ನು **ದಿನಾಂಕ: 12.01.2024 ರಿಂದ ದಿನಾಂಕ: 31.01.2024ರ 15:00 ಗಂಟೆಗಳವರೆಗೆ** ಪಡೆಯಬಹುದು ಹಾಗೂ ರಾಮನಗರ ವಿಭಾಗದ ವ್ಯಾಪ್ತಿಯಲ್ಲಿ ಬರುವ ಚನ್ನಪಟ್ಟಣ, ಕೋಡಂಬಳ್ಳಿ, ಮಾಗಡಿ, ಸೋಲೂರು ಹಾಗೂ ಆನೇಕಲ್ ಬಸ್ ಘಟಕ/ನಿಲ್ದಾಣಗಳಲ್ಲಿ ಖಾಲಿಯಿರುವ/ಮುಂದೆ ಖಾಲಿಯಾಗುವ ವಾಣಿಜ್ಯ ಮಳಿಗೆಗೆ 5 ವರ್ಷಗಳವರೆಗೆ/ತೆರೆದ ಸ್ಥಳದ ಮಳಿಗೆಗಳಿಗೆ 03 ವರ್ಷಗಳವರೆಗೆ ಇ–ಟೆಂಡರ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ) ಮುಖಾಂತರ ಪರವಾನಗಿದಾರರನ್ನು ಆಯ್ಕೆ ಮಾಡಲು **ದಿ: 09.02.2024 ರಂದು 11:00 ಗಂಟೆಗೆ** ಇ–ಟೆಂಡರ್ ನಡೆಸಲು/ತೆರೆಯಲು ಸಮಯನವನ್ನು ನಿಗಧಿಪಡಿಸಲಾಗಿರುತ್ತದೆ. **ದಿ: 16.01.2024ರಿಂದ** ಇ–ಟೆಂಡರ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್: https://www.kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. **ದಿನಾಂಕ: 05.02.2024ರಂದು 17:00 ಗಂಟೆಯವರೆಗೆ** ಆನ್‌ಲೈನ್ ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕರಾರಸಾ ಸಂಸ್ಥೆ, ರಾಮನಗರ ವಿಭಾಗ, ಮೊದಲನೇ ಮಹಡಿ, ರಾಮನಗರ ಬಸ್ ನಿಲ್ದಾಣ, ಐಜೂರು ವೃತ್ತ, ರಾಮನಗರ–562159ರಲ್ಲಿ ಸಂಪರ್ಕಿಸಲು ಕೋರಲಾಗಿದೆ. ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬಹುದಾದ **ಮೊಬೈಲ್ ಸಂಖ್ಯೆ: 7760990852.**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ
ರಾಮನಗರ ವಿಭಾಗ, ರಾಮನಗರ.

ವಾಸಾಸಂಇ/ವಾ.ಪ್ರ/3041/ಎಂಎಎ/2023–24



**PUBLIC NOTICE**

General Public is/are hereby informed that my client/sis/are intending to purchase the below mentioned Schedule lands from its registered ownersviz., SmtMumtaz, W/o Late KhaderShariff and her sons viz., Sri KalimullaShariff, Sri AlimullaShariff, Sri RehmanShariff, Sri SamiullaShariff and Sri ImtiyazShariff, residents of Market Road, Aralipete, Hosakote Town, Bengaluru Rural District. If any person/s is/are having any right, title, interest or claim of any kind or any objections, he/she/they is/are at liberty to notify with documentary proof of his/her/their right, title or claim if any to the below mentioned address **within 15 days** from the date of the publication of this notice. Any claim or objections raised and received **after 15 days** shall not bind on my client/s and my client/s will proceed to purchase the Schedule Property presuming that there is/are no claims / objections what so ever.

**SCHEDULE**

All that piece and parcel of Agricultural land bearing Survey No. 85/2B, measuring 1 Acre and 14 Guntas, situated at AmaniDoddakere Village, Kasaba Hobli, Hosakote Taluk and bounded on the:

| | |
|---|---|
| East by: | Land bearing Sy No85/3 |
| West by: | Land bearing Sy No 91/1 |
| North by: | Land bearing Sy No 84, 473,474/1 & 85/2A1 |
| South by: | Land bearing Sy No 90/1 & 89/1 |

**Venkataramana Reddy,** Advocate
No.85/1, II Floor, 19th Main, Sector-1,
HSR Layout, Bengaluru-560102.
Mob No 9844130703



**ಭಾರತ ಸರ್ಕಾರ**
**ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ**
**ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ**
**ಜಾಹೀರಾತು ಸಂ. ಡಿಎಸ್‌ಟಿ/06/2023–ಎಸ್ಟಾ.3**

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಲ್ಲಿನ ಹಿರಿಯ ಸಲಹೆಗಾರ ಎಂಬ '01' (ಒಂದು) ಹುದ್ದೆಯನ್ನು ಡೆಪ್ಯುಟೇಶನ್ (ಅಲ್ಪಾವಧಿ ಗುತ್ತಿಗೆ ಸೇರಿದಂತೆ) ಲೆವೆಲ್ 15 (ರೂ. 1,82,200–2,24,100) ಆಧಾರದಲ್ಲಿ ಭರ್ತಿ ಮಾಡಿಕೊಳ್ಳಲೆಂದು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು **ಆನ್‌ಲೈನ್** ವಿಧಾನದಲ್ಲಿ ತಮ್ಮ ಅಧಿಕೃತ ಇಮೇಲ್ ಐಡಿ ಬಳಸಿಕೊಂಡು https://recruitment.dst.gov.in/ ಪೋರ್ಟಲ್ ಮುಖಾಂತರ ಆನ್‌ಲೈನ್ ಅರ್ಜಿಗಳನ್ನು ಭರ್ತಿ ಮಾಡಬಹುದು. ಎಂಪ್ಲಾಯ್‌ಮೆಂಟ್ ನ್ಯೂಸ್/ರೋಜಗಾರ್ ಸಮಾಚಾರ್ ಪತ್ರಿಕೆಯಲ್ಲಿ ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 45 ದಿನಗಳವರೆಗೆ ಮಾತ್ರ ಅರ್ಜಿ ಸಲ್ಲಿಕೆಗಾಗಿ ಸದರಿ ಆನ್‌ಲೈನ್ ಪೋರ್ಟಲ್ ಲಭ್ಯವಿರುತ್ತದೆ. ಈ ಅರ್ಜಿಯನ್ನು ಸಂಪೂರ್ಣ ಭರ್ತಿ ಮಾಡಿ ಸಹಿ ಹಾಕಿದ ಪ್ರತಿಯನ್ನು, ಸ್ವಯಂ ದೃಢೀಕರಣ ಮಾಡಿರುವ ಕಳೆದ ಐದು ವರ್ಷಗಳ ಎಸಿಆರ್/ಎಪಿಎಆರ್ ಪ್ರತಿಗಳೊಂದಿಗೆ ಸೂಕ್ತ ವಿಧಾನದಲ್ಲಿ, **ನೋಂದಾಯಿತ ಅಂಚೆ ಅಥವಾ ತ್ವರಿತ ಅಂಚೆ ಮೂಲಕ, ಆನ್‌ಲೈನ್ ಪೋರ್ಟಲ್ ಕ್ಲೋಸಿಂಗ್‌ನ ಕೊನೆಯ ದಿನಾಂಕದಿಂದ 15 ದಿನಗಳೊಳಗೆ** (ಅಸ್ಸಾಂ, ಮೇಘಾಲಯ, ಅರುಣಾಚಲ ಪ್ರದೇಶ, ಮಿಜೋರಾಂ, ಮಣಿಪುರ, ನಾಗಾಲ್ಯಾಂಡ್, ತ್ರಿಪುರ, ಸಿಕ್ಕಿಂ, ಲಡಾಖ್, ಲಾಹೌಲ್ ಮತ್ತು ಸ್ಪಿಟಿ ಜಿಲ್ಲೆ ಮತ್ತು ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಪಾಂಗಿ ಸಬ್ ಡಿವಿಜನ್, ಅಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಹಾಗೂ ಲಕ್ಷದ್ವೀಪ ಅಭ್ಯರ್ಥಿಗಳು 30 ದಿನಗಳೊಳಗೆ) ಸದರಿ ಇಲಾಖೆಗೆ ತಲುಪುವಂತೆ ರವಾನಿಸುವುದು. ಯಾವ ಸಂಸ್ಥೆಗಳಲ್ಲಿ (ಅರ್ಜಿ ಸಲ್ಲಿಕೆಗೆ ಅರ್ಹ ಸಿಬ್ಬಂದಿಗಳಿರುವ) ಎಪಿಎಆರ್/ಎಸಿಆರ್ ದಾಖಲೀಕರಣ ವ್ಯವಸ್ಥೆಯು ಇಲ್ಲದಿರುವುದಿಲ್ಲವೊ, ಅಂತಹ ಸಂಸ್ಥೆಗಳು, **ಆನ್‌ಲೈನ್ ಪೋರ್ಟಲ್ ಕ್ಲೋಸಿಂಗ್ ದಿನಾಂಕದಿಂದ 15 ದಿನಗಳೊಳಗೆ** (ದೂರದ ಪ್ರದೇಶಗಳ ಸಂಸ್ಥೆಗಳು 30 ದಿನಗಳೊಳಗೆ) **ನೋಂದಾಯಿತ ಅಂಚೆ ಅಥವಾ ತ್ವರಿತ ಅಂಚೆ ಮುಖಾಂತರ,** ಕಳೆದ 05 ವರ್ಷಗಳ ತಮ್ಮ ವರ್ಕ್ ಪ್ರೊಫೈಲ್ಸ್ ಹಾಗೂ ಗ್ರೇಡಿಂಗ್‌ಗಳನ್ನು ಸಂಸ್ಥೆಯ ಮುಖ್ಯಸ್ಥರಿಂದ ಪ್ರಮಾಣೀಕರಿಸಿ, ಸೂಕ್ತ ವಿಧಾನದಲ್ಲಿ ಅರ್ಜಿಗಳನ್ನು ಸದರಿ ಇಲಾಖೆಗೆ ರವಾನಿಸುವುದು. ಅರ್ಜಿ ಸಂಸ್ಕರಣೆ ಮತ್ತು ಇನ್ನಿತರ ಸಾಮಾನ್ಯ ಷರತ್ತು ಮತ್ತು ನಿಬಂಧನೆಗಳು ಹಾಗೂ ಅಗತ್ಯಗಳ ವಿವರಗಳಿಗಾಗಿ ದಯವಿಟ್ಟು ನಮ್ಮ www.dst.gov.in ವೆಬ್‌ಸೈಟ್‌ಗೆ ಭೇಟಿ ಕೊಡಿ.

ಸಹಿ/–
(ವಿನೋದ್ ಕುಮಾರ್ ಶರ್ಮಾ)
ಅಧೀನ ಕಾರ್ಯದರ್ಶಿ, ಭಾರತ ಸರ್ಕಾರ

CBC 36101/11/0020/2324



BRAND WORLD

ಫ್ಯಾಷನ್ & ಲೈಫ್‌ಸ್ಟೈಲ್ ಎಕ್ಸಿಬಿಷನ್ ಬೆಂಗಳೂರು

ಆರಂಭಿಕ ದರಗಳು ₹99 ಮಾತ್ರ

ಪುರುಷರ, ಮಹಿಳೆಯರ & ಮಕ್ಕಳ

ಎಲ್ಲಾ ಹೊಸ ಬ್ರ್ಯಾಂಡ್‌ನ 100% ತಾಜಾ ದಾಸ್ತಾನುಗಳನ್ನು ಎಂಆರ್‌ಪಿ ಮೇಲೆ 70% ವರೆಗೆ ರಿಯಾಯತಿಯಲ್ಲಿ ಮಾರಾಟ ಮಾಡಲಾಗುತ್ತದೆ

Myntra ZARA H&M VICTORIA'S SECRET

ಆನ್‌ಲೈನ್‌ನಲ್ಲಿ ಮಾರಾಟ ಮಾಡಲಾಗುವ ಬ್ರಾಂಡೆಡ್ ಉಡುಪುಗಳು, ಶೂಗಳು, ಸುಗಂಧಗಳು ಮತ್ತು ಮಹಿಳೆಯರ ಹ್ಯಾಂಡ್ ಬ್ಯಾಗ್‌ಗಳನ್ನು ಇದೀಗ, ಆನ್‌ಲೈನ್ ದರಗಳಿಂತ ಕಡಿಮೆ ಬೆಲೆಯಲ್ಲಿ ಖರೀದಿಸಿರಿ.

ಈ ಮಾರಾಟ ಕೇವಲ 3 ದಿನ ಮಾತ್ರ @ ಶುಭ್ ಕನ್ವೆನ್ಷನ್ ಜೆಪಿ ನಗರ, 7ನೇ ಹಂತ, ಬೆಂಗಳೂರು

ಜವಳಿ ವಸ್ತ್ರಗಳಿಂದ ಕೈಮಗ್ಗ ಬಟ್ಟೆಗಳವರೆಗೆ, ಹೋಮ್ ಲಿನೆನ್, ಟವೆಲ್ಸ್, ಕಾರ್ಪೆಟ್ಸ್, ಕಂಫರ್ಟರ್ಸ್, ಬಾಟಲ್ಸ್, ಪಿಲ್ಲೋಗಳು, ಬೆಡ್‌ಶೀಟ್‌ಗಳು, ಹೋಮ್ ಡೆಕೋರ್, ಸಿಪ್ಪರ್ಸ್, ಬ್ಯಾಗ್ಸ್, ಪರ್ಸ್, ಟಾಪ್, ಕುರ್ತಿ, ಲಾಂಡ್ರಿ ಬ್ಯಾಗ್ ಮತ್ತು ಇನ್ನೂ ಅನೇಕ 100 ವೆರೈಟಿಗಳು ಹಾಗೂ ಇನ್ನೂ ಅನೇಕ ಐಟಂಗಳು ನಂಬಲಸಾಧ್ಯ ದರಗಳಲ್ಲಿ ಸಿಗುತ್ತವೆ!!

ಹಾಫ್ ಸ್ಲೀವ್ ಟೀಷರ್ಟ್ಸ್, ಕಾಟನ್ ಡೆನಿಮ್, ಬ್ರಾ, ಶಾಪಿಂಗ್ ಬ್ಯಾಗ್ಸ್, ಶಾರ್ಟ್ಸ್‌ಗಳು 500 ರಿಂದ 1000 ರೂಪಾಯಿಗೆ ದೊರೆಯುತ್ತವೆ.
ಪುರುಷರ ಒಳ ಉಡುಪು, ಪ್ಯಾಂಟಿ, ಫ್ಯಾನ್ಸಿ ಗರ್ಲ್ ಸ್ಕರ್ಟ್, ಪ್ಯಾರೆಲ್ಲೆಲ್ ಪೈಜಾಮಾ, ಲೆಗ್ಗಿಂಗ್, ಕಾಟನ್ ಟಾಪ್, ಫ್ರಾಕ್, ಚಪ್ಪಲ್‌ಗಳನ್ನು

ಕೇವಲ ರೂ.100ಕ್ಕೆ ದೊರೆಯುತ್ತವೆ

ರೂ.2000 ರಿಂದ 3000 ಮೌಲ್ಯದ ಪ್ರಿಮಿಯಂ ಉಡುಪುಗಳು ಮತ್ತು ಶೂಗಳು
ಕೇವಲ 200, 300 ಮತ್ತು 500ಕ್ಕೆ ದೊರೆಯುತ್ತವೆ

ಎಂಆರ್‌ಪಿ ರೂ.4000 ದಿಂದ ರೂ.7000 ಮೌಲ್ಯದ ಪುರುಷರ ಡೆನಿಮ್, ಷರ್ಟ್, ಟೀಷರ್ಟ್, ಟ್ರೌಸರ್ ಮತ್ತು ಇನ್ನೂ ಅನೇಕ... ಕೇವಲ ರೂ.600 ರಿಂದ ರೂ.900ಕ್ಕೆ ದೊರೆಯುತ್ತವೆ

ಎಂಆರ್‌ಪಿ ರೂ.25,000–30,000 ಮೌಲ್ಯದ Raymond ಶೇರ್ವಾಣಿ ಸೂಟ್ ಕೇವಲ ₹3000

ಯುಎಸ್ಎ ಆಮದು ರೂ.30,000 ಮೌಲ್ಯದ ಕಂಫರ್ಟರ್ ಕೇವಲ ₹3000 | ರೂ.2499 ಮೌಲ್ಯದ Raymond ಬೆಡ್‌ಶೀಟ್ ಕೇವಲ ₹700

ಪ್ರಿಮಿಯಂ ವಿಂಟರ್ ಜಾಕೆಟ್, ಸ್ವೆಟರ್ ಮತ್ತು ಸ್ವೆಟ್‌ಷರ್ಟ್ ಕೇವಲ ₹800-1500 | AEROPOSTALE ಪುರುಷರ, ಮಹಿಳೆಯರ ಮತ್ತು ಮಕ್ಕಳ ಉಡುಪು ಕೇವಲ ₹700-800

ಇವುಗಳಷ್ಟೆ ಅಲ್ಲದೆ, ಸಾವಿರಾರು ರೀತಿಯ ಫಾರ್ಮಲ್, ಕ್ಯಾಷುಯಲ್ ಮಾಡರ್ನ್ ಗಾರ್ಮೆಂಟ್ಸ್ ಕಾಂಟರ್‌ಗಳು ಕೂಡ ಇವೆ.

ಸೂಚನೆ:–
1) ಯಾವ ಗಾರ್ಮೆಂಟ್ ನಷ್ಟಕ್ಕೆ ಈಡಾಗುತ್ತದೆ ಎಂಬುದನ್ನು ಪರಿಗಣಿಸಲಾಗುವುದಿಲ್ಲ.
2) ಈ ಮಾರಾಟ ಮೇಳ ಕೇವಲ ರಿಟೇಲ್ ಗ್ರಾಹಕರಿಗಾಗಿ ಮಾತ್ರ.
3) ಹೆಚ್ಚಿನ ವಿವರಗಳಿಗಾಗಿ ನಮ್ಮನ್ನು ಅನುಸರಿಸಿ: Brand.world.outlet

ಕೇವಲ 3 ದಿನಗಳು ಮಾತ್ರ 13, 14 & 15 ಜನವರಿ (ಶನಿ. ಭಾನು. ಸೋಮ.)

ಸಮಯ: ಬೆಳಗ್ಗೆ 10:00 ರಿಂದ ರಾತ್ರಿ 10:00 ಗಂಟೆ

ಸ್ಥಳ: ಶುಭ್ ಕನ್ವೆನ್ಷನ್

6ನೇ ಮೇನ್, ಕೊತ್ತನೂರು ಮುಖ್ಯರಸ್ತೆ, ಕಾಸಿಯಾ ಬ್ಯಾಕ್ ಎದುರು, ಪುಟ್ಟೇನಹಳ್ಳಿ, ಜೆಪಿ ನಗರ, 7ನೇ ಹಂತ, ಬೆಂಗಳೂರು, ಕರ್ನಾಟಕ 560078

S.I. Advertisers, Lucknow.

DS MAX — The Joy Of Living — ಡಿಎಸ್–ಮ್ಯಾಕ್ಸ್ ಪ್ರಾಪರ್ಟೀಸ್

BUYING A HOME?

QUESTIONS can be many...

TAKE ADVICE FROM OUR SENIOR ADVISORS

check your eligibility, get tips and other criterias to own a home

FOR EXPERT ADVISE 8880759759

2, 3 & 4 - BHK APARTMENTS FOR SALE IN VARIOUS LOCATIONS

| | |
|---|---|
| PRM/KA/RERA/1251/309/PR/060923/006244 OFF TUMKUR ROAD NEAR HIMALAYA FACTORY ₹ 45.81 - 72.67 Lakhs* | PRM/KA/RERA/1251/310/PR/150223/005721 MYSORE ROAD NEAR RR DENTAL COLLEGE ₹ 49.63 - 79.66 Lakhs* |
| PRM/KA/RERA/1251/446/PR/210312/004002 K R PURAM NEAR GARDEN CITY UNIVERSITY ₹ 51.80 - 86.24 Lakhs* | PRM/KA/RERA/1251/310/PR/151223/006489 UTTARAHALLI NR. NATIONAL PUBLIC SCHOOL ₹ 74.97 L - 1.74 Cr* |
| PRM/KA/RERA/1251/446/PR/190301/002464 WHITEFIELD 10 MINS. HOPE FARM CIRCLE ₹ 44.00 - 73.50 Lakhs* | PRM/KA/RERA/1251/309/PR/180122/002151 YELAHANKA NEAR KOGILU CROSS ₹ 76.98 - 89.64 Lakhs* |
| PRM/KA/RERA/1251/308/PR/201201/003733 HOSA ROAD JUNCTION 5 MINS. BOSCH-ELECTRONIC CITY ₹ 50.00 L - 1.15 Cr* | PRM/KA/RERA/1251/309/PR/220223/005748 THANISANDRA 10 MINS. MANYATA TECH PARK ₹ 58.17 L - 1.02 Cr* |
| PRM/KA/RERA/1251/308/PR/280222/004739 CHANDAPURA 10 MINS. BOMMASANDRA METRO ₹ 37.60 - 49.60 Lakhs* | PRM/KA/RERA/1251/308/PR/290122/004660 SARJAPURA SARJAPUR - ATTIBELE ROAD ₹ 38.72 - 49.80 Lakhs* |
| PRM/KA/RERA/1251/446/PR/110722/005059 BEGUR 10 MINS. TO SILK BOARD ₹ 48.35 L - 1.16 Cr* | DODDAGUBBI NEAR HENNUR DECATHLON ₹ 53.30 - 86.90 Lakhs* |

*T & C Apply

FOR PROJECT SPECIFIC INFORMATION 7022 791 222 www.dsmaxproperties.com

Disclaimer: Information provided in this advertisement is for reference only, and all data is sourced internally. The images, illustrations, and artist's impressions used in this advertisement are for representational purposes only. The prices mentioned are indicative and base prices. Any offers, discounts, or incentives mentioned in this advertisement are subject to specific terms and conditions. All taxes, registration charges, stamp duty, and any other statutory payments are applicable as per government regulations. All directions, locations, and landmarks are approximate. Please note that distances are measured based on Google Maps and are subject to traffic conditions. Mentioning a specific product, process, or service does not imply endorsement. Please contact our Sales Team for detailed information about specific projects, pricing, availability, and other inquiries. DS-MAX Properties ensures that all its projects comply with the Real Estate (Regulation and Development) Act, 2016 (RERA) and its regulations. Visit: www.rera.karnataka.gov.in



**PUBLIC NOTICE**

General Public is/are hereby informed that my client/s is/are intending to purchase the below mentioned item No 1 to 3 of the Schedule lands from its registered owner viz., **Sri Arun Kumar .G, S/o Sri Govindan A**, Residing at No 75, 1st Main, Near Tirumala Dabha, Akshaya Nagar, Attur Layout, Yalahanka Upanagara, Bengaluru - 560064. If any person/s having any right, title, interest or claim of any kind or any objections, he/she/they is/are at liberty to notify their claims/objections if any with documentary proof of his/her/their right, title or claim to the below mentioned address **within 15 days** from the date of the publication of this notice. Any claim or objections raised and received after 15 days shall not bind on my client/s and my client/s will proceed to purchase item No 1 to 3 of the Schedule Properties presuming that there are no claims or objections what so ever on the Schedule lands.

**SCHEDULE PROPERTY**

**Item No-1**: All that piece and parcel of the agricultural land bearing Sy No: 108/1, measuring 23 Guntas, situated at Thindlu Village, Kundana Hobli, Devanahalli Taluk and bounded on the:

| | |
|---|---|
| East by: | Land belonging to Sri Seenappa |
| West by: | Land belonging to Harohalli Krishnappa |
| North by: | Land belonging to Sri Arun Kumar .G |
| South by: | Lands belonging to Sri Arun Kumar .G |

**Item No-2**: All that piece and parcel of the agricultural land bearing old Sy No: 108/1, New Sy No 108/2, measuring 1 Acre 06 Guntas, situated at Thindlu Village, Kundana Hobli, Devanahalli Taluk and bounded on the:

| | |
|---|---|
| East by: | Land belonging to Sri Seenappa |
| West by: | Land belonging to Sri Muniyappa |
| North by: | Land belonging to Sri Arun Kumar .G |
| South by: | Lands belonging to Sri Basavaraju. |

**Item No-3**: All that piece and parcel of the agricultural land bearing old Sy No: 108/1, New Sy No 108/3, measuring 23 Guntas, situated at Thindlu Village, Kundana Hobli, Devanahalli Taluk and bounded on the:

| | |
|---|---|
| East by : | Cart Track |
| West by : | Land belonging to Harohalli Krishnappa |
| North by : | Land belonging to Gurukondamma Dyavarahalli |
| South by : | Lands belonging to Sri Arun Kumar .G. |

**Venkataramana Reddy,** Advocate
No.85/1, II Floor, 19th Main, Sector-1,
HSR Layout, Bengaluru-560102.
Mob No 9844130703

ಜಯನಗರದಲ್ಲಿ ದಿಢೀರ್ ವ್ಯಾಪಾರ: ಬಿಗುವಿನ ವಾತಾವರಣ ಸೃಷ್ಟಿ

# ಬೀದಿಬದಿ ವ್ಯಾಪಾರಿಗಳ ತೆರವು; ಪ್ರತಿಭಟನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಜಯನಗರ 4ನೇ ಬ್ಲಾಕ್ ರಸ್ತೆಗಳಲ್ಲಿ ಬೀದಿ ಬದಿ ವ್ಯಾಪಾರಿಗಳು ಶುಕ್ರವಾರ ಮಧ್ಯಾಹ್ನ ದಿಢೀರ್ ವ್ಯಾಪಾರ ಆರಂಭಿಸಿದ್ದರಿಂದ ಅವರನ್ನು ಬಿಬಿಎಂಪಿ ಸಿಬ್ಬಂದಿ ತೆರವುಗೊಳಿಸಿದರು.

ಜಯನಗರದಲ್ಲಿ ಈ ಹಿಂದೆ ತೆರವುಗೊಳಿಸಿದ್ದ ಸ್ಥಳದಲ್ಲೇ ಬೀದಿಬದಿ ವ್ಯಾಪಾರಿಗಳು ಶುಕ್ರವಾರ ವಹಿವಾಟು ಆರಂಭಿಸಿದ್ದರು. ಇವರನ್ನು ತೆರವುಗೊಳಿಸಲು ಬಿಬಿಎಂಪಿ ಸಿಬ್ಬಂದಿ ಮುಂದಾದಾಗ, ವ್ಯಾಪಾರಿಗಳು ಪ್ರತಿಭಟನೆ ನಡೆಸಿದ್ದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ಸೃಷ್ಟಿಯಾಯಿತು.

ಶುಕ್ರವಾರ ರಾತ್ರಿಯವರೆಗೂ ಬೀದಿ ಬದಿ ವ್ಯಾಪಾರಿಗಳು ಹಾಗೂ ಬಿಬಿಎಂಪಿ ಸಿಬ್ಬಂದಿ ಮಧ್ಯೆ ಮಾತಿನ ಚಕಮಕಿ ನಡೆಯುತ್ತಲೇ ಇತ್ತು. 'ಹಬ್ಬದ ಸಮಯವಾದ್ದರಿಂದ ವ್ಯಾಪಾರ ನಡೆಸಲು ಅವಕಾಶ ಮಾಡಿಕೊಡಬೇಕು' ಎಂದು ಬೀದಿಬದಿ ವ್ಯಾಪಾರಿಗಳು ಮನವಿ ಮಾಡಿಕೊಂಡರು.

'ರಸ್ತೆಯಲ್ಲಿ ವಾಹನ ಸಂಚಾರ ಹಾಗೂ ಪಾದಚಾರಿಗಳಿಗೆ ಅಡಚಣೆಯಾಗುವುದರಿಂದ ವ್ಯಾಪಾರಕ್ಕೆ ಅವಕಾಶ ನೀಡಲು ಸಾಧ್ಯವಿಲ್ಲ. ಬೀದಿಬದಿ ವ್ಯಾಪಾರಿಗಳ ಸಮಿತಿ ಸಭೆಯನ್ನು ವಲಯದ ಜಂಟಿ ಆಯುಕ್ತರ ನೇತೃತ್ವದಲ್ಲಿ ಜ.18ರಂದು ಕರೆಯಲಾಗಿದೆ. ಅಲ್ಲಿ ಸಮಾಲೋಚನೆ ನಡೆಸಿ, ಯಾವ ರಸ್ತೆಯಲ್ಲಿ ವ್ಯಾಪಾರ ನಡೆಸಬೇಕು ಎಂಬುದನ್ನು ಅಂತಿಮಗೊಳಿಸಿಕೊಳ್ಳಿ ಎಂದು ಬೀದಿ ಬದಿ ವ್ಯಾಪಾರಿಗಳಿಗೆ ತಿಳಿಸಿದ್ದೇವೆ' ಎಂದು ದಕ್ಷಿಣ ವಲಯ ಮುಖ್ಯ ಎಂಜಿನಿಯರ್ ರಾಜೇಶ್ ತಿಳಿಸಿದರು.

'ಸಮಿತಿ ಸಭೆಯನ್ನು ನಡೆಸಿ, ನಮಗೆ ಜಾಗ ಗುರುತಿಸಿಕೊಡಿ ಎಂದು ಹಲವು ತಿಂಗಳಿಂದ ಮನವಿ ಮಾಡಿಕೊಂಡರೂ ಆ ಪ್ರಕ್ರಿಯೆ ನಡೆಸಿಲ್ಲ. ನಾವೆಲ್ಲ ಪರವಾನಗಿ ಪಡೆದ ವ್ಯಾಪಾರಿಗಳು. ಹಬ್ಬದ ಸಂದರ್ಭದಲ್ಲಿ ವ್ಯಾಪಾರ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭದಲ್ಲೇ ನಮಗೆ ಅವಕಾಶ ನೀಡದಿದ್ದರೆ ಜೀವನ ಸಾಗಿಸುವುದು ಕಷ್ಟವಾಗುತ್ತದೆ. ಹೀಗಾಗಿ, ತೆರವು ಮಾಡಬೇಡಿ ಎಂದು ಮನವಿ ಮಾಡಿಕೊಳ್ಳುತ್ತಿದ್ದರೂ ಪೊಲೀಸ ರೊಂದಿಗೆ ಬಂದು ನಮ್ಮ ಸಾಮಗ್ರಿಗಳನ್ನು ತೆಗೆಯುತ್ತಿದ್ದಾರೆ' ಎಂದು ನೂರಾರು ವ್ಯಾಪಾರಿಗಳು ದೂರಿದರು.

ಜಯನಗರದಲ್ಲಿ ಬೀದಿ ಬದಿ ವ್ಯಾಪಾರಿಗಳನ್ನು ಬಿಬಿಎಂಪಿ ಸಿಬ್ಬಂದಿ ತೆರವು ಮಾಡಿದ್ದರಿಂದ ವ್ಯಾಪಾರಿಗಳು ಶುಕ್ರವಾರ ರಾತ್ರಿಯವರೆಗೂ ಪ್ರತಿಭಟನೆ ನಡೆಸಿದರು

'20–30 ವರ್ಷದಿಂದ ಈ ಭಾಗದಲ್ಲಿ ವ್ಯಾಪಾರ ಮಾಡುತ್ತಿದ್ದಾರೆ. ಒಂದೇ ಬಾರಿ ಅವರನ್ನು ತೆರವುಗೊಳಿಸಿದರೆ ಅವರು ಎಲ್ಲಿಗೆ ಹೋಗಬೇಕು? ಹಬ್ಬದ ಸಂದರ್ಭ ಅವಕಾಶ ಮಾಡಿಕೊಡಿ. ಮುಂದಿನ ವಾರ ಸಭೆ ನಡೆಸಿ ಅವರಿಗೆ 'ಹಾಕರ್ ಝೋನ್' ನಿರ್ಮಿಸಿಕೊಡಿ ಎಂದು ಬಿಬಿಎಂಪಿ ಅಧಿಕಾರಿಗಳಿಗೆ ತಿಳಿಸಲಾಗಿದೆ' ಎಂದು ಬಿಬಿಎಂಪಿ ಮಾಜಿ ಸದಸ್ಯ ಎನ್. ನಾಗರಾಜ್ ತಿಳಿಸಿದರು.

## ಕಳವು: ಇಬ್ಬರ ಸೆರೆ

**ಬೆಂಗಳೂರು:** ಮನೆಯಲ್ಲಿ ಚಿನ್ನಾಭರಣ ಕಳವು ಮಾಡಿ ತಲೆಮರೆಸಿಕೊಂಡಿದ್ದ ಇಬ್ಬರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮಣಿಕಂಠ ಹಾಗೂ ಅಭಿಷೇಕ್ ಬಂಧಿತ ಆರೋಪಿಗಳು. ಬಂಧಿತರಿಂದ ₹7.5 ಲಕ್ಷ ಮೌಲ್ಯದ 121 ಗ್ರಾಂ ಚಿನ್ನ, ₹1 ಲಕ್ಷ ನಗದು ಜಪ್ತಿ ಮಾಡಲಾಗಿದೆ.

ಲಗ್ಗೆರೆಯ ಮನೆಯೊಂದರಲ್ಲಿ ಡಿ.12ರಂದು ಚಿನ್ನಾಭರಣ ಹಾಗೂ ನಗದು ಕಳವು ಮಾಡಿದ್ದರು. ಇದೇ ಪ್ರಕರಣದಲ್ಲಿ ಡಿ.18ರಂದು ನಾಲ್ವರು ಆರೋಪಿಗಳನ್ನು ಬಂಧಿಸಲಾಗಿತ್ತು. ಅವರಿಂದ ₹12 ಲಕ್ಷ ಮೌಲ್ಯದ 254 ಚಿನ್ನಾಭರಣಜಪ್ತಿಮಾಡಲಾಗಿತ್ತು.ಈಗಬಂಧನವಾದ ಇಬ್ಬರ ಪೈಕಿ ಒಬ್ಬನ ಹೆಸರು ರೌಡಿ ಪಟ್ಟಿಯಲ್ಲಿದೆ. ಆತನ ವಿರುದ್ಧ ಪೀಣ್ಯ, ಮಹಾಲಕ್ಷ್ಮಿಲೇಔಟ್, ಬ್ಯಾಡರಹಳ್ಳಿ, ಗಂಗಮ್ಮನಗುಡಿ, ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿವೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## ಅಂಡರ್‌ಪಾಸ್‌ಗೆ 'ರೂಫ್ ಟಾಪ್'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಿಬಿಎಂಪಿ ಪೂರ್ವ ವಲಯದಲ್ಲಿರುವ ಅಂಡರ್‌ಪಾಸ್‌ಗಳನ್ನು ಮಳೆಗಾಲದ ಸಂದರ್ಭದಲ್ಲಿ ಸುರಕ್ಷಿತವಾಗಿರಿಸಲು 'ರಕ್ಷಣಾ ಕಾಮಗಾರಿ'ಗಳನ್ನು ನಡೆಸಲಾಗುತ್ತಿದೆ.

2023ರ ಮೇ 21ರಂದು ಭಾರಿ ಮಳೆಗೆ ನೀರು ತುಂಬಿಕೊಂಡು ಯುವತಿ ಸಾವಿಗೆ ಕಾರಣವಾಗಿದ್ದ ಕೆ.ಆರ್. ವೃತ್ತದ ಅಂಡರ್‌ಪಾಸ್‌ನಲ್ಲಿ ಮಳೆನೀರು ಸರಾಗವಾಗಿ ಹರಿಯುವ ವ್ಯವಸ್ಥೆ ಮಾಡಲಾಗುತ್ತದೆ. ಸ್ಯಾಂಕಿ ರಸ್ತೆ ಲೀಮೆರಿಡಿಯನ್ ಅಂಡರ್‌ಪಾಸ್‌ಗೆ 'ರೂಫ್ ಟಾಪ್' ನಿರ್ಮಿಸಲು ನಿರ್ಧರಿಸಲಾಗಿದೆ. ₹42.35 ಲಕ್ಷ ವೆಚ್ಚದಲ್ಲಿ ಈ ಎರಡೂ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಕರೆಯಲಾಗಿದೆ.

ಪೂರ್ವ ವಲಯದಲ್ಲಿರುವ ರೈಲ್ವೆ ಮೇಲ್ಸೇತುವೆ ಹಾಗೂ ಕೆಳ ಸೇತುವೆಗಳಲ್ಲಿ ಮಳೆ ನೀರು ಸರಾಗವಾಗಿ ಹರಿಯುವ ಕಾಮಗಾರಿ ಕೈಗೊಳ್ಳಲು ₹42.35 ಲಕ್ಷ ಹಾಗೂ ವಲಯದಲ್ಲಿರುವ ಎಲ್ಲ ಅಂಡರ್‌ಪಾಸ್‌ಗಳ ದುರಸ್ತಿ ಹಾಗೂ ಅಭಿವೃದ್ಧಿಗೆ ₹42.35 ಲಕ್ಷ ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತದೆ. ಆರು ತಿಂಗಳಲ್ಲಿ ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ನಿರ್ಧರಿಸಲಾಗಿದೆ.

ಕಳೆದ ವರ್ಷ ನಗರದಲ್ಲಿ ಭಾರಿ ಮಳೆಯಾದ ಸಂದರ್ಭದಲ್ಲಿ ಅಂಡರ್‌ಪಾಸ್‌ಗಳಲ್ಲಿ ನೀರು ತುಂಬಿಕೊಂಡು ಸಾಕಷ್ಟು ಸಮಸ್ಯೆಯಾಗಿತ್ತು. ಆಗ ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಎಲ್ಲ ಅಂಡರ್‌ಪಾಸ್‌ಗಳಲ್ಲಿ ಮಳೆ ನೀರಿನ ಮೀಟರ್ ಗೇಜ್ ಮತ್ತು ಸಿ.ಸಿ ಟಿ.ವಿ ಕ್ಯಾಮೆರಾ, ದೀಪ ಅಳವಡಿಸಲಾಗುತ್ತದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದ್ದರು.

# ಪೌತಿಖಾತೆ ಆಂದೋಲನಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

**ದಾಬಸ್ ಪೇಟೆ:** 'ನೆಲಮಂಗಲ ತಾಲ್ಲೂಕಿನಲ್ಲಿ ಸಾವಿರಾರು ಸಂಖ್ಯೆಯಲ್ಲಿ ಪೌತಿ ಖಾತೆಗಳು ಬಾಕಿ ಇದ್ದು, ರೈತರು ಪರದಾಡುವ ಖಾತೆ ಮಾಡಿಸಿಕೊಳ್ಳಲು ಪರದಾಡುವ ಸ್ಥಿತಿ ಉಂಟಾಗಿದೆ. ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ 'ಪೌತಿ ಖಾತೆ' ಆಂದೋಲನ ಆರಂಭಿಸಲಾಗಿದೆ' ಎಂದು ಶಾಸಕ ಎನ್.ಶ್ರೀನಿವಾಸ್ ಹೇಳಿದರು

ದಾಬಸ್ ಪೇಟೆ ಪಟ್ಟಣದ ಸೋಂಪುರ ಗ್ರಾಮ ಪಂಚಾಯಿತಿ ಆವರಣದಲ್ಲಿ ಕಂದಾಯ ಇಲಾಖೆಯಿಂದ ಶುಕ್ರವಾರ ನಡೆದ 'ಪೌತಿ ಖಾತೆ' ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'ರೈತರ ತಾತ, ಮುತ್ತಾತರ ಹೆಸರಲ್ಲಿ ಜಮೀನು ಇದ್ದು, ಅದಕ್ಕೆ ಪೂರಕ ದಾಖಲೆ ಇದ್ದರೆ ಆಂದೋಲನದಲ್ಲಿ ಅರ್ಜಿ ಸಲ್ಲಿಸಬಹುದು. ಗ್ರಾಮ ಲೆಕ್ಕಿಗರಿಗೆ ಅರ್ಜಿ ಸಲ್ಲಿಸಿದರೆ ಒಂದು ತಿಂಗಳ ಒಳಗೆ ಪೌತಿ ಖಾತೆ ತಯಾರಾಗುತ್ತದೆ' ಎಂದು ತಿಳಿಸಿದರು.

ಸೋಂಪುರದಲ್ಲಿ ನಡೆದ ಪೌತಿ ಖಾತೆ ಆಂದೋಲನದಲ್ಲಿ ಶಾಸಕ ಎನ್. ಶ್ರೀನಿವಾಸ್ ರೈತರಿಂದ ಅರ್ಜಿ ಸ್ವೀಕರಿಸಿದರು

'ಯಾವುದೇ ಇಲಾಖೆಯ ಸರ್ಕಾರಿ ಅಧಿಕಾರಿಗಳು ಸಾರ್ವಜನಿಕರ ಕೆಲಸ ಕಾರ್ಯಗಳನ್ನು ಮಾಡಿಕೊಡಲು ಲಂಚ ಕೇಳಿದರೆ, ವಿಳಂಬ ಧೋರಣೆ ತೋರಿದರೆ ನನ್ನ ಗಮನಕ್ಕೆ ತನ್ನಿ. ಅಂತಹವರ ವಿರುದ್ಧ ಕಾನೂನು ರಿತ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದರು.

ನೆಲಮಂಗಲ ತಹಶೀಲ್ದಾರ್ ಅಮೃತ್ ಅತ್ರೇಶ್, 'ಸಾರ್ವಜನಿಕರು ಕಂದಾಯ ಅಧಿಕಾರಿಗಳಿಗೆ ದಾಖಲೆಗಳನ್ನು ನೀಡಿದರೆ, ಸಕಾಲಕ್ಕೆ ಕೆಲಸವನ್ನು ಮಾಡುತ್ತಾರೆ' ಎಂದರು.

ಸೋಂಪುರ ಗ್ರಾಮ ಪಂಚಾಯತಿ ಅಧ್ಯಕ್ಷೆ ಪ್ರೇಮಾ ತೀರ್ಥಪ್ರಸಾದ್, ಉಪಾಧ್ಯಕ್ಷೆ ಪಿ.ಲಾವಣ್ಯ ಜಗದೀಶ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ಎಸ್.ಮಧು, ಉಪ ತಹಶೀಲ್ದಾರ್ ಬಿ.ಸಿ. ಶಶಿಧರ್, ಪಿಡಿಒ ಎ.ಎನ್. ರವಿಶಂಕರ್, ಆರ್. ಮಂಜಮ್ಮ, ಉಮಾಶಂಕರ್, ರಾಜಸ್ವ ನೀರಿಕ್ಷಕರಾದ ಎಚ್.ಆರ್. ಕುಮಾರಸ್ವಾಮಿ, ಮುನಿರಾಜು, ಗ್ರಾಮ ಲೆಕ್ಕಿಗರಾದ ಕಿರಣ್ ಪ್ರಕಾಶ್, ಬಾಲಕೃಷ್ಣ, ಲೋಕೇಶ, ಇದ್ದರು.

## ಬಾಂಬ್ ಬೆದರಿಕೆ ಸಿಸಿಬಿಗೆ ವರ್ಗ

ಪ್ರಜಾವಾಣ ವಾರ್ತೆ

**ಬೆಂಗಳೂರು:** ನಗರದ ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಹುಸಿ ಬಾಂಬ್ ಇ-ಮೇಲ್ ಬೆದರಿಕೆ ಸಂದೇಶ ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿದೆ. ಪ್ರಕರಣವನ್ನು ವರ್ಗಾವಣೆ ಮಾಡಿ, ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಜ.6ರಂದು ಕಿಡಿಗೇಡಿಗಳು ವಿಶ್ವೇಶ್ವರಯ್ಯ ಮ್ಯೂಸಿಯಂಗೆ ಇ-ಮೇಲ್ ಮೂಲಕ ಬಾಂಬ್ ಬೆದರಿಕೆ ಕಳುಹಿಸಿದ್ದರು. ಮ್ಯೂಸಿಯಂನಲ್ಲಿ ಹಲವು ಸ್ಫೋಟಕಗಳನ್ನು ಬಚ್ಚಿಡಲಾಗಿದೆ. ಎಲ್ಲವೂ ಸ್ಫೋಟಗೊಳ್ಳುತ್ತವೆ ಎಂದು ಸಂದೇಶದಲ್ಲಿ ಉಲ್ಲೇಖಿಸಿದ್ದರು. ಸ್ಥಳಕ್ಕೆ ತೆರಳಿದ ಕಬ್ಬನ್ ಪಾರ್ಕ್ ಠಾಣೆ ಪೊಲೀಸರು, ತಪಾಸಣೆ ನಡೆಸಿದ್ದರು. ಅದಾದ ಮೇಲೆ ಹುಸಿ ಬಾಂಬ್ ಕರೆ ಎಂಬುದು ಗೊತ್ತಾಗಿತ್ತು.

## ವಸತಿ ಯೋಜನೆಯ ಮನೆಗಳ ದರ ಇಳಿಸಲು ಆಗ್ರಹ

**ಬೆಂಗಳೂರು:** ಆರ್ಥಿಕವಾಗಿ ಹಿಂದುಳಿದವರಿಗೆ ಮುಖ್ಯಮಂತ್ರಿಗಳ ಒಂದು ಲಕ್ಷ ವಸತಿಯೋಜನೆಯಲ್ಲಿನೀಡುವಮನೆಗಳ (1 ಬಿಎಚ್‌ಕೆ) ದರ ಕಡಿತಗೊಳಿಸುವಂತೆ ಮುಖ್ಯಮಂತ್ರಿಯವರಿಗೆ ಇಂಡಿಯನ್ ಫ್ರೀಡಂ ಪ್ಯಾಂಥರ್ಸ್ ಮನವಿ ಸಲ್ಲಿಸಿದೆ.

ಬ್ಯಾಂಕ್ ಸಾಲ ಪಡೆದರೆ ತಿಂಗಳಿಗೆ ₹ 8,000ದಿಂದ ₹ 10,000ವರೆಗೆ ಕಂತು ಕಟ್ಟಬೇಕಾಗುತ್ತದೆ. ಮನೆ ಪಡೆಯಲು ಇಚ್ಛಿಸುವ ಫಲಾನುಭವಿಗಳು ಬಡವರಾಗಿದ್ದು,ಅಷ್ಟು ದೊಡ್ಡ ಮೊತ್ತ ಪಾವತಿಸುವುದು ಕಷ್ಟವಾಗಲಿದೆ ಎಂದು ಇಂಡಿಯನ್ ಫ್ರೀಡಂ ಪ್ಯಾಂಥರ್ಸ್ ರಾಜ್ಯಾಧ್ಯಕ್ಷ ಅರುಣ್‌ಕುಮಾರ್ ಡಿ. ಮತ್ತು ಹೋರಾಟಗಾರ್ತಿ ಬಿ.ಟಿ. ಲಲಿತಾ ನಾಯಕ್ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ಬಡ್ಡಿರಹಿತ ಸಾಲ ಒದಗಿಸಬೇಕು. ಸಿಬಿಲ್‌ಸ್ಕೋರ್‌ಸೇರಿ ಇನ್ನಿತರ ನೆಪವೊಡ್ಡಿ ಸಾಲ ನಿರಾಕರಿಸಬಾರದು. ಜಿಎಸ್‌ಟಿ ಹಿಂಪಡೆಯಬೇಕು. ಸಾಲ ಮರುಪಾವತಿ ಕಂತು ₹ 3,000 ದಾಟಬಾರದು ಎಂದು ಒತ್ತಾಯಿಸಿದ್ದಾರೆ.



## ನಗರಸಭಾ ಕಾರ್ಯಾಲಯ ಕನಕಪುರ

ರಾಮನಗರ ಜಿಲ್ಲೆ. ದೂರವಾಣಿ : 080–2752 2428.
ಇಮೇಲ್: kanakapura_tmc@yahoo.co.in ವೆಬ್‌ಸೈಟ್: www.kanakapuratown.mrc.gov.in

ಸಂಖ್ಯೆ : ಕ.ನ.ಸ./ತಾಂ.ಶಾ./ಸಿಆರ್/ಟೆಂ–2/2022–23 ದಿನಾಂಕ : 11–01–2024

### ಮರು ಟೆಂಡರ್ ಪ್ರಕಟಣೆ

2023–24 ನೇ ಸಾಲಿನ 15 ನೇ ಹಣಕಾಸು ಯೋಜನೆಯ ಅನುದಾನದಡಿ ಈ ಕೆಳಕಂಡ ಕಾಮಗಾರಿಯುನ್ನು ನಿರ್ವಹಿಸಲು ,ಸಂಬಂಧಪಟ್ಟ ಟೆಂಡರ್ ಡಾಕ್ಯೂಮೆಂಟ್‌ನ ಷರತ್ತು ಹಾಗೂ ಸೂಚನೆಗೊಳಪಟ್ಟು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಟೆಂಡರ್‌ಗಳ ಟೆಂಡರ್ ಆಹ್ವಾನಿಸಲಾಗಿದೆ. **ಇಂಡೆಂಟ್ ನಂ. : DMA/2023-24/OW/WORK_INDENT4704/CALL-3, ಅಂದಾಜು ಮೊತ್ತ ರೂ. 49.50 ಲಕ್ಷ ಟೆಂಡರ್** ದಿನಾಂಕದ ವಿವರಗಳು ಹಾಗೂ ಇತರೆ ಮಾಹಿತಿಗಳು ಕೆಳಕಂಡಂತಿವೆ. **ಟೆಂಡರ್ ಬಗ್ಗೆ ಮಾಹಿತಿ ದಿನಾಂಕ : 11–01–2024 ಬೆಳಿಗ್ಗೆ 10.00 ಗಂಟೆಯಿಂದ ದಿನಾಂಕ : 24–01–2024 ಸಂಜೆ 17.30 ರವರೆಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 25–01–2024 ಸಂಜೆ 17.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 29–01–2024 ಬೆಳಿಗ್ಗೆ 11.00 ಗಂಟೆಗೆ ಮತ್ತು ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೊದನೆಯಾದ ನಂತರ ತೆರೆಯಲಾಗುವುದು,** ಯಾವುದೇ ದಿನಾಂಕಗಳಲ್ಲಿನ ಮುಂದೂಡಿಕೆ ಮತ್ತು ತಿದ್ದುಪಡಿಗಳಿದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನಲ್ಲಿ ಪ್ರಕಟಿಸಲಾಗುವುದು ಯಾವುದೇ ವಾರ್ತ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಹೆಚ್ಚಿನ ವಿವರಗಳನ್ನು ಕಛೇರಿ ತಾಂತ್ರಿಕ ಶಾಖೆಯಿಂದ ಪಡೆಯಬಹುದಾಗಿದೆ.

ಸಹಿ/– ಪೌರಾಯುಕ್ತರು,
ನಗರಸಭೆ, ಕನಕಪುರ.

ಡಿಐಪಿಆರ್/ರಾಮನಗರ/403/ಮಣಿಪಾಲ್/2023–24

---

FORM III - A

**IN THE HIGH COURT OF KARNATAKA, DHARWAD BENCH**
**WRIT PETITION NOs.105065 OF 2022 (LR)**
(Notice under Rule 13(a) proviso)

**PETITIONERS**: Smt.Siddamma W/o Bsavanneppa Naragund @ Rangopanthanavar (Dead), Siddappa S/o Basavanneppa Naragund @ Rangopanthanavar (Dead), By their LRS: 1) Smt. Neelavva W/o Mahadevappa Dharwad URF Hunshikatti, Age:45yrs, Occ:Agriculture, R/o Marewad-581201, Taluk & District: Dharwad and others.
**(BY SRI A P MURARI, ADV)**
**V/s**
**RESPONDENTS:** 1) The Land Tribunal, Dharwad, By Its Secretary and Special Tahsildar, Dharwad-580001 & others.
**(AGA ACCEPTS NOTICE FOR R1 & R2)**
**(SRI.SANJAY CHANAL, ADV FOR R5 TO R11)**
TO,
**RESPONDENTS NO.3 : 3)** S.M.Mallikarjunappa, Age:60Yrs, Occ:Business, R/o House No.677, 3rd Block, Rajajinagar, Bengaluru-560010

Whereas, a Writ Petition filed by the above named petitioner under Articles 226 and 227 of the Constitution of India, as in the copy annexed hereunto, has been registered by this court.

Emergent Notice is hereby given to you to appear in this court in person or through an Advocate duly instructed or through some one authorised by law to act for you in this case, at **10.30 AM in the forenoon of 16/02/2024** to show cause why rule nisi should not be issued.

If you fail so to appear on the said date or any subsequent date to which the matter may be posted as directed by the dourt, without any further notice, the petition will be dealt with, heard and decided on merits in your absence.

Issued under my hand and the seal of this court on THE 03RD DAY OF JANUARY 2024.

By order of the court
**ASSISTANT REGISTRAR**

---

## ಕೃಷಿ ಮಾರಾಟ ಇಲಾಖೆ
## ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ

ಮಹಾತ್ಮ ಗಾಂಧಿ ಸಂಕೀರ್ಣ, ಮಾರುಕಟ್ಟೆ ಪ್ರಾಂಗಣ, ಯಶವಂತಪುರ,
ಬೆಂಗಳೂರು – 560022. ದೂರವಾಣಿ ಸಂಖ್ಯೆ: 080–23472850/23371695
ಇ–ಮೇಲ್: apmcbangalore22@gmail.com

ಸಂಖ್ಯೆ:ಕೃಮಾಇ/ಕೃಉಮಾಸ/ಬೆಂ/ಅಭಿವೃದ್ಧಿ/5870/2023–24 ದಿನಾಂಕ: 12–01–2024

### ಟೆಂಡರ್–ಕಂ–ಹರಾಜು ಪ್ರಕಟಣೆ

**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಯಶವಂತಪುರ, ಬೆಂಗಳೂರು ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ ಪ್ರಸ್ತುತ ಸಮಿತಿಯ ಒಡೆತನದಲ್ಲಿರುವ 12ನೇ ತನಿಖಾ ಠಾಣೆಯ ಹತ್ತಿರ ಅಳವಡಿಸಿರುವ 60 ಮೆಟ್ರಿಕ್ ಟನ್ ಸಾಮರ್ಥ್ಯದ ಎಲೆಕ್ಟ್ರಾನಿಕ್ ತೂಕದ ಯಂತ್ರವನ್ನು ಎಲ್ಲಿದೆಯೋ ಅಲ್ಲಿಯೇ ಹೇಗಿದೆಯೋ ಹಾಗೆ ನಿರ್ವಹಿಸಲು** ಅರ್ಹ ವ್ಯಕ್ತಿ / ಸಂಸ್ಥೆ / ಏಜೆನ್ಸಿಗಳಿಂದ ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕದ ಆಧಾರದ ಮೇಲೆ ಟೆಂಡರ್ ಕಂ ಬಹಿರಂಗ ಹರಾಜು ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **2 ತಿಂಗಳ** ಮಾಸಿಕ ಲೀವ್ ಅಂಡ್ ಲೈಸನ್ಸ್ ಶುಲ್ಕದ ಠೇವಣಿ ಮೊತ್ತ **ರೂ. 1,17,000/–** ಗಳನ್ನು ಪಾವತಿಸಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **30–01–2024 ರಂದು ಮಧ್ಯಾಹ್ನ 12.30 ಗಂಟೆಯವರೆಗೆ ಮಾತ್ರ ಇರುತ್ತದೆ.** ಹೆಚ್ಚಿನ ಮಾಹಿತಿ ಹಾಗೂ ಷರತ್ತು–ವ–ನಿಬಂಧನೆಗಳನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಸಹಿ/– ಕಾರ್ಯದರ್ಶಿ
ಕೃಉಮಾಸ, ಬೆಂಗಳೂರು

ವಾಸಾಸಂಇ/ವಾ.ಪ್ರ/3031/ಅಡ್ವರ್ಟೋರ್/2023–24

---

# ‘ಎಚ್‌ಡಿಕೆ ಗವರ್ನರ್ ಆಗಲಿ’

ಪ್ರಜಾವಾಣಿ ವಾರ್ತೆ

ರಾಮನಗರ: ‘ಜೆಡಿಎಸ್ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ರಾಜಕೀಯವಾಗಿ ಎಲ್ಲವೂ ಆಗಿದ್ದಾರೆ. ಗವರ್ನರ್ ಆಗಿಲ್ಲ. ಅದನ್ನೂ ಮಾಡಿ ಬಿಡಬೇಕು. ಆಗಲಾದರೂ ಎಲ್ಲಿಯಾದರೂ ಅಚ್ಚುಕಟ್ಟಾಗಿ ಇರುತ್ತಾರೆ’ ಎಂದು ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ವ್ಯಂಗ್ಯವಾಡಿದರು.

ಮುಂಬರುವ ಲೋಕಸಭೆ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಿಂದ ಕುಮಾರಸ್ವಾಮಿ ಸ್ಪರ್ಧೆ ಕುರಿತು, ನಗರದಲ್ಲಿ ಶುಕ್ರವಾರ ಮಾಧ್ಯಮದವರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

‘ಕುಮಾರಸ್ವಾಮಿ ಸ್ಪರ್ಧಿಸಿದರೆ ತುಂಬು ಹೃದಯದ ಸ್ವಾಗತ. ಅವರು ಎಲ್ಲ ಚುನಾವಣೆ ಮಾಡಿದ್ದಾರೆ. ವಿಧಾನಸಭೆ ಹಾಗೂ ಲೋಕಸಭೆ ಚುನಾವಣೆ ಮಾಡಿರುವ ಅವರು, ಎರಡು ಬಾರಿ ಮುಖ್ಯಮಂತ್ರಿಯೂ ಆಗಿದ್ದಾರೆ ಎಂದರು.

‘ರಾಜಕಾರಣಕ್ಕಾಗಿ ಕುಮಾರಸ್ವಾಮಿ ಹಿಂದೆ ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಂಡಿದ್ದರು. ಈಗ ಬಿಜೆಪಿ ಜತೆ ಹೋಗಿದ್ದಾರೆ. ರಾಜಕೀಯಕ್ಕಾಗಿ ಜಾತಿ ಮತ್ತು ಧರ್ಮ ಒಡೆದು, ವಿಷಬೀಜ ಬಿತ್ತುವುದು ಬಿಜೆಪಿ ಕೆಲಸ. ಇದೀಗ ಜೆಡಿಎಸ್ ಕೂಡ ಇದಕ್ಕೆ ಕೈ ಜೋಡಿಸಿದೆ’ ಎಂದು ವಾಗ್ದಾಳಿ ನಡೆಸಿದರು.

ರಾಮದೇವರ ಬೆಟ್ಟದಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಮಾಡಲಾಗುವುದು. ಈ ಬಗ್ಗೆ ಸಚಿವ ಸಂಪುಟದಲ್ಲಿ ಚರ್ಚೆ ಮಾಡಲಾಗಿದೆ ಎಂದರು.

---

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

## REAL ESTATE SELLING

### Sites

#### Arkavathi Layout

**ARKAVATHI LAYOUT** 2 Block 20x30 East 20x30 West 30x40 40x60. Genuine Buyers- USR- 7019770736/ 8951614989.

#### Banashankari

**AUCTION SITE,** SALE Banashankari 6th Stage 10th Block N/E Corner 1034 sqft 10500/-`Owner Meeting: 9880611211.

**BANASHANKARI 6TH** Stage, 7th Block 30x43, East Facing,10000/- Negotiable Owner Meeting Contact: 6366599555.

#### Basaweshwaranagar

**BASVESHAWARA NAGER** 30×40, 40×60 Sadashivanagar 90×130 Residential Yeshwantpura, Dobaspet Industrial 1,2 Acres Industrial Sale 8660075308.

#### Jayanagar

**AVAILABLE 2400** sqft Prime Property for Sale near Madhavan Park, South facing, Immediate Possession. Brokers Excuse Contact 7760110114.

#### Koramangala

**FOR SALE** Bangalore, Koramangala 1st block, West facing 60*90, Rs. 27k. Contact: 9448088461. Brokers Excuse.

#### Kempegowda Layout

**KEMPEGOWDA LAYOUT,** BDA SITES FOR SALE 20X30 30X40, 40X60, 50X80 CONTACT KUMAR: 9945119449

#### Nagarabhavi

**SALE 4BHK** House North East Corner, BDA Site 1000sqft,13th Block Nagarbhavi, Behind Swathi Hotel. Call: 9880886474

**"NAGARABHAVI NEAR** Swathi Hotel BDA Site 40x60 North 60ft Road, 30x40 East 40ft Road. 9845862388"

**SALE RESIDENTIAL** site 40X60 @ Nagarabhavi, ITI layout, Clear Title, BBMP A katha. Contact: 9880886474

#### Nandini Layout

**1238 SFT** South-East Corner 'A' Khatha Site for sale at Nandini Layout call 9845729728

#### Sahakarnagar

**SALE TWIN** Sites @ Hebbal Sarovar Layout Sahakarnagar 4800sft A-Khatha, East facing, Bank loan applicable. Call: 9686009911 (Brokers excuse)

#### Tumkur Road

**30X40 SITE** sale, Good location, west facing, Kirloskar layout, Hesaraghata Road, opposite Sapthagiri college. 9620480363.

#### Vishweshwariah Layout

**SMVLAYOUT BDA** 5th Block 30x40 EF Near KLE LAW College Good Location Immediate Construction: 6360050356

**AVAILABLE 20X30** BDA Site Vishveshwariah Layout 2nd Block, Builder Location 45 Lacks Contact Buyers: 9844603127

**AVAILABLE BDA** Site 30X40 West Face 6th Block Vishveshwariah Layout 7500/-Psft Contact Buyers: 9844603127

**AVAILABLE SMV** 4BL. 30x40 NEAR 100ft Road, EWF 2 Site Near KEB Back Side: 9380732662

**30X40 SITE** Sale Vishveshwaraiah Layout 7th Block East Face Near Karnataka Bank & 30X40 2nd Block North 7500Sqft: 9945584713

**BDA VISHWESHWARAYA** Layout, 6th Block, 40x60 S/F, 30x40 W/F, Good Location. Direct Owner: 9108507222/ 7411101116

### House

#### Basaveshwaranagar

**30X40 NF** BDA Site with old house for sale at Basaveshwara nagar (Near Vani School) call - 9844039482

#### Lingarajapuram

**LINGARAJAPURAM FOR** Sale 74x30= 2220 East Facing Old House Resdential Behind Sundar Hospital: 9845338750

#### Cambridge Layout

**ARCHITECT DESIGNED,** West facing, semi furnished, well maintained independent double storied house with all amenities, for SALE near Jogupalaya Community Hall, Halasuru. 1600 sq. feet, 3 BHK + study. Price: 3.75 crore negotiable. Contact owner: 9980148941. Brokers excuse. Genuine buyers only.

#### HRBR Layout

**SALE: HRBR/** Kammanahalli/North Bangalore, A Khata Independent HOUSE: Lot-2500 sft, Builtup-4000 sft. Owner-8971767744

#### Magadi Road

**KAMAKSHIPALYA 15X50** sqft E/F 'A' Khata NEW BUILDING 8 Houses + 1 Shop getting 49000 Rent. Rs. 1.20 Cr. 9845288310

#### Mysore

**"SALE-3BHK, KHB-HOUSE** No.618, C-Block on 40x60 N.Face @ KRS Nisarga Badavane, Yalachahalli, Ilwala Hobli,Mysore. 80Lakhs Negotiable. 9739220687"

### Flat

#### Indiranagar

**SALE: INDIRANAGAR** 6th Main,Off 100'Road 2-BHK Flats 1250Sq.ft with CarParking Interested Buyers with Full Funds Call Suresh- 8618441187

#### Rajajinagar

**DNR HIGHLINE** @ Okalipuram near LULU Mall Rajajinagar 3 & 4 BHK FLATS with 7 Star Luxurious Amenities. Only Few Flats available for Sale. for details Contact: Owner 9844027560.

**PURVA BLUEBELLE** Adjacent to Magadi Road Metro Station (Purple lane) Rajajinagar 3 Bedroom Jodi units 5 Bedroom + Servant room with all Luxurious Amenities. Direct metro from here to ITPL (Whitefield)/ KR Puram/ Byyappanahalli. Very good Convenience those who are working above Areas. Only Few units left for Sale. Contact: Owner 9844027560

#### Kanakapura Road

**3-BHK FLAT** Sale 1575 Sq.Ft N/F Full Interiors 70 Lakhs Off Kanakpura Road, Konankunte Near Junior Delhi Public School: 9343722162

### Commercial Building

#### Malleshwaram

**FULLY FURNISHED** 16,000Sft.A/C Showroom For Rent/Sale On Prime Busy Commercial Area,8th Cross, Malleshwaram. Contact: 9663001940/ 9845358544

#### Multiple Locations

**SALE: 3-PARTY** Convention Hall 15Cr Rent 45lakhs, Commercial Site NW Corner 60x60 RV Road near Minerva Circle, Semi-Commercial 7700 Sft Banashankari 2nd Stage 22000/- P.Sft Also 5Cr-to-15Cr Commercial Buildings.Call- 9900399006

### Commercial Land

#### Mysore

**INVESTORS REQUIRED** for a Mega Apartment Project near Mysore. Contact property Owner 9741019028

### Commerical

#### Bannerghatta Road

**SALE PETROL BANK** Begur Bannerugatta Road 80feet Road Prime Commercial North Facing Contact: 9611844667 8123515830

#### Kempegowda Layout

**COMMERCIAL SITEFOR** Sale, Kempegowda Layout 8th Block,Size:163X100, West Face, BDA,NOC,NNA, Conversion Land, Leagal Documents, Price:4500/- Sq.Ft.Ph:9448793428, 9632227878

### Farm House/ Land/ Resorts

#### Multiple Locations

**NANDI HILLS** rd 1/2 acre converted ekhata 15 furnished AC rooms rental income 7L sale 9Cr non-nego Ph:7019346409

## ADMISSION CORNER

**JAIN Law School**
No.59, Sunkadakatte, Bolare P.O. Kanakapura Rd, Bangalore-116
Admission Open
**LLB 5yrs & 3Yrs**
Day & Residential Programmes
Affiliated to KSLU and BCI in Progress.
Apply for student and Faculty Enlistment.
Campus 2 : CA Site1, Brigade Gardenia, J.P.Nagar 8th Ph, B'lore-78.
City Off : 960, 24th Mn, 38th Cr, 4-T,Blk,Jayanagar, Bangalore-41
Tel: +91-996 444 66 55 & 98451 43211
Email: jainlawschool@gmail.com, Web:intechibm.org

### Out-Station

**SALE: 33** GUNTAS FARM LAND near ISHA Foundation/ Chikkaballapur/ NH44. Rs.1.80 Cr. Negotiable. Contact: 99643-55500/ 93437-28200

### General

#### South

**FOR HOUSE** Rent, Sale & Purchase of Property in & around BSK 2nd Stage, Jayanagar, JP Nagar, Basavangudi & surrounding areas contact 9535184028

### Industrial & Factory

#### Bannerghatta Road

**SALE EAST** North Corner Industrial Converted Vacant Land suitable for commercial and residential 3000sft/ 3600sft/ 19700sft. Just 600mtrs from Hulimavu Metro Station. VernaDevelopers.com, M.G.Road, Blr - 9353128035/ 9916310226

## REAL ESTATE BUYING

### Sites

#### Anjanapura

**WANTED BDA** Site Anjanapura, Banashankari 6th Stage, Vishweshwaraiah layout & any BDA Katha, JP.Nagar 8 & 9 phase immediate settlement. Genuine Sellers Contact: 9902038118, 9449060605

#### Banashankari

**BDA SITE'S** Wanted Arkavathy, Anjanapura Banashankari 6th Stage Vishweshwaraiah Kempegowda Any BDA Layout. Contact: 9845062822, 8660751654

#### Multiple Locations

**ANJANAPURA-ARKAVATHI,** Banashankari 6th Stage, Vishweswaraiah Layout, Kempegowda Layout. Any BDA Sites Wanted. Contact: SAPTHAGIRI. 9900268073, 9448068073.

### Farm House/ Land/ Resorts

#### Outskirts

**REQUIRED PLOTS** in JAIN FARM-Mahavir Nagar, Nallur/Kalliagraharam Villages of Hosur Taluk, Contact: Ashish-9886080699, Rajkumar-7795058346.

## BUILDERS ESSENTIAL

### Water Proofing

**LEAKAGE... LEAKAGE...** Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

### Contractors

**EXCELLENT OFFER** Build your dream house at Rs:1750/-per sqft Planning construction Alteration Repairs to vastu Elevations water proofing 9844299412

## RENTAL PROPERTIES

### Accommodation Available

#### Flats

**AVAILABLE 3** BHK Furnished Spacious Apartment Flat Mysore Road For Lease Rupees 25 Lakhs: 9738223432

## SOCIAL SERVICES

### Others

***WE FIX*** LEAKING ROOF,TANK, SUMP, BATHROOM, SKYLIGHT, HOUSE PAINTING TILING, CARPENTRY, EPOXY,CIVIL WORKS. Macbond: 9448572697

## PROPERTY CORNER

ಕ್ಲಾಸಿಫೈಡ್ಸ್

ಸಂಕ್ರಾಂತಿ ಹಬ್ಬದ ವಿಶೇಷ
2 ದಿನಗಳ ಕೊಡುಗೆ
ಕೇವಲ 2 ಸೈಟ್‌ಗಳು ಮಾರಾಟಕ್ಕಿವೆ ಮಾದನಾಯಕನಹಳ್ಳಿ
Rs. 2600
ಕೇವಲ Rs. 2500 Per Sqft
ನಗರ ಸಭೆ ಲಿಮಿಟ್
ಬ್ಯಾಂಕ್ ಲೋನ್ ದೊರೆಯುತ್ತದೆ.
ಸಂಪರ್ಕಿಸಿ: 8880660099

## PUBLIC NOTICE

**IN THE MICRO AND SMALL ENTERPRISES FACILITATION COUNCIL, BENGALURU**
**Case No: 66/2023**

BETWEEN
**M/s Air Action Equipments,**
Shed-A, #2,
K Narayanapura main road, Thanisandra,
Bengaluru-560 077.
**PETITIONER**
AND
**M/s. Psychometric Solutions & Systems Pvt. Ltd.,**
#720-A/6, 9 A cross,
11th Main, HAL 2nd Stage,
Indiranagar,
Bengaluru-560038
**RESPONDENT**

**PUBLIC NOTICE**

**WHEREAS,** the above named Petitioner has filed an application on 19/06/2023 under Sec. 18 of MSMED Act 2006, before this Council.

The Respondent is hereby informed to appear before the Micro and Small Enterprises Facilitation Council, Bengaluru in person or through their Advocate on 08/02/2024 at 11.00 a.m. in the Meeting hall, Second floor, Department of Industries and Commerce, South wing, # 49, Khanija Bhavan, Race Course road, Bengaluru-560001 failing which the matter will be heard as per the provision of the act and disposed off in accordance with law.

Given under my hand and seal on the order of the Council on this 11th day of January 2024.

By Order of the Council,
Sd/-
Member Secretary,
Micro & Small Enterprises
Facilitation Council, Bengaluru

**PUBLIC NOTICE**

This is to inform the general public that **H.K.Hospital,** 106/2, Bangalore – Mysore Road, Near Rainbow Bridge, Kengeri, Bangalore - 560060 would like to destroy the medical records from **01.01.2012 to 31.12.2016.** Anyone admitted during this period, if interested may obtain the records by submitting a written application within **30 days** from the date of this publication.

**Management**
**H K Hospital**
**Mobile : 9900037481 / 9900037490**

**PUBLIC NOTICE**

All members and ex-members of the Association (IATA) are hereby informed to contact their respective IATA Regional Office (at Delhi / Mumbai / Kolkata / Hyderabad / Chennai) or IATA Central Office at Delhi for the submission of their Wage Arrears claim for the period of 01.01.1997 to 31.07.2006 along with relevant documents at an earliest, failing which the association shall not be held responsible if anyone miss out this opportunity for arrears claim.

**INDIAN AIRCRAFT TECHNICIANS ASSOCIATION (Regd. No. 4927)**
**Chennai Region, AIESL, Integrated Service Complex, Chennai Airport**
**Mobile: 9444850452**

## OTHERS

### Furniture & Furnishings

**CLOSING DOWN** FURNITURE SHOP and FACTORY. Heavy Stocks For Sale of Sofas, Dining, Beds and Much More Below Cost Price and Also Available Wood Working Machines. Looking For Bulk Buyers. Contact: 9945004494/ 9740783835

## BUSINESS

### Business to Business

#### Business

**BEST INVESTMENT** for Returns Invest 5`to`50Lacs for Petrol Bank and Restaurant. Monthly Returns 16`to`18% along-With TDS deduction Call:9035963540

### Business Offers

#### Finance

**WANTED BUSINESS** Partners Saree Business 10 Lakhs Investment Monthly Income 1 Lakhs Contact: 8892501007/ 9606701007

## PERSONAL

### Announcements

**ANNOUNCEMENT**

I, **H.G. YELLAIAH,** Residing at # 457, 1st B Main Road, 16th Cross, J P Nagar, 4th Phase, Bengaluru-78, declare that in some documents my name is mentioned as **YELLAPPA.** Both the names **H.G. YELLAIAH** & **YELLAPPA** pertain to me only, vide affidavit dt. 03-07-2023, before Notary G.R. Rajanna, Bengaluru. Henceforth I shall be called **H.G. YELLAIAH** only

### Change of Name

**CHANGE OF NAME**

I, **MUKUND KALLAHALLI RANGARAMAIAH,** Residing at # 1353, 5th Cross, 1st Stage, 2nd Phase, Chandra Layout, Bengaluru-40, have changed our minor son's name from **NIVEDH APARAJITH MUKUND** to **NIVEDH MUKUND** vide affidavit dt:12-01-2024, before Notary Aravind Patil, Bengaluru. Henceforth he shall be know as **NIVEDH MUKUND** only.

**I, RAMPRAKASH** Lakshminarayan S/o B.Lakshminarayanan, R/at`No.72,41st Cross, Jayanagar`8th Block, Bangalore-560070, declare that, the`two names of`Ramprakash Lakshminarayanan and`Ramprakash Lakshminarayan, belongs`to me, one and`the same person vide`affidavit dated 10/01/2024 before`Notary T.R.Raghavendra Rao, Bengaluru.

**I, SYED** RAHAMATH ULLA NIDGHATTA Residing at Bengaluru-29 have changed my name as SYED RAHAMATH ULLA,vide affidavit dated 12/1/2024 before Notary K.S.Bammappanavar, Bengaluru

**14836020W NK** Kewal Singh 2 ATC my mother name records JAMABAI to JAMABAI NIRMALKAR, Notary BM Chandrashekar.

**CAUTION NOTICE**

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

**CHANGE OF NAME**

I, **RANJITHA JAYACHANDRAN** Residing at God Gift House, 7th Cross, Near Prakruthi Tulips Apartment, RK Hegde Nagar, Bangalore-560077 have changed my name to **A AFEEYA** vide affidavit dated 04.01.2024 before notary M. Devaraja, Bangalore. Henceforth I shall be called **A AFEEYA** only.

**I,** Anjanappa, S/o. Muniyappa, aged 39 years, Residing at No. 97, Near Chamundi temple, Kattigenahalli, Yelahanka, Bangalore- 560064, have changed my Son name from KALYANAKUMAR.K.A to KALYAN KUMAR K.A DOB: 09.09.2012 Affidavit dated: 12/01/2024 R.Ravikumar

**CHANGE OF NAME**

I, **ANTHONY GERAD AROKIA DASS,** Residing at # Flat No. 303, J R Arcade Apartment, J R Layout, Near Concorde School, Chelekere, Kalyan Nagar, Bengaluru- 560043 have changed my name to **ANTHONY GERAD** vide affidavit dt:12-01-2024, before Notary L. Gopalakrishna, Bengaluru Henceforth I shall be called **ANTHONY GERAD** only

**14836020W NK** Kewal Singh 2 ATC my father name records SAMARURAM to SAMARURAM NIRMALKAR, Notary BM Chandrashekar.

## AUTOMOTIVE

### Four Wheelers Selling

#### Tata

**SALE EXCELLENT** Condition Diesel Tata Ace Tempo. November 2021 Model, 24000Kms Driven. Valid Insurance Life Time Tax Paid. Contact: 9740783835/ 9945004494

## EDUCATIONAL

### Special Courses

**DIPLOMA IN** Student Counselling, 5th Batch, 6 months, ONLINE course, Starts:16-Jan. WhatsApp 9886044221. www.darwinpsychologycentre.com

POWERED BY NPCI
भारतीय राष्ट्रीय भुगतान निगम
NATIONAL PAYMENTS CORPORATION OF INDIA

**BHIM ಆ್ಯಪ್ ಡೌನ್‌ಲೋಡ್ ಮಾಡಿ!**
ಆದರೆ, ನೀವು ಕೇಳಬಹುದು – **"ಯಾಕೆ?"**

ನಾವು ಹೇಳುತ್ತೇವೆ, **"ನಿಮಗೆ ರಿವಾರ್ಡ್ಸ್ ಸಿಗುತ್ತವೆ!"**

ನೀವಂತೀರಿ, **"ಇದರಲ್ಲಿ ಹೊಸತೇನು???"**

ಅದಕ್ಕೆ ನಾವಂತೇವೆ **"ನಾವು ರಿವಾರ್ಡ್ಸ್ ಹೆಸರಲ್ಲಿ ಆಫರ್ ಅಲ್ಲ, ನಿಜವಾದ ಲಾಭಕರ ರಿವಾರ್ಡ್ಸ್ ಕೊಡುತ್ತೇವೆ!"**

ಈಗ ನೀವು ಸ್ವಲ್ಪ ಉತ್ಸಾಹಿತರಾಗಿದ್ದೀರಿ. ಯೋಚಿಸುತ್ತಿರಬಹುದು
**"ಹ್ಂ! ಈ ಜಾಹೀರಾತಿಗೆ ನಾನು ಮರುಳಾಗುವಂತೆ ಮಾಡಲು ಉತ್ತಮ ಉಪಾಯ; ಆದರೆ, ಈಗ ರಿವಾರ್ಡ್ ಏನಂತ ಹೇಳಿ"**

ರಿವಾರ್ಡ್ ತುಂಬ ಸರಳವಾಗಿದೆ –**"ಈಗ PETROL, DIESEL ಮತ್ತು CNG ಮೇಲೆ ಸಿಗುತ್ತೆ 1% ಕ್ಯಾಶ್‌ಬ್ಯಾಕ್, ಕೇವಲ BHIM ಆ್ಯಪ್‌ನಲ್ಲಿ."**

ಈಗ ನೀವು ಲೆಕ್ಕಹಾಕ್ತಿರಿ. ಲಾಭ ಕ್ಯಾಲ್ಕುಲೇಟ್ ಮಾಡ್ತೀರಿ.

ನಾವೂ ಅದನ್ನೇ ಮಾಡಿದೆವು.
**"ನಿಮ್ಮ ಲಾಭದ ಬಗ್ಗೆ ಯೋಚಿಸಿದೆವು!"**

ಆದ್ದರಿಂದ, ನಕಲಿ ರಿವಾರ್ಡ್ಸ್ ಬಿಟ್ಟುಬಿಡಿ,
**BHIM ಆ್ಯಪ್ ಡೌನ್‌ಲೋಡ್ ಮಾಡಿ!**

CASHBACK # CASHBACK # CA

**#BHIMPeAsliFaydaHai**

*ನಿಬಂಧನೆಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ

*ಕ್ಯಾಶ್‌ಬ್ಯಾಕ್ ಕಾಲಾವಧಿ: ಜನವರಿ15,2024 ರಿಂದ ಮಾರ್ಚ್ 31, 2024 ರವರೆಗೆ. | ಕನಿಷ್ಠ ವ್ಯವಹಾರ: ರೂ. 100. ಗರಿಷ್ಠ ಕ್ಯಾಶ್‌ಬ್ಯಾಕ್: Petrol, Diesel ಮತ್ತು CNGಗಳಿಗೆ ಹಣ ಪಾವತಿಸಿದಾಗ, ಪ್ರತೀ ಬಳಕೆದಾರನಿಗೆ ರೂ. 150. | ನಿಬಂಧನೆಗಳನ್ನು ಬದಲಾಯಿಸುವ ಹಕ್ಕನ್ನು BHIM ಕಾದಿರಿಸಿಕೊಂಡಿದೆ. | ಮೋಸದ/ಸಂದೇಹಾಸ್ಪದ ವ್ಯವಹಾರಗಳನ್ನು ನಡೆಸಿದಲ್ಲಿ, ಕ್ಯಾಶ್‌ಬ್ಯಾಕ್ ರದ್ದಾಗಬಹುದು. | ಈ ಆಫರ್‌ನ ಪ್ರಯೋಜನ ಪಡೆಯಲು, BHIM ಆ್ಯಪ್‌ನ ಇತ್ತೀಚಿನ ಆವೃತ್ತಿಯಾದ BHIM 3.7 ಅಥವಾ ಮೇಲ್ಪಟ್ಟ ಆವೃತ್ತಿಯನ್ನು ಡೌನ್‌ಲೋಡ್ ಮಾಡಿಕೊಳ್ಳಿ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಭೇಟಿಕೊಡಿ: www.bhimupi.org.in

BHIM
BHARAT INTERFACE FOR MONEY

# ಪೂರ್ವ ಸಾಧ್ಯತಾ ಅಧ್ಯಯನ ನಿರಾಕರಣೆ

## ಬೆಂಗಳೂರು ಉಪನಗರ ರೈಲು ಸೇವೆ ಪ್ರಮುಖ ನಗರಗಳಿಗೆ ವಿಸ್ತರಿಸುವ ಬಗ್ಗೆ ನೈರುತ್ಯ ರೈಲ್ವೆಗೆ ಪತ್ರ ಬರೆದಿದ್ದ ಕೆ–ರೈಡ್

● ಬಾಲಕೃಷ್ಣ ಪಿ.ಎಚ್.

**ಬೆಂಗಳೂರು:** ಬೆಂಗಳೂರು ಉಪನಗರ ರೈಲು ಯೋಜನೆಯನ್ನು (ಬಿಎಸ್‌ಆರ್‌ಪಿ) ಮೈಸೂರು ಸಹಿತ ಸುತ್ತಲಿನ ನಗರಗಳಿಗೆ ವಿಸ್ತರಿಸಲು ಪೂರ್ವ ಸಾಧ್ಯತಾ ಅಧ್ಯಯನಕ್ಕಾಗಿ ಕೆ-ರೈಡ್ ಅನುಮತಿ ಕೇಳಿದ್ದು, ನೈರುತ್ಯ ರೈಲ್ವೆ ನಿರಾಕರಿಸಿದೆ.

ಬಿಎಸ್‌ಆರ್‌ಪಿಯಡಿ ಕೆಎಸ್‌ಆರ್ ಬೆಂಗಳೂರು–ದೇವನಹಳ್ಳಿ, ಬೈಯಪ್ಪನಹಳ್ಳಿ – ಚಿಕ್ಕಬಾಣಾವರ, ಕೆಂಗೇರಿ–ವೈಟ್‌ಫೀಲ್ಡ್, ಹೀಲಲಿಗೆ–ರಾಜಾನುಕುಂಟೆ ಹೀಗೆ ಒಟ್ಟು ನಾಲ್ಕು ಕಾರಿಡಾರ್‌ಗಳು ನಿರ್ಮಾಣಗೊಳ್ಳುತ್ತಿವೆ. ಈ ಕಾರಿಡಾರ್‌ಗಳಿಂದ ಕೋಲಾರ, ತುಮಕೂರು, ಮಾಗಡಿಗೆ, ಮೈಸೂರು, ಬಂಗಾರಪೇಟೆ, ಹೊಸೂರು, ಗೌರಿಬಿದನೂರಿಗೆ ವಿಸ್ತರಿಸಲು ಪೂರ್ವ ಸಾಧ್ಯತಾ ಅಧ್ಯಯನದ ಅಗತ್ಯವಿದೆ. ಬಿಎಸ್‌ಆರ್‌ಪಿಯನ್ನು ಅನುಷ್ಠಾನಗೊಳಿಸುತ್ತಿರುವ ಕರ್ನಾಟಕ ರೈಲು ಮೂಲ ಸೌಲಭ್ಯ ಅಭಿವೃದ್ಧಿ ಕಂಪನಿ ನಿಯಮಿತ (ಕೆ- ರೈಡ್) ಪೂರ್ವ ಸಾಧ್ಯತಾ ಅಧ್ಯಯನ ಮಾಡಲು ಸಿದ್ಧವಿದ್ದು, ಅನುಮತಿ ನೀಡಬೇಕು ಎಂದು ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕರು ರೈಲ್ವೆ ಮಂಡಳಿಗೆ ಪತ್ರ ಬರೆದಿದ್ದರು.

ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರು ಇತ್ತೀಚೆಗೆ ನಡೆಸಿದ್ದ ಬಿಎಸ್‌ಆರ್‌ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ಬಗ್ಗೆ ಚರ್ಚೆಯಾಗಿತ್ತು. ಒಟ್ಟು 452 ಕಿ.ಮೀ. ಉದ್ದಕ್ಕೆ ಬಿಎಸ್‌ಆರ್‌ಪಿ ವಿಸ್ತರಿಸಲು ರೈಲ್ವೆ ಬೋರ್ಡ್‌ನಿಂದ ಮೊದಲೇ ಅನುಮೋದನೆಯನ್ನು ಪಡೆಯಲು ಸಭೆಯಲ್ಲಿ ನಿರ್ಧರಿಸಲಾಗಿತ್ತು. ಅದರಂತೆ ಅನುಮತಿಗಾಗಿ ಕೆ-ರೈಡ್‌ನಿಂದ ಪತ್ರ ಬರೆಯಲಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

**ಮರುಪತ್ರ:** ನೈರುತ್ಯ ರೈಲ್ವೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಈ ಪತ್ರಕ್ಕೆ ಮರುಪತ್ರ ಬರೆದಿದ್ದು, ಪೂರ್ವ ಸಾಧ್ಯತಾ ಅಧ್ಯಯನ ಅಗತ್ಯವಿಲ್ಲ ಎಂದು ತಿಳಿಸಿದ್ದಾರೆ.

ಬೆಂಗಳೂರು–ಜೋಲಾರ್‌ಪೇಟೆ, ಬೆಂಗಳೂರು– ಧರ್ಮಾವರಂ, ಬೆಂಗಳೂರು– ತುಮಕೂರು ಮಾರ್ಗಗಳಲ್ಲಿ ಗಂಟೆಗೆ 130/160 ಕಿ.ಮೀ. ವೇಗದಲ್ಲಿ ಚಲಿಸುವ ರೈಲುಗಳು ಸಂಚರಿಸಲಿವೆ. ಸ್ವಯಂಚಾಲಿತ ಬ್ಲಾಕ್ ಸಿಗ್ನಲಿಂಗ್ ಒದಗಿಸಲಾಗುತ್ತಿದೆ. ಪ್ರಮುಖ ಕಾರಿಡಾರ್‌ಗಳಲ್ಲಿ ದ್ವಿಪಥ, ಚತುಷ್ಪಥ ಕೆಲಸಗಳಾಗುತ್ತಿವೆ. ನಿಡವಂದ–ದೊಡ್ಡಬಳ್ಳಾಪುರ–ದೇವನಹಳ್ಳಿ–ಮಾಲೂರು–ಹೀಲಲಿಗೆ–ಸೋಲೂರು–ನಿಡವಂದ ನಿಲ್ದಾಣಗಳನ್ನು ಸಂಪರ್ಕಿಸುವ ವೃತ್ತರೈಲು ಸಂಪರ್ಕ ಜಾಲದ ಸಮೀಕ್ಷೆಯನ್ನು ಇತ್ತೀಚೆಗೆ ರೈಲ್ವೆ ಮಂಡಳಿಯು ಮಂಜೂರು ಮಾಡಿದೆ. ಹೀಗೆ ಸ್ಯಾಟಲೈಟ್ ನಗರಗಳಿಗೆ ರೈಲು ಸೇವೆ ವಿಸ್ತರಿಸಲು ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ಹಾಗಾಗಿ ಬಿಎಸ್‌ಆರ್‌ಪಿ ವಿಸ್ತರಣೆಯ ಅಗತ್ಯ ಕಾಣುತ್ತಿಲ್ಲ ಎಂದು ವಿವರಣೆ ನೀಡಿದ್ದಾರೆ.

ಉಪನಗರ ರೈಲು

### ಪ್ರಸ್ತಾವಿತ ನಗರಗಳ ಅಂಕಿ ಅಂಶ

| | | |
|---|---|---|
| 107 ಕಿ.ಮೀ. ದೇವನಹಳ್ಳಿ–ಕೋಲಾರ | 55 ಕಿ.ಮೀ ಚಿಕ್ಕಬಾಣಾವರ–ತುಮಕೂರು | 45 ಕಿ.ಮೀ ಚಿಕ್ಕಬಾಣಾವರ–ಮಾಗಡಿ |
| 125 ಕಿ.ಮೀ ಕೆಂಗೇರಿ–ಮೈಸೂರು | 45 ಕಿ.ಮೀ ವೈಟ್‌ಫೀಲ್ಡ್–ಬಂಗಾರಪೇಟೆ | 23 ಕಿ.ಮೀ ಹೀಲಲಿಗೆ–ಹೊಸೂರು |
| 62 ಕಿ.ಮೀ ರಾಜಾನುಕುಂಟೆ–ಗೌರಿಬಿದನೂರು | | |

### ರೈಲ್ವೆ ಬೋರ್ಡ್‌ಗೆ ಸಿ4ಸಿ ಪತ್ರ

ರೈಲ್ವೆ ಮತ್ತು ರಾಜ್ಯ ಸರ್ಕಾರದ ಕೂಸು ಆಗಿರುವ ಕೆ–ರೈಡ್‌ಗೆ ನೈರುತ್ಯ ರೈಲ್ವೆಯು ಪೂರ್ವ ಸಾಧ್ಯತಾ ಅಧ್ಯಯನ ಅನುಮೋದನೆ ನೀಡುವ ಬದಲು ಆಘಾತಕಾರಿ ಉತ್ತರವನ್ನು ನೀಡಿದೆ. ಇದನ್ನು ಪರಿಶೀಲಿಸಬೇಕು. ಉಪನಗರ ರೈಲು ಯೋಜನೆಯನ್ನು ವಿಸ್ತರಿಸಲು ಅಧ್ಯಯನಕ್ಕೆ ಅನುಮೋದನೆ ನೀಡಬೇಕು ಎಂದು ಸ್ವಯಂ ಸೇವಾ ಸಂಸ್ಥೆಯಾದ ಸಿಟಿಜನ್ಸ್ ಫಾರ್ ಸಿಟಿಜನ್ಸ್ (ಸಿ4ಸಿ) ರೈಲ್ವೆ ಬೋರ್ಡ್‌ಗೆ ಪತ್ರ ಬರೆದಿದೆ.

ಬೆಂಗಳೂರಿನ ಸುತ್ತಮುತ್ತ 100 ಕಿ.ಮೀ. ವ್ಯಾಪ್ತಿಯನ್ನು ಉಪನಗರ ರೈಲು ಯೋಜನೆಯಡಿ ತರಬೇಕು. ಆಗ ಸುತ್ತಲಿನ ನಗರಗಳು ಕೂಡ ಅಭಿವೃದ್ಧಿಯಾಗುತ್ತವೆ. 2 ಕೋಟಿ ಜನರಿಗೆ ಉಪಯೋಗವಾಗುತ್ತದೆ. ಉಪನಗರ ರೈಲುಗಳು 5ರಿಂದ 10 ನಿಮಿಷಕ್ಕೊಂದು ಸಂಚರಿಸುತ್ತವೆ. ದೂರದ ಊರಿಗೆ ಸಂಚರಿಸುವ ರೈಲುಗಳು ಗಂಟೆಗೊಂದು ಇರುತ್ತವೆ. ಉಪನಗರ ರೈಲು ಮತ್ತು ನೈರುತ್ಯ ರೈಲುಗಳು ಒಂದಕ್ಕೊಂದು ಹೋಲಿಕೆಯಾಗುವುದಿಲ್ಲ ಎಂದು ಸಿ4ಸಿ ಸಂಸ್ಥಾಪಕ ರಾಜಕುಮಾರ್ ದುಗರ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

## ವಿದೇಶಕ್ಕೆ ಹಾರಿದ ಸಚಿವ ಸತೀಶ ಜಾರಕಿಹೊಳಿ

**ಬೆಳಗಾವಿ:** ನಾಲ್ಕು ದಿನಗಳಿಂದ ದೆಹಲಿ ಪ್ರವಾಸದಲ್ಲಿದ್ದ, ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಶುಕ್ರವಾರ ರಾತ್ರಿ ಏಕಾಏಕಿ ವಿದೇಶಕ್ಕೆ ಪ್ರಯಾಣ ಬೆಳೆಸಿದ್ದಾರೆ ಎಂದು ಅವರ ಆಪ್ತ ವಲಯಗಳು ಖಚಿತಪಡಿಸಿವೆ.

'ರಾಜ್ಯದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಸುವ ಸಂಬಂಧವಾಗಿ ದೆಹಲಿಯಲ್ಲಿ ಹೈಕಮಾಂಡ್ ಜತೆಗೆ ಸಾಕಷ್ಟು ಚರ್ಚೆ ನಡೆದಿದ್ದವು. ಬೇಸರಗೊಂಡ ಅವರು ದುಬೈಗೆ ಹೋಗಿರಬಹುದು' ಎಂದು ಕಾಂಗ್ರೆಸ್‌ನ ಮುಖಂಡರೊಬ್ಬರು ಮಾಹಿತಿ ನೀಡಿದ್ದಾರೆ.

'ತಮ್ಮ ವೈಯಕ್ತಿಕ ಉದ್ಯಮದ ಕಾರಣ ಅವರು ಉಗಾಂಡಾ ದೇಶಕ್ಕೆ ಹೋಗಿದ್ದಾರೆ. ಇದರಲ್ಲಿ ರಾಜಕೀಯ ಏನೂ ಇಲ್ಲ. ಜಿಲ್ಲೆಯ ಯಾವ ಶಾಸಕರೂ ಅವರೊಂದಿಗೆ ಹೋಗಿಲ್ಲ. ಈ ಪ್ರವಾಸ ಮುಂಚೆಯೇ ನಿಗದಿಯಾಗಿತ್ತು' ಎಂದು ಸಚಿವರ ಆಪ್ತರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ್ದಾರೆ.

## ಹಾನಗಲ್: ಚಿರತೆ ಕಳೇಬರ ಪತ್ತೆ

**ಹಾನಗಲ್ (ಹಾವೇರಿ ಜಿಲ್ಲೆ):** ತಾಲ್ಲೂಕಿನ ಮಕರವಳ್ಳಿ ಅರಣ್ಯ ಪ್ರದೇಶದಲ್ಲಿ ಶುಕ್ರವಾರ ಚಿರತೆ ಕಳೇಬರ ಪತ್ತೆಯಾಗಿದೆ. ಚಿರತೆ ಸಾವಿಗೆ ನಿಖರ ಕಾರಣ ತಿಳಿದು ಬಂದಿಲ್ಲ.

ಅಂದಾಜು 8 ವರ್ಷದ ಗಂಡು ಚಿರತೆ ಎಂದು ಗುರುತಿಸಲಾಗಿದ್ದು, ಕುತ್ತಿಗೆ ಭಾಗದಲ್ಲಿ ಮಾತ್ರ ಗಾಯವಾಗಿದೆ. ಬೆಳಿಗ್ಗೆ ಚಿರತೆ ಕಳೇಬರ ಕಂಡ ಗ್ರಾಮಸ್ಥರು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಚಿರತೆಗಳು ಪರಸ್ಪರ ಕಾದಾಡಿಕೊಂಡ ಪರಿಣಾಮ ಈ ಘಟನೆ ನಡೆದಿರಬೇಕು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ಅಂದಾಜಿಸಿದ್ದಾರೆ.

ಸ್ಥಳಕ್ಕೆ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿವಾನಂದ ತೋಡಕರ, ವಲಯ ಅರಣ್ಯಾಧಿಕಾರಿ ಗಿರೀಶ ಚೌಗಲೆ, ಪಶು ವೈದ್ಯಾಧಿಕಾರಿ ಗಿರೀಶ ರೆಡ್ಡೆರ ಭೇಟಿ ನೀಡಿದ್ದರು. ಸ್ಥಳದಲ್ಲಿಯೇ ಚಿರತೆ ಕಳೇಬರದ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

**ಅಲಂಕೃತ ಮಡಿಕೆ**
ಮಕರ ಸಂಕ್ರಾಂತಿಗೆ ಬೆಂಗಳೂರಿನ ಪಾಟರಿ ಟೌನ್‌ನಲ್ಲಿ ಮಾರಾಟಕ್ಕಿಟ್ಟಿರುವ ಮಣ್ಣಿನ ಮಡಿಕೆಗಳಿಗೆ ಶುಕ್ರವಾರ ಕಲಾವಿದೆಯೊಬ್ಬರು ಅಂತಿಮ ಸ್ಪರ್ಶ ನೀಡಿದರು. – ಪ್ರಜಾವಾಣಿ ಚಿತ್ರ/ ರಂಜು ಪಿ.

## 'ರಾಜಕೀಯಕ್ಕೆ ಧರ್ಮ ಬಳಕೆ'

**ಗದಗ:** 'ದೇಶದಲ್ಲಿ ರಾಜಕೀಯ ವ್ಯಕ್ತಿಗಳು ಧರ್ಮವನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಾರೆ ಎಂಬುದನ್ನು ಶಂಕರಾಚಾರ್ಯರು ಮಾರ್ಗದರ್ಶನದ ಮೂಲಕ ತಿಳಿಸಿದ್ದಾರೆ' ಎಂದು ಸಚಿವ ಎಚ್‌.ಕೆ.ಪಾಟೀಲ ಹೇಳಿದರು.

'ಅಪೂರ್ಣ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆ ಸಲ್ಲದು' ಎಂಬ ಇಬ್ಬರು ಶಂಕರಾಚಾರ್ಯರ ಮಾತಿಗೆ ಶುಕ್ರವಾರ ಪ್ರತಿಕ್ರಿಯಿಸಿದ ಅವರು, 'ಧರ್ಮದಲ್ಲಿ ನಿಷ್ಠೆಯುಳ್ಳವರು ಶಂಕರಾಚಾರ್ಯರಿಗೆ ನಮಸ್ಕರಿಸುತ್ತೇವೆ. ಶಂಕರಾಚಾರ್ಯರು ಹೇಳುವುದನ್ನು ನಂಬುತ್ತೇವೆ ಹೊರತು ಬಿಜೆಪಿ ಅಧ್ಯಕ್ಷರು ಹೇಳುವುದನ್ನಲ್ಲ' ಎಂದು ಹೇಳಿದರು.

### ಸುದ್ದಿ 2 ನಿಮಿಷ

#### 'ರೈತರು ಸಬಲರಾದರೆ ದೇಶ ಸದೃಢ'

**ನಾಗಮಂಗಲ:** 'ರೈತರು ಸಂಪೂರ್ಣ ಸದೃಢರಾಗಬೇಕು. ಆಗ ಮಾತ್ರವೇ ದೇಶದ ಏಳಿಗೆ ಸಾಧ್ಯವಾಗುತ್ತದೆ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಮಠದ ಬಿ.ಜಿ.ಎಸ್ ಸಭಾಂಗಣದಲ್ಲಿ ಶುಕ್ರವಾರ ಬಾಲಗಂಗಾಧರನಾಥ ಸ್ವಾಮೀಜಿ ಅವರ 79ನೇ ವರ್ಷದ ಜಯಂತ್ಯುತ್ಸವ ಮತ್ತು 11ನೇ ವರ್ಷದ ಸಂಸ್ಮರಣೋತ್ಸವ ನಿಮಿತ್ತ ಆಯೋಜಿಸಿದ್ದ ಕೃಷಿ ಮೇಳ ಮತ್ತು ರೈತ ಸಂಗಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶೇ 70ರಷ್ಟು ಇರುವ ರೈತರತ್ತ ಗಮನಿಸುವುದು ಸರ್ಕಾರ ಮತ್ತು ಎಲ್ಲರ ಕರ್ತವ್ಯವಾಗಿದೆ. ಸ್ವಾಮೀಜಿ ಕೃಷಿ ವಿಚಾರಗಳಿಗೆ ಹೆಚ್ಚಿನ ಆದ್ಯತೆ ನೀಡುತ್ತಿದ್ದಾರೆ. ಬಾಲಗಂಗಾಧರನಾಥ ಸ್ವಾಮೀಜಿ ಅವರ ಕನಸಿನಂತೆ ಆದಿಚುಂಚನಗಿರಿ ಸಂಸ್ಥೆಯಿಂದ ಕೃಷಿ ಕಾಲೇಜು ಪ್ರಾರಂಭಿಸಲು ಸಿದ್ಧತೆ ನಡೆದಿದ್ದು, ಸರ್ಕಾರ ಕೈಜೋಡಿಸುತ್ತದೆ ಎಂದರು.

ಆಶೀರ್ವಚನ ನೀಡಿದ ನಿರ್ಮಲಾನಂದನಾಥ ಸ್ವಾಮೀಜಿ ಅವರು, ಮಣ್ಣು ನಂಬಿರುವ ರೈತರನ್ನು ಕಳೆದುಕೊಳ್ಳಬಾರದು. ನಮ್ಮ ಜನಪದರು ಮತ್ತು ಪೂರ್ವಿಕರು ಮಣ್ಣಿಗೆ ಮಹತ್ವ ನೀಡಿ ಭೂತಾಯಿ ಎಂದು ಪೂಜಿಸುತ್ತಿದ್ದರು. ಭೂ ಗ್ರಹದ ರಕ್ಷಣೆಗೆ ಕ್ರಮವಹಿಸಬೇಕಿದೆ ಎಂದರು.

#### 'ಯುವ ಸಮೂಹ ಆದರ್ಶ ದಾರಿಯಲ್ಲಿ ಸಾಗಲಿ'



**ಪೀಣ್ಯ ದಾಸರಹಳ್ಳಿ:** 'ನಮ್ಮ ದೇಶವನ್ನು ಸದೃಢವಾಗಿ ಕಟ್ಟಬೇಕಾದ ಯುವಕರು ಬಲಿಷ್ಠರಾಗಬೇಕಿದೆ. ಆದರ್ಶದ ದಾರಿಯಲ್ಲಿ ಯುವ ಸಮೂಹ ಸಾಗಬೇಕು' ಎಂದು ಸಾಹಿತಿ ಚಿಕ್ಕಹೆಜ್ಜಾಜಿ ಮಹಾದೇವ್ ತಿಳಿಸಿದರು.

ಬಿಜೆಪಿ ಯುವ ಮೋರ್ಚಾ ವತಿಯಿಂದ ಚಿಕ್ಕಸಂದ್ರದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಯುವ ದಿನ ಹಾಗೂ ವಿವೇಕಾನಂದರ ಜಯಂತ್ಯುತ್ಸವ ಸಮಾರಂಭದಲ್ಲಿ ಮಾತನಾಡಿದರು.

ಯುವಶಕ್ತಿ ಮಾದಕ ವ್ಯಸನಗಳಿಗೆ ಬಲಿಯಾಗದೆ ವಿವೇಕಾನಂದರ ಆದರ್ಶ ಮತ್ತು ದೇಶಪ್ರೇಮವನ್ನು ಮೈಗೂಡಿಸಿಕೊಳ್ಳಬೇಕಿದೆ ಎಂದರು.

ಶಾಸಕ ಎಸ್. ಮುನಿರಾಜು ಮಾತನಾಡಿ, 'ವಿವೇಕಾನಂದರು 39 ವರ್ಷಗಳ ಕಾಲ ಬದುಕಿ ಇಡೀ ವಿಶ್ವಕ್ಕೆ ಉನ್ನತವಾದ ಸಂದೇಶಗಳನ್ನು ಸಾರಿದ್ದಾರೆ' ಎಂದು ನೆನಪು ಮಾಡಿಕೊಂಡರು.

ಜಿ. ಮರಿಸ್ವಾಮಿ, ದಾಸರಹಳ್ಳಿ ಮಂಡಲ ಅಧ್ಯಕ್ಷ ಸೋಮಶೇಖರ್, ಯುವ ಮೋರ್ಚಾ ಪ್ರಧಾನ ಕಾರ್ಯದರ್ಶಿಗಳಾದ ಭರತ್ ಸೌಂದರ್ಯ, ವಿಜಯ್ ಕುಮಾರ್, ಬಿಜೆಪಿ ಮುಖಂಡರಾದ ಪಿ.ಎಚ್. ರಾಜು, ಗುರುಪ್ರಸಾದ್, ಭಾಗ್ಯಮ್ಮ, ಸಾಹಿತಿ ವೈ.ಬಿ.ಎಚ್. ಜಯದೇವ್, ಎಂ.ಎಚ್. ಪಾಟೀಲ್, ವಿನೋದ್ ಗೌಡ ಇದ್ದರು.

## 'ವಾಯು ಗುಣಮಟ್ಟದಲ್ಲಿ ನಗರ ಹಿಂದೆ'

### 'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ' ಅನುಷ್ಠಾನಕ್ಕೆ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಕುಡಿಯುವ ನೀರು ಪೂರೈಕೆ, ತ್ಯಾಜ್ಯ ನಿರ್ವಹಣೆ, ಸಂಚಾರ ದಟ್ಟಣೆ ನಿಯಂತ್ರಣ ಹಾಗೂ ವಾಯುಗುಣಮಟ್ಟದಲ್ಲಿ ನಗರ ಹಿಂದೆ ಉಳಿದಿದೆ' ಎಂದು ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್ ಹೇಳಿದರು.

'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ' ಅನುಷ್ಠಾನದ ಮೂಲಕ ಇಂತಹ ಎಲ್ಲ ಸಮಸ್ಯೆಯನ್ನು ಪರಿಹರಿಸಬಹುದು' ಯೋಜನೆ ಸಂಬಂಧ ನಡೆದ ಕಾರ್ಯಾಗಾರದಲ್ಲಿ ತಿಳಿಸಿದರು.

'ಬೆಂಗಳೂರು 1980-1990ರಲ್ಲಿ ಯೋಜನಾ ರಹಿತವಾಗಿ ಅಭಿವೃದ್ಧಿಯಾಗುತ್ತಿತ್ತು. ಇದೀಗ ಯೋಜನಾಬದ್ಧವಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ಇದೇ ರೀತಿ ವ್ಯವಸ್ಥಿತವಾಗಿ ಅಭಿವೃದ್ಧಿ ಕಾರ್ಯಗಳು ನಡೆಸಿದರೆ ಹಂತ-ಹಂತವಾಗಿ ಹವಾಮಾನದಲ್ಲಿ ಪರಿಣಾಮಕಾರಿಯಾಗಿ ಗುಣಮಟ್ಟ ತರಬಹುದು' ಎಂದರು.

ಕರ್ನಾಟಕ ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ರಾಜೀವ್ ಗೌಡ ಅವರು, 'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ ಅನುಷ್ಠಾನಕ್ಕೆ ಬರುತ್ತಿದ್ದು, ಇದರಿಂದ ನಗರ ದೇಶದಲ್ಲೇ ಹವಾಮಾನ ಗುಣಮಟ್ಟದಲ್ಲಿ ಮೇಲುಗೈ ಸಾಧಿಸಲಿದೆ' ಎಂದು ತಿಳಿಸಿದರು.

ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಮಾತನಾಡಿ, 'ದೇಶದಲ್ಲಿ ಮುಂಬೈ ಮತ್ತು ಚೆನ್ನೈ ನಂತರ ಹವಾಮಾನ ಕ್ರಿಯಾ ಯೋಜನೆಯನ್ನು ಅನುಷ್ಠಾನಗೊಳಿಸಿದ 3ನೇ ನಗರ ನಮ್ಮ ಬೆಂಗಳೂರು. ಈ ಯೋಜನೆಯನ್ನು ಮಾಸ್ಟರ್ ಪ್ಲಾನ್‌ನಲ್ಲಿ ಸಂಯೋಜಿಸಿಕೊಳ್ಳಬೇಕಾಗುತ್ತದೆ' ಎಂದು ತಿಳಿಸಿದರು.

ತಕ್ಷಣ ಮತ್ತು ಭವಿಷ್ಯದ ಹವಾಮಾನ ಅಪಾಯಗಳಿಗೆ ಸ್ಥಿತಿಸ್ಥಾಪಕತ್ವ ನಿರ್ಮಿಸುವುದು 'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ'ಯ ಮೊದಲ ಆದ್ಯತೆಯಾಗಿದೆ.

ಹವಾಮಾನ ವೈಪರೀತ್ಯ ಘಟಕದ ಅಧ್ಯಕ್ಷೆ ಪ್ರೀತಿ ಗೆಹ್ಲೋಟ್, 'ಸಿ40 ಸಿಟಿಸ್'ನ ಪ್ರಾದೇಶಿಕ ನಿರ್ದೇಶಕಿ ಶ್ರುತಿ ನಾರಾಯಣ್, ಅಭಿವೃದ್ಧಿ ಸಂಸ್ಥೆಗಳು ಹಾಗೂ ನಾಗರಿಕ ಸಮಾಜ ಸಂಸ್ಥೆಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.

'ಬೆಂಗಳೂರು ಹವಾಮಾನ ಕ್ರಿಯಾ ಯೋಜನೆ' ಜಾರಿ ಕಾರ್ಯಾಗಾರದಲ್ಲಿ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಕಾರ್ಯದರ್ಶಿ ರಾಕೇಶ್ ಸಿಂಗ್ ಮಾತನಾಡಿದರು

## 'ಯುವಕರಿಂದ ಬದಲಾವಣೆ ಸಾಧ್ಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯುವಜನರು ಪಾಲ್ಗೊಂಡು ಧನಾತ್ಮಕ ಬದಲಾವಣೆಗೆ ಕಾರಣವಾಗಬೇಕು' ಎಂದು ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ರಾಜೀವ್ ಗೌಡ ಅವರು ಹೇಳಿದರು.

ವಿವೇಕಾನಂದ ಜಯಂತಿ ಹಾಗೂ ರಾಷ್ಟ್ರೀಯ ಯುವ ದಿನದ ಪ್ರಯುಕ್ತ ಬಿ.ಪ್ಯಾಕ್ ಆಯೋಜಿಸಿದ್ದ 'ಉತ್ತಮ ಬೆಂಗಳೂರು ನಿರ್ಮಾಣದಲ್ಲಿ ಯುವಜನತೆಯ ಪಾತ್ರ' ಕುರಿತ ಕಾರ್ಯಾಗಾರದಲ್ಲಿ ಮಾತನಾಡಿದರು.

'ಸಮಸ್ಯೆಗಳಿಗೆ ಪರಿಹಾರ ಒದಗಿಸುವಲ್ಲಿ ಯುವ ಸಮುದಾಯದ ಪಾತ್ರ ಅಮೂಲ್ಯವಾದದು. ವಿಶ್ವದಲ್ಲೇ ಭಾರತ ಅತಿ ಹೆಚ್ಚು ಯುವ ಜನರನ್ನು ಹೊಂದಿದ್ದು, ಅವರಿಂದಷ್ಟೇ ಸಮಾಜದ ಬದಲಾವಣೆ ಸಾಧ್ಯ' ಎಂದರು.

'ಸಮಾಜಸೇವೆ, ರಾಜಕೀಯ ಜ್ಞಾನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ನೆರೆಹೊರೆಯವರ ಸಮಸ್ಯೆಗಳಿಗೆ ಸ್ಪಂದಿಸಬೇಕು. ಇದರಿಂದ ಸಮ ಸಮಾಜ ನಿರ್ಮಾಣ, ಉತ್ತಮ ಪ್ರಜೆಯಾಗಲು ಸಾಧ್ಯ. ಸ್ವಾಮಿ ವಿವೇಕಾನಂದರ ಆಶಯಗಳಂತೆ ಜೀವಿಸಬೇಕು .. ಸಮುದಾಯ ಕೇಂದ್ರಿತ ಕೆಲಸಗಳಲ್ಲಿ ತೊಡಗಬೇಕು' ಎಂದು ಹೇಳಿದರು.

ಸೇಂಟ್ ಆನ್ಸ್ ಸಂಸ್ಥೆ ಪ್ರಾಂಶುಪಾಲರಾದ ಸಿಸ್ಟರ್ ಅನೀಸಿಯಾ, ಎನ್‌ಎಸ್‌ಎಸ್ ಪ್ರೋಗ್ರಾಂ ಆಫೀಸರ್ ಪಾರ್ವತಿ, ಬಿ.ಕ್ಲಿಪ್ ಕಾರ್ಯಕ್ರಮ ಮುಖ್ಯಸ್ಥ ಎಚ್.ಎಸ್. ರಾಘವೇಂದ್ರ ಪಾಲ್ಗೊಂಡಿದ್ದರು.

'ಉತ್ತಮ ಬೆಂಗಳೂರು ನಿರ್ಮಾಣದಲ್ಲಿ ಯುವಜನತೆಯ ಪಾತ್ರ' ಕುರಿತ ಕಾರ್ಯಾಗಾರದಲ್ಲಿ ರಾಜ್ಯ ಪರಿವರ್ತನಾ ಸಂಸ್ಥೆ ಉಪಾಧ್ಯಕ್ಷ ರಾಜೀವ್ ಗೌಡ ಮಾತನಾಡಿದರು.

## 'ಸಂತ್ರಸ್ತೆಗೆ ನೀಡಿದ್ದ ಪರಿಹಾರ ವಾಪಸು'

ಪ್ರಜಾವಾಣಿ ವಾರ್ತೆ

**ಮಂಗಳೂರು:** ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿ ಸಂತ್ರಸ್ತೆಯು ಪ್ರತಿಕೂಲ ಸಾಕ್ಷಿ ಹೇಳಿದ ಕಾರಣ ಆಕೆಗೆ ಸಮಾಜ ಕಲ್ಯಾಣ ಇಲಾಖೆ ನೀಡಿದ್ದ ಪರಿಹಾರ ಧನವನ್ನು ನ್ಯಾಯಾಲಯದ ಆದೇಶದಂತೆ ವಾಪಸ್ ಪಡೆಯಲಾಗಿದ್ದು, ಆ ಮೊತ್ತವನ್ನು ಸರ್ಕಾರದ ಖಾತೆಗೆ ಜಮೆ ಮಾಡಲಾಗಿದೆ.

ಪಣಂಬೂರು ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಪೋಕ್ಸೊ ಪ್ರಕರಣಕ್ಕೆ ಸಂಬಂಧಿಸಿ ಮಂಗಳೂರು ಉತ್ತರ ಉಪ ವಿಭಾಗದ ಸಹಾಯಕ ಪೊಲೀಸ್ ಕಮಿಷನರ್ ಅವರು ಪ್ರಕರಣ ದಾಖಲಿಸಿ, ತನಿಖೆ ನಡೆಸಿದ್ದರು. 39 ಸಾಕ್ಷಿದಾರರ ಸಹಿ ಸಂಗ್ರಹಿಸಿ ಜಿಲ್ಲಾ ತ್ವರಿತ ಗತಿಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

2023 ಅಕ್ಟೋಬರ್ 5ರಂದು ಪ್ರಕರಣದ ವಿಚಾರಣೆ ಆರಂಭಿಸಿದ್ದ ನ್ಯಾಯಾಧೀಶೆ ಮಂಜುಳಾ ಅವರು, ನ. 17ರಂದು ಮುಗಿಸಿದ್ದರು. ವಿಚಾರಣೆ ವೇಳೆ ಸಂತ್ರಸ್ತೆ, ಆಕೆ ಕಡೆಯವರು ಪ್ರತಿಕೂಲ ಸಾಕ್ಷಿ ಹೇಳಿದ್ದರು.

ಪ್ರಕರಣದಲ್ಲಿ ಸಂತ್ರಸ್ತೆಗೆ ಆದ ಅನ್ಯಾಯಕ್ಕೆ ಎಫ್‌ಐಆರ್ ದಾಖಲಾದಾಗ ಸರ್ಕಾರದಿಂದ ₹1.25 ಲಕ್ಷ, ದೋಷಾರೋಪಣಾ ಪತ್ರ ಸಲ್ಲಿಸಿದಾಗ ₹2.50 ಲಕ್ಷ ಪರಿಹಾರ ಧನವನ್ನು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಮಂಜೂರು ಮಾಡಿದ್ದರು. ಸಂತ್ರಸ್ತೆಯು ಬಾಲಕಿಯಾಗಿದ್ದ ಕಾರಣ ಚಿಕ್ಕಮ್ಮನ ಖಾತೆಗೆ ಹಣ ಜಮೆ ಮಾಡಲಾಗಿತ್ತು.

ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು, ಸಂತ್ರಸ್ತೆ ಪ್ರತಿಕೂಲ ಸಾಕ್ಷಿ ನುಡಿದಿದ್ದಾರೆ. ತನಿಖಾಧಿಕಾರಿ ಸಾಕ್ಷ್ಯ ಆಧರಿಸಿ ಪರಿಹಾರದ ಮೊತ್ತವನ್ನು ಸರ್ಕಾರಕ್ಕೆ ಹಿಂದಿರುಗಿಸಲು ಆದೇಶಿಸಬೇಕೆಂದು ಮನವಿ ಮಾಡಿದ್ದರು.

'ಮನವಿ ಪರಿಗಣಿಸಿದ ಕೋರ್ಟ್ ಮೊತ್ತ ವಸೂಲು ಮಾಡಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಲು ನಿರ್ದೇಶಿಸಿತು.

### ನಗರದಲ್ಲಿ ಇಂದು

**ಗುರುಕುಲ ವಾರ್ಷಿಕ ವಿಜ್ಞಾನ ಮತ್ತು ಕಲಾ ಮೇಳ: ಉದ್ಘಾಟನೆ:** ಎಂ. ಕೃಷ್ಣಪ್ಪ, ಅತಿಥಿಗಳು: ಮಾಗಡಿ ರೋಡ್ ಕೃಷ್ಣ, ಮಹೇಂದ್ರ ಮುನ್ನೋತ್, ಆಯೋಜನೆ ಹಾಗೂ ಸ್ಥಳ: ಗುರುಕುಲ ಇಂಟರ್‌ನ್ಯಾಷನಲ್ ಶಾಲೆ, ಮಾಗಡಿ ರಸ್ತೆ, ಬೆಳಿಗ್ಗೆ 8.30

**ಸ್ವಯಂ ರಕ್ತದಾನ ಶಿಬಿರ:** ಆಯೋಜನೆ: ರಾಷ್ಟ್ರೋತ್ಥಾನ ರಕ್ತನಿಧಿ, ಸ್ಥಳ: ಶ್ರೀ ವೆಂಕಟೇಶ್ವರ ಕಾಲೇಜು, ಕೆ.ಆರ್. ಪುರ, ಬೆಳಿಗ್ಗೆ 9

**ಸ್ಮರಣ ಸಂಚಿಕೆ ಬಿಡುಗಡೆ ಮತ್ತು ಸನ್ಮಾನ:** ಮುಖ್ಯ ಅತಿಥಿ: ಪದ್ಮನಾಭನ್ ಬಲರಾಮ್, ಅಧ್ಯಕ್ಷತೆ: ಡಿ.ವಿ. ಸತ್ಯನಾರಾಯಣ, ಸನ್ಮಾನಿತರು: ಎಸ್. ರಾಜಾರಾವ್, ಶಾಂತರಾಜಣ್ಣ ಎಚ್.ಆರ್., ಎಂ. ನಾಗರಾಜ್, ಎಸ್. ರಾಮಕೃಷ್ಣ, ಜಯರಾಮು, ಆಯೋಜನೆ: ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಕರ್ನಾಟಕ ಸೀನಿಯರ್ ಎಂಜಿನಿಯರ್ಸ್ ಫೋರಂ, ಸ್ಥಳ: ಕರ್ನಾಟಕ ಎಂಜಿನಿಯರ್ಸ್ ಅಕಾಡೆಮಿ, ಕೆಇಎ ಪ್ರಭಾತ್ ರಂಗಮಂದಿರ, 8ನೇ ಮುಖ್ಯರಸ್ತೆ, ಕಮಲಾನಗರ, ಬೆಳಿಗ್ಗೆ 10.30

**ಮಾಸಿಕ ಮಂಟಪ:** ಅಧ್ಯಕ್ಷತೆ: ಸುನೀತ ರಮೇಶ್, 'ಹದಿ ಹರೆಯದವರ ಸಮಸ್ಯೆಗಳನ್ನು ಅರಿಯುವ ಹಾಗೂ ನಿವಾರಿಸುವ ಸುಲಭ ಸಲಹೆಗಳು' ಉಪನ್ಯಾಸ: ಮಂಜುಳ, ಆಯೋಜನೆ ಹಾಗೂ ಸ್ಥಳ: ದೀಪಾ ಅಂಧ ಮಕ್ಕಳ ವಸತಿ ಪ್ರೌಢಶಾಲೆ, ಭಾರತ್ ನಗರ, ಮಾಗಡಿ ಮುಖ್ಯರಸ್ತೆ, ಬೆಳಿಗ್ಗೆ 11

**ರಾಜ್ಯಮಟ್ಟದ ದುಂಡು ಮೇಜಿನ ಸಭೆ ಹಾಗೂ ವಿಚಾರ ಸಂಕಿರಣ:** ಉದ್ಘಾಟನೆ: ಕೆ.ಎನ್. ಲಿಂಗಪ್ಪ, ಅಧ್ಯಕ್ಷತೆ: ಕೆ.ಸಿ. ಪುಟ್ಟಸಿದ್ದಶೆಟ್ಟಿ, ಆಯೋಜನೆ: ಕರ್ನಾಟಕ ರಾಜ್ಯ ಕಾಯಕ ಸಮಾಜಗಳ ಒಕ್ಕೂಟ, ಸ್ಥಳ: ಕಾನ್ಫರೆನ್ಸ್ ಹಾಲ್, ಶಾಸಕರ ಭವನ, ಬೆಳಿಗ್ಗೆ 11

**ವಿಶ್ವೇಶತೀರ್ಥ ಸ್ವಾಮೀಜಿ ಅವರ ನಾಲ್ಕನೇ ಮಹಾಸಮಾರಾಧನೆ ಪ್ರಯುಕ್ತ ಸಂಗೀತ ಕಾರ್ಯಕ್ರಮ:** ಗಾಯನ: ಪ್ರತೀಕ್ಷಾ ಜಿ. ರಾವ್, ಕೊಳಲು: ಶಿವಲಿಂಗಪ್ಪ ರಾಜಾಪುರ, ತಬಲಾ: ಗೋಪಾಲ್ ಗುಡಿಬಂಡೆ, ಹಾರ್ಮೋನಿಯಂ: ಶ್ರೀಪಾದ್ ದಾಸ್, ಆಯೋಜನೆ: ಪೂರ್ಣಪ್ರಜ್ಞ ವಿದ್ಯಾಪೀಠ ಪ್ರತಿಷ್ಠಾನ, ಸ್ಥಳ: ಪೂರ್ಣಪ್ರಜ್ಞ ವಿದ್ಯಾಪೀಠ, ಮಧ್ಯಾಹ್ನ 1

ಚಿದಾನಂದ ಮೂರ್ತಿ

**'ಡಾ.ಎಂ. ಚಿದಾನಂದಮೂರ್ತಿ' ನೆನಪಿನ ಉಪನ್ಯಾಸ ಮತ್ತು ಗೌರವ:** ಅಧ್ಯಕ್ಷತೆ: ವೂಡೇ ಪಿ. ಕೃಷ್ಣ, 'ಕರ್ನಾಟಕ ಜಲ ವಿವಾದಗಳು: ಪರಿಹಾರ' ವಿಷಯದ ಬಗ್ಗೆ ಉಪನ್ಯಾಸ ಹಾಗೂ ನೆನಪಿನ ಗೌರವ: ಕ್ಯಾಪ್ಟನ್ ಎಸ್. ರಾಜಾರಾವ್, ನುಡಿ ನಮನ: ವ.ಚ. ಚನ್ನೇಗೌಡ, ಸ್ಮಿತಾ ರೆಡ್ಡಿ, ಉಪಸ್ಥಿತಿ: ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸರಂಗ, ಸ್ಥಳ: ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಸಂಜೆ 5.30

**'ಪಿಬರೇ ರಾಮರಸಂ' ಚಲನಚಿತ್ರ ಭಕ್ತಿ ಗೀತೆಗಳ ಗಾಯನ:** ಮುಖ್ಯ ಅತಿಥಿಗಳು: ದು.ಗು. ಲಕ್ಷ್ಮಣ, ಬಿ.ಆರ್. ಮಂಜುಳಾ, ವಿಶೇಷ ಅತಿಥಿ: ರಾಜೇಶ್ ಪದ್ಮಾರ್, ಆಯೋಜನೆ: ಶೃತಿಲಯ ಸಂಗೀತ ಕಲ್ಚರಲ್ ಅಕಾಡೆಮಿ, ಸ್ಥಳ: ಗಾಂಧಿ ಸಾಹಿತ್ಯ ಸಂಘ, 8ನೇ ಕ್ರಾಸ್, ಮಲ್ಲೇಶ್ವರ, ಸಂಜೆ 5.30

**ಗಿರಿಧರ್ ಖಾಸನೀಸ್ ಅವರ 'ಎಲ್ಲಿದಂಲೋ ಹಾರಿ ಬಂದು' ಪುಸ್ತಕ ಬಿಡುಗಡೆ:** ಸಂವಾದ ನಡೆಸುವವರು: ಎನ್. ವಿದ್ಯಾಶಂಕರ್, ಜಿ.ಎನ್. ಮೋಹನ್, ಆಯೋಜನೆ: ನವಕರ್ನಾಟಕ ಪ್ರಕಾಶನ, ಸ್ಥಳ: ಗ್ಯಾಲರಿ ಸಮುಖ, ಬಿಟಿಎಸ್ ಡಿಪೊ ರಸ್ತೆ, ವಿಲ್ಸನ್ ಗಾರ್ಡನ್, ಸಂಜೆ 5.30

**ಇನ್ಫೋಸಿಸ್ ಪ್ರಶಸ್ತಿ ಪ್ರದಾನ ಸಮಾರಂಭ:** ಮುಖ್ಯ ಅತಿಥಿ: ಬ್ರಯಾನ್ ಷ್ಮಿಟ್, ಉಪಸ್ಥಿತಿ: ನಾರಾಯಣಮೂರ್ತಿ, ಎಸ್. ಗೋಪಾಲಕೃಷ್ಣನ್, ಆಯೋಜನೆ: ಇನ್ಫೋಸಿಸ್ ಸೈನ್ಸ್ ಫೌಂಡೇಷನ್, ಸ್ಥಳ: ದಿ ತಾಜ್ ವೆಸ್ಟ್ ಎಂಡ್, ಸಂಜೆ 5.30

**ಊಂಜಲ್ ಸಂಗೀತೋತ್ಸವ:** ಗಾಯನ: ಲಕ್ಷ್ಮೀ ವರುಣ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ಗುರುದತ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), 16ನೇ ಅಡ್ಡರಸ್ತೆ, ವೈಯಾಲಿಕಾವಲ್, ಸಂಜೆ 6

**ಕರ್ನಾಟಕ ಶಾಸ್ತ್ರೀಯ ಸಂಗೀತ:** ಅದಿತಿ ಬಿ. ಪ್ರಹ್ಲಾದ್, ವಾದ್ಯ ಸಹಕಾರ: ಅನಂತ ಪದ್ಮನಾಭ, ಜಿ.ಎಸ್. ನಾಗರಾಜ್, ಬಿ.ಜೆ. ಕಿರಣ್ ಕುಮಾರ್, ಆಯೋಜನೆ: ಮಲ್ಲೇಶ್ವರಂ ಸಂಗೀತ ಸಭಾ ಟ್ರಸ್ಟ್, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15



**ಭರತನಾಟ್ಯ ರಂಗಪ್ರವೇಶ:** ಅದಿತಿ ಜಗದೀಶ್, ಮುಖ್ಯ ಅತಿಥಿಗಳು: ಅಣ್ಣಾಸಾಹೇಬ ಶಂಕರ ಜೊಲ್ಲೆ, ಶಶಿಕಲಾ ಜೊಲ್ಲೆ, ಅಶೋಕ್ ದಳವಾಯಿ, ಗೋಪಾಲ್ ಬಿ. ಹೊಸೂರ್, ಉಪಸ್ಥಿತಿ: ಪುಲಿಕೇಶಿ ಕಸ್ತೂರಿ, ಪೂರ್ಣಿಮಾ ಗುರುರಾಜ್, ಆಯೋಜನೆ: ದಿ ಸ್ಟ್ರಕ್ಚರಲ್ ಸ್ಕೂಲ್ ಆಫ್ ಫೈನ್ ಆರ್ಟ್ಸ್, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಸಂಜೆ 5

**'ಸಂಗ್ರಹ ರಾಮಾಯಣ' ಧಾರ್ಮಿಕ ಪ್ರವಚನ:** ಪುರಂದರಾಚಾರ್ಯ ಹಯಗ್ರೀವ, ಆಯೋಜನೆ ಹಾಗೂ ಸ್ಥಳ: ಉತ್ತರಾದಿ ಮಠ, ಬಸವನಗುಡಿ, ಸಂಜೆ 6.30

**'ದೊರೆ ಈಡಿಪಸ್' ನಾಟಕ ಪ್ರದರ್ಶನ:** ನಿರ್ದೇಶನ: ಶಶಿಧರ್ ಭಾರಿಘಾಟ್, ರಂಗ ಗೌರವ: ಸುಶೀಲ, ಮುಖ್ಯ ಅತಿಥಿ: ಎಸ್. ಮಹದೇವಯ್ಯ, ರಾಮಕೃಷ್ಣಯ್ಯ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಪ್ರಯೋಗರಂಗ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ 6.30

'ಷೇಕ್ಸ್‌ಪಿಯರ್‌ನ ಶ್ರೀಮತಿ' ಕನ್ನಡ ನಾಟಕ ಮತ್ತು 'ಷೇಕ್ಸ್‌ಪಿಯರ್ಸ್ ವೈಫ್' ಇಂಗ್ಲಿಷ್ ನಾಟಕ ಪ್ರದರ್ಶನ: ಆಯೋಜನೆ: ಕ್ರಿಯೇಟಿವ್ ಥಿಯೇಟರ್ ತಂಡ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಮಧ್ಯಾಹ್ನ 3.30, ಹಾಗೂ ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸುಧಾ, ಮಯೂರ ಓದಿರಿ

**ರಾಜಾನುಕುಂಟೆ: ₹ 8 ಕೋಟಿ ವೆಚ್ಚದಲ್ಲಿ ನಿರ್ಮಾಣ**

## ಪಾಲಿಟೆಕ್ನಿಕ್ ಕಾಲೇಜು ನಿರ್ಮಾಣಕ್ಕೆ ಶಂಕುಸ್ಥಾಪನೆ

ಪ್ರಜಾವಾಣಿ ವಾರ್ತೆ

**ಯಲಹಂಕ:** ರಾಜಾನುಕುಂಟೆಯಲ್ಲಿ ₹ 8 ಕೋಟಿ ವೆಚ್ಚದಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಆರ್.ವಿಶ್ವನಾಥ್ ಶಂಕುಸ್ಥಾಪನೆ ನೆರವೇರಿಸಿದರು.

ಪಾಲಿಟೆಕ್ನಿಕ್ ಕಾಲೇಜು ಈ ಭಾಗದಲ್ಲಿ ಇಲ್ಲದ ಕಾರಣ ವಿದ್ಯಾರ್ಥಿಗಳು ನಗರಕ್ಕೆ ತೆರಳಬೇಕಾಗಿತ್ತು. ಈ ಸಮಸ್ಯೆ ನೀಗಲಿದೆ. 15 ತಿಂಗಳೊಳಗೆ ಕಾಮಗಾರಿ ಪೂರ್ಣಗೊಂಡು ಮುಂದಿನ ಶೈಕ್ಷಣಿಕ ವರ್ಷದಿಂದ ದಾಖಲಾತಿ ಆರಂಭಿಸಲು ಚಿಂತನೆ ನಡೆಸಲಾಗಿದೆ ಎಂದು ತಿಳಿಸಿದರು.

ಮುಂದಿನ ದಿನಗಳಲ್ಲಿ ಯುವಕರಿಗೆ ಉದ್ಯೋಗಾವಕಾಶಗಳು ಲಭ್ಯವಾಗಲಿದೆ ಎಂದು ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಎಂ. ಮೋಹನ್‌ಕುಮಾರ್ ಅಭಿಪ್ರಾಯ ವ್ಯಕ್ತಪಡಿಸಿದರು.

ರಾಜಾನುಕುಂಟೆ ಗ್ರಾಮಪಂಚಾಯಿತಿ ಅಧ್ಯಕ್ಷೆ ಅಂಬಿಕಾ ರಾಜೇಂದ್ರಕುಮಾರ್, ಉಪಾಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷರಾದ ಎಸ್.ಜಿ.ನರಸಿಂಹಮೂರ್ತಿ, ಕೆ.ವೀರಣ್ಣ, ಸದಸ್ಯರಾದ ಚಿಕ್ಕಣ್ಣ, ಸುಜಾತ, ಭವಾನಿ, ಬಿಜೆಪಿ ಮುಖಂಡರಾದ ಚೊಕ್ಕನಹಳ್ಳಿ ವೆಂಕಟೇಶ್, ಸತೀಶ್ ಕಡತನಮಲೆ, ಮಂಜುನಾಥರೆಡ್ಡಿ, ಇಟಗಲ್‌ಪುರ ಮೋಹನ್, ಎಸ್.ಜಿ.ಪ್ರಶಾಂತ್‌ರೆಡ್ಡಿ, ಪ್ರಕಾಶ್ ಉಪಸ್ಥಿತರಿದ್ದರು.

ರಾಜಾನುಕುಂಟೆಯಲ್ಲಿ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್‌ಆರ್‌ವಿಶ್ವನಾಥ್ ಭೂಮಿಪೂಜೆ ನೆರವೇರಿಸಿದರು. ರಾಜಾನುಕುಂಟೆ ಗ್ರಾಮಪಂಚಾಯಿತಿ ಅಧ್ಯಕ್ಷೆ ಅಂಬಿಕಾ ರಾಜೇಂದ್ರಕುಮಾರ್, ಉಪಾಧ್ಯಕ್ಷ ವೆಂಕಟೇಶ್, ಮಾಜಿ ಅಧ್ಯಕ್ಷರಾದ ಎಸ್‌.ಜಿ.ನರಸಿಂಹಮೂರ್ತಿ, ಕೆ.ವೀರಣ್ಣ, ಸದಸ್ಯರಾದ ಚಿಕ್ಕಣ್ಣ, ಹನುಮೇಗೌಡ, ನಾಗೇಶ್, ಸುಜಾತ, ಭವಾನಿ, ಬಿಜೆಪಿ ಮುಖಂಡರಾದ ಸತೀಶ್ ಕಡತನಮಲೆ, ಇಟಗಲ್‌ಪುರ ಮೋಹನ್ ಇತರರು ಇದ್ದರು.

### 4 ಎಕರೆ ಮಂಜೂರು, 3 ಅಂತಸ್ತಿನ ಕಟ್ಟಡ ನಿರ್ಮಾಣ

ಕಾಲೇಜಿಗೆ 4 ಎಕರೆ ಭೂಮಿ ಮಂಜೂರಾಗಿದ್ದು, 28 ಸಾವಿರ ಚದರಡಿ ವಿಸ್ತೀರ್ಣದಲ್ಲಿ 3 ಅಂತಸ್ತಿನ ಸುಸಜ್ಜಿತ ಕಟ್ಟಡ ನಿರ್ಮಾಣವಾಗಲಿದೆ. 9 ತರಗತಿ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯ, ಮಹಿಳೆಯರ ವಿಶ್ರಾಂತಿ ಗೃಹ ಇನ್ನಿತರೆ ಸೌಲಭ್ಯಗಳು ಲಭ್ಯ ವಿರಲಿವೆ. ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯುನಿಕೇಶನ್ ಹಾಗೂ ಕಂಪ್ಯೂಟರ್ ಸೈನ್ಸ್ ವಿಭಾಗಗಳು ಇರಲಿದ್ದು, ರೈಟ್ಸ್ ಲಿಮಿಟೆಡ್ ರೈಲ್ವೆ ಮಂತ್ರಾಲಯ, ನಿರ್ಮಾಣದ ಜವಾಬ್ದಾರಿ ಹೊತ್ತಿದೆ.

ಐಪಿಎಸ್ ಅಧಿಕಾರಿಯಾಗುವ ಕನಸು ಕಂಡಿದ್ದ ಯುವಕ ಜೈಲಿಗೆ

# ಉದ್ಯಮಿ ಅಪಹರಿಸಿ ₹7 ಲಕ್ಷ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯೊಬ್ಬರನ್ನು ಅಪಹರಿಸಿ, ₹ 7 ಲಕ್ಷ ಸುಲಿಗೆ ಮಾಡಿದ್ದ ಇಬ್ಬರು ಆರೋಪಿಗಳನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಚಿನ್

ಗೌರಿಶಂಕರ್

ರಾಜಾಜಿನಗರದ ಸಚಿನ್ ಹಾಗೂ ಗೌರಿಶಂಕರ್ ಬಂಧಿತರು. ಉದ್ಯಮಿ ಚೇತನ್ ಶಾ ಅವರನ್ನು ಇಬ್ಬರು ಆರೋಪಿಗಳು ಅಪಹರಿಸಿದ್ದರು. ಬಂಧಿತರಿಂದ ₹7 ಲಕ್ಷ ನಗದು ಹಾಗೂ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ.

'ಉದ್ಯಮಿ ಚೇತನ್ ಶಾ ತಮ್ಮ ಮಗಳಿಗೆ ಬಿಬಿಎ ಸೀಟಿಗಾಗಿ ಪ್ರಯತ್ನಿಸುತ್ತಿದ್ದರು. ಆಗ ಚೇತನ್ ಶಾ ಅವರ ಮಗಳ ಬಗ್ಗೆ ಸ್ನೇಹಿತರೊಬ್ಬರ ಮೂಲಕ ಆರೋಪಿ ಸಚಿನ್‌ಗೆ ಪರಿಚಯವಾಗಿತ್ತು. ಯುಪಿಎಸ್‌ಸಿ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಸಚಿನ್ 'ತನಗೆ ಸೇಂಟ್ ಜೋಸೆಫ್ ವಿಶ್ವವಿದ್ಯಾಲಯದಲ್ಲಿ ಪರಿಚಯದವರು ಇದ್ದಾರೆ. ಅವರ ಮೂಲಕ ಸೀಟು ಕೊಡಿಸುತ್ತೇನೆ' ಎಂದು ಭರವಸೆ ನೀಡಿದ್ದ. ₹4 ಲಕ್ಷ ಹಣ ಕೊಡುವಂತೆ ಬೇಡಿಕೆ ಇಟ್ಟಿದ್ದ. ಆದರೆ, ಸಚಿನ್ ಸೀಟು ಕೊಡಿಸದೆ ವಿಳಂಬಮಾಡಿದ್ದ. ವಿಳಂಬವಾಗಿದ್ದರಿಂದ ಶಾ ಬೇರೊಬ್ಬರ ಮೂಲಕ ಸೀಟು ಪಡೆದು ಮಗಳನ್ನು ಕಾಲೇಜಿಗೆ ಸೇರಿಸಿದ್ದರು' ಎಂದು ಪೊಲೀಸರು ಹೇಳಿದರು. 'ಬಳಿಕ ನಿಮ್ಮ ಮಗಳಿಗೆ ನಾನೇ ಸೀಟು ಕೊಡಿಸಿದ್ದು, ನನಗೆ ₹4 ಲಕ್ಷ ಕೊಡಬೇಕು ಎಂದು ಒತ್ತಾಯಿಸಿದ್ದ. ಆದರೆ, ದುಡ್ಡು ಕೊಡಲು ಚೇತನ್ ನಿರಾಕರಿಸಿದ್ದರು. ನಂತರ ತನ್ನ ಸಹಚರರಿಂದ ಚೇತನ್ ಶಾಗೆ ಬೆದರಿಕೆ ಹಾಕಿಸಿದ್ದ' ಎಂದು ಪೊಲೀಸರು ಹೇಳಿದರು.

'ಜ.5ರಂದು ಡಾ.ರಾಜ್ ಕುಮಾರ್ ರಸ್ತೆಯ ಬಳಿ ಆಟೊದಲ್ಲಿ ಸಹಚರರ ಜೊತೆ ಬಂದ ಆರೋಪಿ, ಚೇತನ್ ಕಾರು ಅಡ್ಡಗಟ್ಟಿ ಅಪಹರಿಸಿದ್ದ. ನಗರದಲ್ಲಿ ತಿರುಗಾಡಿಸಿ ಮಾರ್ಗ ಮಧ್ಯೆ ಬಿಟ್ಟು ಪರಾರಿ ಯಾಗಿದ್ದ. ಚೇತನ್ ರಾಜಾ ಜಿನಗರ ಠಾಣೆಗೆ ದೂರು ನೀಡಿದ್ದರು' ಎಂದು ಮೂಲಗಳು ತಿಳಿಸಿವೆ. 'ಸಚಿನ್ ಐಪಿಎಸ್ ಅಧಿಕಾರಿ ಆಗುವ ಕನಸು ಕಂಡಿದ್ದ. ಅದಕ್ಕಾಗಿ ತಯಾರಿ ನಡೆಸುತ್ತಿದ್ದ. ಐಎಎಸ್‌ಗೆ ಬೇಕಾಗಿರುವ ಪುಸ್ತಕ ಖರೀದಿಸಿ ಬಾಡಿಗೆ ರೂಂನಲ್ಲಿ ವ್ಯಾಸಂಗ ಮಾಡುತ್ತಿದ್ದ' ಎನ್ನಲಾಗಿದೆ.

## ನಕಲಿ ಉತ್ಪನ್ನ ತಯಾರಿಕಾ ಘಟಕಕ್ಕೆ ಪೊಲೀಸ್ ದಾಳಿ

ನೆಲಮಂಗಲ: ಪ್ರತಿಷ್ಠಿತ ಕಂಪನಿಗಳ ಹೆಸರಿನ ನಕಲಿ ಟೀ ಪುಡಿ ಮತ್ತು ಡಿಟರ್ಜೆಂಟ್ ತಯಾರಿಸುತ್ತಿದ್ದ ಘಟಕದ ಮೇಲೆ ದಾಳಿ ಮಾದನಾಯಕನಹಳ್ಳಿ ಪೊಲೀಸರು ದಾಳಿ ನಡೆಸಿ, ಒಬ್ಬರನ್ನು ಬಂಧಿಸಿದರು. ತ್ರಿರೋಸಸ್, ರಿನ್, ಸರ್ಫ್ ಎಕ್ಸೆಲ್ ಕಂಪನಿಗಳ ಕವರ್‌ಗಳಲ್ಲಿ ಮಾರಾಟ ಮಾಡಲಾಗುತ್ತಿದ್ದ ನಕಲಿ ಟೀ ಪುಡಿ, ಸಾಬೂನು ಪೊಟ್ಟಣಗಳನ್ನು ಮತ್ತು ಅವುಗಳ ತಯಾರಿಕೆಗೆ ಬಳಸುತ್ತಿದ್ದ ಯಂತ್ರಗಳನ್ನು ಪೊಲೀಸರು ವಶಕ್ಕೆ ಪಡೆದರು. ಮಾದನಾಯಕನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯ ಗಂಗೊಂಡನಹಳ್ಳಿಯಲ್ಲಿ ನಕಲಿ ಟೀ ಪುಡಿ, ಡಿಟರ್ಜಂಟ್‌ಗಳನ್ನು ತಯಾರಿಸಿ ಮಾರಾಟ ಮಾಡುತ್ತಿದ್ದ ಬಗ್ಗೆ ಹಿಂದೂಸ್ಥಾನ್ ಯುನಿಲಿವರ್ ಕಂಪನಿ ಅಧಿಕಾರಿಗಳು ದೂರು ನೀಡಿದ್ದರು. ಪೊಲೀಸರು ದಾಳಿ ಮಾಡಿದಾಗ ರಾಜಸ್ಥಾನದ ಬೋಮಾರಾಮ್ (22) ಸಿಕ್ಕಿಬಿದ್ದಿದ್ದಾನೆ. ಮಾಲೀಕನಿಗಾಗಿ ಹುಡುಕಾಟ ನಡೆದಿದೆ ಎಂದು ಸಬ್ ಇನ್‌ಸ್ಪೆಕ್ಟರ್ ಪ್ರಶಾಂತ್ ತಿಳಿಸಿದರು.

ನಕಲಿ ಉತ್ಪನ್ನಗಳ ತಯಾರಿಕೆಗೆ ಬಳಸುತ್ತಿದ್ದ ಯಂತ್ರ

## ಪ್ರತಿಷ್ಠಿತ ಕಂಪನಿ ಹೆಸರಿನಲ್ಲಿ ಕಳಪೆ ಬಟ್ಟೆ, ಶೂ ಮಾರಾಟ

ಬೆಂಗಳೂರು: ಪ್ರತಿಷ್ಠಿತ ಕಂಪನಿಯ ಹೆಸರಿನಲ್ಲಿ ಕಳಪೆ ಶೂ, ಟೀ ಶರ್ಟ್, ಬೆಲ್ಟ್‌ಗಳನ್ನು ಮಾರುತ್ತಿದ್ದ ಅಂಗಡಿಗಳ ಮೇಲೆ ಸಿಸಿಬಿ ಪೊಲೀಸರು ದಾಳಿ ನಡೆಸಿ, ₹23.90 ಲಕ್ಷದ ಕಳಪೆ ಸಾಮಗ್ರಿ ಜಪ್ತಿ ಮಾಡಿಕೊಂಡಿದ್ದಾರೆ. ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣಾ ವ್ಯಾಪ್ತಿಯ ಸ್ಯಾಂಚುರಿ ಹಾಗೂ ಶ್ರೀಸಾಯಿ ಕಲೆಕ್ಷನ್ ಅಂಗಡಿಗಳ ಮೇಲೆ ಪೊಲೀಸರು ದಾಳಿ ನಡೆಸಿದ್ದಾರೆ. 'ಕಂಪನಿ ವ್ಯವಸ್ಥಾಕರು ನೀಡಿದ ದೂರಿನ ಮೇರೆಗೆ ದಾಳಿ ನಡೆಸಲಾಗಿತ್ತು. ಕಳಪೆ ವಸ್ತುಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ. ಆರೋಪಿಗಳ ವಿರುದ್ಧ ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಲಾರಿ ರಿಪೇರಿ ವೇಳೆ ಅಪಘಾತ: ಮೆಕ್ಯಾನಿಕ್ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿ ಮುಖ್ಯರಸ್ತೆಯ ದೊಡ್ಡಬಳ್ಳಾಪುರ ಜಂಕ್ಷನ್‌ನಲ್ಲಿ ನಡೆದ ಅಪಘಾತದಲ್ಲಿ ಲಾರಿ ಮೆಕ್ಯಾನಿಕ್ ಒಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ದೇವನಹಳ್ಳಿಯ ರೆಹಮಾನ್ (23) ಮೃತಪಟ್ಟ ಮೆಕ್ಯಾನಿಕ್.

'ದೊಡ್ಡಬಳ್ಳಾಪುರ ಜಂಕ್ಷನ್‌ನಲ್ಲಿ ಕಲ್ಲು ತುಂಬಿದ ಲಾರಿಯೊಂದು ಕೆಟ್ಟು ನಿಂತ್ತಿತ್ತು. ಅದರ ರಿಪೇರಿ ಕೆಲಸಕ್ಕೆ ರೆಹಮಾನ್ ತೆರಳಿದ್ದರು. ರಿಪೇರಿ ಮಾಡುತ್ತಿದ್ದ ವೇಳೆ, ಹಿಂದಿನಿಂದ ವೇಗವಾಗಿ ಬಂದ ಸಿಮೆಂಟ್ ತುಂಬಿದ ಲಾರಿಯೊಂದು ಕೆಟ್ಟು ನಿಂತಿದ್ದ ಲಾರಿಗೆ ಡಿಕ್ಕಿಯಾಗಿದೆ. ಅಲ್ಲದೇ ರೆಹಮಾನ್ ಅವರ ಮೇಲೆಯೇ ಲಾರಿಯ ಚಕ್ರ ಹರಿದ ಪರಿಣಾಮ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಲಾರಿ ಚಾಲಕ ಪರಾರಿಯಾಗಿದ್ದಾನೆ' ಎಂದು ಪೊಲೀಸರು ತಿಳಿಸಿದರು.

'ದೊಡ್ಡಬಳ್ಳಾಪುರ ಜಂಕ್ಷನ್‌ನಲ್ಲಿ ಬೆಳಕಿನ ವ್ಯವಸ್ಥೆಯಿತ್ತು. ರಸ್ತೆಯ ಎಡಭಾಗದಲ್ಲಿ ವಾಹನ ಕೆಟ್ಟು ನಿಂತಿರುವುದು ಕಂಡುಬಂದರೂ ವೇಗವಾಗಿ ಬಂದು ಅಪಘಾತ ಮಾಡಿ ಚಾಲಕ ಪರಾರಿಯಾಗಿದ್ದಾನೆ. ಮೃತ ರೆಹಮಾನ್ ಅವರ ಸಂಬಂಧಿ ಸಲೀಂ ದೂರು ನೀಡಿದ್ದು, ಚಾಲಕನ ಪತ್ತೆಗ ತನಿಖೆ ನಡೆಸಲಾಗುತ್ತಿದೆ' ಎಂದು ಸಂಚಾರ ಪೊಲೀಸರು ಹೇಳಿದರು. ದೇವನಹಳ್ಳಿ ಸಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಡ್ರಗ್ಸ್ ಪೆಡ್ಲಿಂಗ್: ವಿದೇಶಿ ಪ್ರಜೆ ಸೆರೆ

ಬೆಂಗಳೂರು: ಡ್ರಗ್ ಪೆಡ್ಲರ್ ಒಬ್ಬರನ್ನು ಸಿಸಿಬಿಯ ಮಾದಕ ದ್ರವ್ಯ ನಿಗ್ರಹ ದಳ ವಿಭಾಗದ ಪೊಲೀಸರು ಬಂಧಿಸಿದ್ದಾರೆ. ನೈಜೀರಿಯಾ ಮೂಲದ ಪೀಟರ್ ಇಕೆಡಿ ಬೆಲನ್ವು (38) ಬಂಧಿತ ಆರೋಪಿ. ಆತನಿಂದ ₹12.60 ಲಕ್ಷದ ನಗದು ಜಪ್ತಿ ಮಾಡಿಕೊಳ್ಳಲಾಗಿದೆ. 2023ರ ನವೆಂಬರ್‌ನಲ್ಲಿ ವಿದ್ಯಾರಣ್ಯಪುರ ಠಾಣಾ ಪೊಲೀಸರು ಪೆಡ್ಲರ್ ಪೀಟರ್‌ನನ್ನು ಬಂಧಿಸಿದ್ದರು. ಆರೋಪಿಯು ಡ್ರಗ್ಸ್ ಪೆಡ್ಲಿಂಗ್‌ನಿಂದ ಲಕ್ಷಾಂತರ ರೂಪಾಯಿ ಸಂಪಾದಿಸಿರುವುದು ಹಾಗೂ ವಿವಿಧ ಬ್ಯಾಂಕ್‌ಗಳ ಪಾಸ್‌ಬುಕ್, ಡೆಬಿಟ್ ಕಾರ್ಡ್ ಹೊಂದಿರುವ ಸಂಗತಿ ಸಿಸಿಬಿ ಪೊಲೀಸರ ಗಮನಕ್ಕೆ ಬಂದಿತ್ತು. ಸಿಸಿಬಿ ಪೊಲೀಸರು ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡಿದ್ದರು. ಎನ್‌ಡಿಪಿಎಸ್ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡಿದ್ದರು. ಆರೋಪಿ ಮತ್ತು ಆತನ ಪತ್ನಿ ಬ್ಯಾಂಕ್ ಖಾತೆಗಳಿಂದ ಒಟ್ಟು ₹12.60 ಲಕ್ಷ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

## ಲೋಕಾ ಬಲೆಗೆ ಬಿಇಒ ಕಚೇರಿ ಸಹಾಯಕ

ವೆಂಕಟೇಶ್

ಪಾಂಡವಪುರ: ಬಿಇಒ ಕಚೇರಿಯ ದ್ವಿತೀಯ ದರ್ಜೆ ಸಹಾಯಕ ವೆಂಕಟೇಶ್ ನಿವೃತ್ತ ಶಿಕ್ಷಕ ಸುರೇಶ್ ಬಾಬು ಅವರ ಬಳಿ ಶುಕ್ರವಾರ ₹ 12 ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸ ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಡಿವೈಎಸ್‌ಪಿ ಸುನೀಲ್ ಕುಮಾರ್ ನೇತೃತ್ವದ ತಂಡ ದಾಳಿ ನಡೆಸಿತ್ತು.

ತಾಲ್ಲೂಕಿನ ಚಿನಕುರಳಿ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕರಾಗಿದ್ದ ಸುರೇಶ್ ಬಾಬು 2022ರಲ್ಲಿ ನಿವೃತ್ತರಾಗಿದ್ದರು. ಒಂದೂವರೆ ವರ್ಷ ಕಳೆದರೂ ಸರ್ಕಾರದಿಂದ ದೊರೆಯಬೇಕಿದ್ದ ಸೌಲಭ್ಯ ಪಡೆಯಲು ಎರಡು ತಿಂಗಳಿನಿಂದ ಬಿಇಒ ಕಚೇರಿಗೆ ಅಲೆಯುತ್ತಿದ್ದರು.

## ಕ್ರಿಕೆಟ್ ಟೂರ್ನಿಗೆ ಬಂದಿದ್ದ ಪಶುವೈದ್ಯ ಸಾವು

ಚಿಕ್ಕಮಗಳೂರು: ಪಶುವೈದ್ಯರ ಸಂಘ ನಗರದಲ್ಲಿ ಆಯೋಜಿಸಿದ್ದ ಮೈಸೂರು ವಿಭಾಗ ಮಟ್ಟದ ಕ್ರಿಕೆಟ್ ಟೂರ್ನಿಯಲ್ಲಿ ಭಾಗವಹಿಸಿದ್ದ ಕೊಡಗು ಜಿಲ್ಲೆ ಸೋಮವಾರಪೇಟೆಯ ಪಶುವೈದ್ಯ ಶಿವಪ್ಪ ಬಾದಾಮಿ (56) ಹೃದಯಾಘಾತದಿಂದ ಮೃತಪಟ್ಟರು.

ಬೆಳಗಾವಿ ಜಿಲ್ಲೆಯ ಶಿವಪ್ಪ ಬಾದಾಮಿ ಅವರು ಸೋಮವಾರಪೇಟೆಯಲ್ಲಿ ಕೆಲಸ ಮಾಡುತ್ತಿದ್ದರು. ಕೊಡಗು ತಂಡದೊಂದಿಗೆ ಕ್ರಿಕೆಟ್ ಆಟವಾಡಿದ್ದರು. ಪಂದ್ಯವೊಂದನ್ನು ಗೆದ್ದ ಬಳಿಕ ಗ್ರೂಪ್ ಫೋಟೊ ತೆಗೆಸಿಕೊಂಡು ಕುಳಿತಿದ್ದರು. ಕುಳಿತಿದ್ದ ಸ್ಥಳದಲ್ಲೇ ಕುಸಿದು ಬಿದ್ದಿದ್ದು, ಕೂಡಲೇ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಅಷ್ಟರಲ್ಲಿ ಅವರು ಮೃತಪಟ್ಟಿದ್ದರು.

## ಮೇಲ್ಸೇತುವೆ ನಿರ್ಮಾಣ ಮಾರ್ಗ ಬದಲಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌ಟಿ ನಗರ ಹಾಗೂ ಹೆಬ್ಬಾಳ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬಳ್ಳಾರಿ ರಸ್ತೆಯಲ್ಲಿ ಏಕಮುಖ ಮೇಲ್ಸೇತುವೆ ನಿರ್ಮಾಣ ಹಾಗೂ ಹಳೆ ಮೇಲ್ಸೇತುವೆ ವಿಸ್ತರಣೆ ಕಾಮಗಾರಿ ನಡೆಯುತ್ತಿದ್ದು, ಈ ಭಾಗದಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ಬೆಂಗಳೂರು–ಬಳ್ಳಾರಿ ಸೇವಾ ರಸ್ತೆಯ ಕೆ2 ಬಸ್ ನಿಲ್ದಾಣದಿಂದ ಹೆಬ್ಬಾಳ ಪಿ.ಎಸ್. ಜಂಕ್ಷನ್ ವರೆಗೆ ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ನಾಗಶೆಟ್ಟಿಹಳ್ಳಿ, ಭೂಪಸಂದ್ರದಿಂದ ಬೆಂಗಳೂರು ನಗರದ ಕಡೆಗೆ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ. ಭೂಪಸಂದ್ರ–ನಾಗಶೆಟ್ಟಿಹಳ್ಳಿ– ಸಂಜಯನಗರ ಮುಖ್ಯರಸ್ತೆಯ ಮೂಲಕ ಸಾಗಿ, ಸಂಜಯನಗರ ಕ್ರಾಸ್‌ನಲ್ಲಿ ಎಡಕ್ಕೆ ತಿರುವು ಪಡೆದು ಸಂಜಯನಗರ ಮ್ಯಾಜಿಕ್ ಬಾಕ್ಸ್‌ನಲ್ಲಿ ಬಲಕ್ಕೆ ತಿರುವು ಪಡೆದು ಬಳ್ಳಾರಿ ರಸ್ತೆಗೆ ವಾಹನಗಳು ಸಂಚರಿಸಬಹುದು.

ನಾಗಶೆಟ್ಟಿಹಳ್ಳಿ–ಭೂಪಸಂದ್ರ ಬಸ್ ನಿಲ್ದಾಣ–ಕೆ2 ಬಸ್ ನಿಲ್ದಾಣ–ವಿ.ನಾಗೇನಹಳ್ಳಿ ಮುಖ್ಯರಸ್ತೆ (ಗುಡ್ಡದಹಳ್ಳಿ ಮುಖ್ಯರಸ್ತೆ)–ಗುಡ್ಡದಹಳ್ಳಿ ವೃತ್ತದಲ್ಲಿ ಬಲಕ್ಕೆ ತಿರುವು ಪಡೆದು ಸುಮಂಗಲಿ ಸೇವಾಶ್ರಮ ರಸ್ತೆಯ ಮೂಲಕ ಬೆಂಗಳೂರು–ಬಳ್ಳಾರಿ ರಸ್ತೆಯ ಮೂಲಕ ಬೆಂಗಳೂರು ನಗರದ ಕಡೆಗೆ ಸಂಚರಿಸಬಹುದು.

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ದೇವನಹಳ್ಳಿ ಯಲಹಂಕದ ಕಡೆಯಿಂದ ವಿ. ನಾಗೇನಹಳ್ಳಿ, ಚೋಳನಾಯನಹಳ್ಳಿ ಕನಕನಗರದ ಕಡೆಗೆ ಸಂಚರಿಸುವ ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಲಾಗಿದೆ.

ಜ.13ರ ಬೆಳಿಗ್ಗೆ 6ರಿಂದ ಮುಂದಿನ ಆದೇಶದ ವರೆಗೆ ಈ ಮಾರ್ಗದಲ್ಲಿ ಬದಲಾವಣೆ ಜಾರಿಯಲ್ಲಿ ಇರುಲಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ಆನೆ ಸೆರೆ ಕಾರ್ಯಾಚರಣೆಗೆ ಸಿದ್ಧವಾಗಿರುವ ಸಾಕಾನೆಗಳು, ಮಾವುತರು, ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ

## ಇಂದಿನಿಂದ ಒಂದು ತಿಂಗಳು ಆನೆ ಸೆರೆ ಕಾರ್ಯಾಚರಣೆ

ಬೇಲೂರು: ಜಿಲ್ಲೆಯ ವಿವಿಧೆಡೆ ಉಪಟಳ ನೀಡುತ್ತಿರುವ ಕಾಡಾನೆಗಳ ಸೆರೆ ಕಾರ್ಯಾಚರಣೆ ಶನಿವಾರ ಆರಂಭಗೊಳ್ಳಲಿದೆ. ದುಬಾರೆ ಹಾಗೂ ಮತ್ತಿಗೋಡು ಶಿಬಿರದಿಂದ ಎಂಟು ಸಾಕಾನೆಗಳು ಈಗಾಗಲೇ ಬಂದಿದ್ದು, ತಾಲ್ಲೂಕಿನ ಬಿಕ್ಕೋಡು ಬಳಿಯ ಕ್ಯಾಂಪ್‌ನಲ್ಲಿ ಬೀಡು ಬಿಟ್ಟಿವೆ.

ಈ ಬಾರಿ ನುರಿತ ತಂಡದೊಂದಿಗೆ ಕಾರ್ಯಾಚರಣೆ ನಡೆಯಲಿದ್ದು, ಎಲ್ಲ ಸಿದ್ಧತೆ ಕೈಗೊಳ್ಳಲಾಗಿದೆ. ಮೈಸೂರು ದಸರಾದಲ್ಲಿ ಅಂಬಾರಿ ಹೊತ್ತಿದ್ದ ಅಭಿಮನ್ಯು ಸಹ ಕಾರ್ಯಾಚರಣೆಯಲ್ಲಿ ಭಾಗವಹಿಸಿದೆ. ಈಗಾಗಲೇ ಸೆರೆ ಹಿಡಿಯುವ ಸಲಗಗಳನ್ನು ಗುರುತಿಸಲಾಗಿದ್ದು, ಒಂದು ತಿಂಗಳ ಕಾಲ ಕಾರ್ಯಾಚರಣೆ ನಡೆಯಲಿದೆ.

ಡಿ.4 ರಂದು ಕಾರ್ಯಾಚರಣೆಯಲ್ಲಿ ಮದಗಜದೊಂದಿಗೆ ಕಾದಾಟ ವೇಳೆ ಅರ್ಜುನ ಮೃತಪಟ್ಟಿದ್ದು, ಅಂದಿನಿಂದ ಕಾರ್ಯಾಚರಣೆ ಸ್ಥಗಿತಗೊಳಿಸಲಾಗಿತ್ತು.

### 'ಅರ್ಜುನನ ಕೊಂದಿದ್ದ ಆನೆ ಸ್ಥಳಾಂತರಕ್ಕೆ ಕ್ರಮ'

'ಅರ್ಜುನನ ಸ್ಥಾನವನ್ನು ಅಭಿಮನ್ಯು ತುಂಬಲಿದ್ದಾನೆ. ಕಳೆದ ತಿಂಗಳು ಸ್ಥಗಿತಗೊಳಿಸಿದ ಕಾರ್ಯಾಚರಣೆಯನ್ನು ಮುಂದುವರಿಸುತ್ತಿದ್ದೇವೆ' ಎಂದು ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ರವಿಶಂಕರ್ ತಿಳಿಸಿದ್ದಾರೆ. ಸಾರ್ವಜನಿಕರಿಗೆ ತೊಂದರೆ ಕೊಡುತ್ತಿರುವ ಆನೆಗಳನ್ನು ಹಿಡಿಯಲಾಗುವುದು. ಜೊತೆಗೆ ಅರ್ಜುನನ ಸಾವಿಗೆ ಕಾರಣವಾದ ಆನೆಯನ್ನೂ ಸೆರೆ ಹಿಡಿದು ಸ್ಥಳಾಂತರ ಮಾಡಲಾಗುವುದು' ಎಂದು ಹೇಳಿದರು.

## ಯುವತಿ ಹೆಸರಿನಲ್ಲಿ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿ ವಂಚನೆ

ಅಪರಾಧ ಸುದ್ದಿ

ಬೆಂಗಳೂರು: ಯುವತಿ ಸೋಗಿನಲ್ಲಿ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿ, ಲೈಂಗಿಕ ವಂಚನೆ ಕೃತ್ಯ ಎಸಗುತ್ತಿದ್ದ ಆರೋಪಿಯನ್ನು ಬೆಂಗಳೂರು ಉತ್ತರ ವಿಭಾಗದ ಸೈಬರ್ ಅಪರಾಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬೊಮ್ಮನಹಳ್ಳಿಯ ಹರಿ ಅಲಿಯಾಸ್ ನರಹರಿ (27)ಬಂಧಿತ.

ಆರೋಪಿಯಿಂದ ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು. 'ಆರೋಪಿ ಬೊಮ್ಮನಹಳ್ಳಿಯ ಎನ್.ಆರ್.ಲಾಡ್ಜ್‌ನಲ್ಲಿ ಕೆಲಸ ಮಾಡುತ್ತಿದ್ದ. ಲಾಡ್ಜ್‌ಗೆ ಬರುವ ಗ್ರಾಹಕರ ನಂಬರ್ ಪಡೆಯುತ್ತಿದ್ದ. ಬಳಿಕ ಹುಡುಗಿಯರ ಸೋಗಿನಲ್ಲಿ ಗ್ರಾಹಕರಿಗೆ ಸಂದೇಶ ಕಳುಹಿಸಿ ಯುವತಿಯಂತೆ

ನರಹರಿ

ನಟಿಸುತ್ತಿದ್ದ. ಯುವತಿಯೇ ಸಂದೇಶ ಕಳುಹಿಸಿರಬಹುದು ಎಂದು ಭಾವಿಸುತ್ತಿದ್ದ ಗ್ರಾಹಕರು, ತಮ್ಮ ಖಾಸಗಿ ಫೋಟೊಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ಹಂಚಿಕೊಂಡಿದ್ದರು. ಅವರ ಫೋಟೊ ತಲುಪಿದ ಮೇಲೆ ದುಡ್ಡಿಗೆ ಬೇಡಿಕೆ ಇಡುತ್ತಿದ್ದ. ಹಣ ನೀಡದಿದ್ದರೆ ಫೋಟೊಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಲಾಗುವುದು ಎಂದು ಬೆದರಿಕೆ ಹಾಕುತ್ತಿದ್ದ. ವಂಚನೆಗೆ ಒಳಗಾದವರು ಮಾನಕ್ಕೆ ಅಂಜಿ ದೂರು ನೀಡಲು ಹಿಂಜರಿಯುತ್ತಿದ್ದರು. ಹಣವನ್ನೂ ನೀಡುತ್ತಿದ್ದರು. ಈ ಹಣ ಬಳಸಿಕೊಂಡು ಮೋಜು ಮಸ್ತಿ ಮಾಡುತ್ತಿದ್ದ' ಎಂದು ಪೊಲೀಸರು ಹೇಳಿದರು. ಇದೇ ರೀತಿ ಲಾಡ್ಜ್‌ಗೆ ಬಂದಿದ್ದ ವ್ಯಕ್ತಿಯೊಬ್ಬರನ್ನು ಅನಿತಾ ಎಂಬ ಹೆಸರಿನಲ್ಲಿ ಆರೋಪಿ ಸಂಪರ್ಕಿಸಿದ್ದ. ಕಳೆದ ಒಂದು ತಿಂಗಳಿನಿಂದ ಅವರಿಗೆ ಲೈಂಗಿಕ ಪ್ರಚೋದನೆಯ ಸಂದೇಶವನ್ನು ಕಳುಹಿಸಿದ್ದ. ಇಬ್ಬರೂ ಚಾಟ್ ಮಾಡಿದ್ದರು. ನಂತರ, ಸಂದೇಶಗಳನ್ನು ವೈರಲ್ ಮಾಡುವುದಾಗಿ ಬೆದರಿಸಿದ್ದ. ಹೆದರಿ ಅವರು ₹1.10 ಲಕ್ಷ ಹಣವನ್ನು ನೀಡಿದ್ದರು. ಇನ್ನೂ ಹೆಚ್ಚಿನ ಹಣಕ್ಕೆ ಬೇಡಿಕೆಯಿಟ್ಟಾಗ ಪೊಲೀಸರಿಗೆ ದೂರು ನೀಡಿದ್ದರು'

ಪ್ರಕರಣ ದಾಖಲಿಸಿಕೊಂಡ ಸಿಇಎನ್ ಠಾಣೆ ಪೊಲೀಸರು ತಾಂತ್ರಿಕ ಕಾರ್ಯಾಚರಣೆ ನಡೆಸಿದಾಗ ಆರೋಪಿ ನರಹರಿ ಎಂಬಾತನೇ ಯುವತಿಯ ಹೆಸರಿನಲ್ಲಿ ನಕಲಿ ವಾಟ್ಸ್‌ಆ್ಯಪ್ ಖಾತೆಯನ್ನು ಸೃಷ್ಟಿಸಿ ಆ ಖಾತೆಗೆ ಹುಡುಗಿಯ ಭಾವಚಿತ್ರವನ್ನು ಅಪ್‌ಲೋಡ್ ಮಾಡಿ ದೂರುದಾರರ ಜೊತೆ ಚಾಟ್ ಮಾಡಿರುವುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

# ವಿನಯ ಕುಲಕರ್ಣಿ ವಿರುದ್ಧದ ವಿಚಾರಣೆಗೆ ಸಿಗದ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಧಾರವಾಡ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಶಾಸಕ ವಿನಯ ಕುಲಕರ್ಣಿ ವಿರುದ್ಧದ ವಿಚಾರಣಾ ನ್ಯಾಯಾಲಯದ ನ್ಯಾಯಿಕ ಪ್ರಕ್ರಿಯೆಗಳಿಗೆ ತಡೆ ನೀಡಬೇಕೆಂಬ ಮನವಿಯನ್ನು ಹೈಕೋರ್ಟ್ ಬಲವಾಗಿ ತಳ್ಳಿ ಹಾಕಿದೆ.

ವಿನಯ ಕುಲಕರ್ಣಿ

'ನನ್ನ ವಿರುದ್ಧ ಹೊರಿಸಲಾಗಿರುವ ದೋಷಾರೋಪಣೆ ಮತ್ತು ಬೆಂಗಳೂರು ಸಿಟಿ ಸಿವಿಲ್ ಕೋರ್ಟ್‌ನ ವಿಶೇಷ ನ್ಯಾಯಾಲಯದಲ್ಲಿ ನಡೆಯಲಿರುವ ವಿಚಾರಣಾ ನ್ಯಾಯಾಲಯದ ನ್ಯಾಯ ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು' ಎಂದು ಕೋರಿ ವಿನಯ ಕುಲಕರ್ಣಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಹಾಜರಾಗಿದ್ದ ಹಿರಿಯ ವಕೀಲ ಸಿ.ವಿ.ನಾಗೇಶ್ ಅವರು, 'ವಿಚಾರಣಾ ನ್ಯಾಯಾಲಯ ತನ್ನ ಪ್ರಕ್ರಿಯೆ ಆರಂಭಿಸಲು ಇದೇ 29ರ ದಿನಾಂಕ ನಿಗದಿಗೊಳಿಸಿದೆ. ಇದಕ್ಕೆ ಮಧ್ಯಂತರ ತಡೆ ನೀಡಬೇಕು' ಎಂದು ಕೋರಿದರು. ಇದನ್ನು ಸ್ಪಷ್ಟವಾಗಿ ನಿರಾಕರಿಸಿದ ನ್ಯಾಯಪೀಠ, ಪ್ರತಿವಾದಿ ಸಿಬಿಐಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಇದೇ 19ಕ್ಕೆ ಮುಂದೂಡಿತು.

ಇದೇ ವೇಳೆ ಸಿಬಿಐ ಪರ ಹಾಜರಾಗಿದ್ದ ಪಿ.ಪ್ರಸನ್ನ ಕುಮಾರ್, 'ಈ ಪ್ರಕರಣದ ನ್ಯಾಯಿಕ ವಿಚಾರಣೆಯಲ್ಲಿ ಸಿಬಿಐ ಪರವಾದ ವಿಶೇಷ ಪ್ರಾಸಿಕ್ಯೂಟರ್ ಆಗಿ ಹಾಜರಾಗಲು ಗಂಗಾಧರ ಶೆಟ್ಟಿ ಅವರನ್ನು ನೇಮಕ ಮಾಡಲಾಗಿದೆ ಎಂಬ ಈ ಮೊದಲಿನ ಅಧಿಸೂಚನೆಯಲ್ಲಿ ಬದಲಾವಣೆ ಮಾಡಲಾಗಿದೆ. ನಾನೇ ಈ ಪ್ರಕರಣದಲ್ಲಿ ಮುಂದುವರಿಯುವಂತೆ ನನಗೆ ಬೆಂಗಳೂರು ವಿಭಾಗದ ಸಿಬಿಐ ಅಧಿಕಾರಿಗಳು ಮುಖ್ತಾರ್ ನಾಮೆ ನೀಡಿದ್ದಾರೆ. ಇದನ್ನು ಪರಿಗಣಿಸಿ ಹಾಜರಾಗಲು ಅನುಮತಿಸಬೇಕು' ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಆದರೆ, ಇದನ್ನು ಒಪ್ಪದ ನ್ಯಾಯಪೀಠ, 'ಈ ಕುರಿತ ಅಧಿಸೂಚನೆ ಎಲ್ಲಿದೆ' ಎಂದು ಕೇಳಿತು. ಅಂತೆಯೇ, ಸಿ.ವಿ.ನಾಗೇಶ್ ಅವರೂ ಸಿಬಿಐನ ವಿವರಣೆಯನ್ನು ಬಲವಾಗಿ ಆಕ್ಷೇಪಿಸಿದರು. 'ಮುಂದಿನ ವಿಚಾರಣೆ ವೇಳೆಗೆ ಈ ಕುರಿತಂತೆ ಹೊಸ ಅಧಿಸೂಚನೆಯನ್ನು ಸಲ್ಲಿಸಿ ಹಾಜರಾಗಿ' ಎಂದು ನ್ಯಾಯಪೀಠ ಸಿಬಿಐಗೆ ಆದೇಶಿಸಿತು.

ಪ್ರಕರಣವೇನು?: ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶ್‌ಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದೆ. ಸಿಸಿಎಚ್–82ರ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಇದೇ 29ರಿಂದ ಫೆಬ್ರುವರಿ 1ರವರೆಗೆ ನಿಯಮಿತವಾಗಿ ವಿಚಾರಣೆ ಕೈಗೆತ್ತಿಕೊಳ್ಳಲಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ 2020ರ ನವೆಂಬರ್‌ನಲ್ಲಿ ವಿನಯ ಕುಲಕರ್ಣಿ ಅವರನ್ನು ಬಂಧಿಸಿ, ಬೆಳಗಾವಿಯ ಹಿಂಡಲಗಾ ಕೇಂದ್ರ ಕಾರಾಗೃಹದಲ್ಲಿ ಒಂಬತ್ತು ತಿಂಗಳ ಕಾಲ ನ್ಯಾಯಾಂಗ ಬಂಧನದಲ್ಲಿ ಇರಿಸಲಾಗಿತ್ತು.

## ಟರ್ಫ್‌ಕ್ಲಬ್ ಮೇಲೆ ಸಿಸಿಬಿ ದಾಳಿ: ₹3.5 ಕೋಟಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಟರ್ಫ್‌ಕ್ಲಬ್‌ನಲ್ಲಿ ಅಕ್ರಮವಾಗಿ ವ್ಯವಹರಿಸುತ್ತಿದ್ದ ದೂರಿನ ಮೇರೆಗೆ ಬುಕ್ ಮೇಕರ್‌ಗಳ ಮೇಲೆ ಶುಕ್ರವಾರ ದಾಳಿ ನಡೆಸಿದ ಕೇಂದ್ರ ಅಪರಾಧ ವಿಭಾಗದ ಪೊಲೀಸರು, ₹3.5 ಕೋಟಿ ನಗದು ವಶಪಡಿಸಿಕೊಂಡಿದ್ದಾರೆ.

'ಜಿಎಸ್‌ಟಿ ಪಾವತಿಸದೆ ವಂಚನೆ, ಅಕ್ರಮ ಬೆಟ್ಟಿಂಗ್, ನಿಗದಿತ ದರಕ್ಕಿಂತ ಹೆಚ್ಚಿನ ಬೆಲೆಗೆ ಟಿಕೆಟ್ ಮಾರಾಟದ ಬಗ್ಗೆ ದೂರು ಬಂದಿತ್ತು. ದೂರು ಆಧರಿಸಿ ದಾಳಿ ನಡೆಸಲಾಯಿತು. ಕೌಂಟರ್‌ಗಳಲ್ಲಿ ತಪಾಸಣೆ ನಡೆಸಲಾಯಿತು. ರೇಸ್‌ಕೋರ್ಸ್ ಸಿಬ್ಬಂದಿ ವಿಚಾರಣೆ ನಡೆಸಲಾಯಿತು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ವಿಕ್ರಾಂತ್ ಎಂಟರ್‌ಪ್ರೈಸಸ್, ನಿರ್ಮಲ್ ಅಂಡ್ ಕೋ, ಚಾಮುಂಡೇಶ್ವರಿ ಎಂಟರ್‌ಪ್ರೈಸಸ್, ಶ್ರೀರಾಮ ಎಂಟರ್‌ಪ್ರೈಸಸ್, ಆರ್. ಆರ್.ಎಂಟರ್‌ಪ್ರೈಸಸ್, ರಾಯಲ್ ಇಎನ್‌ಟಿಪಿ, ಆರ್.ಕೆ.ಎಂಟರ್‌ಪ್ರೈಸಸ್, ಎಎ ಅಸೋಸಿಯೇಟ್ಸ್, ಸಾಮ್ರಾಟ್ ಅಂಡ್ ಕೋ, ಮೆಟ್ರೊ ಅಸೋಸಿಯೇಟ್ಸ್ ಸೇರಿದಂತೆ ಹಲವು ಕೌಂಟರ್‌ಗಳಲ್ಲಿ ಪರಿಶೀಲನೆ ನಡೆಸಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬೆಂಗಳೂರು ಟರ್ಫ್‌ಕ್ಲಬ್ ಅಧಿಕಾರಿಗಳನ್ನು ಸಂಪರ್ಕಿಸಲು ಪ್ರಜಾವಾಣಿ ಪ್ರಯತ್ನಿಸಿತು. ಆದರೆ, ಅವರಿಂದ ಯಾವುದೇ ಪ್ರತಿಕ್ರಿಯೆ ಲಭ್ಯವಾಗಲಿಲ್ಲ.

### ಕಸದ ತಾಣ

ನಗರದ ಸಜ್ಜನ್‌ರಾವ್ ವೃತ್ತದಲ್ಲಿರುವ ಸುಸಜ್ಜಿತ ಬಸ್ ನಿಲುಗಡೆ ತಾಣಕ್ಕೆ ಸಾರ್ವಜನಿಕರು ತ್ಯಾಜ್ಯ ತಂದು ಎಸೆಯುತ್ತಿದ್ದಾರೆ. ಪ್ರಯಾಣಿಕರು ತಂಗುದಾಣಕ್ಕೆ ತೆರಳದ ಸ್ಥಿತಿಯಿದ್ದು ಅದೇ ತ್ಯಾಜ್ಯವನ್ನು ಹಸುಗಳು ಸೇವಿಸುತ್ತಿವೆ.

ಪ್ರಜಾವಾಣಿ ಚಿತ್ರ/ ರಂಜು ಪಿ.

## ವಕೀಲರನ್ನು ವಂಚಿಸಿದ 'ಫೇಸ್ಬುಕ್ ಮಿತ್ರ'

ಮೈಸೂರು: ಫೇಸ್‌ಬುಕ್‌ನಲ್ಲಿ ಪರಿಚಯವಾದ ಬೆಂಗಳೂರಿನ ವಕೀಲ ಸಿ.ಗಜೇಂದ್ರ ಅವರನ್ನು ವಂಚಿಸಿದ ನಗರದ ಆರೋಪಿ ಮುರುಳಿ ಎಂಬಾತ 146 ಗ್ರಾಂ ಚಿನ್ನ ಕದ್ದು ಪರಾರಿಯಾಗಿದ್ದಾನೆ. ಚೀಟಿ ವ್ಯವಹಾರದಲ್ಲಿ ಹಣ ಹೂಡಲು ಆರೋಪಿ ಪ್ರೇರೇಪಿಸಿದ್ದ. ಜ.10ರಂದು ಆರೋಪಿಯನ್ನು ಮೈಸೂರಿಗೆ ಕರೆಸಿಕೊಂಡಿದ್ದ ವಕೀಲ, ಚರ್ಚಿಸಿ ರಾತ್ರಿ ಇಬ್ಬರೂ ಒಟ್ಟಿಗೆ ಊಟ ಮಾಡಿ ನಿದ್ರಿಸಿದ್ದರು. ಈ ವೇಳೆ ಆರೋಪಿ ಚಿನ್ನಾಭರಣ ಕದ್ದಿದ್ದಾನೆ.

# ಗೋವಾದಿಂದ ಕರ್ನಾಟಕಕ್ಕೆ ಬರುವ ವೇಳೆ ಶಾಂತವಾಗಿದ್ದ ಸುಚನಾ ಸೇಠ್

ಪಣಜಿ (ಪಿಟಿಐ): ನಾಲ್ಕು ವರ್ಷದ ತನ್ನ ಮಗುವನ್ನು ಕೊಂದ ಪ್ರಕರಣದ ಬಂಧಿತ ಆರೋಪಿ, ಕೃತಕ ಬುದ್ಧಿಮತ್ತೆಯ ನವೋದ್ಯಮ 'ಮೈಂಡ್‌ಫುಲ್ ಎ.ಐ ಲ್ಯಾಬ್'ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸುಚನಾ ಸೇಠ್ ಗೋವಾದಿಂದ ಕರ್ನಾಟಕಕ್ಕೆ ಕಾರಿನಲ್ಲಿ ಪ್ರಯಾಣಿಸುವಾಗ ಶಾಂತವಾಗಿದ್ದರು. ಒಂದೇ ಒಂದು ಮಾತು ಕೂಡ ಆಡಿರಲಿಲ್ಲ ಎನ್ನುವ ಸಂಗತಿಯನ್ನು ಅವರ ಬಂಧನಕ್ಕೆ ಪೊಲೀಸರಿಗೆ ನೆರವಾಗಿದ್ದ ಕಾರು ಚಾಲಕ ರೇ ಜಾನ್ ತಿಳಿಸಿದ್ದಾರೆ.

ಉತ್ತರ ಗೋವಾದ ಕ್ಯಾಂಡೋಲಿಮ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಜಾನ್, 'ಗೋವಾದಿಂದ ಕರ್ನಾಟಕದ ಚಿತ್ರದುರ್ಗ ತಲುಪವರೆಗಿನ 10 ಗಂಟೆಗಳಿಗೂ ಹೆಚ್ಚು ಸಮಯದ ಇಡೀ ಪ್ರಯಾಣದಲ್ಲಿ ಆ ಮಹಿಳೆ ತುಂಬಾ ಶಾಂತವಾಗಿದ್ದರು. ಒಂದೇ ಒಂದು ಮಾತನ್ನೂ ಆಡಲಿಲ್ಲ. ಉತ್ತರ ಗೋವಾದ ಬಿಚೋಲಿಮ್ ಪಟ್ಟಣಕ್ಕೆ ಬಂದಾಗ ನೀರಿನ ಬಾಟಲಿ ತರುವಂತೆ ಹೇಳಿದ್ದರು ಅಷ್ಟೇ' ಎಂದು ಜಾನ್ ಹೇಳಿದ್ದಾರೆ.

'ಸರ್ವಿಸ್ ಅಪಾರ್ಟ್‌ಮೆಂಟ್‌ನ ಸಿಬ್ಬಂದಿ ಸುಚನಾ ಸೇಠ್ ಅವರ ಪ್ರಯಾಣಕ್ಕಾಗಿ ನನ್ನ ಕಾರು ಬುಕ್ ಮಾಡಿದ್ದರು. ನಾನು ಸ್ಥಳ ತಲುಪಿದಾಗ ಸುಚನಾ ಅವರ ಬ್ಯಾಗ್ ಅನ್ನು ರಿಸೆಪ್ಶನ್‌ನಿಂದ ಕಾರಿಗೆ ಸಾಗಿಸಲು ಸೂಚಿಸಿದರು. ಬ್ಯಾಗ್ ತುಂಬಾ ಭಾರವಾಗಿತ್ತು. ಬ್ಯಾಗ್ ಹಗುರಾಗಿಸಲು ಕೆಲವು ವಸ್ತುಗಳನ್ನು ತೆಗೆಯಬಹುದೇ ಎಂದು ಕೇಳಿದಾಗ ಅದಕ್ಕೆ ಅವರು ಒಪ್ಪಲಿಲ್ಲ. ಅನಿವಾರ್ಯವಾಗಿ ಬ್ಯಾಗ್ ಅನ್ನು ಕಾರಿನವರೆಗೂ ಎಳೆದುಕೊಂಡೇ ಹೋಗಲಾಗಿತ್ತು' ಎನ್ನುವ ಮಾಹಿತಿಯನ್ನು ಚಾಲಕ ನೀಡಿದ್ದಾರೆ.

ಸುಚನಾ ಸೇಠ್

'ಸೋಮವಾರ ಬೆಂಗಳೂರಿಗೆ ತೆರಳುತ್ತಿದ್ದಾಗ ಕರ್ನಾಟಕ-ಗೋವಾ ಗಡಿಯಲ್ಲಿರುವ ಚೋರ್ಲಾ ಘಾಟ್ ವಿಭಾಗದಲ್ಲಿ ಭಾರಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಟ್ರಾಫಿಕ್ ಜಾಮ್ ನಿವಾರಣೆಗೆ ಕನಿಷ್ಠ ನಾಲ್ಕು ಗಂಟೆ ಬೇಕಾಗಲಿದೆ ಎನ್ನುವುದು ಪೊಲೀಸರಿಂದ ಗೊತ್ತಾಯಿತು. ಟ್ರಾಫಿಕ್ ಸಮಸ್ಯೆ ಬಗೆಹರಿಯಲು ಆರು ಗಂಟೆ ಹಿಡಿಯಲಿದೆ ಎಂದು ನಾನು ಉತ್ಪ್ರೇಕ್ಷಿಸಿ ಹೇಳಿದೆ. ಹಿಂತಿರುಗಿ, ವಿಮಾನ ನಿಲ್ದಾಣಕ್ಕೆ ಹೋಗಬಹುದಲ್ಲವೇ ಎನ್ನುವ ಸಲಹೆ ಕೂಡ ನೀಡಿದೆ. ಆದರೆ, ರಸ್ತೆ ಮೂಲಕವೇ ಪ್ರಯಾಣ ಮುಂದುವರಿಸಲು ಅವರು ಪಟ್ಟುಹಿಡಿದರು' ಎಂದು ಜಾನ್ ಹೇಳಿದರು.

'ನಂತರ ಗೋವಾ ಪೊಲೀಸರು ನನಗೆ ಕರೆ ಮಾಡಿ, ಕಾರಿನಲ್ಲಿದ್ದ ಮಹಿಳೆ ಮೇಲೆ ಕೆಲ ಸಂಶಯಗಳಿರುವುದಾಗಿ ಎಚ್ಚರಿಸಿದರು. ಹತ್ತಿರದ ಪೊಲೀಸ್ ಠಾಣೆಗೆ ಮಹಿಳೆಯನ್ನು ಕರೆದೊಯ್ಯುವಂತೆಯೂ ಪೊಲೀಸರು ನನಗೆ ತಿಳಿಸಿದ್ದರು. ನಾನು ಐಮಂಗಲ ಪೊಲೀಸ್ ಠಾಣೆ ಕಡೆಗೆ (ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ) ಕಾರು ಚಲಾಯಿಸಿದೆ. ಆಗ, ಕ್ಯಾಲಂಗುಟ್ ಪೊಲೀಸ್ ಅಧಿಕಾರಿಯೊಬ್ಬರು ನನ್ನೊಂದಿಗೆ ಫೋನ್ ಕರೆಯಲ್ಲೇ ಇದ್ದರು. ಐಮಂಗಲ ಇನ್ಸ್‌ಪೆಕ್ಟರ್ ಕಾರಿನ ಬಳಿಗೆ ಬರಲು ಸುಮಾರು 15 ನಿಮಿಷ ಆಯಿತು. ಮಹಿಳೆ ಕಾರಿನಲ್ಲಿ ಶಾಂತವಾಗಿಯೇ ಕುಳಿತಿದ್ದರು. ಪೊಲೀಸರು ಬ್ಯಾಗ್ ತೆರೆಸಿದಾಗ ಅದರಲ್ಲಿ ಮಗುವಿನ ಶವ ಇತ್ತು. 'ಇದು ತಮ್ಮ ಮಗನ ಶವವೇ' ಎಂದು ಪೊಲೀಸರು ಕೇಳಿದಾಗಲೂ ಮಹಿಳೆ ಶಾಂತವಾಗಿಯೇ 'ಹೌದು' ಎಂದು ಉತ್ತರಿಸಿದರು' ಎಂದು ಜಾನ್ ಪ್ರಯಾಣದ ವೇಳೆ ಕಂಡಿದ್ದನ್ನು ಎಳೆಎಳೆಯಾಗಿ ಬಿಡಿಸಿಟ್ಟಿದ್ದಾರೆ.

ಗೋವಾದ ಕ್ಯಾಂಡೋಲಿಮ್‌ನಲ್ಲಿರುವ ಸರ್ವಿಸ್ ಅಪಾರ್ಟ್‌ಮೆಂಟ್‌ನಲ್ಲಿ ಮಗುವನ್ನು ಕೊಂದು, ಸೋಮವಾರ ರಾತ್ರಿ ಶವವನ್ನು ಬ್ಯಾಗ್‌ನಲ್ಲಿ ತುಂಬಿ ಕಾರಿನಲ್ಲಿ ಬೆಂಗಳೂರಿಗೆ ಸಾಗಿಸುತ್ತಿದ್ದಾಗ ಸುಚನಾ ಅವರನ್ನು ಪೊಲೀಸರು ಬಂಧಿಸಿದ್ದರು. ಮಾಪುಸಾ ಪಟ್ಟಣದ ನ್ಯಾಯಾಲಯ ಆಕೆಯನ್ನು ಆರು ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ನೀಡಿದೆ. ತನಿಖೆ ಮುಂದುವರಿದಿದೆ.

ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ನೆರವಾದ 'ಸ್ಟೂಡೆಂಟ್ ಲಿಟ್ ಫೆಸ್ಟ್'

# 'ನಮ್ಮ ಪರಂಪರೆ, ಅಸ್ಮಿತೆ ಬಿಟ್ಟುಕೊಡದಿರಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಹಿತಿಗಳು, ಕಲಾವಿದರು, ಶಿಕ್ಷಣ ತಜ್ಞರು ಹಾಗೂ ಸಾಂಸ್ಕೃತಿಕ ಕ್ಷೇತ್ರದ ಪ್ರಮುಖರೊಂದಿಗೆ ಸಂವಾದ ಮತ್ತು ಸಂವಹನಕ್ಕೆ ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಿದ್ದ 'ಸ್ಟೂಡೆಂಟ್ ಲಿಟ್ ಫೆಸ್ಟ್', ವಿದ್ಯಾರ್ಥಿಗಳ ಪ್ರತಿಭೆ ಅನಾವರಣಕ್ಕೆ ನೆರವಾಯಿತು.

'ಪ್ರಜಾವಾಣಿ' 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಫ್ರೀ ಸ್ಪೇಸ್ ಫೋರಂ ನಗರದಲ್ಲಿ ಹಮ್ಮಿಕೊಂಡ ಎರಡು ದಿನಗಳ 'ಸ್ಟೂಡೆಂಟ್ ಲಿಟ್ ಫೆಸ್ಟ್–2024' ಶುಕ್ರವಾರ ಸಂಪನ್ನವಾಯಿತು.

ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿದ ರಂಗ ನಿರ್ದೇಶಕ ಎಸ್.ಎನ್. ಸೇತುರಾಮ್, 'ಸಮಾಜದಲ್ಲಿನ ಉತ್ತಮ ವಿಚಾರ, ನಡೆ–ನುಡಿಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸುಸ್ಥಿರ ಮತ್ತು ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಬೇಕು. ಸಾಹಿತ್ಯ, ಕಲೆಯಂತಹ ಕ್ಷೇತ್ರಗಳಲ್ಲಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತೊಡಗಿಕೊಳ್ಳಬೇಕು' ಎಂದು ಹೇಳಿದರು.

ಸಮಾರಂಭದಲ್ಲಿ ಸ್ಟೂಡೆಂಟ್ ಲಿಟ್ ಫೆಸ್ಟ್ ಸಂಚಾಲಕ ಪ್ರದ್ಯುಮ್ನ ಎ.ಕೆ., ಶಿಕ್ಷಣ ತಜ್ಞ ಆಶೋಕ ಎಚ್.ಎಸ್., ಯೋಗರಾಜ್ ಭಟ್, ಪ್ರವೀಣ ಗೋಡ್ಖಿಂಡಿ ಮತ್ತು ಎಸ್.ಎನ್. ಸೇತುರಾಮ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಚಲನಚಿತ್ರ ನಿರ್ದೇಶಕ ಯೋಗರಾಜ್ ಭಟ್, 'ನಾವು ಪ್ರತಿನಿತ್ಯ ಹಲಾವರು ಸನ್ನಿವೇಶಗಳಲ್ಲಿ ಪಾತ್ರಧಾರಿಗಳಾಗಿರುತ್ತೇವೆ. ಹಾಗೆಯೇ, ಪ್ರತಿಯೊಂದು ವಸ್ತು ಮತ್ತು ಜೀವಗಳ ಮೇಲೆ ಕಥೆಯನ್ನು ರಚಿಸಲು ಸಾಧ್ಯ. ಆದ್ದರಿಂದ ನಾವು ಕಥೆಯನ್ನು ರಚಿಸುವ ಕಲೆಗಾರರಾಗಬೇಕು' ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು.

ಕಲಾವಿದ ಪ್ರವೀಣ ಗೋಡ್ಖಿಂಡಿ, 'ನಮ್ಮ ಅನಿಸಿಕೆ ಮತ್ತು ಆಲೋಚನೆಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುವುದನ್ನು ರೂಢಿಸಿಕೊಳ್ಳಬೇಕು. ಎಷ್ಟೇ ನವಿನತೆಗೆ ಒಗ್ಗಿಕೊಂಡರೂ ನಮ್ಮ ಪರಂಪರೆ ಹಾಗೂ ನಮ್ಮ ಅಸ್ಮಿತೆಯನ್ನು ಬಿಟ್ಟುಕೊಡಬಾರದು' ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ಕಾರ್ತಿಕ್ ಅವರು ರಚಿಸಿದ 'ಅವತರಣ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು.

ಬೆಳಿಗ್ಗೆ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸದಲ್ಲಿ ವಿದ್ವಾಂಸ ಶತಾವಧಾನಿ ಆರ್. ಗಣೇಶ ಅವರು 'ಸಾಹಿತ್ಯದಲ್ಲಿ ರಸಾನಂದ' ಎಂಬ ವಿಷಯದ ಬಗ್ಗೆ ಮಾತನಾಡಿದರು. 'ಧರ್ಮಗ್ರಂಥಗಳಲ್ಲಿ ಸಮಂಜಸ' ಎಂಬ ವಿಷಯದ ಕುರಿತು ದುಷ್ಯಂತ್ ಶ್ರೀಧರ ಉಪನ್ಯಾಸ ನೀಡಿದರು.

ನೇಮಕಾತಿಯಲ್ಲಿ ಅಕ್ರಮ: ಇ.ಡಿ ಅಧಿಕಾರಿಗಳಿಂದ ಅಭ್ಯರ್ಥಿಗಳ ಬ್ಯಾಂಕ್ ಖಾತೆ ವಿವರ ಪರಿಶೀಲನೆ

# ಕೋಚಿಮುಲ್: ಹೊಸ ಉದ್ಯೋಗಿಗಳ ತನಿಖೆ

ಪ್ರಜಾವಾಣಿ ವಾರ್ತೆ

**ಕೋಲಾರ:** ಕೋಲಾರ- ಚಿಕ್ಕಬಳ್ಳಾಪುರ ಜಿಲ್ಲೆಯ ಸಹಕಾರ ಹಾಲು ಒಕ್ಕೂಟಕ್ಕೆ (ಕೋಚಿಮುಲ್) ಹೊಸದಾಗಿ ನೇಮಕವಾಗಿರುವ ಅಭ್ಯರ್ಥಿಗಳನ್ನೂ ತನಿಖೆ ನಡೆಸಲು ಜಾರಿ ನಿರ್ದೇಶನಾಲಯ (ಇ.ಡಿ) ಮುಂದಾಗಿರುವುದು ಗೊತ್ತಾಗಿದೆ.

ನೇಮಕಾತಿಯಲ್ಲಿ ಅಕ್ರಮ ಆರೋಪ ಕೇಳಿ ಬಂದಿರುವುದರಿಂದ ಈಗಾಗಲೇ ಅಭ್ಯರ್ಥಿಗಳ ಬ್ಯಾಂಕ್ ಖಾತೆ ವಿವರವನ್ನು ಅಧಿಕಾರಿಗಳು ಪರಿಶೀಲಿಸಿದ್ದಾರೆ ಎನ್ನಲಾಗಿದೆ.

'ಕೋಚಿಮುಲ್ ನೇಮಕಾತಿಯಲ್ಲಿ ಸಂದರ್ಶನದ ಅಂಕ ತಿದ್ದಲಾಗಿದ್ದು, ಪ್ರತಿ ಹುದ್ದೆಯನ್ನು ₹20 ಲಕ್ಷದಿಂದ ₹30ಲಕ್ಷಕ್ಕೆ ಮಾರಾಟ ಮಾಡಲಾಗಿದೆ ಎಂಬುದನ್ನು ಕೋಚಿಮುಲ್ ನಿರ್ದೇಶಕರು ಹಾಗೂ ನೇಮಕಾತಿ ಸಮಿತಿ ಸದಸ್ಯರು ಶೋಧ ಹಾಗೂ ಜಪ್ತಿ ಪ್ರಕ್ರಿಯೆ ಹೇಳಿ ಒಪ್ಪಿಕೊಂಡಿದ್ದಾರೆ' ಎಂಬುದಾಗಿ ಜಾರಿ ನಿರ್ದೇಶನಾಲಯ ಪತ್ರಿಕಾ ಪ್ರಕಟಣೆಯಲ್ಲಿ ಗುರುವಾರ ಹೇಳಿತ್ತು.

ಈಚೆಗೆ ಕೋಚಿಮುಲ್‌ಗೆ ಒಟ್ಟು 75 ಹುದ್ದೆಗಳಿಗೆ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿ ತರಬೇತಿಗೆ ಕಳುಹಿಸಲಾಗಿದೆ.

ಅವರಲ್ಲಿ 10 ಮಂದಿಯನ್ನು ಮೊದಲ ಹಂತದಲ್ಲಿ ತನಿಖೆಗೆ ಒಳಪಡಿಸಿ ಮಾಹಿತಿ ಕಲೆಹಾಕಿರುವುದು ಗೊತ್ತಾಗಿದೆ. ಇನ್ನುಳಿದವರ ಮಾಹಿತಿ ಕಲೆಹಾಕಲು ಮುಂದಾಗಿದೆ. ಈಗಾಗಲೇ ಕೋಚಿಮುಲ್ ವ್ಯವಸ್ಥಾಪಕ ನಿರ್ದೇಶಕ, ಆಡಳಿತಾತ್ಮಕ ನಿರ್ದೇಶಕ, ಅಧಿಕಾರಿಗಳು ಹಾಗೂ ಕೆಲ ನಿರ್ದೇಶಕರನ್ನು ತನಿಖೆ ನಡೆಸಿ ಮಾಹಿತಿ ಕಲೆಹಾಕಿದೆ.

ಕೋಚಿಮುಲ್ ಅಧ್ಯಕ್ಷ ಕೆ.ವೈ. ನಂಜೇಗೌಡ, ನಿರ್ದೇಶಕರು ಹಾಗೂ ಅಧಿಕಾರಿಗಳನ್ನು ಮತ್ತೊಮ್ಮೆ ಇ.ಡಿ ತನಿಖೆಗೆ ಕರೆಯುವ ಸಾಧ್ಯತೆ ಇದೆ ಎನ್ನಲಾಗಿದೆ.

### ಆರೋಪ ಅಲ್ಲಗಳೆದ ಶಾಸಕ ನಂಜೇಗೌಡ

ತಮ್ಮ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ) ಮಾಡಿರುವ ಆರೋಪಗಳನ್ನು ಶಾಸಕ ಕೆ.ವೈ.ನಂಜೇಗೌಡ ಅಲ್ಲಗಳೆದಿದ್ದಾರೆ.

ಮಾಲೂರಿನಲ್ಲಿ ಶುಕ್ರವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿರುವ ಅವರು, 'ಕೋಚಿಮುಲ್ ನೇಮಕಾತಿಯಲ್ಲಿ ಪ್ರತಿ ಹುದ್ದೆಗೆ ₹ 20 ಲಕ್ಷದಿಂದ ₹ 30 ಲಕ್ಷ ಪಡೆಯಲಾಗಿದೆ ಎನ್ನುವುದು ಸತ್ಯಕ್ಕೆ ದೂರವಾದ ಮಾತು. ತನಿಖೆಗೆ ಎಲ್ಲಾ ರೀತಿಯ ಸಹಕಾರ ನೀಡಿದ್ದೇನೆ. ನನ್ನ ಮನೆಯಲ್ಲಿ ಏನೂ ಸಿಕ್ಕಿಲ್ಲ' ಎಂದರು.

'ದರಖಾಸ್ತು ಸಮಿತಿಯಲ್ಲಿ ₹ 150 ಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಲಾಗಿದೆ ಎಂಬುದು ಸುಳ್ಳು ಸುದ್ದಿ. ಅರ್ಜಿ ಹಾಕಿದವರಿಗೆ ಕ್ರಮಬದ್ಧವಾಗಿ ಮಂಜೂರು ಮಾಡಲಾಗಿದೆ' ಎಂದು ಹೇಳಿದರು.

## ಸುದ್ದಿ 2 ನಿಮಿಷ

### ಇಂದು ಉದ್ಯೋಗ, ಸಾಲ ಮೇಳ

**ಚಿಕ್ಕಬಳ್ಳಾಪುರ:** ನಗರದ ಶಿಡ್ಲಘಟ್ಟ ರಸ್ತೆ ಸಂತ ಜೋಸೆಫರ ಶಾಲೆ ಆವರಣದಲ್ಲಿ ಶನಿವಾರ ಎಂ.ಎಸ್.ರಾಮಯ್ಯ ಯೂತ್ ಫೌಂಡೇಶನ್‌ನಿಂದ ಉದ್ಯೋಗ ಮೇಳ ಮತ್ತು ಸಾಲ ಮೇಳ ನಡೆಯಲಿದೆ.

ಯುವ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ನೇತೃತ್ವದಲ್ಲಿ ಮೇಳ ನಡೆಯಲಿದೆ. ಶುಕ್ರವಾರ ಫೌಂಡೇಶನ್ ಸಿಬ್ಬಂದಿ ಶಾಲೆ ಆವರಣದಲ್ಲಿ ಮೇಳಕ್ಕೆ ಸಿದ್ಧತೆಗಳನ್ನು ನಡೆಸಿದರು. ಸುಮಾರು 75 ಕಂಪನಿಗಳು ಮೇಳದಲ್ಲಿ ಭಾಗಿಯಾಗಲಿವೆ. ಆನ್‌ಲೈನ್‌ನಲ್ಲಿ ಮೂಲಕ ಈಗಾಗಲೇ ಸಾವಿರಾರು ಮಂದಿ ನೋಂದಣಿ ಆಗಿದ್ದಾರೆ. ಸ್ಥಳದಲ್ಲಿಯೂ ನೋಂದಣಿಗೆ ಅವಕಾಶವಿದೆ. ಬೆಳಿಗ್ಗೆ 9ರಿಂದ ಸಂಜೆ 4ರವರೆಗೆ ಮೇಳ ನಡೆಯಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್, ಶಾಸಕ ಪ್ರದೀಪ್ ಈಶ್ವರ್ ಮತ್ತಿತರರು ಪಾಲ್ಗೊಳ್ಳುವರು. ಉದ್ಯೋಗ ಮೇಳದ ಜೊತೆಗೆ ಸಾಲ ಮೇಳವೂ ನಡೆಯಲಿದೆ. ಐದಾರು ಬ್ಯಾಂಕ್‌ಗಳು ಕೃಷಿ ಸಾಲ, ಶೈಕ್ಷಣಿಕ ಸಾಲಕ್ಕೆ ಸಂಬಂಧಿಸಿದಂತೆ ಮಾಹಿತಿ ನೀಡಲಿವೆ.

### ಹಾಲುಮತ ಸಂಸ್ಕೃತಿ ವೈಭವದ ಯುವಜನ ಸಮಾವೇಶ

**ಜಾಲಹಳ್ಳಿ:** 'ಯುವಕರು ಉತ್ತಮ ಸಂಸ್ಕಾರ ಹೊಂದಿದರೆ ಮಾತ್ರ ಉಜ್ವಲ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ ಹೇಳಿದರು.

ತಿಂಥಣಿ ಬ್ರಿಜ್ಡ್ ಬಳಿಯ ಕಲಬುರಗಿ ವಿಭಾಗದ ಕಾಗಿನೆಲೆ ಕನಕಗುರು ಪೀಠದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಹಾಲುಮತ ಸಂಸ್ಕೃತಿ ವೈಭವ ಕಾರ್ಯಕ್ರಮದ ಮೊದಲೇ ದಿನದ ಯುವಜನ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿದರು.

'ರೈತರು ಕೃಷಿಗಾಗಿ ಉತ್ತಮ ಬೀಜ ಆಯ್ಕೆ ಮಾಡಿಕೊಂಡು ಉಳುಮೆ ಮಾಡಿ ನೀರು ಹಾಯಿಸಿ, ಗೊಬ್ಬರ ಹಾಕಿದರೆ ಮಾತ್ರ ಉತ್ತಮ ಫಸಲು ಬರಲು ಸಾಧ್ಯ. ಅದೇ ರೀತಿ ಯುವಕರು ಒಳ್ಳೆಯ ಸಂಸ್ಕಾರ ಅಳವಡಿಸಿಕೊಂಡರೆ ಮಾತ್ರ ಉತ್ತಮ ಜೀವನ ರೂಪಿಸಿಕೊಳ್ಳಲು ಸಾಧ್ಯ' ಎಂದರು.

'ಸ್ವಾಮಿ ವಿವೇಕಾನಂದ ಜಯಂತಿ ದಿನ ಯುವಜನ ಸಮಾವೇಶ ಹಮ್ಮಿಕೊಂಡಿರುವುದು ಅರ್ಥಪೂರ್ಣವಾಗಿದೆ. ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದಾಗ ಕಾಗಿನೆಲೆ ಅಭಿವೃದ್ಧಿಗೆ ₹60 ಕೋಟಿ, ಕನಕದಾಸರ ಹುಟ್ಟೂರು ಹಾವೇರಿ ಜಿಲ್ಲೆಯ ಬಾಡ ಗ್ರಾಮದ ಅಭಿವೃದ್ಧಿ ₹10 ಕೋಟಿ ಅನುದಾನ ಮಂಜೂರು ಮಾಡಿದ್ದರು. ಕನಕ ಜಯಂತಿಗೆ ಸರ್ಕಾರಿ ರಜೆ ಘೋಷಿಸಿದ್ದರು. ನಾನು ಪ್ರಥಮ ಬಾರಿಗೆ ಶಿಕಾರಿಪುರದಿಂದ ಆಯ್ಕೆಯಾಗಲು ಹಾಲುಮತ ಬೆಂಬಲ ಹೆಚ್ಚಿನ ಪ್ರಮಾಣದಲ್ಲಿ ಇದೆ' ಎಂದು ಹೇಳಿದರು.

## ದೃಶ್ಯಕಲೆ 2'ಡಿ' ಸ್ಪರ್ಧೆ: ರಕ್ಷಿತಾಗೆ ಚಿನ್ನ

ಪ್ರಜಾವಾಣಿ ವಾರ್ತೆ

**ತಿ.ನರಸೀಪುರ:** ದೆಹಲಿಯಲ್ಲಿ ಈಚೆಗೆ ನಡೆದ ರಾಷ್ಟ್ರೀಯ ಕಲೋತ್ಸವದ ದೃಶ್ಯಕಲೆ 2'ಡಿ' ಸ್ಪರ್ಧೆಯಲ್ಲಿ ತಾಲ್ಲೂಕಿನ ಮುಸುವಿನಕೊಪ್ಪಲು ಸರ್ಕಾರಿ ಪ್ರೌಢಶಾಲೆ ವಿದ್ಯಾರ್ಥಿನಿ ರಕ್ಷಿತಾ ಚಿನ್ನದ ಪದಕ ಗೆದ್ದಿದ್ದಾರೆ.

ರಕ್ಷಿತಾ, ಕೈಯಂಬಳ್ಳಿಯ ಕೆ.ವೈ. ಶೇಖರ್- ಲಕ್ಷ್ಮಿ ದಂಪತಿ ಪುತ್ರಿ. 10ನೇ ತರಗತಿ ಓದುತ್ತಿದ್ದಾರೆ.

ಕೇಂದ್ರ ಶಾಲಾ ಶಿಕ್ಷಣ ಸಚಿವಾಲಯವು ಆಯೋಜಿಸುವ ಕಲೋತ್ಸವದಲ್ಲಿ ಶಾಲೆಯು ಸತತ ನಾಲ್ಕನೇ ಬಾರಿ ರಾಜ್ಯವನ್ನು ಪ್ರತಿನಿಧಿಸಿದೆ. ಎರಡು ಬಾರಿ ಚಿನ್ನ ಗೆದ್ದಿದೆ. 2020ರಲ್ಲಿ ಲೋಕೇಶ್ ಈ ಹಿಂದೆ ಮೊದಲ ಸ್ಥಾನ ಪಡೆದಿದ್ದರು. 2021ರಲ್ಲಿ ಸುಶ್ಮಿತಾ ಭಾಗವಹಿಸಿದ್ದರೆ, 2022ರಲ್ಲಿ ಪಲ್ಲವಿ ತೃತೀಯ ಸ್ಥಾನ ಪಡೆದಿದ್ದರು.

# 'ಇಂಡಿಯಾ' ಸಭೆ ಇಂದು: ಸಂಚಾಲಕರ ನೇಮಕ?

### ವಿಡಿಯೊ ಕಾನ್ಫರೆನ್ಸ್ ಸಭೆ: ಗೈರಾಗಲಿರುವ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ

ಪ್ರಜಾವಾಣಿ ವಾರ್ತೆ

**ಮುಖ್ಯಾಂಶಗಳು**
- ಬೆಳಿಗ್ಗೆ 11:30ರಿಂದ ಸಭೆ ಆರಂಭ
- ನಿತೀಶ್‌ರನ್ನು ಸಂಚಾಲಕರನ್ನಾಗಿ ನೇಮಿಸಲು ಜೆಡಿಯು ಒತ್ತಾಯ
- ಸೀಟು ಹಂಚಿಕೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ

**ನವದೆಹಲಿ:** ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ'ದ ಮುಖಂಡರು ಶನಿವಾರ ವರ್ಚುಯಲ್ ಆಗಿ ಸಭೆ ನಡೆಸಲಿದ್ದು, ಸಂಚಾಲಕರ ನೇಮಕ ಕುರಿತು ಚರ್ಚಿಸುವ ಸಂಭವವಿದೆ. ಪೂರ್ವನಿಗದಿತ ಕಾರ್ಯಕ್ರಮಗಳಿಂದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಈ ಸಭೆಯಲ್ಲಿ ಭಾಗವಹಿಸುತ್ತಿಲ್ಲ ಎಂದು ತೃಣಮೂಲ ಕಾಂಗ್ರೆಸ್ ಪಕ್ಷ ತಿಳಿಸಿದೆ.

'ಇಂಡಿಯಾ' ಮೈತ್ರಿಕೂಟದಲ್ಲಿ ನಿತೀಶ್ ಕುಮಾರ್ ಅವರಿಗೆ 'ಗೌರವಯುತ'ವಾದ ಸ್ಥಾನವನ್ನು ನೀಡಲಾಗಿಲ್ಲ ಎಂಬ ಕಾರಣದಿಂದಾಗಿ ಜನತಾದಳ (ಯು) ಪಕ್ಷವು ಬಿಗಿ ನಿಲುವು ತಳೆದಿರುವ ಹಿನ್ನೆಲೆಯಲ್ಲಿ ಈ ಸಭೆ ನಡೆಯುತ್ತಿರುವುದು ಗಮನಾರ್ಹವಾಗಿದೆ.

ಶನಿವಾರ ಬೆಳಿಗ್ಗೆ 11.30 ಗಂಟೆಗೆ ವಿಡಿಯೊ ಕಾನ್ಫರೆನ್ಸ್ ಮೂಲಕ ಮುಖಂಡರು ಸಭೆ ನಡೆಸುವರು. ಸಂಚಾಲಕರ ನೇಮಕ, ವಿವಿಧ ರಾಜ್ಯಗಳಲ್ಲಿ ಸೀಟು ಹಂಚಿಕೆ ಹಾಗೂ ರ್‍ಯಾಲಿಗಳ ಆಯೋಜನೆ ಕುರಿತು ಚರ್ಚಿಸುವ ಸಂಭವವಿದೆ ಎಂದು ಹೇಳಲಾಗಿದೆ.

'ಸಭೆ ಬಗ್ಗೆ ಶುಕ್ರವಾರ ಸಂಜೆ 5ಕ್ಕೆ ದೂರವಾಣಿ ಕರೆ ಬಂದಿದೆ. ಅದೇ ವೇಳೆಗೆ ಬೇರೆ ಸಭೆ ನಿಗದಿಯಾಗಿದೆ. ಮುಂದಿನ ವಾರ, ಎಲ್ಲ ಮುಖಂಡರಿಗೆ ಅನುಕೂಲವಾಗುವ ದಿನಕ್ಕೆ ಸಭೆಯನ್ನು ಮುಂದೂಡಲು ಮಮತಾ ಬ್ಯಾನರ್ಜಿ ಕೋರಿದ್ದಾರೆ' ಎಂದು ಟಿಎಂಸಿ ತಿಳಿಸಿದೆ.

ಪಕ್ಷದ ಮುಖ್ಯಸ್ಥರು ಸಭೆ ಸೇರುತ್ತಿರುವ ಕಾರಣ ಟಿಎಂಸಿ ತನ್ನ ಪ್ರತಿನಿಧಿ ಕಳುಹಿಸುತ್ತಿಲ್ಲ ಎಂದು ಮುಖಂಡರೊಬ್ಬರು ತಿಳಿಸಿದರು. ನಿತೀಶ್‌ರನ್ನು ಸಂಚಾಲಕರಾಗಿ ನೇಮಿಸಲು ಜೆಡಿಯು ಒತ್ತಾಯಿಸುತ್ತಿದೆ. ಇದಕ್ಕೆ ಮಮತಾ ಬ್ಯಾನರ್ಜಿ ಸಹಮತವಿಲ್ಲ ಎನ್ನಲಾಗಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಂ ರಮೇಶ್ ಅವರು, 'ನಿಗದಿಯಂತೆ ಸಭೆ ನಡೆಯಲಿದೆ. 'ಜೂಮ್' ಮೂಲಕ 'ಇಂಡಿಯಾ' ಮುಖಂಡರು ಚರ್ಚಿಸುವರು ಎಂದು 'ಎಕ್ಸ್' ಜಾಲತಾಣದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ.

ಭಾನುವಾರದಂದು ಆರಂಭವಾಗುವ 'ಭಾರತ್ ಜೋಡೊ ನ್ಯಾಯ್ ಯಾತ್ರೆ', ಈಗಾಗಲೇ ಆರಂಭವಾಗಿರುವ ಸೀಟುಹಂಚಿಕೆ ವಿಷಯ ಹಾಗೂ ಇತರೆ ಪ್ರಮುಖಾಂಶಗಳ ಬಗ್ಗೆ ಚರ್ಚೆ ನಡೆಯಬಹುದು ಎಂದೂ ತಿಳಿಸಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಸೀಟು ಹಂಚಿಕೆ ಕುರಿತು ಕಾಂಗ್ರೆಸ್ ಮತ್ತು ತೃಣಮೂಲ ಕಾಂಗ್ರೆಸ್ ಪಕ್ಷಗಳ ನಡುವೆ ಭಿನ್ನಮತವಿದೆ. ಎರಡು ಸೀಟು ಬಿಡಲು ಟಿಎಂಸಿ ಬಯಸಿದೆ ಎಂಬುದು ಉಭಯ ಪಕ್ಷಗಳ ನಡುವೆ ವಾಗ್ವಾದಕ್ಕೆ ಆಸ್ಪದವಾಗಿದೆ. ಸೀಟು ಹಂಚಿಕೆ ಕುರಿತು ಪ್ರಸ್ತಾವ ಕಳುಹಿಸಿದ್ದು, ಈ ಸಂಬಂಧ ಕಾಂಗ್ರೆಸ್ ಮುಖಂಡರ ಭೇಟಿ ಉದ್ದೇಶ ಟಿಎಂಸಿ ಮುಖಂಡರಿಗಿಲ್ಲ ಎಂದು ಪಕ್ಷ ತಿಳಿಸಿದೆ.

ಈ ಮಧ್ಯೆ 'ಇಂಡಿಯಾ' ಮೈತ್ರಿಕೂಟದ ಕೆಲ ಪಕ್ಷಗಳು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಮೈತ್ರಿಕೂಟದ ಅಧ್ಯಕ್ಷರಾಗಬೇಕು ಹಾಗೂ ನಿತೀಶ್ ಕುಮಾರ್ ಅವರು ಸಂಚಾಲಕರಾಗಬೇಕು ಎಂಬ ಸಲಹೆಯನ್ನು ಮುಂದಿಟ್ಟಿವೆ.

ನಿತೀಶ್ ಅವರನ್ನೇ ಮೈತ್ರಿಕೂಟದ ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಬೇಕು ಎಂದು ಜೆಡಿಯು ಬಯಸಿದ್ದರೆ, ಖರ್ಗೆ ಅವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಬಿಂಬಿಸಬೇಕು ಅಥವಾ ಸಂಚಾಲಕರಾಗಿ ನೇಮಿಸಬೇಕು ಎಂದು ಮಮತಾ ಬ್ಯಾನರ್ಜಿ ಸಲಹೆ ಮಾಡಿದ್ದಾರೆ.

ಕೆಲದಿನದ ಹಿಂದೆ ಈ ಬಗ್ಗೆ ಪ್ರತಿಕ್ರಿಯಿಸಿದ್ದ ಖರ್ಗೆ, 'ಮೈತ್ರಿ ಪಕ್ಷಗಳ ಮುಖಂಡರು 10–15 ದಿನದಲ್ಲಿ ಸಭೆ ಸೇರಿ ಯಾರಿಗೆ ಯಾವ ಸ್ಥಾನ ಎಂಬುದು ಸೇರಿ ವಿವಿಧ ವಿಷಯಗಳನ್ನು ನಿರ್ಧರಿಸುವರು' ಎಂದು ತಿಳಿಸಿದ್ದರು.

'ನೀವು 'ಕೌನ್ ಬನೇಗಾ ಕರೋಡ್‌ಪತಿ' ಎಂಬಂತಹ ಪ್ರಶ್ನೆಗಳನ್ನು ಕೇಳುತ್ತಿದ್ದೀರಿ. ಸಭೆ ಸೇರಿದಾಗ ಅದು ತಿಳಿಯಲಿದೆ. ನಾವು ಒಗ್ಗಟ್ಟಾಗಿಯೇ ಕೆಲಸ ಮಾಡುತ್ತಿದ್ದೇವೆ. ನಿಮಗೆ ಅದರ ಬಗ್ಗೆ ಆತಂಕ ಬೇಡ' ಎಂದೂ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ್ದರು.

ಬೆಂಗಳೂರಿನ ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ (ಮಧ್ಯ) ಅವರು ವಿದ್ಯಾರ್ಥಿಗಳ ಜತೆ ಸಂಭ್ರಮಿಸಿದರು. ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್‌ನ ಅಕಾಡೆಮಿಕ್ಸ್ ಉಪಾಧ್ಯಕ್ಷರಾದ ಡಾ.ವೇದಾ ಬೈಸಾನಿ, ಸಕಿನಾ ಖಾಸಿಮಗ್ ಜೈದಿ, ವಿದ್ಯಾರ್ಥಿ ಹಿತರಕ್ಷಣೆ ವಿಭಾಗದ ಹರ್ಷ ಗುಪ್ತಾ ಉಪಸ್ಥಿತರಿದ್ದರು

## 'ಫುಟ್‌ಬಾಲ್ ಕ್ರೀಡೆಗೆ ಉತ್ತೇಜನ ಅಗತ್ಯ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಹಾಕಿ ಕ್ರೀಡೆಯನ್ನು ಒಡಿಶಾ ಸರ್ಕಾರವು ಪ್ರೋತ್ಸಾಹಿಸುವಂತೆ ಫುಟ್‌ಬಾಲ್ ಕ್ರೀಡೆಯನ್ನು ಉತ್ತೇಜಿಸಲು ಇತರ ರಾಜ್ಯಗಳ ಸರ್ಕಾರಗಳು ಮುಂದಾಗಬೇಕು' ಎಂದು ಭಾರತ ಫುಟ್‌ಬಾಲ್ ತಂಡದ ಮಾಜಿ ನಾಯಕ ಬೈಚುಂಗ್ ಭುಟಿಯಾ ಒತ್ತಾಯಿಸಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿಶ್ವದಲ್ಲೇ ಅತ್ಯಂತ ಹೆಚ್ಚು ಜನಪ್ರಿಯ ಕ್ರೀಡೆಯಾಗಿರುವ ಫುಟ್‌ಬಾಲ್, ಭಾರತದಲ್ಲಿ ನಿರೀಕ್ಷಿತ ಮಟ್ಟದಲ್ಲಿ ಬೆಳೆದಿಲ್ಲ. ನಮ್ಮ ದೇಶದಲ್ಲೂ ಅದ್ಭುತ ಪ್ರತಿಭೆಗಳಿದ್ದು, ಅವುಗಳನ್ನು ಪ್ರೋತ್ಸಾಹಿಸುವ ಕೆಲಸ ನಡೆಯಬೇಕು' ಎಂದು ಹೇಳಿದರು.

'ಒಬ್ಬ ಫುಟ್‌ಬಾಲ್ ಆಟಗಾರನಾಗಿ ಮೈದಾನದಲ್ಲಿ ಮಾತ್ರವಲ್ಲದೆ ಮುಂದಿನ ಪೀಳಿಗೆಗೆ ಸ್ಫೂರ್ತಿ ನೀಡುವುದು ನನ್ನ ನಿಜವಾದ ಗೆಲುವು. ನಾನು ಮಾಸ್ಟರ್‌ಕ್ಲಾಸ್ ನಡೆಸಲು ಮತ್ತು ಫುಟ್‌ಬಾಲ್‌ನಲ್ಲಿ ನನ್ನ ಕೌಶಲಗಳನ್ನು ಭವಿಷ್ಯದ ಆಟಗಾರರೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ' ಎಂದು ಹೇಳಿದರು.

**ಪಾಲುದಾರಿಕೆ:** ಬೈಚುಂಗ್ ಭುಟಿಯಾ ಅವರ 'ಬೈಚುಂಗ್ ಭುಟಿಯಾ ಫುಟ್‌ಬಾಲ್ ಅಕಾಡೆಮಿ'ಯೊಂದಿಗೆ ಬೆಂಗಳೂರಿನ ಆರ್ಕಿಡ್ಸ್ ದಿ ಇಂಟರ್‌ನ್ಯಾಷನಲ್ ಸ್ಕೂಲ್ ಪಾಲುದಾರಿಕೆಯನ್ನು ಘೋಷಿಸಿದೆ. 'ಪವರ್ ಅಪ್ ವಿತ್ ಲೆಜೆಂಡ್ಸ್' ಸರಣಿಯ ಭಾಗವಾಗಿ ಆರ್ಕಿಡ್‌ನ ಹರಳೂರು ಮತ್ತು ಕಾಡುಗೋಡಿ ಕ್ಯಾಂಪಸ್‌ಗಳಲ್ಲಿ ಗುರುವಾರದಿಂದ ಫುಟ್‌ಬಾಲ್ ತರಬೇತಿ ಶಿಬಿರ ನಡೆಯುತ್ತಿದೆ. ಶನಿವಾರ ಬೈಚುಂಗ್ ಅವರು 'ಮಾಸ್ಟರ್ ಕ್ಲಾಸ್' ನಡೆಸಿಕೊಡಲಿದ್ದಾರೆ.

## ರಸ್ತೆಗೆ ಉರುಳಿದ ವಿದ್ಯುತ್ ಕಂಬ

ಪ್ರಜಾವಾಣಿ ವಾರ್ತೆ

**ಮಂಡ್ಯ:** ತಾಲ್ಲೂಕಿನ ರಾಗಿಮುದ್ದನಹಳ್ಳಿ ಬಳಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿ ಸರ್ವೀಸ್ ರಸ್ತೆಯಲ್ಲಿ ಹೈಟೆನ್ಷನ್ ವಿದ್ಯುತ್ ಕಂಬ ಶುಕ್ರವಾರ ರಸ್ತೆಗೆ ಉರುಳಿ ಕೆಲಕಾಲ ವಾಹನ ಸಂಚಾರ ಸ್ಥಗಿತಗೊಂಡಿತ್ತು. ಕಂಬದಲ್ಲಿ ವಿದ್ಯುತ್ ಸಂಪರ್ಕ ಇರಲಿಲ್ಲವಾದ್ದರಿಂದ ವಾಹನ ಸವಾರರು ಅಪಾಯದಿಂದ ಪಾರಾದರು.

ಶ್ರೀರಂಗಪಟ್ಟಣ ತಾಲ್ಲೂಕು, ಗಂಜಾಂ ಗ್ರಾಮದ ಸುರೇಶ್ ಮಂಡ್ಯದಿಂದ ಗ್ರಾಮಕ್ಕೆ ಮರಳುತ್ತಿದ್ದ ವೇಳೆ ಅವರ ಬೈಕ್ ಮುಂದೆಯೇ ಕಂಬ ಬಿದ್ದು, ಹೆಡ್‌ಲೈಟ್‌ಗೆ ತಾಗಿತು. ಸಣ್ಣಪುಟ್ಟ ಗಾಯಗಳಾಗಿದ್ದು ಅಪಾಯದಿಂದ ಪಾರಾದರು. ಅವರು ಕೆಳಗೆ ಬಿದ್ದ ನಂತರ ಸ್ಥಳೀಯರು ಅವರನ್ನು ಉಪಚರಿಸಿದರು.

ರಾಗಿಮುದ್ದನಹಳ್ಳಿ ಗ್ರಾಮದ ಬಳಿ ಸರ್ವೀಸ್ ರಸ್ತೆಗೆ ವಿದ್ಯುತ್ ಕಂಬ ಉರುಳಿರುವುದು

ಸರ್ವೀಸ್ ರಸ್ತೆಯಲ್ಲೇ ವಿದ್ಯತ್ ವೈರ್ ಬಿದ್ದಿದ್ದ ಕಾರಣ ರಸ್ತೆಯುದ್ದಕ್ಕೂ ಟ್ರಾಫಿಕ್ ಜಾಮ್ ಉಂಟಾಗಿತ್ತು. ಸ್ಥಳೀಯ ಪೊಲೀಸರು, ಹೆದ್ದಾರಿ ಪ್ರಾಧಿಕಾರದ ಸಿಬ್ಬಂದಿ ಕಂಬ ತೆರವುಗೊಳಿಸಿದ ನಂತರ ಟ್ರಾಫಿಕ್ ಜಾಮ್ ಕರಗಿತು. 'ವಿದ್ಯುತ್ ಕಂಬದ ಭದ್ರತೆಗೆಂದು ಸುತ್ತಲೂ ಅಳವಡಿಸಿದ್ದ ಪ್ಲೇಟ್‌ಗಳನ್ನು ಕಿಡಿಗೇಡಿಗಳು ಕಳ್ಳತನ ಮಾಡಿರುವುದರಿಂದ ಕಂಬ ಕೆಳಗೆ ಬಿದ್ದಿದೆ' ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ತಿಳಿಸಿದರು.

## ಮಂಗಳ ವಿದ್ಯಾಮಂದಿರ ಚಾಂಪಿಯನ್

**ಮೈಸೂರು:** ಯಾದವಗಿರಿಯ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶುಕ್ರವಾರ 'ಕ್ರೀಡಾ ಭಾರತಿ ಕರ್ನಾಟಕ' ಆಯೋಜಿಸಿದ್ದ 'ರಾಜ್ಯ ಮಟ್ಟದ ಸ್ಕೂಲ್ ಬ್ಯಾಂಡ್ ಸ್ಪರ್ಧಾಕೂಟದಲ್ಲಿ' ಬೆಂಗಳೂರಿನ ಯಲಹಂಕದ ಮಂಗಳ ವಿದ್ಯಾಮಂದಿರ 'ಚಾಂಪಿಯನ್' ಆಗಿ ಹೊರಹೊಮ್ಮಿತು.

ಹಾಸನದ ಹಳ್ಳಿಮೈಸೂರಿನ ಅನುಗ್ರಹ ವಿದ್ಯಾ ಸಂಸ್ಥೆ, ರಾಮನಗರದ ಶರತ್ ಮೆಮೋರಿಯಲ್ ಶಾಲೆಗಳು ಕ್ರಮವಾಗಿ ದ್ವಿತೀಯ ಹಾಗೂ ತೃತೀಯ ಸ್ಥಾನ ಪಡೆದವು. ವಿಜೇತ ತಂಡಗಳಿಗೆ ಟ್ರೋಫಿ ಹಾಗೂ ನಗದು ಬಹುಮಾನ ನೀಡಲಾಯಿತು.

ಒಟ್ಟು ರಾಜ್ಯದ 14 ತಂಡಗಳು ಭಾಗವಹಿಸಿದ್ದು, ಅವುಗಳಲ್ಲಿ 10 ತಂಡಗಳಿಗೆ ನಗದು ಪುರಸ್ಕಾರವನ್ನು ₹ 10 ಸಾವಿರದಿಂದ ₹ 1 ಸಾವಿರದವರೆಗೆ ನೀಡಲಾಯಿತು. ಎಲ್ಲ ಸ್ಪರ್ಧಿಗಳಿಗೂ ಪ್ರಮಾಣ ಪತ್ರ ನೀಡಲಾಯಿತು. ವಾದನ, ಸಂಚಲನ, ವ್ಯೂಹ ರಚನೆ, ವಸ್ತ್ರ ಸಂಹಿತೆ ಹಾಗೂ ಸಂಚಲನದ ಆಧರಿಸಿ ಅಂಕಗಳನ್ನು ನೀಡಲಾಯಿತು.

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎ.ಸಿ.ಶ್ರೀನಿವಾಸ್ ಶುಕ್ರವಾರ ಸರ್ಕಾರಿ ಶಾಲಾ ಮಕ್ಕಳಿಗೆ ನೋಟ್‌ಪುಸ್ತಕ, ಸಮವಸ್ತ್ರ ಹಾಗೂ ಪೌರಕಾರ್ಮಿಕರು ಮತ್ತು ಬಡವರಿಗೆ ಬೆಡ್‌ಶೀಟ್ ಮತ್ತು ಬಟ್ಟೆ ವಿತರಿಸಿರುವ ಮೂಲಕ ಹುಟ್ಟು ಹಬ್ಬ ಆಚರಿಸಿಕೊಂಡರು

## ಎಲ್‌ಇಟಿಯ ಎಂಟು ಸದಸ್ಯರ ವಿರುದ್ಧ ಎನ್‌ಐಎ ಚಾರ್ಜ್‌ಶೀಟ್

**ನವದೆಹಲಿ (ಪಿಟಿಐ):** ಕರ್ನಾಟಕದಲ್ಲಿ ಆತ್ಮಾಹುತಿ ದಾಳಿ ಮತ್ತು ವಿಧ್ವಂಸಕ ಕೃತ್ಯಕ್ಕೆ ಸಂಚು ಮಾಡಿದ ಪ್ರಕರಣದಲ್ಲಿ ತಲೆ ಮರೆಸಿಕೊಂಡಿರುವ ಇಬ್ಬರು ಸೇರಿ ಎಂಟು ಮಂದಿ ಲಷ್ಕರ್ ಎ ತಯಬಾ (ಎಲ್‌ಇಟಿ) ಸಂಘಟನೆಯ ಸದಸ್ಯರ ವಿರುದ್ಧ ರಾಷ್ಟ್ರೀಯ ತನಿಖಾ ಏಜೆನ್ಸಿ (ಎನ್‌ಐಎ) ಶುಕ್ರವಾರ ನ್ಯಾಯಾಲಯದಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆರೋಪಿಗಳಲ್ಲಿ ಕೇರಳದ ಕಣ್ಣೂರಿನ ಟಿ. ನಾಸೀರ್ ಎಂಬಾತ ಬೇರೊಂದು ಪ್ರಕರಣದಲ್ಲಿ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದಾನೆ. ಇನ್ನಿಬ್ಬರು ಆರೋಪಿಗಳಾದ ಜುನೈದ್ ಅಹ್ಮದ್ ಅಲಿಯಾಸ್ ಜೆಡಿ ಮತ್ತು ಸಲ್ಮಾನ್ ಖಾನ್ ವಿದೇಶಕ್ಕೆ ಪರಾರಿಯಾಗಿರುವ ಶಂಕೆ ಇದೆ ಎಂದು ಕೇಂದ್ರೀಯ ತನಿಖಾ ಏಜೆನ್ಸಿಯ ವಕ್ತಾರರು ತಿಳಿಸಿದ್ದಾರೆ.

ಉಳಿದ ಆರೋಪಿಗಳು ಸೈಯದ್ ಸುಹೇಲ್ ಖಾನ್ ಅಲಿಯಾಸ್ ಸುಹೇಲ್, ಮೊಹಮ್ಮದ್ ಉಮರ್ ಅಲಿಯಾಸ್ ಉಮರ್, ಜಾಹಿದ್ ತಬ್ರೇಜ್ ಅಲಿಯಾಸ್ ಜಾಹಿದ್, ಸೈಯದ್ ಮುದಸ್ಸಿರ್ ಪಾಷಾ ಮತ್ತು ಮೊಹಮ್ಮದ್ ಫೈಸಲ್ ರಬ್ಬಾನಿ ಅಲಿಯಾಸ್ ಸಾದತ್ ಬಂಧನದಲ್ಲಿದ್ದಾರೆ. ಈ ಎಲ್ಲ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆ, ಕಾನೂನುಬಾಹಿರ ಚಟುವಟಿಕೆಗಳು (ತಡೆಗಟ್ಟುವಿಕೆ) ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆ ಮತ್ತು ಶಸ್ತ್ರಾಸ್ತ್ರ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದೋಷಾರೋಪ ಹೊರಿಸಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಕಳೆದ ವರ್ಷದ ಜುಲೈ 18ರಂದು ಬೆಂಗಳೂರು ನಗರ ಪೊಲೀಸರು ಇವರ ವಿರುದ್ಧ ಮೊದಲು ಪ್ರಕರಣ ದಾಖಲಿಸಿದ್ದರು. ಏಳು ಆರೋಪಿಗಳಿಂದ ಶಸ್ತ್ರಾಸ್ತ್ರ, ಮದ್ದುಗುಂಡು, ಗ್ರೆನೇಡ್‌ಗಳು ಮತ್ತು ವಾಕಿ ಟಾಕಿಗಳನ್ನು ವಶಪಡಿಸಿಕೊಳ್ಳಲಾಗಿತ್ತು.

### ನಾಸೀರ್ ಕೈವಾಡ?

ಪರಪ್ಪನ ಅಗ್ರಹಾರ ಜೈಲಿನಲ್ಲಿದ್ದ 2008ರ ಬೆಂಗಳೂರು ಸರಣಿ ಬಾಂಬ್ ಸ್ಫೋಟದ ರೂವಾರಿ ಟಿ.ನಾಸೀರ್‌ನ ಕೈವಾಡವು ಈ ಸಂಚಿನಲ್ಲಿರುವ ಬಗ್ಗೆ ಇತರ ಆರೋಪಿಗಳು ವಿಚಾರಣೆ ವೇಳೆ ಬಾಯಿಬಿಟ್ಟಿದ್ದರು. ಅದಾದ ಮೇಲೆ ಬಾಡಿ ವಾರಂಟ್ ಪಡೆದು ಜೈಲಿನಿಂದಲೇ ಸಿಸಿಬಿ ಪೊಲೀಸರು ನಾಸೀರ್‌ನನ್ನು ಬಂಧಿಸಿ ವಿಚಾರಣೆ ನಡೆಸಿದ್ದರು. ನಂತರ ಪ್ರಕರಣವನ್ನು 2023ರ ಅಕ್ಟೋಬರ್‌ನಲ್ಲಿ ಎನ್‌ಐಎಗೆ ವಹಿಸಲಾಗಿತ್ತು.

ಪ್ರಕರಣವನ್ನು ಎನ್‌ಐಎ ಕೈಗೆತ್ತಿಕೊಂಡ ನಂತರ ನಡೆದ ತನಿಖೆಯಲ್ಲಿ, ಹಲವು ಸ್ಫೋಟ ಪ್ರಕರಣಗಳಲ್ಲಿ ಭಾಗಿಯಾಗಿದ್ದ ನಾಸೀರ್, 2017ರಿಂದ ಬೆಂಗಳೂರು ಜೈಲಿನಲ್ಲಿದ್ದ ಇತರ ಆರೋಪಿಗಳ ಸಂಪರ್ಕಕ್ಕೆ ಬಂದಿದ್ದ ಎಂಬುದು ತನಿಖೆಯಲ್ಲಿ ಪತ್ತೆಯಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಪೋಕ್ಸೊ ಪ್ರಕರಣದಲ್ಲಿ ಸಲ್ಮಾನ್ ಬಂಧಿತನಾಗಿ ಜೈಲಿನಲ್ಲಿದ್ದಾಗ, ಇತರ ಆರೋಪಿಗಳು ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ಜೈಲು ಸೇರಿದ್ದರು. ಇವರನ್ನು ನಿಷೇಧಿತ ಭಯೋತ್ಪಾದಕ ಗುಂಪು ಎಲ್‌ಇಟಿಗೆ ನೇಮಕ ಮಾಡುವ ಉದ್ದೇಶದಿಂದ ನಾಸೀರ್ ತನ್ನ ಬ್ಯಾರಕ್‌ಗೆ ಸ್ಥಳಾಂತರಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಎಲ್‌ಇಟಿಯ ಚಟುವಟಿಕೆ ನಡೆಸಲು ಮೊದಲು ಅಹ್ಮದ್ ಮತ್ತು ಸಲ್ಮಾನ್ ಖಾನ್‌ನನ್ನು ನೇಮಕ ಮಾಡಿಕೊಳ್ಳುವಲ್ಲಿ ಯಶಸ್ವಿಯಾದ ನಾಸೀರ್ ನಂತರ ಇತರ ಆರೋಪಿಗಳಿಗೆ ಪ್ರಚೋದನೆ ನೀಡಿ ಸಂಘಟನೆಗೆ ನೇಮಕ ಮಾಡಲು ಅಹ್ಮದ್‌ನೊಂದಿಗೆ ಸಂಚು ರೂಪಿಸಿದ್ದ. ಅಹ್ಮದ್ ಜೈಲಿನಿಂದ ಬಿಡುಗಡೆಯಾದ ನಂತರ, ಇನ್ನೂ ಕೆಲವು ಅಪರಾಧಗಳನ್ನು ಎಸಗಿ ನಂತರ ವಿದೇಶಕ್ಕೆ ಪರಾರಿಯಾದ ಶಂಕೆ ಇದೆ. ಜೈಲಿನ ಒಳಗೆ ಮತ್ತು ಹೊರಗೆ ಎಲ್‌ಇಟಿ ಚಟುವಟಿಕೆಗಳನ್ನು ಉತ್ತೇಜಿಸಲು ವಿದೇಶದಿಂದ ತನ್ನ ಸಹ-ಆರೋಪಿಗಳಿಗೆ ಹಣ ಕಳುಹಿಸಿರುವುದು ತನಿಖೆಯಲ್ಲಿ ಕಂಡುಬಂದಿದೆ ಎಂದು ತಿಳಿಸಿದ್ದಾರೆ.

ಅಲ್ಲದೆ, ಆತ್ಮಾಹುತಿ ದಾಳಿ ನಡೆಸುವ ಸಂಚಿನ ಭಾಗವಾಗಿ ಇತರ ಆರೋಪಿಗಳಿಗೆ ಶಸ್ತ್ರಾಸ್ತ್ರಗಳು, ಮದ್ದುಗುಂಡುಗಳು, ಗ್ರೆನೇಡ್‌ಗಳು ಮತ್ತು ವಾಕಿ ಟಾಕಿಗಳನ್ನು ತಲುಪಿಸಲು ಮತ್ತು ನ್ಯಾಯಾಲಯಕ್ಕೆ ಹೋಗುವ ಮಾರ್ಗದಲ್ಲಿ ನಾಸೀರ್‌ನನ್ನು ಪೊಲೀಸ್ ಕಸ್ಟಡಿಯಿಂದ ತಪ್ಪಿಸಿಕೊಳ್ಳಲು ಸಹಾಯ ಮಾಡಲು ಸಲ್ಮಾನ್ ಖಾನ್‌ನೊಂದಿಗೆ ಅಹ್ಮದ್ ಸಂಚು ರೂಪಿಸಿದ್ದ. ಆರೋಪಿಗಳಿಂದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿದ್ದರಿಂದ ಅವರ ಸಂಚು ವಿಫಲವಾಗಿತ್ತು ಎಂದಿದ್ದಾರೆ.

ಸೌಹಾರ್ದ ಕರ್ನಾಟಕದ ಸಮಾವೇಶದಲ್ಲಿ ಬರಗೂರು ರಾಮಚಂದ್ರಪ್ಪ ಅಸಮಾಧಾನ

# 'ದೇಶದ ದಿಕ್ಕನ್ನು ತಪ್ಪಿಸಲು ಅಸಹಿಷ್ಣುತೆ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸೌಹಾರ್ದತೆಯು ಸಮಾನತೆಗೆ ವಿರೋಧವಲ್ಲ. ಸಮಾನತೆಯತ್ತ ಸಾಗಬೇಕಾದ ಈ ದೇಶದ ದಿಕ್ಕು ತಪ್ಪಿಸುವುದಕ್ಕಾಗಿಯೇ ಅಸಹಿಷ್ಣುತೆ ಉಂಟುಮಾಡಲಾಗಿದೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಸೌಹಾರ್ದ ಕರ್ನಾಟಕ ನಗರದಲ್ಲಿ ಗುರುವಾರ ಹಮ್ಮಿಕೊಂಡ 'ಸೌಹಾರ್ದ ಪರಂಪರೆ ಮತ್ತು ಸಮಕಾಲೀನತೆ' ರಾಜ್ಯ ಸಮಾವೇಶದಲ್ಲಿ ಆಶಯ ನುಡಿಗಳನ್ನಾಡಿದ ಅವರು, 'ದ್ವೇಷವಾದ ಮುನ್ನೆಲೆಗೆ ಬಂದಿರುವಾಗ ಸೌಹಾರ್ದತೆಯನ್ನು ಸ್ಥಾಪಿಸುವ ಮೂಲಕ ಸಮಾನತೆಯ ಹಾದಿಯನ್ನು ಸುಲಭ ಮಾಡಿಕೊಳ್ಳಬೇಕು. ಸೌಹಾರ್ದ ಭಾರತ ಇಲ್ಲಿದೆ ಎಂಬ ಸತ್ಯವನ್ನು ಜನರಿಗೆ ತಿಳಿಸಬೇಕು. ಸೌಹಾರ್ದ ಸಮಾಜ ನಿರ್ಮಾಣ ಮಾಡುವ ಅನಿವಾರ್ಯತೆ ಸೃಷ್ಟಿಯಾಗಿದೆ' ಎಂದು ಹೇಳಿದರು.

'ಸೌಹಾರ್ದತೆ ಮತ್ತು ಸಮಾನತೆ ಪರಸ್ಪರ ವಿರುದ್ಧವಾದವಲ್ಲ. ಸೌಹಾರ್ದತೆ ಸ್ಥಾಪನೆಯಾಗಲು ಮೊದಲು ಸಮಾನತೆ ಬರಬೇಕು. ಸೌಹಾರ್ದ ಪರಂಪರೆ ಸದಾ ಸಮಕಾಲೀನವಾದದ್ದಾಗಿದೆ. ಸೌಹಾರ್ದ ಭಾರತ, ಕರ್ನಾಟಕವನ್ನು ನೋಡಲು ಸೈದ್ಧಾಂತಿಕ ಸೌಹಾರ್ದ ಸಾಧ್ಯವಾಗಬೇಕು. ದೇಶದ ಜನರ ನಿಲುವು ಬೇರೆ ಬೇರೆಯಾಗಿದೆ. ಆದರೆ, ಸೌಹಾರ್ದದ ವಿಷಯ ಬಂದಾಗ ಒಂದಾಗಬೇಕು' ಎಂದು ತಿಳಿಸಿದರು.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್, 'ಇತ್ತೀಚಿನ ದಿನಗಳಲ್ಲಿ ಸಂವಿಧಾನಕ್ಕೆ ಧಕ್ಕೆ ಬಂದಿದೆ. ಈ ಧಕ್ಕೆಯು ಭಯೋತ್ಪಾದನೆ, ಕೋಮುವಾದ, ಮೂಲಭೂತವಾದ, ಭ್ರಷ್ಟಾಚಾರ, ಸಾಂಸ್ಕೃತಿಕ ದಿವಾಳಿತನದಿಂದ ಬಂದಿದೆ. ರಾಮ ಸಸ್ಯಹಾರಿಯೋ, ಮಾಂಸಹಾರಿಯೋ ಎಂದು ಹೇಳಲೂ ಭಯ ಪಡಬೇಕಾಗಿದೆ. ಇಡೀ ಸಮಾಜ ಅಭದ್ರತೆಯಲ್ಲಿದೆ. ಜಗತ್ತಿನ ಎಲ್ಲ ಧರ್ಮಗಳ ಆಶಯವೂ ಕಣ್ಣೀರು ಒರೆಸುವುದು, ದುಃಖ ದುಮ್ಮಾನ ನಿವಾರಣೆ ಮಾಡುವುದಾಗಿದೆ. ನಾವು ಧರ್ಮದ ವಿರೋಧಿ ಆಗಬೇಕಿಲ್ಲ. ಆದರೆ, ಧರ್ಮವನ್ನು ಅಪ್ರಜಾಪ್ರಭುತ್ವಗೊಳಿಸುವ ಪ್ರಕ್ರಿಯೆಗೆ ಸೆಡ್ಡು ಹೊಡೆಯಬೇಕು' ಎಂದು ಹೇಳಿದರು.

**ಮತಾಂಧತೆ ಅಪಾಯಕಾರಿ:** ಸಾಹಿತಿ ಅರವಿಂದ ಮಾಲಗತ್ತಿ, 'ಅಲ್ಪಸಂಖ್ಯಾತರ ಮತಾಂಧತೆ ಅವರಿಗೆ ಅಪಾಯಕಾರಿಯಾದರೆ, ಬಹುಸಂಖ್ಯಾತರ ಮತಾಂಧತೆ ದೇಶಕ್ಕೆ ಗಂಡಾಂತರಕಾರಿಯಾಗಿದೆ. ಧರ್ಮಕ್ಕೆ ಮೊದಲ ಆದ್ಯತೆ ಸಹ್ಯವಲ್ಲ. ದೇಶ ಮೊದಲು ನಂತರ ಧರ್ಮವೆಂಬ ಮನೋಭಾವ ಮೂಡಬೇಕು' ಎಂದು ತಿಳಿಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, 'ದೇಶದಲ್ಲಿ ಶಾಂತಿ, ಸೌಹಾರ್ದತೆ ನೆಲೆಸಲು ಕೋಮು ಸಾಮರಸ್ಯ ಅಗತ್ಯ. ಕೆಲ ವರ್ಷಗಳಿಂದ ಸಮಾಜ ಒಡೆಯುವ ಕೆಲಸಗಳು ನಡೆಯುತ್ತಿವೆ. ಯುವಜನರು ಸ್ವಾತಂತ್ರ್ಯ ಹೋರಾಟವನ್ನು ಮರೆತಿದ್ದು, ಅವರಿಗೆ ದೇಶಾಭಿಮಾನ ಮೂಡಿಸುವ ಕೆಲಸ ಮಾಡಬೇಕು' ಎಂದು ಹೇಳಿದರು.

ಸಮಾವೇಶದಲ್ಲಿ ನ್ಯಾ.ಎಚ್.ಎನ್. ನಾಗಮೋಹನದಾಸ್ ಮತ್ತು ಬರಗೂರು ರಾಮಚಂದ್ರಪ್ಪ ಚರ್ಚಿಸಿದರು. ಎಚ್.ಎಲ್. ಪುಷ್ಪ, ಅರವಿಂದ ಮಾಲಗತ್ತಿ, ಕೆ. ಮರುಳಸಿದ್ದಪ್ಪ, ಸಲೀಂ ಅಹಮದ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

### 'ಮಹಾಪುರುಷರಿಗೆ ಜಾತಿ, ಧರ್ಮದ ಲೇಪ'

'ಚುನಾವಣೆಗಳು ಸಮೀಪಿಸಿದಂತೆ ರಾಜಕೀಯ ಪಕ್ಷಗಳು ಹೊಸ ಹೊಸ ವಿಷಯಗಳನ್ನು ಮುನ್ನೆಲೆಗೆ ತರುತ್ತಿವೆ. ಉತ್ತರ ಭಾರತದಲ್ಲಿ ಶಿವ ಹೆಚ್ಚು ಪ್ರಚಲಿತದಲ್ಲಿದ್ದಾನೆ. ಅಲ್ಲಿ ಸಣ್ಣ ಸಣ್ಣ ಶಿವನ ದೇವಾಲಯಗಳನ್ನು ನೋಡಬಹುದು. ಅಲ್ಲಿ ಈಗ ಬಲವಂತವಾಗಿ ರಾಮನನ್ನು ಹೇರಲಾಗುತ್ತಿದೆ' ಎಂದು ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪ ಹೇಳಿದರು.

'ಕುವೆಂಪು ಅವರು ವಿಶ್ವಮಾನವ ಪರಿಕಲ್ಪನೆ ನೀಡಿದರು. ಆದರೆ, ಅವರನ್ನು ಒಕ್ಕಲಿಗರು ಎಂದು ಬಿಂಬಿಸಲಾಗುತ್ತಿದೆ. ಅದೇ ರೀತಿ, ಬಸವಣ್ಣ, ಅಂಬೇಡ್ಕರ್ ಅವರನ್ನು ಒಂದು ಜಾತಿಗೆ ಸೀಮಿತಗೊಳಿಸಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

> ದೇಶದಲ್ಲಿ ಬಹುತ್ವಕ್ಕೆ ಧಕ್ಕೆ ತರುವ ಕೆಲಸವಾಗುತ್ತಿದೆ. ಸೌಹಾರ್ದ ಪರಂಪರೆ ಬೆಳೆಸುವ ಬಗ್ಗೆ ಯೋಚಿಸಬೇಕು
> **ಕೆ. ಮರುಳಸಿದ್ದಪ್ಪ,** ಸಾಹಿತಿ

> ಒಂದು ದೇಶ ಒಂದು ಸಂಸ್ಕೃತಿ ಎನ್ನುವುದು ಸರ್ವಾಧಿಕಾರಿ ಮನೋಭಾವ. ಬಹುಸಂಸ್ಕೃತಿಗೆ ಧಕ್ಕೆ ಒದಗಿ ಬಂದಿದೆ
> **ಬಡಗಲಪುರ ನಾಗೇಂದ್ರ,** ರೈತ ಮುಖಂಡ

### ಜ.30ರಂದು ಮಾನವ ಸರಪಳಿ

ಗಾಂಧೀಜಿ ಹತ್ಯೆಯಾದ ಜ.30ರಂದು ರಾಜ್ಯದೆಲ್ಲೆಡೆ ನಾಡಿನ ಸೌಹಾರ್ದ ಪರಂಪರೆಯನ್ನು ಮೇಲೆತ್ತಿ ಹಿಡಿಯಲು ಸೌಹಾರ್ದ ಮಾನವ ಸರಪಳಿ ನಿರ್ಮಿಸಬೇಕು. ಇದರಲ್ಲಿ ಲಕ್ಷಾಂತರ ಜನರನ್ನು ಸೇರಿಸಬೇಕು ಎಂಬ ನಿರ್ಣಯವನ್ನು ಸಮಾವೇಶದಲ್ಲಿಕೈಗೊಳ್ಳಲಾಯಿತು.

# ಹೆತ್ತವಳೇ ಕೊಲ್ಲುವುದೇಕೆ?

ಡಾ.ಪ್ರಭಾಚಂದ್ರ

ಬೆಂಗಳೂರಿನ ತಾಯಿಯೊಬ್ಬಳು, ಗೋವಾದಲ್ಲಿ ಮಗುವನ್ನು ಕೊಂದು, ಚಿತ್ರದುರ್ಗದಲ್ಲಿ ಸೆರೆ ಸಿಕ್ಕ ಪ್ರಕರಣ ಎಲ್ಲರ ಎದೆನಡುಗಿಸಿದೆ. ಆದರೆ ಪೊರೆವ ತಾಯಿಯೊಬ್ಬಳು ತಾನೇ ಮಗುವಿನ ಉಸಿರುಗಟ್ಟಿಸುವುದು ಯಾಕೆ?

ಇಂಥ ಹತ್ಯೆಗಳಿಗೆ ಹಲವಾರು ಕಾರಣಗಳಿವೆ. ತೀರ ಸಾಮಾನ್ಯವಾದುದು altruistic ಹತ್ಯೆ ಅಥವಾ ಆತ್ಮಹತ್ಯೆ ಎಂದು ಹೇಳಬಹುದಾಗಿದೆ. ಇಲ್ಲಿ ತಾಯಿಗೆ ತನ್ನ ಮಗು ಬದುಕುಳಿದರೆ ಬಲು ಕಷ್ಟಪಡಬೇಕಾಗುವುದು ಎಂಬ ಆತಂಕದಿಂದ ಮಗುವನ್ನು ಕೊಲ್ಲಲು ಮುಂದಾಗುತ್ತಾರೆ. ಇಂತಹ ಪ್ರಕರಣಗಳಲ್ಲಿ ತಾಯಿಯೂ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ. ತಮ್ಮ ನಂತರ... ಮಗುವಿನ ಗತಿಯೇನು ಎಂಬ ಪ್ರಶ್ನೆ ಬೃಹದಾಕಾರವಾಗಿ ಕಾಡುತ್ತಿರುತ್ತದೆ. ಇದು ಮಗುವಿನ ಹಿತಾಸಕ್ತಿಯ ದೃಷ್ಟಿಯಿಂದಲೇ ಕೈಕೊಂಡಿರುವ ಕೃತ್ಯ ಎಂದು ಅವರು ಭಾವಿಸಿರುತ್ತಾರೆ; ಅಥವಾ ನಂಬಿರುತ್ತಾರೆ. ಮಹಿಳೆಯೊಬ್ಬಳು ಆರ್ಥಿಕವಾಗಿ ಕಡುಕಷ್ಟದಲ್ಲಿರುವಾಗ, ಸಾಮಾಜಿಕವಾಗಿ ಒಂಟಿಯಾಗಿರುವ ಭಾವ ಬಂದಾಗ, ಕೌಟುಂಬಿಕವಾಗಿ ದೂರವಾದ ಸಂದರ್ಭಗಳಲ್ಲಿ ಅನಿವಾರ್ಯವಾಗಿ ಇಂತಹ ಹತ್ಯೆ ಮತ್ತು ಆತ್ಮಹತ್ಯೆಯ ನಿರ್ಧಾರಗಳನ್ನು ತೆಗೆದುಕೊಳ್ಳುತ್ತಾಳೆ.

ಇನ್ನೊಂದು ಕಾರಣವೆಂದರೆ ತೀವ್ರತರವಾದ ಮಾನಸಿಕ ಅಸ್ವಸ್ಥರಾಗಿದ್ದಾಗ, ಸೈಕೋಸಿಸ್‌ನಿಂದ ಬಳಲುತ್ತಿದ್ದರೆ, ರಕ್ಕಸವೊಂದು ತನ್ನ ಮಗುವನ್ನು ದೂರಮಾಡುವುದು ಎಂಬಂಥ ಆತಂಕದಲ್ಲಿರುತ್ತಾರೆ. ಮಗುವು ಗಂಭೀರವಾದ ಕಾಯಿಲೆಯಿಂದ ಬಳಲುತ್ತಿದ್ದು, ಅದು ಸಾವನ್ನಪ್ಪಬಹುದು, ಅಥವಾ ಅದಕ್ಕೆ ಅಪಾಯವಾಗಬಹುದು ಎಂದೂ ನಂಬಿರುತ್ತಾರೆ. ಇಂಥ ಮಹಿಳೆಯರು ಮಾನಸಿಕ ಆರೋಗ್ಯ ಸರಿ ಇರುವುದಿಲ್ಲ. ತಮ್ಮ ಕ್ರಿಯೆಗಳಿಂದ ಮಗು ಸಾವನ್ನು ಅಪ್ಪಬಹುದು ಎಂಬುದು ತಿಳಿದಿದ್ದರೂ, ಕೆಲವೊಮ್ಮೆ ಅವರ ಭ್ರಾಂತಿಯಿಂದಾಗಿ ಮಗುವಿಗೆ ನ್ಯಾಯ ಸಲ್ಲಿಸಿದ್ದೇವೆ ಎಂದೇ ನಂಬುತ್ತಿರುತ್ತಾರೆ.

ಮೂರನೆಯದು ಆಕಸ್ಮಿಕವಾಗಿರಬಹುದು. ಮಗುವನ್ನು ಶಿಕ್ಷಿಸುವಾಗ ಮಾರಣಾಂತಿಕ ಏಟು ಬಿದ್ದಿರಬಹುದು. ಸಾವನ್ನಪ್ಪಲಿ ಎಂಬ ಉದ್ದೇಶ ಇಲ್ಲದಿದ್ದಾಗಲೂ, ಮಗುವಿಗೆ ಆದ ತೀವ್ರಗಾಯದಿಂದ, ರಕ್ತಸ್ರಾವದಿಂದಲೂ ಮರಣವಪ್ಪಿರಬಹುದು.

ಇವೆಲ್ಲಕ್ಕೂ ಮೀರಿದ ದ್ವೇಷಕಾರಣವೂ ಇರುತ್ತದೆ. ಬಾಂಧವ್ಯದಲ್ಲಿ ಸಮಸ್ಯೆಗಳಿದ್ದರೆ, ಸಂಗಾತಿ ಅಥವಾ ಪತಿಯೊಂದಿಗೆ ಕಲಹ, ಕ್ಲೇಷಗಳಿದ್ದರೆ ಮಗುವನ್ನು ಹತ್ಯೆ ಮಾಡಲಾಗುತ್ತದೆ. ವಿಚ್ಛೇದನ ಪ್ರಕರಣಗಳಲ್ಲಿ ಕಸ್ಟಡಿ ಮತ್ತು ಭೇಟಿಯಾಗುವ ಹಕ್ಕುಗಳ ವಿಷಯ ಬಂದಲ್ಲಿ, ಸಂಗಾತಿಯ ನಡವಳಿಕೆಯನ್ನು ದ್ವೇಷಿಸುತ್ತಿದ್ದಲ್ಲಿ ಮಹಿಳೆಯರು ಈ ಕೃತ್ಯಕ್ಕೆ ಇಳಿಯುತ್ತಾರೆ.

**ಮಾನಸಿಕ ಅನಾರೋಗ್ಯದ ಪಾತ್ರ**

ಶೇ 30ರಷ್ಟು ಮಹಿಳೆಯರು ತಮ್ಮ ಮಕ್ಕಳನ್ನು ಕೊಂದ ನಂತರ ತಾವೂ ಸಾವಿಗೆ ಶರಣಾಗುತ್ತಾರೆ. ಕೆಲವೊಮ್ಮೆ ಸಾವನ್ನಪ್ಪಲು ತೀರ ಭಯಾನಕ ವಿಧಾನಗಳನ್ನೂ ಅನುಸರಿಸುತ್ತಾರೆ. ಗಂಭೀರ ಸ್ವರೂಪದ ಸೈಕೊಸಿಸ್ ಅಥವಾ ತೀವ್ರತರನಾದ ಮಾನಸಿಕ ಒತ್ತಡ, ಡಿಪ್ರೆಶನ್‌ಗಳು, ಶಿಶು ಹತ್ಯೆಯಂಥ ಕೃತ್ಯಕ್ಕೆಗೊಳ್ಳುವಂತಾಗಿರುತ್ತದೆ. ಪ್ರಸವಾನಂತರದ ಸೈಕೊಸಿಸ್ ಸಹ ಶಿಶುಹತ್ಯೆಗೆ ಮೂಲ ಕಾರಣವಾಗಿರುತ್ತದೆ. ಇಂಥ ಪ್ರಕರಣಗಳಲ್ಲಿ ತಾಯಂದಿರು ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಸವ ಪೂರ್ವದಲ್ಲಿಯೂ, ಬಳಲಿರುತ್ತಾರೆ. ಮಕ್ಕಳನ್ನು ಹತ್ಯೆ ಮಾಡುವ ತಂದೆಯಲ್ಲಿ ಸಾಮಾನ್ಯವಾಗಿ ಅಪರಾಧಿ ಹಿನ್ನೆಲೆ ಅಥವಾ ಹಿಂಸಾಪ್ರವೃತ್ತಿ ಕಂಡುಬಂದಿರುತ್ತದೆ. ಆದರೆ ತಾಯಂದಿರಲ್ಲಿ ಇದ್ಯಾವುದೂ ಕಂಡು ಬಾರದು.

> ಪೊರೆವ ತಾಯಿಯೊಬ್ಬಳು ತನ್ನ ಮಗುವನ್ನು ಉಸಿರುಗಟ್ಟಿಸಿ ಕೊಲ್ಲುವುದು ಯಾಕೆ? ಹೊತ್ತು, ಹೆತ್ತು ಬೆಳೆಸಬೇಕಾದವಳೇ ಕೊಲ್ಲುವಂತಾಗಲು ಮೂಲ ಕಾರಣವೇನು? ಈ ಲೇಖನದಲ್ಲಿ ಬೆಳಕು ಚೆಲ್ಲಲಾಗಿದೆ

**ಈ ಪ್ರವೃತ್ತಿ ಕಂಡು ಬರುವುದಾದರೂ ಹೇಗೆ?**

ಮಗು ಹುಟ್ಟಿದ 24 ಗಂಟೆಗಳಲ್ಲಿಯೇ ಮಗುವನ್ನು ಕೊಂದರೆ ಅದಕ್ಕೆ ನವಜಾತ ಶಿಶುಹತ್ಯೆ ಎನ್ನಲಾಗುತ್ತದೆ. ವರ್ಷದ ಒಳಗಿನ ಮಕ್ಕಳನ್ನು ಕೊಂದರೆ ಶಿಶುಹತ್ಯೆ ಎನ್ನಲಾಗುತ್ತದೆ. 1–18 ವರ್ಷಗಳ ಒಳಗಿನ ಮಕ್ಕಳ ಹತ್ಯೆಯನ್ನು ಮಕ್ಕಳ ಹತ್ಯೆಯೆಂದು ಕರೆಯಲಾಗುತ್ತದೆ. ಸಾಮಾನ್ಯವಾಗಿ 6 ವರ್ಷಗಳಿಗಿಂತ ಒಳಗಿನ ಚಿಣ್ಣರನ್ನೇ ತಾಯಂದಿರು ಹತ್ಯೆ ಮಾಡುತ್ತಾರೆ. ಸಾಮಾನ್ಯವಾಗಿ ಉಸಿರುಕಟ್ಟಿಸಿ ಸಾಯಿಸುವುದು ತಾಯಂದಿರ ವಿಧಾನವಾದರೆ, ತಂದೆ ಆಯುಧಗಳನ್ನು ಬಳಸುತ್ತಾರೆ. ಬಹುತೇಕ ತಾಯಂದಿರು ಸಾಯಿಸುವಾಗ ಮಗುವಿಗೆ ನಿದ್ದೆ ಬರಿಸಿ, ಮಗು ಹೆಚ್ಚು ನರಳದಿರಲಿ ಎಂಬ ಎಚ್ಚರಿಕೆಯನ್ನೂ ತೆಗೆದುಕೊಳ್ಳುತ್ತಾರೆ. ಇಂಥ ಮಾನಸಿಕ ಕಾಯಿಲೆಯಿಂದ ಬಳಲುವ ಹೆಣ್ಣುಮಕ್ಕಳು ಸಾಧಾರಣವಾಗಿ ತಾವು ಸಮಾಧಾನ ಪಡೆಯಲು ಯತ್ನಿಸುವುದಿಲ್ಲ. ತಮ್ಮ ಕೃತ್ಯ ಮರೆಮಾಚುವುದಿಲ್ಲ. ಯಾಕೆ ಮಾಡಿದರು ಎಂಬುದನ್ನು ಹೇಳದಿದ್ದರೂ ಅಪಾರವಾದ ಅಪರಾಧಿ ಭಾವದಲ್ಲಿ ನರಳುತ್ತಾರೆ.

**ಇಂಥ ಅಪಾಯಕಾರಿ ಸನ್ನಿವೇಶದಲ್ಲಿರುವ ಮಕ್ಕಳನ್ನು ಗುರುತಿಸಬಹುದೆ?**

ಸಾಮಾನ್ಯವಾಗಿ ಇಂಥ ಮಹಿಳೆಯರಲ್ಲಿ ಬಹುತೇಕರು ಅಸಹಾಯಕತನವನ್ನು, ಯಾವುದೇ ನಿರಾಶಾಭಾವ ದಲ್ಲಿ ಮುಳುಗಿರುವುದು, ಸಾಕಷ್ಟು ಬೆಂಬಲ ಇರದೇ ಇರುವ ಸಂದರ್ಭಗಳ ಬಲಿಪಶುಗಳಾಗಿರುತ್ತಾರೆ. ಬಹುತೇಕ ಸಂದರ್ಭಗಳಲ್ಲಿ ಬೇರ್ಪಡುವಿಕೆ, ವಿಚ್ಛೇದನ ಅಥವಾ ಹಿಂಸಾತ್ಮಕ ಬಾಂಧವ್ಯದಲ್ಲಿರುವುದನ್ನು ತಪ್ಪಿಸಿಕೊಳ್ಳಲು ಈ ಕೃತ್ಯವೆಸಗುತ್ತಾರೆ. ಸಾಮಾಜಿಕ ಬೆಂಬಲವಿಲ್ಲದೆ ಒಬ್ಬಂಟಿಯಾಗದಾಗ ತೀವ್ರತರನಾದ ಒತ್ತಡವನ್ನು ಅನುಭವಿಸುತ್ತಿರುತ್ತಾಳೆ. ಸಾಮಾನ್ಯವಾಗಿ ಮಕ್ಕಳ ಹತ್ಯೆಯೆಸಗುವ ಮಹಿಳೆಯರು ಕೆಲಸದಲ್ಲಿರುವುದಿಲ್ಲ. ಇರಲೊಂದು ಸೂರು ಇರುವುದಿಲ್ಲ. ಇವುಗಳಿಗೆ ಪರ್ಯಾಯವಾಗಿ ಚಟಗಳಿಗೆ ಮೊರೆ ಹೋಗಿರುವ ಸಾಧ್ಯತೆಯೂ ಇರುತ್ತದೆ.

**ನಾವಿದನ್ನು ತಡೆಯಬಹುದೆ?**

ಕೌಟುಂಬಿಕ ದೌರ್ಜನ್ಯ ಇರುವ ಮನೆಯ ಮಕ್ಕಳ ಮೇಲೆ ನಿಗಾ ಇಟ್ಟಿರಬೇಕು. ಇದೇ ಕಾರಣದಿಂದ ಬೇರ್ಪಡುವಿಕೆ ಅಥವಾ ವಿಚ್ಛೇದನಗಳಾಗುತ್ತಿದ್ದಲ್ಲಿ ಅಂಥ ಕುಟುಂಬದ ಮಕ್ಕಳ ನಡವಳಿಕೆಯನ್ನು ಗಮನಿಸುತ್ತಿರಬೇಕು. ಸಾಮಾನ್ಯವಾಗಿ ಇದನ್ನು ಶಾಲಾ ಶಿಕ್ಷಕಿಯರ ಗಮನಕ್ಕೆ ಬಂದೇ ಬರುತ್ತದೆ. ಇಂಥ ಮಕ್ಕಳು ಮಕ್ಕಳ ಸಂರಕ್ಷಣೆಯ ಸೇವಾ ಸಂಸ್ಥೆಯ ಗಮನದಲ್ಲಿಯೂ ಇರಬೇಕು. ಪಾಲಕರಲ್ಲಿ ಒಬ್ಬರಿಂದ ಹತ್ಯೆಯ ಆತಂಕವನ್ನು ಎದುರಿಸುತ್ತಿರುತ್ತಾರೆ. ಬಹುತೇಕ ತಾಯಂದಿರು, ಹತ್ಯೆ ಮಾಡುವ ಮುನ್ನ ಮಕ್ಕಳ ಕಾಳಜಿ ಮಾಡುವ ಸಾಮಾನ್ಯ ಅಮ್ಮಂದಿರೇ ಆಗಿರುತ್ತಾರೆ. ಆದರೆ ತೀವ್ರತರನಾದ ಒತ್ತಡ ಅವರನ್ನು ಉದ್ವಿಗ್ನರಾಗಿಸುತ್ತದೆ. ಆ ಉದ್ವೇಗ, ಉನ್ಮಾದವಾಗಿ ಯಾವ ಕ್ಷಣದಲ್ಲಿಯಾದರೂ ಸ್ಫೋಟಗೊಳ್ಳಬಹುದು. ಒಂದು ವೇಳೆ ಮಗು ನಿರಂತರವಾಗಿ ಶಾಲೆಗೆ ಬರುವುದನ್ನು ತಪ್ಪಿಸುತ್ತಿದ್ದಲ್ಲಿ, ನಿರ್ಲಕ್ಷಿತ ಮಗುವೆನಿಸಿದ್ದಲ್ಲಿ, ತೂಕದಲ್ಲಿ ವ್ಯತ್ಯಾಸವಾದರೆ ಅಂಥ ಮಗುವನ್ನು ಶಿಕ್ಷಕರು ಪ್ರಶ್ನಿಸಿ, ಮಕ್ಕಳ ಸಂರಕ್ಷಣಾ ಸೇವಾ ಸಂಸ್ಥೆಯ ಗಮನಕ್ಕೆ ತರಬಹುದಾಗಿದೆ.

ಮಗುವಿನ ಸುಪರ್ದಿಗೆ ಸಂಬಂಧಿಸಿದಂತೆ ಜಗಳಗಳಾಗುತ್ತಿರುವ ಕುಟುಂಬಗಳನ್ನು ಸಾಮಾಜಿಕ ಚೌಕಟ್ಟಿನಲ್ಲಿ ಅಲಕ್ಷಿಸಬಾರದು. ಇಬ್ಬರೂ ಪಾಲಕರ ಮಾನಸಿಕ ಆರೋಗ್ಯದ ಕಡೆಗೂ ಗಮನ ನೀಡಬೇಕು.

ಪ್ರಸವ ನಂತರ ಮಹಿಳೆಯ ಮಾನಸಿಕ ಆರೋಗ್ಯದೆಡೆಗೆ ಗಮನ ನೀಡಬೇಕು. ಮೊದಲ ವರ್ಷವನ್ನು ಕಾಳಜಿಯಿಂದ ನೋಡಿಕೊಳ್ಳಬೇಕು. ಮಾನಸಿಕ ಅಸ್ವಸ್ಥತೆಯ ಲಕ್ಷಣಗಳು ಕಂಡು ಬಂದಲ್ಲಿ ಆತ್ಮಹತ್ಯೆ ಮತ್ತು ಶಿಶುಹತ್ಯೆ ಪ್ರವೃತ್ತಿಯ ಕುರಿತು ಕುಟುಂಬಗಳಲ್ಲಿ ಅರಿವು ಮೂಡಿಸಬೇಕು.

ಮಕ್ಕಳ ಸುರಕ್ಷೆಗೆ ಕುಟುಂಬ, ಸಾಮಾಜ ಹಾಗೂ ಆರೋಗ್ಯ ಸಂಸ್ಥೆಗಳು ಹೆಚ್ಚಿನ ಆದ್ಯತೆ ನೀಡಿದಲ್ಲಿ, ಕಾನೂನು ವ್ಯವಸ್ಥೆಗಳೂ ಜಾಗರೂಕವಾಗಿದ್ದಲ್ಲಿ, ಇಂಥ ಹತ್ಯೆಗಳನ್ನು, ಆತ್ಮಹತ್ಯೆಗಳನ್ನೂ ತಡೆಯಬಹುದಾಗಿದೆ.

ಲೇಖಕರು: ನಿಮ್ಹಾನ್ಸ್‌ನಲ್ಲಿ ಮಾನವ ವರ್ತನಾ ವಿಜ್ಞಾನ ವಿಭಾಗದ ಮುಖ್ಯಸ್ಥರಾಗಿದ್ದಾರೆ.

ಪ್ರಾಜಕ್ತಾ ಬೇಡೇಕರ್ ಎಳ್ಳು ಬಳಸಿ ತಯಾರಿಸಿದ ಚಿನ್ನಾಭರಣ

ಮಕರ ಸಂಕ್ರಮಣ ಸಂಭ್ರಮ ಹೊತ್ತು ತಂದಿದೆ. ಬೆಳಗಾವಿಯಲ್ಲಿ ಮಹಿಳಾ ಉದ್ಯಮಿಯೊಬ್ಬರು ಕುಸುರೆಳ್ಳಿನ ವೈವಿಧ್ಯಮಯ ಆಭರಣ ತಯಾರಿಸಿ ಗಮನಸೆಳೆಯುತ್ತಿದ್ದಾರೆ. ಅವರ ಕೈಚಳಕದಲ್ಲಿ ಅರಳಿದ ಆಭರಣಗಳು ದೇಶದ ಗಡಿಯಾಚೆಗೂ ಗ್ರಾಹಕರನ್ನು ತಲುಪಿವೆ.

ಪ್ರಾಜಕ್ತಾ ಬೇಡೇಕರ್

# ಸಂಕ್ರಮಣಕ್ಕೆ ತಿಲಾಭರಣ..

ಇಮಾಮ್‌ಹುಸೇನ್ ಗೂಡುನವರ

ಕುಸುರೆಳ್ಳಿನ ಆಭರಣದಿಂದ ಸಂಕ್ರಾಂತಿ ಅಲಂಕಾರದಲ್ಲಿ ಮಿಂಚುತ್ತಿರುವ ಯುವತಿ

**ಮಕರ** ಸಂಕ್ರಾಂತಿ ಮತ್ತೆ ಸಂಭ್ರಮ ಹೊತ್ತು ತಂದಿದೆ. ಈ ಹಬ್ಬದಲ್ಲಿ ನಾವೆಲ್ಲರೂ ‘ಎಳ್ಳು’ ಸವಿದು ಸಂಭ್ರಮಿಸುತ್ತೇವೆ. ಆಸಕ್ತಿಕರ ಸಂಗತಿಯೆಂದರೆ, ಬೆಳಗಾವಿಯಲ್ಲಿ ಉದ್ಯಮಿ ಪ್ರಾಜಕ್ತಾ ಬೇಡೇಕರ್ ಅವರು ಅದೇ ಎಳ್ಳಿನಿಂದ ಬಗೆಬಗೆಯ ವಿನ್ಯಾಸಗಳ ವೈವಿಧ್ಯಮಯ ಆಭರಣ ತಯಾರಿಸುತ್ತಾರೆ. ಅವು ದೇಶದ ಗಡಿಯನ್ನೂ ದಾಟಿವೆ.

ಪ್ರತಿಬಾರಿ ಸಂಕ್ರಮಣದ ಸಂದರ್ಭದಲ್ಲಿ ಪ್ರಾಜಕ್ತಾ ಅವರು ಸಾಂಪ್ರದಾಯಿಕ ಶೈಲಿಯಲ್ಲಿ ನೆಕ್‌ಲೇಸ್, ಸರ, ಬ್ರೆಸ್‌ಲೇಟ್, ಬಳೆ, ಉಂಗುರ, ಕಿವಿಯೋಲೆ, ಮಂಗಳಸೂತ್ರ, ಸೊಂಟದ ಪಟ್ಟಿ, ಕಿರೀಟ ಮುಂತಾದವುಗಳನ್ನು ಕಿರಿಯರಿಂದ ಹಿರಿಯರವರೆಗೆ ಎಲ್ಲರಿಗೂ ಸಿಹಿ ಖಾದ್ಯದಲ್ಲೇ ಸಿದ್ಧಪಡಿಸಿ ಕೊಡುತ್ತಾರೆ.

‘ಆಭರಣ ತಯಾರಿಕೆಗೆ ನಾನು ಸಿಹಿಖಾದ್ಯದೊಂದಿಗೆ ಅಲಂಕಾರಿಕ ವಸ್ತುಗಳನ್ನು ಬಳಸುತ್ತೇನೆ. ಗ್ರಾಹಕರು ಇಚ್ಛಿಸಿದರೆ, ಚಿನ್ನ ಮತ್ತು ಎಳ್ಳು ಬಳಸಿ ಆಕರ್ಷಕವಾದ ಆಭರಣ ಸಿದ್ಧಪಡಿಸುತ್ತೇನೆ. ಇದಕ್ಕೆ ರಾಸಾಯನಿಕ ಅಂಟು ಬಳಸದ ಕಾರಣ ಜನ ನಿರಾತಂಕವಾಗಿ ಧರಿಸಬಹುದು. ಆರೋಗ್ಯದ ಮೇಲೂ ದುಷ್ಪರಿಣಾಮ ಬೀರಲ್ಲ’ ಎನ್ನುತ್ತಾರೆ ಪ್ರಾಜಕ್ತಾ.

‘ಮಗಳಿಗಾಗಿ 19 ವರ್ಷಗಳ ಹಿಂದೆ ಮೊದಲ ಬಾರಿ ಸಿಹಿಖಾದ್ಯ ಬಳಸಿ ತಯಾರಿಸಿದ್ದ ಆಭರಣವನ್ನು ಹಲವರು ಇಷ್ಟಪಟ್ಟಿದ್ದರು. ತಮಗೂ ಇಂಥದ್ದು ತಯಾರಿಸಿಕೊಡಲು ಕೋರಿದ್ದರು. ದುಬೈ, ಸಿಂಗಪುರ, ಆಸ್ಟ್ರೇಲಿಯಾದ ಕೆಲವರು ಭಾರತಕ್ಕೆ ಬಂದ ಸಂದರ್ಭದಲ್ಲಿ ನನ್ನ ಬಳಿ ಆಭರಣಗಳನ್ನು ಖರೀದಿಸುತ್ತಾರೆ. ಈ ಬಾರಿ ಶ್ರೀಲಂಕಾದ ಪ್ರಜೆಯೊಬ್ಬರು ಖರೀದಿಸಿದ್ದಾರೆ’ ಎಂದು ಅವರು ಹೇಳಿದರು.

‘ಈ ಆಭರಣ ಸಂಕ್ರಮಣದಲ್ಲಷ್ಟೇ ಬಳಸಲಾಗುತ್ತದೆ. ಸರಿಯಾದ ರೀತಿ ಬಳಸಿದರೆ, ನಾಲ್ಕೈದು ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಆಭರಣಗಳ ದರ ₹ 250 ರಿಂದ ₹2 ಸಾವಿರದವರೆಗೆ ಇದೆ. ದೀಪಾವಳಿಯಿಂದ ಸಂಕ್ರಮಣದವರೆಗೆ ಈ ಕೆಲಸ ಮಾಡುತ್ತೇನೆ’ ಎಂದರು.

# ಕುಸುರೆಳ್ಳು ತಯಾರಿ

ಹುಬ್ಬಳ್ಳಿಯ ದುರ್ಗದ ಬಯಲು ಮಾರುಕಟ್ಟೆಯಲ್ಲಿ ಕುಸುರೆಳ್ಳು ಮಾರಾಟದ ಭರಾಟೆ

ಚಿತ್ರ-ಗುರು ಹಬೀಬ್

ಪೂರ್ಣಿಮಾ ಗೊಂದೆನಾಯ್ಕರ

**ಮಕರ** ಸಂಕ್ರಾಂತಿಯು ಸೂರ್ಯನನ್ನು ಆರಾಧಿಸುವ ಹಬ್ಬ. ಶಿಶಿರ ಋತು (ಚಳಿಗಾಲ) ಅಂತ್ಯವಾಗಿ ವಸಂತ ಋತುವಿನ ಆಗಮನದ ಸಂಕೇತ. ವಿವಿಧ ಬಗೆಯ ಖಾದ್ಯಗಳ ಸೇವನೆ ಈ ಹಬ್ಬದ ಆಚರಣೆಯ ವಿಶೇಷ.

ಸಂಕ್ರಾಂತಿ ಎಂದಾಕ್ಷಣ ನಾಲಿಗೆಗೆ ಸಾಂಪ್ರದಾಯಿಕ ಖಾದ್ಯಗಳ ರುಚಿಯೇ ನೆನಪಾಗಿ ಬಿಡುತ್ತದೆ. ಅದರಲ್ಲಿ ವಿಶೇಷವಾಗಿ ಕುಸುರೆಳ್ಳು. ಈ ಕುಸುರೆಳ್ಳು ನಮ್ಮ ಸಾಂಪ್ರದಾಯದ ಆಹಾರ ಪದ್ಧತಿಯ ಪ್ರತೀಕವೇ. ಸಂಕ್ರಾಂತಿಗೆ ಕುಸುರೆಳ್ಳು ಮಾಡಿ ಅಕ್ಕಪಕ್ಕದ ಮನೆಯವರಿಗೆ, ಸ್ನೇಹಿತರಿಗೆ, ಸಂಬಂಧಿಕರಿಗೆ ಹಂಚುವ ಖುಷಿಯೊಳಗೆ ಪರಸ್ಪರೆಡೆಗೆ ವೃದ್ಧಿಯಾಗುವ ಪ್ರೀತಿ ಬದುಕಿಗೆ ಹೊಸ ಉಲ್ಲಾಸ ಕೊಡುವುದು. ಈ ಪ್ರೀತಿ ಹಬ್ಬಿಸುವ ಕುಸುರೆಳ್ಳನ್ನು ಮಾಡುವ ವಿಧಾನವನ್ನು ಅರಿಯೋಣ ಬನ್ನಿ

**ಬೇಕಾಗುವ ಸಾಮಗ್ರಿಗಳು:** ಒಂದು ಕಪ್ ಸಕ್ಕರೆ, ಒಂದು ಕಪ್ ಹಾಲು, ಬಿಳಿ ಎಳ್ಳು ಮತ್ತು ಅಡುಗೆಗೆ ಬಳಸುವ ಕಲರ್ ಪೌಡರ್.

**ಮಾಡುವ ವಿಧಾನ:** ಒಲೆ ಮೇಲೆ ಒಂದು ಬಾಣಲೆಗೆ ಸಕ್ಕರೆ, ಸ್ವಲ್ಪ ನೀರು ಮತ್ತು ಹಾಲು ಹಾಕಿ ಒಂದೆಳೆ ಬರುವ ಹಾಗೆ ಪಾಕ ಮಾಡಿಕೊಳ್ಳಬೇಕು. ನಂತರ ಒಂದು ಜಾಲರಿಗೆ (ಚಹಾ ಸೋಸುವ ಸಾಣಿಗೆ) ಒಂದು ತೆಳುವಾದ ಕಾಟನ ಬಟ್ಟೆ ಹಾಕಿ ಒಂದು ಬೌಲ್‌ನಲ್ಲಿ ಸೊಸಿಕೊಳ್ಳಬೇಕು. ಹಿತ್ತಾಳೆ ಪಾತ್ರೆಯನ್ನಾದರೂ ಬಳಸಬಹುದು ಅಥವಾ ನಾನ್‌ಸ್ಟಿಕ್ ಬಾಣಲೆಯನ್ನಾದರೂ ಬಳಸಬಹುದು. ಸಣ್ಣ ಉರಿಯಲ್ಲಿ ಕಾಯ್ದ ಬಾಣಲೆಗೆ ಒಂದು ಚಮಚದಷ್ಟು ಬಿಳಿ ಎಳ್ಳನ್ನು ಹಾಕಿ ಬಿಸಿ ಮಾಡಬೇಕು, ನಂತರ ಸ್ವಲ್ಪ ಸ್ವಲ್ಪ ಸಕ್ಕರೆ ಪಾಕ ಹಾಕಿ ಹುರಿದುಕೊಳ್ಳಬೇಕು. ಮೂರರಿಂದ ನಾಲ್ಕು ಬಾರಿ ಎಳ್ಳು ಮತ್ತು ಸಕ್ಕರೆ ಪಾಕ ಹಾಕಿ ಮಿಶ್ರಣ ಮಾಡಬೇಕು. ನಮಗೆ ಬೇಕಾದ ಗಾತ್ರದಲ್ಲಿ ಕುಸುರೆಳ್ಳು ಆಕಾರಕ್ಕೆ ಬರುವವರೆಗೂ ಸಕ್ಕರೆ ಪಾಕ ಮಿಶ್ರಣ ಮಾಡುತ್ತಿರಬೇಕು.

ಸಿದ್ಧವಾಗಿರುವ ಕುಸುರೆಳ್ಳಿಗೆ ಅಡುಗೆಗೆ ಬಳಸುವ ಬಣ್ಣವನ್ನು ಒಂದು ಸಕ್ಕರೆ ಪಾಕಕ್ಕೆ ಮಿಶ್ರಣ ಮಾಡಿದರೆ ಬಣ್ಣದ ಕುಸುರೆಳ್ಳು ನಿಮ್ಮ ಬಟ್ಟಲಲ್ಲಿ ಕಂಗೊಳಿಸುವುದು.

# ಭೂಮಿ ತಾಯಿ ಸೀಮಂತವೂ

ಭೂಮಿತಾಯಿಗೆ ಸೀಮಂತ ಮಾಡುತ್ತಲೇ ಹಂಚಿಕೊಂಡು ಉಣ್ಣುವ ಪಾಠ ಕಲಿಸುವುದೇ ಎಳ್ಳಮಾವಾಸ್ಯೆಯ ವಿಶೇಷವಾಗಿದೆ. ಈ ವಾರಾಂತ್ಯದಲ್ಲಿ ಎಲ್ಲೆಡೆ ಬುತ್ತಿಯುಣ್ಣುವ ಸಂಭ್ರಮ ಕಾಣುತ್ತದೆ.

ಮಲ್ಲಪ್ಪ ಹೊಸಮನಿ ಅವರ ಹೊಲದಲ್ಲಿ ಚರಗಾ ಚೆಲ್ಲಿದರು

ಶಶಿಕಾಂತ ಎಸ್. ಶೆಂಬೆಳ್ಳಿ

ಎಳ್ಳು ಅಮಾವಾಸ್ಯೆಯನ್ನು ಭೂಮಿ ತಾಯಿಗೆ ಸೀಮಂತ ಮಾಡುವ ದಿನದ ರೀತಿಯಲ್ಲಿ ಆಚರಿಸುವುದು ವಿಶಿಷ್ಟ. ಭೂಮಿ, ನೀರು ಹಾಗೂ ನೀರೇಯನ್ನು ಸಮಾನವಾಗಿ ಪೂಜಿಸುವ, ಮೂರನ್ನೂ ಸಮೀಕರಿಸಿ ಆರಾಧಿಸುವ ವಿಶಿಷ್ಟ ಆಚರಣೆಯಿದು.

ಸೀಮಂತದಲ್ಲಿ ಸಮೃದ್ಧಿಯ ಸಂಕೇತವಾಗಿರುವ ಹಣ್ಣು ಹಂಪಲಗಳನ್ನು, ಆಹಾರಗಳನ್ನು ನೀಡುವಂತೆ ಎಳ್ಳಮಾವಾಸ್ಯೆಯ ದಿನ ಭೂತಾಯಿಗೆ ಹೊಲದಲ್ಲಿ ಪೂಜಿಸಲಾಗುತ್ತದೆ.

ಬೇಸಿಗೆಕಾಲದ ಪೂರ್ವಾರ್ಧದಲ್ಲಿ ಈ ಅಮಾವಾಸ್ಯೆ ಬರುವುದು. ಸಂಕ್ರಮಣಕ್ಕಿಂತ ಮೊದಲು. ಸುಗ್ಗಿ ಕಾಲದಲ್ಲಿ. ಆಗ ಎಲ್ಲ ಕಡೆ ಭೂಮಿ ಬೆಳೆಗಳಿಂದ ನಳನಳಿಸುತ್ತಿರುತ್ತದೆ. ಚಳಿ ತೀವ್ರವಾಗಿರುತ್ತದೆ. ಮನುಷ್ಯನ ಜೀರ್ಣಾಂಗಗಳು ಸಂಕುಚಿತಗೊಳ್ಳುತ್ತವೆ. ಜೀರ್ಣಕ್ರಿಯೆ ಸಹ ಸರಾಗವಾಗಿರುವುದಿಲ್ಲ. ದೇಹ ಬೆಚ್ಚಗಿಡುವ ಆಹಾರ ಪದಾರ್ಥಗಳ ಸೇವನೆಯಿಂದ ಅದನ್ನು ಸರಿದೂಗಿಸಲಾಗುತ್ತದೆ

ಅವರೆಬೀಜ, ಕಡಲೆಬೀಜ, ವಟಾಣಿ, ತೊಗರಿ ಬೀಜ, ನೆಂಕಿ ಕಾಳು ಸೇವಿಸಲಾಗುತ್ತದೆ. ಅಂಬಲಿ, ಜೋಳದ ಬಾನಾ, ಸಜ್ಜಿ ರೊಟ್ಟಿ, ಬಿಳಿಜೋಳದ ರೊಟ್ಟಿ, ಶೇಂಗಾ ಹೋಳಿಗೆ, ಅಕ್ಕಿ ಹುಗ್ಗಿ, ಕನೋಲಿ, ಕರಜಿಕಾಯಿ ಮಾಡಲಾಗುತ್ತದೆ.

ವಿಶೇಷವಾಗಿ ಅವರೆಬೀಜ, ಕಡಲೆ ಬೀಜ, ವಟಾಣಿ, ತೊಗರಿ ಬೀಜ, ನೆಂಕಿ ಕಾಳು, ಮೆಂತಿಪಲ್ಯ, ಪಾಲಕ್, ಹುಳಿಚಿಕ್ಕಿ, ಹಸಿ ಹುಣಸೆ, ಈರುಳ್ಳಿ ಸೊಪ್ಪು, ಕೊತ್ತಂಬರಿ, ಕರಿಬೇವು, ಬೆಳ್ಳುಳ್ಳಿ, ಕಡಲೆ ಹಿಟ್ಟು ಮೊದಲಾದವುಗಳಿಂದ ‘ಭಜ್ಜಿ’ ತಯಾರಿಸುತ್ತಾರೆ.

ಇದಿಲ್ಲದೆ ಹಬ್ಬ ಅಪೂರ್ಣ. ಬೆಳ್ಳುಳ್ಳಿ ಕಾಯಿಸಿದ ಎಣ್ಣೆ ಹಾಕಿಕೊಂಡು ಭಜ್ಜಿಯೊಂದಿಗೆ ಸವಿಯುವುದೇ ಸಗ್ಗಸುಖ. ಪಚನಕ್ರಿಯೆಗೆ ಈ ಖಾದ್ಯ ಸಹಕಾರಿ ಎಂಬುದನ್ನು ವೈದ್ಯಕೀಯ ಕ್ಷೇತ್ರದವರೂ ಒಪ್ಪುತ್ತಾರೆ.

ಎಳ್ಳು ಅಮಾವಾಸ್ಯೆಯ ಹಿಂದಿನ ದಿನ ಕಾಯಿಪಲ್ಯ ದಿನವೆಂದು ಆಚರಿಸುತ್ತಾರೆ. ಅಂದರೆ, ಭಜ್ಜಿ ಸೇರಿದಂತೆ ಇತರೆ ಖಾದ್ಯಗಳನ್ನು ತಯಾರಿಸುವ ದಿನ ಎಂದರ್ಥ. ದಿನವಿಡೀ ಕಾಯಿಪಲ್ಯ, ಕಾಳು ಸ್ವಚ್ಛಗೊಳಿಸಿ, ಭಜ್ಜಿ, ರೊಟ್ಟಿ, ಅಂಬಲಿ, ಜೋಳದ ಬಾನಾ ತಯಾರಿಸುತ್ತಾರೆ. ಮರುದಿನ ತಯಾರಿಸಿದ ಎಲ್ಲ ಖಾದ್ಯಗಳನ್ನು ಬಿದಿರಿನಿಂದ ತಯಾರಿಸಿದ ಹೊಸ ಬುಟ್ಟಿಯಲ್ಲಿ ಸಂಗ್ರಹಿಸಿ, ತಲೆಯ ಮೇಲೆ ಇಟ್ಟುಕೊಂಡು ಹೊಲಕ್ಕೆ ಕೊಂಡೊಯ್ಯುತ್ತಾರೆ. ಅವರೊಂದಿಗೆ ಕುಟುಂಬದ ಎಲ್ಲ ಸದಸ್ಯರು ದೇವರ ಸ್ಮರಣೆ ಮಾಡುತ್ತ ಹೋಗುತ್ತಾರೆ. ಹೀಗೆ ಹೋಗುವಾಗ ಹಿಂತಿರುಗಿ ನೋಡುವುದಿಲ್ಲ. ಯಾರೊಂದಿಗೂ ಮಾತನಾಡುವುದಿಲ್ಲ. ಹೊಲದಲ್ಲಿ ಜೋಳದ ಕಳಿಕೆಯಿಂದ ಮಾಡಿರುವ ಕೊಂಪೆಯಲ್ಲಿ ಇಡುತ್ತಾರೆ.

ಕಬ್ಬು, ಬಿಳಿ ಜೋಳದ ದಂಟು, ಕಡಲೆ, ಕುಸುಬಿ, ಅಗಸಿ, ಗೋಧಿ ತೆನೆಗಳಿಂದ ಕೊಂಪೆಯನ್ನು ಸಿಂಗರಿಸುತ್ತಾರೆ. ಲಕ್ಷ್ಮಿ, ಭೂದೇವಿ, ಸರಸ್ವತಿ, ಪಾರ್ವತಿ ಹಾಗೂ ಭವಾನಿಯ ಪ್ರತೀಕವಾಗಿ ಐದು ಮಣ್ಣಿನ ಹೆಂಟೆ ಅಥವಾ ಕಲ್ಲುಗಳನ್ನಿಟ್ಟು ಗೋಧಿ ಹಿಟ್ಟಿನಿಂದ ಮಾಡಿದ ಹಣತೆ ದೀಪ ಬೆಳಗಿಸಿ ಪೂಜಿಸುತ್ತಾರೆ. ಕೊಂಪೆಯಲ್ಲಿ ಇರಿಸಿದ ವಿವಿಧ ಆಹಾರ ಪದಾರ್ಥಗಳನ್ನು ಮಿಶ್ರಣ ಮಾಡಿದ ದ್ರವರೂಪದ ಆಹಾರವನ್ನು ನೀರಿನ ತಂಬಿಗೆಯಲ್ಲಿ ತೆಗೆದುಕೊಂಡು ಕೊಂಪೆಯ ಸುತ್ತ ಜೋಳದ ದಂಟಿನಿಂದ ಚರಗ ಚೆಲ್ಲುತ್ತಾರೆ. ಮುಂದಿದ್ದಾತ ‘ವಲಿಗ್ಯಾ.. ವಲಿಗ್ಯಾ.. ಎಂದರೆ ಹಿಂದಿರುವ ವ್ಯಕ್ತಿ ‘ಚಾಲೋಂ ಪಲಿಗ್ಯಾ’ ಎನ್ನುವರು.

ಕೊನೆಯಲ್ಲಿ ಸರಗವನ್ನು ಚೆಲ್ಲಿ ಕೊಂಪೆಗೆ ನಮಸ್ಕಾರ ಮಾಡಿ, ಮನೆಯ ಮುತ್ತೈದೆಯವರು ಕನೊಲಿ, ಕರಜಿಕಾಯಿ ಅವರ ಬೆನ್ನ ಮೇಲಿಡುವರು. ದೇವರಿಗೆ ನಮಸ್ಕರಿಸುವ ವ್ಯಕ್ತಿ ಎಡಗೈಯಿಂದ ಪಡೆದು ತಿನ್ನುವನು. ನಂತರ ಎಲ್ಲರೂ ಕುಳಿತು ಸಾಮೂಹಿಕವಾಗಿ ಊಟ ಮಾಡುವರು. ಬಂಧು ಬಾಂಧವರು, ನೆರೆಹೊರೆಯವರು, ಸ್ನೇಹಿತರನ್ನು ಹೊಲಕ್ಕೆ ಕರೆಸಿ ಉಣಬಡಿಸಲಾಗುತ್ತದೆ. ಕಬ್ಬು, ಕಡ್ಡಿ (ಹಸಿಕಡಲೆಗೆ ಕಡ್ಡಿ ಎಂದು ಕರೆಯಲಾಗುತ್ತದೆ) ಸೇರಿದಂತೆ ಹೊಸ ಫಸಲನ್ನು ಕೊಟ್ಟು ಕಳಿಸುತ್ತಾರೆ.

ಹೆಣ್ಣು ಮಕ್ಕಳು ಜೋಕಾಲಿ ಆಡಿ ಸಂಭ್ರಮಿಸುತ್ತಾರೆ. ಗಂಡು ಮಕ್ಕಳು ಗಾಳಿಪಟ ಹಾರಿಸುತ್ತಾರೆ. ಸಂಜೆ ಅಗ್ನಿಕುಂಡದಲ್ಲಿ ಹಾಲುಕ್ಕಿಸುತ್ತಾರೆ. ಬುಟ್ಟಿ ಕೊಂಪೆಯಲ್ಲಿ ದೀಪ ಹಚ್ಚಿಕೊಂಡು ಅದನ್ನು ತಲೆಯ ಮೇಲೆ ಇಟ್ಟುಕೊಂಡು ಮನೆಗೆ ವಾಪಸಾಗುತ್ತಾರೆ. ಮನೆ ತಲುಪುವವರೆಗೆ ಎಲ್ಲೂ ನಿಲ್ಲುವುದಿಲ್ಲ.

ಕಲಬುರಗಿ ತಾಲೂಕಿನ ಪಟ್ಟಣ ಗ್ರಾಮದ ಬಳಿ ಎಳ್ಳುಅಮಾವಾಸ್ಯೆ ಅಂಗವಾಗಿ ಸಾಮೂಹಿಕವಾಗಿ ರೊಟ್ಟಿ, ಬಜ್ಜಿ ಮತ್ತು ಸೇಂಗಾ ಹೋಳಿಗೆಯ ಊಟ ಸವಿದರು

ಪ್ರಜಾವಾಣಿ ಸಂಗ್ರಹ ಚಿತ್ರಗಳು: ತಾಜುದ್ದೀನ್ ಆಜಾದ್

'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆ ಪಡೆಯುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳ

# 5 ವರ್ಷ: 50 ಲಕ್ಷ ಜನರಿಗೆ 'ಆಯುಷ್ಮಾನ್'

• ವರುಣ ಹೆಗಡೆ

**ಬೆಂಗಳೂರು:** ಖಾಸಗಿ ವೈದ್ಯಕೀಯ ವ್ಯವಸ್ಥೆಯಡಿ ಮಂಡಿ ಚಿಪ್ಪು, ಹೃದಯದ ಕವಾಟ ಬದಲಾವಣೆಯಂತಹ ಶಸ್ತ್ರ ಚಿಕಿತ್ಸೆಗಳು ದುಬಾರಿ ಆಗಿರುವುದರಿಂದ 'ಆಯುಷ್ಮಾನ್ ಭಾರತ–ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆ ಪಡೆಯುವವರ ಸಂಖ್ಯೆ ರಾಜ್ಯದಲ್ಲಿ ಹೆಚ್ಚಳವಾಗಿದೆ.

ಕಳೆದ ಐದು ವರ್ಷಗಳಲ್ಲಿ 50 ಲಕ್ಷಕ್ಕೂ ಅಧಿಕ ಮಂದಿ ಯೋಜನೆಯಡಿ ಚಿಕಿತ್ಸೆ ಪಡೆದಿದ್ದು, ಹೆಚ್ಚಿನವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿಯೇ ಚಿಕಿತ್ಸೆ ನೀಡಲಾಗಿದೆ. ಈ ಯೋಜನೆಯಡಿ ವಿತರಿಸಲಾಗುವ ಕಾರ್ಡ್‌ಗಳನ್ನು ಕಳೆದ ವರ್ಷಾಂತ್ಯಕ್ಕೆ ಆಯುಷ್ಮಾನ್ ಭಾರತ ಪ್ರಧಾನಮಂತ್ರಿ ಜನಾರೋಗ್ಯ ನ್ಯಾಷನಲ್ ಪೋರ್ಟಲ್‌ಗೆ ಸಂಯೋಜಿಸಲಾಗಿದೆ. ಇದರಿಂದಾಗಿ ಈ ಆರೋಗ್ಯ ಕಾರ್ಡ್‌ನ ನೆರವಿನಿಂದ ಯೋಜನೆಯಡಿ ದೇಶದ ಯಾವುದೇ ಭಾಗದಲ್ಲಿ ಚಿಕಿತ್ಸೆ ಪಡೆದುಕೊಳ್ಳಬಹುದಾಗಿದೆ. ಆಸ್ಪತ್ರೆಗಳಲ್ಲಿ ಆರೋಗ್ಯ ಮಿತ್ರರ ನೇಮಕ ಸೇರಿ ವಿವಿಧ ಕ್ರಮಗಳು ಯೋಜನೆಯಡಿ ಚಿಕಿತ್ಸೆ ಪಡೆಯುವವರ ಸಂಖ್ಯೆ ಹೆಚ್ಚಳವಾಗಲು ಸಹಕಾರಿಯಾಗಿದೆ.

**ರಾಜ್ಯದ ಪ್ರತಿಯೊಬ್ಬರಿಗೂ ಉತ್ತಮ ಆರೋಗ್ಯ ಸೇವೆ ಹಾಗೂ ಚಿಕಿತ್ಸೆ ಒದಗಿಸುವುದು ನಮ್ಮ ಆದ್ಯತೆ. ದುಬಾರಿ ಚಿಕಿತ್ಸೆಗಳನ್ನೂ ಯೋಜನೆಯಡಿ ಉಚಿತವಾಗಿ ಒದಗಿಸುತ್ತಿದ್ದೇವೆ.**
**ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಜನೆಯಡಿ ವಿವಿಧ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ.

**ಖಾಸಗಿಯಲ್ಲೂ ಹೆಚ್ಚಳ:** ಅಪಘಾತದಂತಹ ತುರ್ತು ಸಂದರ್ಭದಲ್ಲಿ ನೇರವಾಗಿ ನೋಂದಾಯಿತ ಖಾಸಗಿ ಆಸ್ಪತ್ರೆಗೆ ದಾಖಲಾಗಲು ಯೋಜನೆಯಡಿ ಅವಕಾಶವಿದೆ. ಅದೇ ರೀತಿ, ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಿರದಿದ್ದರೆ ಶಿಫಾರಸು ಆಧಾರದಲ್ಲಿ ಖಾಸಗಿ ಆಸ್ಪತ್ರೆಗೆ ತೆರಳಬಹುದಾಗಿದೆ. ಇದರಿಂದಾಗಿ ಯೋಜನೆಯಡಿ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವವರ ಸಂಖ್ಯೆಯೂ ಏರಿಕೆಯಾಗುತ್ತಿದೆ. 2018–19ರಲ್ಲಿ ಯೋಜನೆಯಡಿ ಖಾಸಗಿ ಆಸ್ಪತ್ರೆಯಲ್ಲಿ 24,337 ಮಂದಿ ಚಿಕಿತ್ಸೆ ಪಡೆದಿದ್ದರು. ಈ ಸಂಖ್ಯೆ 2022–23ನೇ ಸಾಲಿಗೆ ಮೂರು ಲಕ್ಷ ಸಮೀಪಿಸಿದರೆ, ಸರ್ಕಾರಿ ಆಸ್ಪತ್ರೆಯಲ್ಲಿ ಈ ಸಂಖ್ಯೆ 18 ಲಕ್ಷದ ಗಡಿ ದಾಟಿದೆ.

'ಆಯುಷ್ಮಾನ ಭಾರತ್–ಆರೋಗ್ಯ ಕರ್ನಾಟಕ ಯೋಜನೆಯ ಬಗ್ಗೆ ಜನರಿಗೆ ಜಾಗೃತಿ ಮೂಡುತ್ತಿದೆ. ಬಿಪಿಎಲ್ ಜತೆಗೆ ಎಪಿಎಲ್ ಕುಟುಂಬಗಳಿಗೂ ಈ ಯೋಜನೆ ನೆರವಾಗುತ್ತಿದೆ. ಉಚಿತವಾಗಿ ಕಾರ್ಡ್‌ಗಳನ್ನೂ ಒದಗಿಸಲಾಗುತ್ತಿದ್ದು, ದೇಶದ ಯಾವುದೇ ಭಾಗದಲ್ಲಿ ಚಿಕಿತ್ಸೆ ಪಡೆಯಬಹುದಾಗಿದೆ. ಸದ್ಯ ಕಾರ್ಡ್ ಹೊಂದಿರದಿದ್ದರೂ ಪಡಿತರ ಚೀಟಿ ಇದ್ದಲ್ಲಿ ಯೋಜನೆಯಡಿ ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಇಲಾಖೆಯ ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

**ಎಬಿ–ಎಆರ್‌ಕೆ ಯೋಜನೆಯಡಿ ಚಿಕಿತ್ಸೆ ವಿವರ**

| ವರ್ಷ | ಚಿಕಿತ್ಸೆ ಪಡೆದವರು |
|---|---|
| 2018-19 | 68,371 |
| 2019-20 | 5.96 ಲಕ್ಷ |
| 2020-21 | 8.28 ಲಕ್ಷ |
| 2021-22 | 13.16 ಲಕ್ಷ |
| 2022-23 | 21.97 ಲಕ್ಷ |

**ಅಂಕಿ-ಅಂಶಗಳು**

**2,942** ಯೋಜನೆಯಡಿ ಬರುವ ಸರ್ಕಾರಿ ಆಸ್ಪತ್ರೆಗಳು

**522** ಯೋಜನೆಯಡಿ ಬರುವ ಖಾಸಗಿ ಆಸ್ಪತ್ರೆಗಳು

**1,650 ಚಿಕಿತ್ಸಾ ಪ್ಯಾಕೇಜ್**

'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆ 2018ರಲ್ಲಿ ಆರಂಭವಾಗಿದ್ದು, ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹ 5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು 'ಆಯುಷ್ಮಾನ್ ಭಾರತ್' ಯೋಜನೆ ಅಡಿ ಬರಲಿವೆ. ಉಳಿದ ಕುಟುಂಬಗಳನ್ನು 'ಆರೋಗ್ಯ ಕರ್ನಾಟಕ' ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹ 1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ. ಈ ಯೋಜನೆಯು 1,650 ಚಿಕಿತ್ಸಾ ಪ್ಯಾಕೇಜ್‌ಗಳನ್ನು ಒಳಗೊಂಡಿದೆ.

**ಬಾಲ 'ವಿವೇಕ'ರು**
ಸ್ವಾಮಿ ವಿವೇಕಾನಂದ ಜಯಂತ್ಯುತ್ಸವ, ರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಕಲಬುರಗಿ ರಾಮಕೃಷ್ಣ ವಿವೇಕಾನಂದ ಆಶ್ರಮದಿಂದ ಆಯೋಜಿಸಿದ್ದ ಮೆರವಣಿಗೆಯಲ್ಲಿ ಮಕ್ಕಳು ವಿವೇಕಾನಂದರ ವೇಷ ಧರಿಸಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

## ಯುವಕರಿಗೆ ಆದ್ಯತೆ ಎಂಬುದು ಬಿಜೆಪಿ ಅಧ್ಯಕ್ಷರ ವೈಯಕ್ತಿಕ ವಿಚಾರ: ಜೋಶಿ

ಪ್ರಜಾವಾಣಿ ವಾರ್ತೆ

**ರಾಯಚೂರು:** 'ಲೋಕಸಭೆ ಚುನಾವಣೆಯಲ್ಲಿ ಯುವಕರಿಗೆ ಆದ್ಯತೆ ನೀಡಬೇಕು ಎನ್ನುವುದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರ ವೈಯಕ್ತಿಕ ವಿಚಾರ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

'ನಿನ್ನೆ, ಮೊನ್ನೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ ನಾನೂ ಭಾಗವಹಿಸಿದ್ದೆ. ಟಿಕೆಟ್ ಬಗ್ಗೆ ಯಾವುದೇ ಚರ್ಚೆಯಾಗಿಲ್ಲ. ರಾಜ್ಯ ಘಟಕದ ಅಧ್ಯಕ್ಷರು ವೈಯಕ್ತಿಕವಾಗಿ ಅಭಿಪ್ರಾಯ ಸಂಗ್ರಹಿಸಿದ್ದಾರೆ' ಎಂದು ದೇವದುರ್ಗದಲ್ಲಿ ಶುಕ್ರವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

'ಅಧ್ಯಕ್ಷರು ವೈಯಕ್ತಿಕವಾಗಿ ಮಾಹಿತಿ ಸಂಗ್ರಹಿಸಿದ ಆಧಾರದ ಮೇಲೆ ಯಾರ ಪರ, ವಿರೋಧ ಎನ್ನುವ ವಿಷಯ ಮುನ್ನೆಲೆಗೆ ಬಂದಿದೆ. ಮಾಧ್ಯಮಗಳಲ್ಲಿ ಬರುತ್ತಿರುವುದು ಕೇವಲ ಊಹಾಪೋಹ ಸಂಗತಿ' ಎಂದರು.

'ರಾಮಮಂದಿರ ಉದ್ಘಾಟನೆ ವಿಷಯದಲ್ಲಿ ಕಾಂಗ್ರೆಸ್ ತುಷ್ಟೀಕರಣ ರಾಜಕಾರಣ ಮಾಡುತ್ತಿದೆ. ಸೋಮನಾಥ ಮಂದಿರ ಉದ್ಘಾಟನೆ ಸಂದರ್ಭದಲ್ಲೂ ಗೊಂದಲ ಸೃಷ್ಟಿಸಲು ಪ್ರಯತ್ನಿಸಿತ್ತು. ಕಾಂಗ್ರೆಸ್ ಪಕ್ಷ ರಾಮನನ್ನು ಕಾಲ್ಪನಿಕ ವ್ಯಕ್ತಿ ಎಂದು ಭಾವಿಸಿದೆ. ಅಂತೆಯೇ ಕರ ಸೇವಕರ ವಿರುದ್ಧ ಪ್ರಕರಣ ದಾಖಲಿಸಿದೆ. ಕಾಂಗ್ರೆಸ್ ಹಿಂದೂ ವಿರೋಧಿ ನೀತಿ ಅನುಸರಿಸುತ್ತ ಬಂದಿದೆ' ಎಂದು ಟೀಕಿಸಿದರು.

'ಗಣರಾಜ್ಯೋತ್ಸವಕ್ಕೆ ರಾಜ್ಯದ ಸ್ತಬ್ಧಚಿತ್ರ ನಿರಾಕರಿಸಿರುವ ವಿಚಾರದಲ್ಲೂ ಕಾಂಗ್ರೆಸ್ ವಿರೋಧಿಸುತ್ತಿರುವುದು ಸರಿಯಲ್ಲ. ಒಂದು ವರ್ಷ ಬಿಟ್ಟು ಇನ್ನೊಂದು ವರ್ಷ ಅವಕಾಶ ಕಲ್ಪಿಸುವ ಪದ್ಧತಿಯನ್ನು ರೂಢಿಸಿಕೊಂಡು ಬರಲಾಗಿದೆ. 2006ರಲ್ಲಿಯೂ ಹೀಗೆಯೇ ಆಗಿತ್ತು. ಆಗ ಕಾಂಗ್ರೆಸ್ ಆಡಳಿತ ಇತ್ತು. ಆಗ ಇವರಿಗೆ ಕನ್ನಡದ ಸ್ವಾಭಿಮಾನ ನೆನಪಾಗಲಿಲ್ಲವೆ' ಎಂದು ಪ್ರಶ್ನಿಸಿದರು.

'ಕರ್ನಾಟಕಕ್ಕೆ 14 ವರ್ಷಗಳಲ್ಲಿ 10 ಬಾರಿ ಅವಕಾಶ ಸಿಕ್ಕಿದೆ. ಬಿಜೆಪಿ ಸರ್ಕಾರವೇ ಅತಿಹೆಚ್ಚು ಬಾರಿ ಅವಕಾಶ ಕೊಟ್ಟಿದೆ. ಪ್ರತಿಯೊಂದಕ್ಕೂ ಚಿಲ್ಲರೆ ರಾಜಕಾರಣ ಮಾಡುವುದು ಸರಿಯಲ್ಲ' ಎಂದು ಟೀಕಿಸಿದರು.

**ಸುದ್ದಿ 2 ನಿಮಿಷ**

## ಲಿಂಗಾಯತ ಧರ್ಮ ಹೋರಾಟ ಪುನಃ ಸ್ಫೋಟ: ಬಸವಲಿಂಗಶ್ರೀ

ಕೂಡಲಸಂಗಮ (ಬಾಗಲಕೋಟೆ ಜಿಲ್ಲೆ) : 'ಲಿಂಗಾಯತ ಧರ್ಮ ಹೋರಾಟ ನಿಂತಿಲ್ಲ. ಪುನಃ ಸ್ಫೋಟಿಸಲಿದೆ. ಈ ಸಿದ್ಧಾಂತ ಆಶಾವಾದಿಯಾಗಿದ್ದು, ನಿರಾಸೆ ಎಂಬುದು ಇಲ್ಲ. ಎಲ್ಲ ಬಸವ ಭಕ್ತರಿಗೆ ಬಸವಣ್ಣನೇ ಗುರು, ವಚನ ಸಾಹಿತ್ಯವೇ ಗ್ರಂಥ' ಎಂದು ಬಸವಕಲ್ಯಾಣ ಅನುಭವ ಮಂಟಪ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಹೇಳಿದರು.

ಕೂಡಲಸಂಗಮ ಬಸವ ಧರ್ಮಪೀಠ ಆವರಣದಲ್ಲಿ ಶುಕ್ರವಾರ ಆರಂಭಗೊಂಡ 37ನೇ ಶರಣ ಮೇಳದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

'ಬಸವಣ್ಣನ ಐಕ್ಯ ಸ್ಥಳ ಕೂಡಲಸಂಗಮ ಎಂದು ಯಾರಿಗೂ ಗೊತ್ತಿರಲಿಲ್ಲ. ಲಿಂಗಾನಂದ ಸ್ವಾಮೀಜಿ, ಮಾತೆ ಮಹಾದೇವಿ ಬಸವಣ್ಣನ ಐಕ್ಯಸ್ಥಳ ಕೂಡಲಸಂಗಮ ಎಂದು ಗುರುತಿಸಿ ಜಾಗತಿಕ ಮಟ್ಟದಲ್ಲಿ ಕೀರ್ತಿ ತಂದರು. ಶರಣ ಮೇಳ ಕಾರ್ಯಕ್ರಮದ ಮೂಲಕ ಎಲ್ಲ ಲಿಂಗಾಯತರನ್ನು ಒಂದು ಕಡೆ ಸೇರಿಸಿದ್ದು ಬಸವ ಧರ್ಮ ಪೀಠ' ಎಂದರು.

ಜಿಲ್ಲಾಧಿಕಾರಿ ಕೆ.ಎಂ.ಜಾನಕಿ ಕಾರ್ಯಕ್ರಮ ಉದ್ಘಾಟಿಸಿದರು. ಬಸವ ಧರ್ಮ ಪೀಠದ ಪೀಠಾಧ್ಯಕ್ಷೆ ಮಾತೆ ಗಂಗಾದೇವಿ ಸಾನ್ನಿಧ್ಯ ವಹಿಸಿದ್ದರು.

ಸಮಾರಂಭದಲ್ಲಿ ಮಹದೇಶ್ವರ ಸ್ವಾಮೀಜಿ, ಬಸವಯೋಗಿ ಸ್ವಾಮೀಜಿ, ಬಸವಕುಮಾರ ಸ್ವಾಮೀಜಿ, ಬಸವ ಪ್ರಕಾಶ ಸ್ವಾಮೀಜಿ, ರಾಷ್ಟ್ರೀಯ ಬಸವ ದಳ ಕೇಂದ್ರ ಸಮಿತಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ ಪಾಲ್ಗೊಂಡಿದ್ದರು.

**ಪ್ರಶಸ್ತಿ ಪ್ರದಾನ ಇಂದು:** ಶರಣ ಮೇಳ ಕಾರ್ಯಕ್ರಮವನ್ನು ಶನಿವಾರ ಮುಖ್ಯಮಂತ್ರಿ ಸಿದ್ಧರಾಮಯ್ಯ ಉದ್ಘಾಟಿಸುವರು. ಸಂಗೀತ ನಿರ್ದೇಶಕ ಹಂಸಲೇಖ ಅವರಿಗೆ ಸ್ವಾಮಿ ಲಿಂಗಾನಂದ ಶ್ರೀ ಮತ್ತು ಹೋರಾಟಗಾರ್ತಿ ಮೇಧಾ ಪಾಟ್ಕರ್ ಅವರಿಗೆ ಬಸವಾತ್ಮಜೆ ಪ್ರಶಸ್ತಿ ಪ್ರದಾನ ನಡೆಯಲಿದೆ. ಸಂಜೆ 6 ಗಂಟೆಗೆ ಪೀಠಾರೋಹಣ ಸಮಾರಂಭ ನಡೆಯಲಿದೆ.

## 'ಮೀಸಲಾತಿ–ಲೋಕಸಭಾ ಚುನಾವಣೆ ಬಹಿಷ್ಕಾರಕ್ಕೆ ಚಿಂತನೆ'

ಬ್ಯಾಡಗಿ (ಹಾವೇರಿ ಜಿಲ್ಲೆ): 'ಕೂಡಲಸಂಗಮ ಪೀಠದಲ್ಲಿ ಮುಂದಿನ ಹೋರಾಟದ ಬಗ್ಗೆ ನಮ್ಮ ಸಮಾಜದ ಮುಖಂಡರ ಸಭೆ ಭಾನುವಾರ ನಡೆಯಲಿದೆ. ಅವರ ಅಭಿಪ್ರಾಯದಂತೆ ಲೋಕಸಭಾ ಚುನಾವಣೆ ಬಹಿಷ್ಕರಿಸುವ ಬಗ್ಗೆ ಚಿಂತನೆ ನಡೆಸಲಾಗುವುದು' ಎಂದು ಕೂಡಲಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

ತಾಲ್ಲೂಕಿನ ಮೋಟೆಬೆನ್ನೂರು ಗ್ರಾಮದ ಬಳಿ ರಾಷ್ಟ್ರೀಯ ಹೆದ್ದಾರಿ 48ರಲ್ಲಿ ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಶುಕ್ರವಾರ ಇಷ್ಟಲಿಂಗ ಪೂಜೆ ಸಲ್ಲಿಸಿ ಬೃಹತ್ ಪ್ರತಿಭಟನೆಯ ನೇತೃತ್ವ ವಹಿಸಿ ಅವರು ಮಾತನಾಡಿದರು. 'ನಮಗೆ 2ಎ ಮೀಸಲಾತಿಯನ್ನು ನೀಡಲೇಬೇಕು. ಮೀಸಲಾತಿ ಕಲ್ಪಿಸಲು ಜ.24ರವರೆಗೆ ಮುಖ್ಯಮಂತ್ರಿಗೆ ಗಡುವು ನೀಡಿದ್ದೇವೆ. ಅದೂ ಸಾಧ್ಯವಾಗದಿದ್ದರೆ ಫೆಬ್ರುವರಿ ಕೊನೆಯ ವಾರದಲ್ಲಿ ದಾವಣಗೆರೆ ಅಥವಾ ಬೆಂಗಳೂರಿನಲ್ಲಿ 10 ಲಕ್ಷ ಜನ ಸೇರಿ ಹೋರಾಟಕ್ಕೆ ಮುಂದಾಗೋಣ' ಎಂದರು.

## ಹುಲಿ ಉಗುರು ವಾಪಸ್

ಒಂದನೇ ಪುಟದಿಂದ

ಅದಕ್ಕೆ ಪೂರಕವಾಗಿ 'ವನ್ಯಜೀವಿ (ಸಂರಕ್ಷಣೆ ಮತ್ತು ಅಘೋಷಿತ ವನ್ಯಜೀವಿ ಅಥವಾ ಪ್ರಾಣಿ ಅಂಗಾಂಗಗಳ ಅವಶೇಷ, ಟ್ರೋಫಿ ಮರಳಿಸುವ) (ಕರ್ನಾಟಕ) ನಿಯಮಗಳು– 2024' ಅನ್ನು ಗುರುವಾರ ಪ್ರಕಟಿಸಲಾಗಿದೆ.

ರಾಜ್ಯ ಸರ್ಕಾರ ನಿಗದಿಪಡಿಸಿದ ದಿನದಿಂದ ಮೂರು ತಿಂಗಳವರೆಗೆ ವನ್ಯಜೀವಿ ಅಂಗಾಂಗಗಳ ಅವಶೇಷಗಳನ್ನು ಮರಳಿಸಲು ಅವಕಾಶವಿರುತ್ತದೆ. ಆಯಾ ಪ್ರದೇಶದ ಭೌಗೋಳಿಕ ಮತ್ತು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ವಲಯ ಅರಣ್ಯಾಧಿಕಾರಿ ಅಥವಾ ಪೊಲೀಸ್ ಠಾಣೆಯ ಮುಖ್ಯಸ್ಥರಿಗೆ ಅಂತಹ ವಸ್ತುಗಳನ್ನು ಒಪ್ಪಿಸಬಹುದು.

ಆಯಾ ಅಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ಒಪ್ಪಿಸಲಾದ ವನ್ಯಜೀವಿ ಅಂಗಾಂಗಗಳ ಅವಶೇಷಗಳ ಮಾಹಿತಿಯನ್ನು 7 ದಿನಗಳೊಳಗೆ ಮುಖ್ಯ ವನ್ಯಜೀವಿ ವಾರ್ಡನ್ ಅವರಿಗೆ ಸಲ್ಲಿಸಬೇಕು. ಈ ವಸ್ತುಗಳನ್ನು ಕಳ್ಳಬೇಟೆಯ ಮೂಲಕ ಸಂಗ್ರಹಿಸಿಲ್ಲ ಎಂಬುದನ್ನು ಖಾತರಿಪಡಿಸಲು ತನಿಖೆ ನಡೆಸಬಹುದು ಎಂದು ನಿಯಮಗಳಲ್ಲಿ ಹೇಳಲಾಗಿದೆ.

ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳಿಂದ ಮಾಹಿತಿ ಸಂಗ್ರಹ

# ಅತ್ಯಾಚಾರ: ಸಂತ್ರಸ್ತೆಗೆ ವೈದ್ಯಕೀಯ ಪರೀಕ್ಷೆ

ಪ್ರಜಾವಾಣಿ ವಾರ್ತೆ

**ಹಾನಗಲ್ (ಹಾವೇರಿ ಜಿಲ್ಲೆ):** ನಾಲ್ಕರ ಕ್ರಾಸ್ ಸಮೀಪದ ಹೋಟೆಲ್‌ನಲ್ಲಿ ನಡೆದ ಹಲ್ಲೆ ಮತ್ತು ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂತ್ರಸ್ತೆಯನ್ನು ಪೊಲೀಸ್ ಬಂದೋಬಸ್ತ್‌ನಲ್ಲಿ ಹಾವೇರಿಯ ಜಿಲ್ಲಾಸ್ಪತ್ರೆಗೆ ಶುಕ್ರವಾರ ಕರೆತಂದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು.

ಸಾಮೂಹಿಕ ಅತ್ಯಾಚಾರ ಪ್ರಕರಣದ ಸಂಬಂಧ ಮಾಹಿತಿ ಕಲೆ ಹಾಕಲು ದಾವಣಗೆರೆ ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ಅಧಿಕಾರಿಗಳ ತಂಡ ಹಾನಗಲ್‌ಗೆ ಶುಕ್ರವಾರ ಭೇಟಿ ನೀಡಿ, ಮಾಹಿತಿ ಕಲೆ ಹಾಕಿತು.

**ಸ್ಥಳ ಮಹಜರು:** ಆರೋಪಿಗಳು ಮಹಿಳೆಯನ್ನು ಕರೆದೊಯ್ದು ಲೈಂಗಿಕ ದೌರ್ಜನ್ಯ ನಡೆಸಿದ್ದ ಕಾಡಂಚಿನ ಪ್ರದೇಶಗಳಿಗೆ, ಎಫ್.ಎಸ್.ಎಲ್ ಅಧಿಕಾರಿಗಳು ಮತ್ತು ಪೊಲೀಸ್ ಅಧಿಕಾರಿಗಳ ತಂಡ ಸಂತ್ರಸ್ತೆಯನ್ನು ಕರೆದೊಯ್ದು ಸ್ಥಳ ಮಹಜರು ನಡೆಸಿದರು.

ನಾಲ್ಕರ್‌ಕ್ರಾಸ್ ಬಳಿಯ ಹೋಟೆಲ್ ಮತ್ತು ಇದರ ಸಮೀಪದ ಬಾಳೂರ ಗ್ರಾಮ ಹೊರಭಾಗ, ಮಾವಕೊಪ್ಪ-ಶಿರಗೋಡ ರಸ್ತೆ, ಸಮ್ಮಸಗಿ ರಸ್ತೆ ಮಾರ್ಗವಾಗಿ ಸಂತ್ರಸ್ತೆಯನ್ನು ಕರೆದೊಯ್ದು ಅಧಿಕಾರಿಗಳು ಮಾಹಿತಿ ಸಂಗ್ರಹಿಸಿದರು. ವಿಧಿ ವಿಜ್ಞಾನ ಪ್ರಯೋಗಾಲಯದ ಪರಿಶೀಲನಾ ಅಧಿಕಾರಿಗಳೊಂದಿಗೆ ಹಾನಗಲ್ ಸಿಪಿಐ ಶ್ರೀಧರ ಎಸ್.ಆರ್, ಪಿಎಸ್‌ಐ ಯಲ್ಲಪ್ಪ ಹಿರಗಪ್ಪನವರ, ಸಂಪತ್ ಆನಿಕಿವಿ ಇದ್ದರು.

**5 ದಿನ ಪೊಲೀಸ್ ಕಸ್ಟಡಿಗೆ:** 'ಅತ್ಯಾಚಾರ ಪ್ರಕರಣದ ಮೂವರು ಆರೋಪಿಗಳನ್ನು ಬುಧವಾರ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿತ್ತು. ಹೆಚ್ಚಿನ ವಿಚಾರಣೆಗಾಗಿ ಆರೋಪಿಗಳನ್ನು ವಶಕ್ಕೆ ನೀಡುವಂತೆ ಮನವಿ ಮಾಡಿದ ಮೇರೆಗೆ ಹಾನಗಲ್ ಹಿರಿಯ ಸಿವಿಲ್ ನ್ಯಾಯಾಧೀಶರು ಆರೋಪಿಗಳನ್ನು 5 ದಿನ ಪೊಲೀಸ್ ಕಸ್ಟಡಿಗೆ ನೀಡಿದ್ದಾರೆ' ಎಂದು ಎಸ್‌ಪಿ ಅಂಶುಕುಮಾರ್ ತಿಳಿಸಿದರು.

**ವಿಶೇಷ ತಂಡ ರಚನೆ:** '7 ಆರೋಪಿಗಳಲ್ಲಿ ಮೂವರ ಬಂಧನವಾಗಿದ್ದು, ಉಳಿದ ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದೆ. ಒಬ್ಬ ಆರೋಪಿ ಬೈಕ್ ಅಪಘಾತದಲ್ಲಿ ಕಾಲು ಮುರಿದುಕೊಂಡು ಶಸ್ತ್ರಚಿಕಿತ್ಸೆಗಾಗಿ ಹಾವೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿದ್ದಾನೆ. ಪ್ರಕರಣವನ್ನು ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುವುದು' ಎಂದರು.

ಹಾನಗಲ್ ತಾಲ್ಲೂಕಿನ ನಾಲ್ಕರ ಕ್ರಾಸ್ ಸಮೀಪದ ಹೋಟೆಲ್‌ಗೆ ಶುಕ್ರವಾರ ಭೇಟಿ ನೀಡಿದ ದಾವಣಗೆರೆ ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಸಂಗ್ರಹಿಸಿದರು – ಪ್ರಜಾವಾಣಿ ಚಿತ್ರ

**'ನನ್ನ ಮಗ ಹುಡುಗಿಯರ ಚುಡಾಯಿಸಿದವನಲ್ಲ'**

'ನನ್ನ ಮಗನಿಗೆ ಅವನ ಸ್ನೇಹಿತರು ಫೋನ್ ಮಾಡಿ ಕರೆದು ಈ ಪ್ರಕರಣದಲ್ಲಿ ಸಿಲುಕಿಸಿದ್ದಾರೆ. ನನ್ನ ಮಗನಿಗೆ ದುಶ್ಚಟಗಳಿಲ್ಲ, ಯಾವತ್ತೂ ಹುಡುಗಿಯರನ್ನು ಚುಡಾಯಿಸಿದವನಲ್ಲ. ತರಕಾರಿ ವ್ಯಾಪಾರ ಮಾಡುತ್ತಾನೆ. ಅವನು ಊರಲ್ಲಿ ಇರುವುದೇ ಕಡಿಮೆ. ಅಕ್ಕಿಆಲೂರು ಬಳಿ ಇರುವ ಬಾಳೂರು ಕ್ರಾಸ್‌ನಲ್ಲಿ ನನ್ನ ಮಗನಿಗೆ ಬೈಕ್ ಅಪಘಾತವಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ' ಎಂದು ಆರೋಪಿ ಮಹಮ್ಮದ್ ಸೈಫು ಅವರ ತಾಯಿ ಫೈರುನ್ನೀಸಾ ಅಳಲು ತೋಡಿಕೊಂಡರು.

**ಹಾನಗಲ್ ಘಟನೆ ಹೀನ ಕೃತ್ಯ. ಆರೋಪಿಗಳ ನಡವಳಿಕೆಯು ಸಮಾಜ ತಲೆ ತಗ್ಗಿಸುವಂತೆ ಮಾಡಿದೆ. ಸರ್ಕಾರ ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸಬೇಕು**
**ಯಾಸೀರ್ ಅರಾಫತ್ ಮಕಾನದಾರ್**
'ಅಂಜುಮನ್ ಎ ಇಸ್ಲಾಂ' ಕಾರ್ಯದರ್ಶಿ, ಅಕ್ಕಿಆಲೂರು

## ರಸ್ತೆಗಳಲ್ಲಿ ದೇಗುಲ, ಮಸೀದಿ, ಚರ್ಚ್: ಹೈಕೋರ್ಟ್ ಆಕ್ರೋಶ

ಒಂದನೇ ಪುಟದಿಂದ...

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಜಿ.ಸಿ.ಷಣ್ಮುಖ ಅವರು, 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ವಾರ್ಡ್ ಸಂಖ್ಯೆ 71ರ ಹೆಗ್ಗನಹಳ್ಳಿ ಮುಖ್ಯ ರಸ್ತೆಯ ಸುಂಕದಕಟ್ಟೆ ಮಾರ್ಗದಲ್ಲಿ ರಸ್ತೆ ಒತ್ತುವರಿ ಮಾಡಿ ದೇವಸ್ಥಾನ ನಿರ್ಮಿಸಲಾಗುತ್ತಿದ್ದು, ಸಾರ್ವಜನಿಕರ ರಸ್ತೆ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಈ ವಿವರಣೆಗೆ ನ್ಯಾಯಮೂರ್ತಿ ದೀಕ್ಷಿತ್ ಅವರು ಬಿಬಿಎಂಪಿ ಪರ ವಕೀಲರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. 'ನಾವು ಸಾರ್ವಜನಿಕ ಆಸ್ತಿಯ ರಕ್ಷಕರು. ಸಾರ್ವಜನಿಕ ರಸ್ತೆಗಳಲ್ಲಿ ದೇವಾಲಯ, ಮಸೀದಿ, ಚರ್ಚ್‌ಗಳನ್ನೆಲ್ಲಾ ನಿರ್ಮಿಸುತ್ತಾ ಹೋದರೇ ಶ್ರೀಸಾಮಾನ್ಯರು ಏನು ಮಾಡಬೇಕು? ಸಾರ್ವಜನಿಕ ಸ್ಥಳದಲ್ಲಿ ದೇವಾಲಯ ನಿರ್ಮಿಸಿದ್ದರೆ ನಾವು ಅದನ್ನು ಸಹಿಸುವುದಿಲ್ಲ' ಎಂದು ಎಚ್ಚರಿಸಿದರು.

ಅಂತಿಮವಾಗಿ ನ್ಯಾಯಪೀಠವು, 'ದೇವಸ್ಥಾನ ನಿರ್ಮಿಸಲು ರಸ್ತೆ ಒತ್ತುವರಿ ಮಾಡಲಾಗಿದೆಯೇ ಅಥವಾ ಟ್ರಸ್ಟ್ ಸದಸ್ಯರು ಹೇಳುವಂತೆ ಹಲವು ವರ್ಷಗಳಿಂದ ಅಲ್ಲಿ ದೇವಸ್ಥಾನ ಇತ್ತೇ ಎಂಬುದನ್ನು ಉಲ್ಲೇಖಿಸಲು ಬಿಬಿಎಂಪಿ ವಿಫಲವಾಗಿದೆ' ಎಂದು ಆದೇಶದಲ್ಲಿ ದಾಖಲಿಸಿತು.

'ಸ್ವತಂತ್ರ ಪ್ರಾಧಿಕಾರದಿಂದ ಸ್ಪಷ್ಟ ವರದಿ ಪಡೆಯುವುದು ಸೂಕ್ತವಾಗಿದೆ. ಸಂಬಂಧಿಸಿದ ಎಲ್ಲರಿಗೂ ನೋಟಿಸ್ ಜಾರಿ ಮಾಡಬೇಕು. ಬೆಂಗಳೂರು ನಗರ ಜಿಲ್ಲಾಧಿಕಾರಿ ನೇಮಿಸಿದ ಭೂ ದಾಖಲೆಗಳ ಉಪ ನಿರ್ದೇಶಕರು (ಡಿಡಿಎಲ್‌ಆರ್) ತಾಂತ್ರಿಕ ಪರಿಣತರ ತಂಡದೊಂದಿಗೆ ಸ್ಥಳಕ್ಕೆ ಭೇಟಿ ನೀಡಬೇಕು. ಮೂರು ವಾರಗಳಲ್ಲಿ ವಸ್ತುಸ್ಥಿತಿ ವರದಿ ಸಲ್ಲಿಸಬೇಕು' ಎಂದು ಆದೇಶಿಸಿ ವಿಚಾರಣೆಯನ್ನು ಫೆಬ್ರುವರಿ 9ಕ್ಕೆ ಮುಂದೂಡಿತು. ಸಲ್ಲಾಪುರದಮ್ಮ ದೇವಾಲಯ ಟ್ರಸ್ಟ್ ಸದಸ್ಯರ ಪರವಾಗಿ ಹಿರಿಯ ವಕೀಲ ಡಿ.ಆರ್.ರವಿಶಂಕರ್ ಹಾಜರಾಗಿದ್ದರು.

## ಬಾಲಕಿಯೊಂದಿಗೆ ಮದುವೆ: ಪ್ರಕರಣ

ಸಿರುಗುಪ್ಪ (ಬಳ್ಳಾರಿ): 10ನೇ ವಯಸ್ಸಿನ ಬಾಲಕಿಯನ್ನು ಎರಡು ವರ್ಷಗಳ ಹಿಂದೆ ಮದುವೆಯಾಗಿದ್ದ ನಗರದ ಕಾಲೋನಿಯೊಂದರ ನಿವಾಸಿ ತಾಯಣ್ಣ (23) ವಿರುದ್ಧ ಪೋಕ್ಸೊ ಪ್ರಕರಣ ದಾಖಲಾಗಿದೆ.

11ನೇ ವಯಸ್ಸಿನಲ್ಲಿ ಮೊದಲ ಹೆರಿಗೆ ಮನೆಯಲ್ಲಿ ಆಗಿದ್ದು, ಶಿಶು ತೀರಿಹೋಗಿತ್ತು. ಎರಡನೇ ಹೆರಿಗೆ ಸಂದರ್ಭದಲ್ಲಿ ಬಳ್ಳಾರಿಯ ವಿಮ್ಸ್ ಒಪಿಡಿಯಲ್ಲಿ ದಾಖಲಾದ ಸಂದರ್ಭದಲ್ಲಿ ಪ್ರಕರಣ ಬೆಳಕಿಗೆ ಬಂದಿದೆ.

ಸಿಡಿಪಿಒ ಕಚೇರಿಯ ಮೇಲ್ವಿಚಾರಕಿ ನೀಡಿದ ದೂರಿನ ಮೇರೆಗೆ ಸಿರುಗುಪ್ಪ ಪೊಲೀಸರು ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಯುವಸಮೂಹ –ಪ್ರಜಾವಾಣಿ ಚಿತ್ರ

## 'ಯುವನಿಧಿ'ಗೆ ಚಾಲನೆ

ಒಂದನೇ ಪುಟದಿಂದ...

ಸಮಾರಂಭದಲ್ಲಿ ಪಾಲ್ಗೊಂಡಿದ್ದ ಸಂಸದ ಬಿಜೆಪಿಯ ಬಿ.ವೈ.ರಾಘವೇಂದ್ರ ಹಾಗೂ ಶಾಸಕ ಎಸ್.ಎನ್.ಚನ್ನಬಸಪ್ಪ 'ಯುವನಿಧಿ' ಯೋಜನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಹಾಗೂ ಸಂಸದ ಬಿ.ವೈ.ರಾಘವೇಂದ್ರ ಇಬ್ಬರೂ ಶರಾವತಿ ಸಂತ್ರಸ್ತರು ಹಾಗೂ ಬಗರ್‌ಹುಕುಂ ಸಾಗುವಳಿದಾರರ ಸಮಸ್ಯೆ ಪರಿಹರಿಸುವಂತೆ ಸಿಎಂಗೆ ಕೋರಿದ್ದು ವಿಶೇಷವಾಗಿತ್ತು.

ಕಾರ್ಯಕ್ರಮಕ್ಕೆ ಶಿವಮೊಗ್ಗ, ಚಿತ್ರದುರ್ಗ, ದಾವಣಗೆರೆ, ಚಿಕ್ಕಮಗಳೂರು, ಹಾವೇರಿ, ಗದಗ ಮತ್ತು ಉಡುಪಿ ಜಿಲ್ಲೆಗಳಿಂದ ಸಾವಿರಾರು ವಿದ್ಯಾರ್ಥಿಗಳು ಬಂದಿದ್ದರು. ಕಾಲೇಜು ಸಮವಸ್ತ್ರದಲ್ಲಿಯೇ ಬಂದಿದ್ದ ವಿದ್ಯಾರ್ಥಿಗಳು ಸಮಾರಂಭದ ಆರಂಭದಲ್ಲಿ ಅಜಯ್ ವಾರಿಯರ್ ಹಾಗೂ ಅನುರಾಧ ಭಟ್ ತಂಡದವರು ನಡೆಸಿಕೊಟ್ಟ ಸಂಗೀತ ಕಾರ್ಯಕ್ರಮದಲ್ಲಿ ಕುಣಿದು ಕುಪ್ಪಳಿಸಿದರು. ವಿದ್ಯಾರ್ಥಿಗಳನ್ನು ಕರೆತರಲು ಅಂದಾಜು 1,000 ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಇದರಿಂದ ಶಿವಮೊಗ್ಗವು ಇಡೀ ದಿನ ಯುವ ಸಮೂಹದ ಕಲರವಕ್ಕೆ ಸಾಕ್ಷಿಯಾಯಿತು. ಬಂದಿದ್ದವರಿಗೆ ಪಲಾವ್, ಮೊಸರನ್ನ ವ್ಯವಸ್ಥೆ ಮಾಡಲಾಗಿತ್ತು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಕೆ.ಜೆ. ಜಾರ್ಜ್, ಡಾ.ಶರಣಪ್ರಕಾಶ ಪಾಟೀಲ, ಮಧು ಬಂಗಾರಪ್ಪ, ಡಾ.ಎಂ.ಸಿ. ಸುಧಾಕರ್, ಬಿ.ನಾಗೇಂದ್ರ, ಮಂಕಾಳು ವೈದ್ಯ, ಸಂಸದ ಬಿ.ವೈ.ರಾಘವೇಂದ್ರ, ಶಾಸಕರಾದ ಎಸ್.ಎನ್.ಚನ್ನಬಸಪ್ಪ, ಬೇಳೂರು ಗೋಪಾಲಕೃಷ್ಣ, ಡಿ.ಜಿ. ಶಾಂತನಗೌಡ, ಬಿ.ಕೆ.ಸಂಗಮೇಶ್ವರ, ಶಾರದಾ ಪೂರ್ಯಾನಾಯ್ಕ, ಟಿ.ಡಿ. ರಾಜೇಗೌಡ, ಜಿ.ಎಚ್. ಶ್ರೀನಿವಾಸ್, ಎಚ್.ಡಿ. ತಮ್ಮಣ್ಣ, ಭೀಮಣ್ಣ ನಾಯ್ಕ, ಕೆ.ಗೋವಿಂದರಾಜು, ಡಿ.ಎಸ್.ಅರುಣ್ ಸಮಾರಂಭದಲ್ಲಿ ಉಪಸ್ಥಿತರಿದ್ದರು.

**ಶಿವಮೊಗ್ಗ ಹೋರಾಟದ ಹಿನ್ನೆಲೆಯ ಜಿಲ್ಲೆ. ರಾಷ್ಟ್ರಕವಿ ಕುವೆಂಪು ಹೇಳಿದ 'ಸರ್ವ ಜನಾಂಗದ ಶಾಂತಿಯ ತೋಟ' ಎಂಬ ಆಶಯ ಇಲ್ಲಿಂದಲೇ ದೇಶಕ್ಕೆ ಹಬ್ಬಲಿ**
**ಸಿದ್ದರಾಮಯ್ಯ,** ಮುಖ್ಯಮಂತ್ರಿ

**ಐದನೇ ಗ್ಯಾರಂಟಿಯನ್ನೂ ಜಾರಿ ಮಾಡಿ ಕರುನಾಡಿಗೆ ನೀಡಿದ್ದ ವಾಗ್ದಾನವನ್ನು ಈಡೇರಿಸಿದ್ದೇವೆ. ಕಾಂಗ್ರೆಸ್ ಬದ್ಧತೆಯ ಪಕ್ಷ ಎಂಬುದನ್ನು ಜನರಿಗೆ ತೋರಿಸಿಕೊಟ್ಟಿದ್ದೇವೆ**
**ರಣದೀಪ್ ಸಿಂಗ್ ಸುರ್ಜೇವಾಲಾ**
ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ

**ಡಿಕೆಶಿಯಿಂದ ಪುರಂದರದಾಸರ ಕೀರ್ತನೆ ಉಲ್ಲೇಖ**

'ಇದು ಭಾಗ್ಯ ಇದು ಭಾಗ್ಯ ಇದು ಭಾಗ್ಯವಯ್ಯಾ.. ಪದುಮನಾಭನ ಪಾದ ಭಜನೆ ಪರಮಸುಖವಯ್ಯ' ಎಂಬ ಪುರಂದರದಾಸರ ಕೀರ್ತನೆ ಉಲ್ಲೇಖಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಕೊಟ್ಟ ಮಾತು ಉಳಿಸಿಕೊಂಡು 5 ಗ್ಯಾರಂಟಿ ಯೋಜನೆಗಳ ಮೂಲಕ ಸರ್ವರಿಗೂ ಸಮಪಾಲು ಆಶಯ ನಿಜವಾಗಿಸಿದ್ದೇವೆ. ಇದೇ ನಮ್ಮ ಭಾಗ್ಯ' ಎಂದರು.

ಗ್ಯಾರಂಟಿ ಯೋಜನೆಗಳು ಬರೀ ಫಲಾನುಭವಿಗಳ ಜೇಬು ತುಂಬಿಸುವುದಿಲ್ಲ. ಬದಲಿಗೆ ಪ್ರತೀ ಕುಟುಂಬಕ್ಕೂ ಸಾಮಾಜಿಕವಾಗಿ, ಆರ್ಥಿಕವಾಗಿ ಶಕ್ತಿ ತುಂಬಲಿವೆ ಎಂದು ಅವರು ಹೇಳಿದರು.

**'ಗ್ಯಾರಂಟಿ ಅನುಷ್ಠಾನ; 1.50 ಕೋಟಿ ಕುಟುಂಬಗಳಿಗೆ ನೆರವು'**

'ಚುನಾವಣೆಗೆ ಮುಂಚೆ ಭರವಸೆ ಕೊಟ್ಟಂತೆ ಎಲ್ಲ ಐದು ಗ್ಯಾರಂಟಿಗಳನ್ನು ಅನುಷ್ಠಾನಗೊಳಿಸಿದ್ದೇವೆ. ಇದರಿಂದ 1.50 ಕೋಟಿ ಕುಟುಂಬಗಳು ತಿಂಗಳಿಗೆ ₹5,000ದಿಂದ ₹6,000 ಮೊತ್ತದ ನೆರವು ಪಡೆಯುತ್ತಿವೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಹಸಿದವರಿಗೆ ಅನ್ನ ಕೊಡದಂತಹ ಸಮಾಜ ಹಾಗೂ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ ಎಂದು ಸಂತ ವಿವೇಕಾನಂದರು ಹೇಳಿದ್ದರು. ಅವರ ಜನ್ಮದಿನದಂದೇ ಯುವನಿಧಿ ಗ್ಯಾರಂಟಿ ಯೋಜನೆಯನ್ನು ಸರ್ಕಾರ ಜಾರಿಗೊಳಿಸಿದ್ದು, ಯುವಜನತೆ ಸಾಮಾಜಿಕವಾಗಿ, ಆರ್ಥಿಕವಾಗಿ ಭ್ರಮನಿರಸನಗೊಳ್ಳುವುದನ್ನು ತಡೆದು ಅವರಲ್ಲಿ ಆತ್ಮಶಕ್ತಿ ತುಂಬಲಿದೆ' ಎಂದರು.

' ಯೂರೋಪ್ ದೇಶಗಳಲ್ಲಿನ ಸರ್ವರಿಗೂ ಮೂಲ ಆದಾಯ (Universal Basic Income) ಎಂಬ ತತ್ವವನ್ನು ರಾಜ್ಯದಲ್ಲೂ ಅಳವಡಿಸಿ, ಅನುಸರಿಸಿದ್ದೇವೆ' ಎಂದು ಹೇಳಿದರು.

ದರ್ಶನ್ ಏಳಿಗೆ ಸಹಿಸದೇ ನೋಟಿಸ್: ವಕೀಲರ ಆರೋಪ

# ಪೊಲೀಸರ ಎದುರು ಹೇಳಿಕೆ ದಾಖಲೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಾಟೇರ ಸಿನಿಮಾ ಯಶಸ್ಸು ಸಂಭ್ರಮಿಸಲು ನಗರದ ಒರಾಯನ್ ಮಾಲ್ ಬಳಿಯ 'ಜೆಟ್‌ಲ್ಯಾಗ್ ಪಬ್'ನಲ್ಲಿ ನಿಯಮ ಉಲ್ಲಂಘಿಸಿ, ಮುಂಜಾನೆವರೆಗೂ ಪಾರ್ಟಿ ಆಯೋಜಿಸಿದ್ದ ಪ್ರಕರಣದಲ್ಲಿ ನಟ ದರ್ಶನ್ ಸೇರಿ ಚಿತ್ರರಂಗದ ಎಂಟು ಮಂದಿ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆಗೆ ಶುಕ್ರವಾರ ವಿಚಾರಣೆಗೆ ಹಾಜರಾಗಿ, ನೋಟಿಸ್‌ಗೆ ಉತ್ತರಿಸಿದರು.

ನಟ ದರ್ಶನ್, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಸಂಗೀತ ನಿರ್ದೇಶಕ ವಿ.ಹರಿಕೃಷ್ಣ, ನಿರ್ದೇಶಕ ತರುಣ್ ಸುಧೀರ್, ನಟರಾದ 'ನೀನಾಸಂ' ಸತೀಶ್, ಡಾಲಿ ಧನಂಜಯ್, ಚಿಕ್ಕಣ್ಣ, ಅಭಿಷೇಕ್ ಅಂಬರೀಷ್ ಹಾಗೂ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ವಿಚಾರಣೆಗೆ ಹಾಜರಾಗಿದ್ದರು. ಮಧ್ಯಾಹ್ನ 3 ಗಂಟೆ ಸುಮಾರಿಗೆ ಎಲ್ಲರೂ ಒಮ್ಮೆಲೇ ಠಾಣೆಗೆ ಬಂದು ಪೊಲೀಸರ ಎದುರು ಹೇಳಿಕೆ ದಾಖಲಿಸಿದರು.

'ನಾವು ನೀಡಿದ ನೋಟಿಸ್‌ಗೆ ಉತ್ತರಿಸಿದ್ದಾರೆ. ಕಾನೂನಿನಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಜ.3ರಂದು ನಿಯಮ ಉಲ್ಲಂಘಿಸಿ, ಪಾರ್ಟಿ ನಡೆಸಿದ್ದ ಆರೋಪದ ಮೇರೆಗೆ ಜ.7ರಂದು ಪೊಲೀಸರು ನೋಟಿಸ್ ಜಾರಿ ಮಾಡಿದ್ದರು. ಜ.8ರಂದು ಬೆಳಿಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್‌ನಲ್ಲಿ ಸೂಚಿಸಲಾಗಿತ್ತು. ಆದರೆ, ದರ್ಶನ್ ಹಾಗೂ ತರುಣ್ ಸುಧೀರ್ ಸಿನಿಮಾದ ಪ್ರಚಾರಕ್ಕೆ ದುಬೈಗೆ ತೆರಳಿದ್ದರಿಂದ ವಿಚಾರಣೆಗೆ ಬಂದಿರಲಿಲ್ಲ. ದುಬೈನಿಂದ ದರ್ಶನ್ ಅವರು ಗುರುವಾರ ರಾತ್ರಿ ನಗರಕ್ಕೆ ಬಂದಿದ್ದರು. ಎಲ್ಲರೂ ಒಟ್ಟಿಗೆ ಪೊಲೀಸ್ ಠಾಣೆಗೆ ಬಂದಿದ್ದರಿಂದ ಹೆಚ್ಚಿನ ಬಂದೋಬಸ್ತ್ ಕಲ್ಪಿಸಲಾಗಿತ್ತು. ಅಪಾರ ಸಂಖ್ಯೆಯ ಅಭಿಮಾನಿಗಳೂ ಠಾಣೆ ಎದುರು ಜಮಾಯಿಸಿದ್ದರು.

**'ಎಲ್ಲದಕ್ಕೂ ದರ್ಶನ್ ಕಾರಣವೇ?:'** 'ದರ್ಶನ್ ಅವರನ್ನು ಗುರಿಯಾಗಿಸಿ ನೋಟಿಸ್ ಕೊಡಲಾಗಿದೆ. ಅವರ ಏಳಿಗೆಯನ್ನು ಕೆಲವರು ಸಹಿಸುತ್ತಿಲ್ಲ. ನಾಯಿ ಕಚ್ಚಿದರೂ, ಊಟಕ್ಕೆ ತೆರಳಿದರೂ ದರ್ಶನ್ ಕಾರಣ ಎಂದು ಆರೋಪಿಸಲಾಗುತ್ತಿದೆ. ಪ್ರತಿಷ್ಠಿತ ಹೋಟೆಲ್‌ಗಳಲ್ಲಿ ರಾತ್ರಿಯಿಡೀ ಪಾರ್ಟಿಗಳು ನಡೆಯುತ್ತಿವೆ. ಚಿತ್ರರಂಗದವರು ಹಾಗೂ ರಾಜಕಾರಣಿಗಳು ಭಾಗವಹಿಸುತ್ತಾರೆ. ಅವರ ವಿರುದ್ಧ ಏಕೆ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ದರ್ಶನ್ ಪರ ವಕೀಲ ನಾರಾಯಣಸ್ವಾಮಿ ಹೇಳಿದರು.

'ಮುಖ್ಯಮಂತ್ರಿ ಯಾವತ್ತೂ ರಾತ್ರಿ ಊಟ ಮಾಡಿಲ್ಲವೇ? ಚಿತ್ರತಂಡ ಪಾರ್ಟಿ ಮಾಡಲು ಅಲ್ಲಿಗೆ ಹೋಗಿರಲಿಲ್ಲ. ಪಬ್ ಮಾಲೀಕರೇ ಊಟಕ್ಕೆ ಆಹ್ವಾನಿಸಿದ್ದರು. ನೋಟಿಸ್ ಕೊಟ್ಟಿರುವುದಕ್ಕೆ ಬೇರೆ ಕಾರಣಗಳಿವೆ' ಎಂದು ಹೇಳಿದರು.

ಮುಂಜಾನೆಯವರೆಗೆ ಮದ್ಯ ಪೂರೈಸಿದ ಆರೋಪದ ಮೇರೆಗೆ ಪಬ್ ಮಾಲೀಕರಾದ ಶಶಿರೇಖಾ ಜಗದೀಶ್ ಹಾಗೂ ವ್ಯವಸ್ಥಾಪಕ ವ್ಯವಸ್ಥಾಪಕ ಪ್ರಶಾಂತ್ ವಿರುದ್ಧ ಕರ್ನಾಟಕ ಪೊಲೀಸ್ ಕಾಯ್ದೆ ಮತ್ತು ಅಬಕಾರಿ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ಬೆಂಗಳೂರಿನ ಸುಬ್ರಹ್ಮಣ್ಯ ನಗರ ಪೊಲೀಸ್ ಠಾಣೆ ಎದುರು ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಮಾತನಾಡಿದರು. ಅಭಿಷೇಕ್ ಅಂಬರೀಷ್, ವಿ. ಹರಿಕೃಷ್ಣ, ತರುಣ್ ಸುಧೀರ್, ಚಿಕ್ಕಣ್ಣ, ಡಾಲಿ ಧನಂಜಯ್, ನೀನಾಸಂ ಸತೀಶ್ ಇದ್ದರು – ಪ್ರಜಾವಾಣಿ ಚಿತ್ರ

**ಪೊಲೀಸರ ವಿರುದ್ಧ ರಾಕ್‌ಲೈನ್ ಆಕ್ರೋಶ**

'ನಗರದಲ್ಲಿ ರಾತ್ರಿ 1 ಗಂಟೆಯ ನಂತರವೂ ಹಲವು ಪಬ್‌ಗಳು ತೆರೆದಿರುತ್ತವೆ. ಪೊಲೀಸರು ಯಾವ ಗ್ರಾಹಕರಿಗೆ ನೋಟಿಸ್ ಜಾರಿ ಮಾಡಿದ್ದಾರೆ' ಎಂದು ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಪ್ರಶ್ನಿಸಿದರು.

'ಅಂದು ಪಬ್‌ನಲ್ಲಿ ಕಡಿಮೆ ಸಂಖ್ಯೆಯಲ್ಲಿ ಅಡುಗೆ ಸಿಬ್ಬಂದಿ ಇದ್ದರು. ಅವರು ಅಡುಗೆ ತಯಾರಿಸಿ ಊಟ ಕೊಡುವುದು ತಡವಾಯಿತು. ಯಾವುದೇ ಪಾರ್ಟಿ ನಡೆಸಿಲ್ಲ. ರಾತ್ರಿ 1 ಗಂಟೆಯ ನಂತರ ಪಬ್‌ನಲ್ಲಿ ಕುಳಿತು ಊಟ ಮಾಡಿದ್ದೇ ತಪ್ಪು ಎನ್ನುವುದಾದರೆ ತಲೆಬಾಗುತ್ತೇವೆ' ಎಂದು ಹೇಳಿದರು.

'ನ್ಯಾಯಾಲಯದ ಮೂಲಕ ಹೋರಾಟ ನಡೆಸುವುದು ಬೇಡವೆಂದು ವಿಚಾರಣೆಗೆ ಬಂದಿದ್ದೇವೆ. ನಮಗೂ ಕಾನೂನು ಹೋರಾಟ ನಡೆಸುವುದು ಗೊತ್ತಿದೆ' ಎಂದರು.

# ಸಿ.ಇ.ಸಿ, ಇ.ಸಿ ನೇಮಕ: ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ಮುಖ್ಯ ಚುನಾವಣಾ ಆಯುಕ್ತರು ಹಾಗೂ ಚುನಾವಣಾ ಆಯುಕ್ತರನ್ನು ನೇಮಕ ಮಾಡುವ ಅಧಿಕಾರವನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಇಲ್ಲದ ಸಮಿತಿಯೊಂದಕ್ಕೆ ನೀಡಿರುವ ಹೊಸ ಕಾನೂನಿಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ಹೊಸ ಕಾನೂನನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ಪರಿಶೀಲಿಸಲು ಒಪ್ಪಿರುವ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಮತ್ತು ದೀಪಾಂಕರ್ ದತ್ತ ಅವರು ಇರುವ ವಿಭಾಗೀಯ ಪೀಠವು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿಗೆ ಆದೇಶಿಸಿದೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, ಮೆ॥ ಎನರ್ ಪಾರ್ಕ್ ಸೋಲಾರ್ ಪವರ್ 4 ಪ್ರೈವೇಟ್ ಅಮಿಟೆಡ್, ಇವರು ಯಾದಗಿರಿ ಜಿಲ್ಲೆ, ಯಾದಗಿರಿ ತಾಲ್ಲೂಕು, ಮುಂಡರ್ಗ ಗ್ರಾಮ ಮತ್ತು ಹೊನಗೆರ ಗ್ರಾಮಗಳಲ್ಲಿರುವ (ಈ ಕೆಳಕಂಡ ಷೆಡ್ಯೂಲ್ ಸ್ವತ್ತಿನಲ್ಲಿ ಸವಿವರವಾಗಿ ವಿವರಿಸಿರುವ) ಇದರ **ಒಟ್ಟಾರೆ ವಿಸ್ತೀರ್ಣ 272.25 ಎಕರೆ** ಜಮೀನಿಗೆ ಸಂಬಂಧಿಸಿದಂತೆ ಸಂಪೂರ್ಣ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಇಚ್ಛಿಸಿರುತ್ತಾರೆ.

ಯಾವುದೇ ವ್ಯಕ್ತಿಗಳು ಅಥವಾ ಸಂಸ್ಥಗಳು (ಬ್ಯಾಂಕ್/ಸೂಸೈಟಿಗಳು, ಹಣಕಾಸಿನ ಸಂಸ್ಥೆಗಳು) ಹಾಗೂ ಮಾಲೀಕರನ್ನು ಹೊರತುಪಡಿಸಿ ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ, ಅಥವಾ ಅದರ ಯಾವುದೇ ಭಾಗ ಅಥವಾ ಅಂಶದ ಸಂಬಂಧದಲ್ಲಿ ಮಾರಾಟ, ವಿನಿಮಯ, ಈಡು, ಪ್ರಭಾರ, ಉಡುಗೊರೆ, ದತ್ತ, ಪಿತ್ರಾರ್ಜಿತ, ಉತ್ತರಾಧಿಕಾರ, ಕುಟುಂಬದ ವ್ಯವಸ್ಥೆ/ಒಪ್ಪಂದ, ಅಂತಿಮ ಇಷ್ಟಪತ್ರ, ಅನುಭೋಗದ ಹಕ್ಕು, ಒಡಂಬಡಿಕೆ, ಪರವನಾಗಿ, ಹಂಚಿಕೆ, ಧರಣಾಧಿಕಾರ, ಜಪ್ತಿ, ಎಫ್‌ಎಸ್‌ಐ ಕನ್‌ಸಮ್‌ಷನ್, ಅಭಿವೃದ್ಧಿ ಹಕ್ಕು, ಯಾವುದೇ ನ್ಯಾಯಾಂಗ/ಅರೆ ನ್ಯಾಯಾಂಗ ಪ್ರಾಧಿಕಾರಿಯ ಡಿಕ್ರಿ ಅಥವಾ ಆದೇಶ, ಅಥವಾ ಸದರಿ ಷೆಡ್ಯೂಲ್ ಸ್ವತ್ತಿನ ಯಾವುದೇ ಸ್ವರೂಪದ ಯಾವುದೇ ಕ್ಲೇಮ್‌ಗಳನ್ನು ಹೊಂದಿದ್ದರೆ ಸೂಕ್ತ ಸಾಕ್ಷಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ, ಇಲ್ಲದಿದ್ದರೆ ಅಂತಹ ಯಾವುದೇ ತರಹದ ಹಕ್ಕುಗಳು ಬಂಧನೆಯಾಗುವುದಿಲ್ಲ/ ಮನ್ನಮಾಡಲಾಗಿದೆ ಮತ್ತು ಮಾಲೀಕರನ್ನು ಹೊರತು ಪಡಿಸಿ ಯಾವುದೇ ವ್ಯಕ್ತಿಗಳು ಅಥವಾ ಸಂಸ್ತೆಗಳು ಷೆಡ್ಯೂಲ್ ಸ್ವತ್ತಿನ ಮೇಲೆ ಹಕ್ಕು, ಹಕ್ಕು ಬಾಧ್ಯತೆ, ಕ್ಲೇಮು ಮತ್ತು/ಅಥವಾ ಹಿತಾಸಕ್ತಿ, ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತಿನ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

**(ಷೆಡ್ಯೂಲ್ ಸ್ವತ್ತು)**

**ಕರ್ನಾಟಕ ರಾಜ್ಯ, ಯಾದಗಿರಿ ಜಿಲ್ಲೆ, ಯಾದಗಿರಿ ತಾಲೂಕು, ಮುಂಡರ್ಗಾ ಗ್ರಾಮದಲ್ಲಿ ಒಳಗೊಂಡಿರುವ ಕೆಳಕಂಡಂತೆ ತಿಳಿಸಿರುವ ಸರ್ವೆ ನಂಬರುಗಳ ಒಟ್ಟಾರೆ ಜಮೀನಿನ ವಿಸ್ತೀರ್ಣ 151.29 ಎಕರೆಗಳು.**

| ಸರ್ವೆ ನಂಬರು | ಜಮೀನು ವಿಸ್ತೀರ್ಣ ಎಕರೆ | ಗುಂಟೆಗಳು | ಜಮೀನುಗಳ ಮಾಲೀಕರು |
|---|---|---|---|
| 167/1 | 1 | 6 | ಶಿವರಾಜ |
| 167/2 | 2 | 36 | ಶಿವರಾಜ |
| 167/3 | 1 | 5 | ವೆಂಕಟೇಶ |
| 167/4 | 2 | 36 | ವೆಂಕಟೇಶ |
| 168/1 | 4 | 4 | ರಾಜೇಶ್ವರಿ ಜಿ. ವೆಂಕಟೇಶ |
| | 4 | 0 | ರಂಜಿತ್ ಕುಮಾರ್ ಬಿನ್ ಪ್ರಕಾಶ್‌ಚಂದ್ ಧೋಖ |
| | | | ಪ್ರವೀಣ್ ಕುಮಾರ್ ಬಿನ್ ಪ್ರಕಾಶ್‌ಚಂದ್ ಧೋಖ |
| 168/2 | 2 | 1 | ಬಾಲಪ್ಪ, ಹೊನ್ನಪ್ಪ, ಹನುಮಂತ, ಭೀಮರಾವ್, |
| | | | ಮಲ್ಲಪ್ಪ |
| 168/3 | 2 | 1 | ಮಾಣಿಕಮ್ಮ ಕೋಂ ಸಣ್ಣ ಹನಮಂತ |
| | | | ಶಾಂತಮ್ಮ ಕೋಂ ಸಣ್ಣ ಹನಮಂತ |
| 168/4 | 2 | 1 | ದೊಡ್ಡ ಹನಮಂತ ಬಿನ್ ಭೀಮಣ್ಣ |
| 168/5 | 2 | 2 | ಎಸ್, ಹನಮಂತ ಬಿನ್ ಭೀಮಣ್ಣ ನಾಟಿಕರ |
| 169/1 | 3 | 11 | ಹೊನ್ನಪ್ಪ ಬಿನ್ ಹನಮಂತ ಪಟ್ಟೆಪೊರ |
| 169/2 | 3 | 12 | ಹನಮಂತ ಬಿನ್ ನಿಂಗಪ್ಪ |
| 169/3 | 3 | 11 | ಬೀಮರಾವ್ ಬಿನ್ ಅಮಟೆಪ್ಪ ಪಟ್ಟೆಪೊರ |
| | | | ಪಾಪಣ್ಣ ಬಿನ್ ಅಮಟೆಪ್ಪ ಪಟ್ಟೆಪೊರ |
| 170/* | 8 | 37 | ರಂಜಿತ್ ಕುಮಾರ್, ಪ್ರವೀಣ್ ಕುಮಾರ್ ದಿನೇಶ್ ಕುಮಾರ್ |
| 171 | 21 | 14 | ಕೋಮಲ್‌ಚಂದ್, ರಾಜೇಂದ್ರಕುಮಾರ್, ಕಿಶೋರ್ ಕುಮಾರ್, ಅಜಿತ ಕುಮಾರ್, ಭವಾರಿಲಾಲ್, ರಂಜಿತ್ ಕುಮಾರ್, ಪ್ರವೀಣ್ ಕುಮಾರ್ ದಿನೇಶ್ ಕುಮಾರ್ ವಿಜಯಕುಮಾರ್, ನವರತನಮಾಲ, ಗೌತಮ್‌ಚಂದ್, ಜಿತೇಂದ್ರಕುಮಾರ್ ಜೈನ್, ರಾಜೇಶ್ ಜೈನ್ |
| 172/1 | 0 | 36 | ತಿಪ್ಪಣ್ಣ ಬಿನ್ ಸಾಬಣ್ಣ ಕೊಟಗಿರಿ |
| | 3 | 2 | ಮಲ್ಲಕಾರ್ಜುನ ಬಿನ್ ಗುಂಜಳಾಪ್ಪ ಬಕ್ಕನವರ @ ಸಾಧುರ |
| 172/2 | 1 | 18 | ಪವನ್ ಕುಮಾರ್ ಬಿನ್ ಪಾಂಡುರಂಗ ವಿಭೂತಿ |
| 172/3 | 3 | 5 | ಅಮಟೆಪ್ಪ ಬಿನ್ ದೊಡ್ಡದ್ಯಾವಣ್ಣ ಭಾವನೊರ |
| 172/4 | 4 | 21 | ಮಲ್ಲಪ್ಪ ಬಿನ್ ಶರಣಪ್ಪ ಸಾಧು ಸಾ. ಬಂಡಳ್ಳಿ |
| 172/5 | 2 | 5 | ನಾಗಪ್ಪ ಬಿನ್ ಸಾಬಣ್ಣ ಬಂಡಳ್ಳಿ ಸಾ. ಹೊನಗೆರ |
| 172/6 | 2 | 39 | ಶ್ರೀ ವೆಂಕಟೇಶ್ವರ ಬಿನ್ ಭೀಮ ರಾವ್ |
| 173/1 | 1 | 37 | ಗೋವಿಂದಪ್ಪ ಬಿನ್ ಹನಮಂತ |
| | 2 | 16 | ಹನಮಂತ ಬಿನ್ ಹನಮಂತ |
| | 1 | 8 | ಅಮಟೆಪ್ಪ ಬಿನ್ ಭೀಮಣ್ಣ |
| | 1 | 8 | ಹೊನ್ನಪ್ಪ ಬಿನ್ ಭೀಮಣ್ಣ |
| | 2 | 25 | ಭೀಮಣ್ಣ ಬಿನ್ ಅಯ್ಯಪ್ಪ ಹೊನಗೆರ |
| | 1 | 17 | ಶಾಂತಮ್ಮ ಕೋಂ ಗಾಳೆಪ್ಪ |
| | 1 | 0 | ಮಂಹಂತೇಶ |
| 173/2 | 0 | 39 | ತಿಪ್ಪಣ್ಣ |
| 173/3 | 0 | 20 | ಗಿರಿಮಲ್ಲಯ್ಯ ಬಿನ್ ಹೊನ್ನಪ್ಪ ಎಮ್ಮೆನೊರ |
| 173/4 | 0 | 21 | ಶ್ರೀ ಶಂಕರ ಬಿನ್ ಅಮೆಟಪ್ಪ ಎಮ್ಮೆನೊರ |
| 173/5 | 0 | 5 | ಶ್ರೀ ಶಂಕರ ಬಿನ್ ಅಮೆಟಪ್ಪ ಎಮ್ಮೆನೊರ |
| 173/6 | 0 | 9 | ಗಿರಿಮಲ್ಲಯ್ಯ ಬಿನ್ ಹೊನ್ನಪ್ಪ ಎಮ್ಮೆನೊರ |
| 174/1 | 2 | 15 | ಮರಿಲಿಂಗಪ್ಪ ಬಿನ್ ಸಾಬಣ್ಣ ಎ.ಪಿ.ಕೆ.ವಿವಿ |
| | 2 | 16 | ಹೊನ್ನಪ್ಪ ಬಿನ್ ಅಮಟೆಪ್ಪ ನಾಟೆಕರ |
| | 2 | 15 | ಮಾರ್ತಾಂಡಪ್ಪ ಬಿನ್ ಯಂಕಪ್ಪ ಕೊಟಿಗಿರಿ |
| | 1 | 24 | ಸಣ್ಣ ಬಸವರಾಜ್ ಬಿನ್ ಶಿವಪ್ಪ |
| | | | ಶರಣಪ್ಪ ಬಿನ್ ಶಿವಪ್ಪ |
| | 1 | 24 | ಮಹಾದೇವಿ |
| | 1 | 23 | ತಿಪ್ಪಣ್ಣ |
| 174/2 | 0 | 13 | ನಾಗಪ್ಪ |
| 174/3 | 1 | 10 | ನಾಗಪ್ಪ |
| 174/4 | 0 | 17 | ಈರಮ್ಮ |
| 174/5 | 1 | 7 | ಈರಮ್ಮ |
| 173/6 | 1 | 9 | ಹೊನ್ನಮ್ಮ ಕೋಂ ತಾಯಪ್ಪ |
| 174/7 | 0 | 15 | ಹೊನ್ನಮ್ಮ ಕೋಂ ತಾಯಪ್ಪ |
| 174/8 | 0 | 16 | ಈರಮ್ಮ |
| 174/9 | 1 | 39 | ಸಣ್ಣ ಮೀರ |
| 175/1 | 5 | 0 | ಎಲ್ಲಮ್ಮ |
| | 3 | 32 | ದೊಡ್ಡ ಸಾಯಬಣ್ಣ ಬಿನ್ ದೊಡ್ಡ ಭಾಗಪ್ಪ ಚಪೆಟ್ಲ |
| | 3 | 32 | ಭಾಗಪ್ಪ ಬಿನ್ ಯಮನಪ್ಪ |
| | 1 | 14 | ನರಸಪ್ಪ ಬಿನ್ ಸಿದ್ದಪ್ಪ ಸಿದ್ದನೊರ |
| | 1 | 14 | ದೇವೆಂದ್ರಪ್ಪ |
| | 2 | 29 | ಮಲ್ಲಯ್ಯ ಬಿನ್ ದ್ಯಾವಣ್ಣ |
| 175/2 | 2 | 29 | ಭೀಮಣ್ಣ ಬಿನ್ ಹಾಲಪ್ಪ ಹೊನಗೆರ |
| 176/* | 3 | 32 | ಮರೆಪ್ಪ ಬಿನ್ ಮರೆಪ್ಪ ವರ್‌ಕೊರ |
| | 3 | 32 | ತಿಪ್ಪಣ್ಣ ಬಿನ್ ಸಾಯಬಣ್ಣ |
| | 3 | 32 | ಬಸವರಾಜ್ |
| | 3 | 32 | ಕೀರಲಿಂಗಪ್ಪ, ರಾಜಪ್ಪ, ತಿಮ್ಮಪ್ಪ, ಸಂಗಪ್ಪ |

**ಕರ್ನಾಟಕ ರಾಜ್ಯ, ಯಾದಗಿರಿ ಜಿಲ್ಲೆ, ಯಾದಗಿರಿ ತಾಲೂಕು, ಹೊನಗೆರ ಗ್ರಾಮದಲ್ಲಿ ಒಳಗೊಂಡಿರುವ ಕೆಳಕಂಡಂತೆ ತಿಳಿಸಿರುವ ಸರ್ವೆ ನಂಬರುಗಳ ಒಟ್ಟಾರೆ ಜಮೀನಿನ ವಿಸ್ತೀರ್ಣ 123.36 ಎಕರೆಗಳು.**

| ಸರ್ವೆ ನಂಬರು | ಜಮೀನು ವಿಸ್ತೀರ್ಣ ಎಕರೆ | ಗುಂಟೆಗಳು | ಜಮೀನುಗಳ ಮಾಲೀಕರು |
|---|---|---|---|
| 309/* | 5 | 34 | ರಾಮಣ್ಣ ಬಿನ್ ಸಾಯಬಣ್ಣ ಭೈರಪ್ಪನೊರ |
| 309/* | 5 | 35 | ನರಸಪ್ಪ, ಭೀಮಣ್ಣ, ಅಮಟೆಪ್ಪ |
| 310/1 | 1 | 17 | ಧರ್ಮಣ್ಣ |
| 310/2 | 1 | 18 | ಹೊನ್ನಮ್ಮ ಕೋಂ ಅಯ್ಯಣ್ಣ ಪಟ್ಟಿಕುನಿ |
| 310/3 | 0 | 38 | ಲಕ್ಷ್ಮಿ ಕೋಂ ಹೊನ್ನಪ್ಪ ನಾಟೆಕರ್ |
| 310/4 | 2 | 37 | ಎಸ್. ಸಾಬಣ್ಣ |
| | | 38 | ಮಹಾದೇವಮ್ಮ ಕೋಂ ನಿಂಗಪ್ಪ |
| | 1 | 36 | ಪಾರ್ವತಮ್ಮ |
| | 2 | 35 | ಮಣಿಕಮ್ಮ, ಕಾಂತಮ್ಮ |
| | 2 | 35 | ಬಾಲಪ್ಪ, ಹೊನ್ನಪ್ಪ, ಹನಮಂತ, ಭೀಮಣ್ಣ, ಮಲ್ಲಪ್ಪ |
| 311/* | 4 | 22 | ರಾಮಣ್ಣ ಬಿನ್ ಸಾಯಬಣ್ಣ |
| 311/* | 4 | 22 | ಗಂಗಪ್ಪ ಬಿನ್ ಹುಲಗಪ್ಪ |
| 311/* | 4 | 20 | ನರಸಪ್ಪ ಬಿನ್ ಬಸಣ್ಣ ಭೈರಪ್ಪನೊರ |
| 311/* | 4 | 23 | ನರಸಪ್ಪ, ಭೀಮಣ್ಣ, ಅಮಟೆಪ್ಪ |
| 361/* | 0 | 10 | ಮಹಾದೇವಮ್ಮ ಕೋಂ ಹನಮಂತ ಬಂಡಳ್ಳಿ |
| 361/* | 1 | 0 | ಶಾರದಮ್ಮ ಕೋಂ ಯಂಕಪ್ಪ ಬಂಡಳ್ಳಿ |
| 361/* | 1 | 0 | ಹನಮಂತಿ ಕೋಂ ಬಸವರಾಜ್ ಬಂಡಳ್ಳಿ |
| 361/* | 1 | 30 | ಯಂಕಪ್ಪ ಬಿನ್ ದೊಡ್ಡ ರಾಮಣ್ಣ |
| 361/* | 1 | 30 | ಯಂಕಪ್ಪ ಬಿನ್ ರಾಮಣ್ಣ ಬಂಡಳ್ಳಿ |
| 361/* | 4 | 0 | ತಿಮ್ಮಣ್ಣ, ಆಂಜನೆಯ, ಸಣ್ಣ ತಿಮ್ಮಣ್ಣ, ಯಂಕಪ್ಪ ಹೊನ್ನಲಿಂಗಪ್ಪ |
| 362/1 | 1 | 11 | ಬೀಮಣ್ಣ ಬಿನ್ ನಾರಾಯಣಪ್ಪ ಬಂಡಳ್ಳಿ |
| 362/2 | 1 | 9 | ಹೊನ್ನಪ್ಪ |
| 362/3 | 0 | 18 | ಬೀಮಣ್ಣ ಬಿನ್ ನಾರಾಯಣಪ್ಪ ಬಂಡಳ್ಳಿ |
| 362/4 | 0 | 26 | ಹೊನ್ನಪ್ಪ |
| 362/5 | 1 | 1 | ಬೀಮಣ್ಣ ಬಿನ್ ನಾರಾಯಣಪ್ಪ ಬಂಡಳ್ಳಿ |
| 362/6 | 0 | 14 | ಪವನ್ ಕುಮಾರ್ ಬಿನ್ ಪಾಂಡುರಂಗ್ ವಿಭೊಟೆ |
| 362/7 | 0 | 24 | ಪವನ್ ಕುಮಾರ್ ಬಿನ್ ಪಾಂಡುರಂಗ್ ವಿಭೊಟೆ |
| 362/8 | 0 | 3 | ಬೀಮಣ್ಣ ಬಿನ್ ನಾರಾಯಣಪ್ಪ ಬಂಡಳ್ಳಿ |
| 362/9 | 1 | 5 | ತಿಮ್ಮಣ್ಣ ಬಿನ್ ಯಂಕಪ್ಪ ಬಂಡಳ್ಳಿ |
| | 1 | 7 | ಮಲ್ಲಿಕಾರ್ಜುನ ಬಿನ್ ಯಂಕಪ್ಪ |
| | 1 | 8 | ಮಹಾದೇವಪ್ಪ ಬಿನ್ ಯಂಕಪ್ಪ |
| | 1 | 7 | ದೇವೇಂದ್ರಪ್ಪ ಬಿನ್ ಯಂಕಪ್ಪ |
| | 1 | 8 | ಮಲ್ಲಿಕಾರ್ಜುನ ಬಿನ್ ಬಾಲದಂಡಪ್ಪ |
| | | | ಯಂಕಪ್ಪ ಬಿನ್ ಬಾಲದಂಡಪ್ಪ ಗಡಿ |
| | 1 | 3 | ಭೀಮಣ್ಣ ಬಿನ್ ಮಲ್ಲಪ್ಪ ಗೊಲ್ಲೂರ್ |
| | 1 | 7 | ನಾಗಮ್ಮ |
| 363/1 | 1 | 37 | ಸಣ್ಣ ಸಾಬಣ್ಣ ಬಿನ್ ಭೀಮಣ್ಣ ದಂತಪುರ |
| | 3 | 35 | ಸಾಬಣ್ಣ ಬಿನ್ ಆಶಪ್ಪ ದಂತಪುರ |
| | 2 | 10 | ನರಸಮ್ಮ, ಮಣಿಕಮ್ಮ, ಕಾಂತಮ್ಮ, ಈರಪ್ಪ |
| 363/2 | 1 | 0 | ಸಣ್ಣ ಸಾಬಣ್ಣ ಬಿನ್ ಭೀಮಣ್ಣ ದಂತಪುರ |
| 363/3 | 0 | 37 | ದೊಡ್ಡ ಸಾಬಣ್ಣ ಬಿನ್ ಭೀಮಣ್ಣ ದಂತಪುರ |
| 364/1 | 4 | 17 | ಚಂದಮ್ಮ ಕೋಂ ಹೊನ್ನಪ್ಪ ಸುರೈ |
| | 1 | 0 | ಎರಪ್ಪ ಬಿನ್ ಯಂಕಪ್ಪ ನಾಟಿಕೆರ |
| | 0 | 10 | ಯಂಕಪ್ಪ ಬಿನ ಸಣ್ಣ ರಾಮಣ್ಣ ಬಂಡಳ್ಳಿ |
| | 1 | 0 | ಯಂಕಪ್ಪ ಬಿನ ಸಣ್ಣ ರಾಮಣ್ಣ ಬಂಡಳ್ಳಿ |
| 364/2 | 1 | 24 | ಶರಣಮ್ಮ |
| 364/3 | 1 | 21 | ಭೀಮವ್ವ ಕೋಂ ಸಾಬಣ್ಣ ಕೊಟಗೆರಿ |
| 364/4 | 0 | 27 | ಭೀಮವ್ವ ಕೋಂ ಸಾಬಣ್ಣ ಕೊಟಗೆರಿ |
| 364/5 | 0 | 34 | ಮಲ್ಲಮ್ಮ |
| 364/6 | 2 | 5 | ಸಾಬಮ್ಮ |
| 363/7 | 0 | 35 | ಯೋಗೇಶ್ ಕುಮಾರ್ ಜೈನ್ |
| 422/1 | 2 | 2 | ಮರಿಸ್ವಾಮಿ ಬಿನ್ ಮರಗಪ್ಪ |
| | 2 | 0 | ಸಯಮ್ಮ ಕೋಂ ಮರಗಣ್ಣ ಗೊಲ್ಲರ |
| | 1 | 2 | ಸಾಬಣ್ಣ ಬಿನ್ ಬುದಪ್ಪ |
| | 1 | 1 | ದೇವೇಂದ್ರಪ್ಪ ಬಿನ್ ಬುದಪ್ಪ |
| | 1 | 1 | ಅನಂತಪ್ಪ ಬಿನ್ ಬುದಪ್ಪ |
| | 1 | 1 | ಹೊನ್ನಪ್ಪ ಬಿನ್ ಬುದಪ್ಪ |
| 422/2 | 1 | 0 | ಈಶ್ವರಪ್ಪ ಬಿನ್ ಚಂದ್ರಶೇಖರ್ ಅಬ್ಬಿಗೆರಿ ಸಾ. ಶಾಹಪುರ್ |
| 422/3 | 2 | 29 | ರಾಮಣ್ಣ, ಬಿನ್ ಮರಗಪ್ಪ, ಮರೆಪ್ಪ ಬಿನ್ ಲಕ್ಷ್ಮಣ ಸಾಬಣ್ಣ ಬಿನ್ ಲಕ್ಷ್ಮಣ, ಲಕ್ಷ್ಮಣ ಬಿನ್ ಮರಗಪ್ಪ |
| 422/4 | 1 | 16 | ಸಾಬಣ್ಣ |
| 422/5 | 1 | 2 | ದೊಡ್ಡ ಹನಮಂತ |
| 422/6 | 1 | 4 | ಬಸಪ್ಪ ಬಿನ್ ತಿಪ್ಪಣ್ಣ |
| 422/7 | 1 | 3 | ಸಣ್ಣ ಹನಮಂತ |
| 423/* | 3 | 23 | ಕಾಶಪ್ಪ ಬಿನ್ ಸಾಬಣ್ಣ ಎಸ್.ಸಿ. |
| | 1 | 31 | ತಾಯಪ್ಪ ಬಿನ್ ಬಸಪ್ಪ ಎಸ್.ಸಿ |
| | 3 | 23 | ಬಸವರಾಜ್ ಬಿನ್ ಮರೆಪ್ಪ ಬುದ್ದಪ್ಪನೊರ |
| | 3 | 23 | ತಿಪ್ಪಣ್ಣ ಬಿನ್ ಸಾಬಣ್ಣ ಎಸ್.ಸಿ |
| | 1 | 32 | ಸಾಬಣ್ಣ ಬಿನ್ ಬಸಪ್ಪ |

ನಮ್ಮ ಕಕ್ಷೀದಾರರ ಪರವಾಗಿ:– **ಲಿಂಕ್ ಲೀಗಲ್**
4ನೇ ಮಹಡಿ ವೆಸ್ಟ್ ವಿಂಗ್, ರಾಜರಾಜೇಶ್ವರಿ ಟವರ್ಸ್, ನಂ.51, ಡಾ. ಆರ್.ಕೆ.ಸಾಲಾಯಿ, ಮೈಲಾಪುರ್, ಚೆನ್ನೈ – 600004, ಇಂಡಿಯಾ.

# ಸೆಂಥಿಲ್ ಬಾಲಾಜಿ ಜಾಮೀನು ಅರ್ಜಿ ಮೂರನೇ ಬಾರಿ ವಜಾ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ಬಂಧಿಸಿರುವ ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರು ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯವು ಮೂರನೇ ಬಾರಿ ವಜಾಗೊಳಿಸಿದೆ.

ಪ್ರಧಾನ ಸೆಷನ್ಸ್ ನ್ಯಾಯಾಧೀಶರಾದ ಎಸ್. ಅಲ್ಲಿ ಅವರು ಬಾಲಾಜಿ ಅವರ ಅರ್ಜಿಯನ್ನು ಶುಕ್ರವಾರ ತಳ್ಳಿ ಹಾಕಿದ್ದಾರೆ. ಬಾಲಾಜಿ ಅವರನ್ನು 2023 ಜೂನ್ 14ರಂದು ಇ.ಡಿ ಬಂಧಿಸಿತ್ತು.




ಅಟಲ್ ಸೇತು, ಭಾರತದ ಅತಿದೊಡ್ಡ ಸಮುದ್ರ ಸೇತು ಈಗ ತೆರೆದಿದೆ!

### 2016ರಲ್ಲಿ ಕಾಣೆಯಾಗಿದ್ದ ವಾಯುಪಡೆಯ 'ಎಎನ್–32'

# ವಿಮಾನ ಅವಶೇಷಗಳು ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಏಳೂವರೆ ವರ್ಷಗಳ ಹಿಂದೆ ಬಂಗಾಳ ಕೊಲ್ಲಿ ಮೇಲೆ ಹಾರಾಟ ನಡೆಸುವ ವೇಳೆ ನಾಪತ್ತೆಯಾಗಿದ್ದ ವಾಯುಪಡೆಯ ಸಾರಿಗೆ ವಿಮಾನ 'ಎಎನ್–32'ರ ಅವಶೇಷಗಳನ್ನು ಭಾರತೀಯ ವಿಜ್ಞಾನಿಗಳು ಪತ್ತೆ ಮಾಡಿದ್ದಾರೆ.

ಚೆನ್ನೈ ಕರಾವಳಿಯಿಂದ 310 ಕಿ.ಮೀ. (ಅಂದಾಜು 140 ನಾಟಿಕಲ್ ಮೈಲು) ದೂರದಲ್ಲಿ ಬಂಗಾಳ ಕೊಲ್ಲಿಯಲ್ಲಿ 3.4 ಕಿ.ಮೀ. ಆಳದಲ್ಲಿ ವಿಮಾನದ ಅವಶೇಷಗಳು ಪತ್ತೆಯಾಗಿವೆ ಎಂದು ವಾಯುಪಡೆ ಶುಕ್ರವಾರ ತಿಳಿಸಿದೆ.

ಈ ನತದೃಷ್ಟ ವಿಮಾನದಲ್ಲಿ 29 ಸಿಬ್ಬಂದಿ ಇದ್ದರು. 2016ರ ಜುಲೈ 22ರಂದು ಈ ವಿಮಾನ (ಕೆ–2743) ತಾಂಬರಮ್ ವಾಯುನೆಲೆಯಿಂದ ಪೋರ್ಟ್‌ಬ್ಲೇರ್‌ಗೆ ಹೊರಡುವುದಿತ್ತು. ಟೇಕಾಫ್ ಆದ ಕೆಲವೇ ನಿಮಿಷಗಳಲ್ಲಿ ನಾಪತ್ತೆಯಾಗಿತ್ತು.

'ಅವಶೇಷಗಳು ಪತ್ತೆಯಾಗಿರುವ ಸ್ಥಳದಲ್ಲಿ ಇತರ ಯಾವುದೇ ವಿಮಾನ ಅವಘಡ ಸಂಭವಿಸಿರುವ ಬಗ್ಗೆ ದಾಖಲೆಗಳು ಇಲ್ಲ. ಹೀಗಾಗಿ ಈ ಅವಶೇಷಗಳು ಎಎನ್–32 ವಿಮಾನಕ್ಕೆ ಸೇರಿದ್ದವು ಎಂಬುದರತ್ತ ಈ ಅಂಶ ಬೊಟ್ಟು ಮಾಡುತ್ತದೆ' ಎಂದೂ ವಾಯುಪಡೆ ತಿಳಿಸಿದೆ.

ಚೆನ್ನೈನಲ್ಲಿರುವ ರಾಷ್ಟ್ರೀಯ ಸಾಗರ ತಂತ್ರಜ್ಞಾನ ಸಂಸ್ಥೆ (ಎನ್‌ಐಒಟಿ) ವಿಜ್ಞಾನಿಗಳು ಈ ವಿಮಾನದ ಅವಶೇಷ ಪತ್ತೆಗಾಗಿ ಆಳ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸಬಲ್ಲ ಸ್ವಯಂ ಚಾಲಿತ ಶೋಧ ನೌಕೆ (ಎಯುವಿ), ಅವಘಡ ಸಂಭವಿಸಿದ್ದ ಸ್ಥಳದಲ್ಲಿ ನಿಯೋಜಿಸಿದ್ದರು. ಈ ವಾಹನವು 3.4 ಕಿ.ಮೀ. ಆಳದಲ್ಲಿ ವಿಮಾನದ ಅವಶೇಷಗಳನ್ನು ಪತ್ತೆ ಹಚ್ಚಿದೆ.

'ಇದು ಆಕಸ್ಮಿಕವಾಗಿ ಪತ್ತೆಯಾಗಿದೆ. ಹಿಂದೂ ಮಹಾಸಾಗರದಲ್ಲಿ ಆಳ ಸಮುದ್ರದಲ್ಲಿ ಕಾರ್ಯಾಚರಣೆ ನಡೆಸಬೇಕಿತ್ತು. ಇದಕ್ಕಾಗಿ ಕಳೆದ ವಾರ, ಎಯುವಿ ಯನ್ನು ಪರೀಕ್ಷೆಗೆ ಒಳಪಡಿಸಲಾಗುತ್ತಿತ್ತು. ಆಗ, ಈ ಎಯುವಿ ಅವಶೇಷಗಳ ಮೊದಲ ಚಿತ್ರಗಳನ್ನು ಸೆರೆ ಹಿಡಿಯಿತು. ತಕ್ಷಣವೇ ನಾವು ವಾಯುಪಡೆ ಅಧಿಕಾರಿಗಳನ್ನು ಸಂಪರ್ಕಿಸಿದಾಗ, ಅವರು, ಈ ಅವಶೇಷಗಳು ನಾಪತ್ತೆಯಾಗಿದ್ದ ವಿಮಾನದ್ದವು ಎಂಬುದನ್ನು ದೃಢಪಡಿಸಿದರು' ಎಂದು ಭೂವಿಜ್ಞಾನ ಸಚಿವಾಲಯದ ಕಾರ್ಯದರ್ಶಿ ಎಂ.ರವಿಚಂದ್ರನ್ ಅವರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಎನ್‌ಐಒಟಿ ನಿಯೋಜಿಸಿದ್ದ ಎಯುವಿಯಲ್ಲಿ ಮಲ್ಟಿ ಬೀಮ್ ಸೋನಾರ್ ಸೇರಿದಂತೆ ಅತ್ಯಾಧುನಿಕ ಸಾಧನಗಳನ್ನು ಅಳವಡಿಸಲಾಗಿತ್ತು. ಇದರಿಂದ ಅವಶೇಷಗಳ ಪತ್ತೆ ಸಾಧ್ಯವಾಯಿತು' ಎಂದು ಭಾರತೀಯ ವಾಯುಪಡೆ ವಕ್ತಾರ ತಿಳಿಸಿದ್ದಾರೆ.

ಬಂಗಾಳ ಕೊಲ್ಲಿ ಮೇಲೆ ಹಾರಾಡುವ ವೇಳೆ ನಾಪತ್ತೆಯಾಗಿದ್ದ ವಾಯುಪಡೆಯ 'ಎಎನ್–32' ಸಾರಿಗೆ ವಿಮಾನದ ಅವಶೇಷವನ್ನು ರಾಷ್ಟ್ರೀಯ ಸಾಗರ ವಿಜ್ಞಾನ ಸಂಸ್ಥೆಯ ವಿಶೇಷ ವಾಹನ ಶುಕ್ರವಾರ ಪತ್ತೆ ಮಾಡಿದೆ –ಪಿಟಿಐ ಚಿತ್ರ

### 'ಹಲವು ಪ್ರಯತ್ನಗಳು ಫಲ ನೀಡಿರಲಿಲ್ಲ'

ಈ ವಿಮಾನ ನಾಪತ್ತೆ ಪ್ರಕರಣವನ್ನು ಭಾರತದ ವಿಮಾನಯಾನ ಇತಿಹಾಸದಲ್ಲಿಯೇ ಅತ್ಯಂತ ನಿಗೂಢ ವಿದ್ಯಮಾನ ಎಂದು ಪರಿಗಣಿಸಲಾಗಿತ್ತು. ನೌಕಾಪಡೆ, ಕರಾವಳಿ ರಕ್ಷಣಾ ಪಡೆಗಳ ಹಡಗುಗಳನ್ನು ಬಳಸಿ ವ್ಯಾಪಕ ಶೋಧ ನಡೆಸಲಾಗಿತ್ತು. ಇಸ್ರೊ ಉಪಗ್ರಹದ ನೆರವನ್ನು ಸಹ ಪಡೆಯಲಾಗಿತ್ತು. ಈ ಎಲ್ಲ ಪ್ರಯತ್ನಗಳು ಫಲ ನೀಡಿರಲಿಲ್ಲ.

ಮತ್ತೊಂದೆಡೆ, ಪ್ರತಿಕೂಲ ಹವಾಮಾನದಿಂದಾಗಿ ಪ್ರಬಲ ಮಾರುತುಗಳು ಬೀಸುತ್ತಿದ್ದವು. ಇದು ಕೂಡ ಶೋಧ ಕಾರ್ಯಕ್ಕೆ ದೊಡ್ಡ ಅಡಚಣೆಯಾಗಿತ್ತು.

'ನಾಪತ್ತೆಯಾಗುವುದಕ್ಕೂ ಮುನ್ನ ಈ ವಿಮಾನದಿಂದ ಯಾವುದೇ ತುರ್ತು ಸೂಚನೆ ರವಾನೆಯಾಗಿರಲಿಲ್ಲ. ತಾಂಬರಮ್ ವಾಯುನೆಲೆಯಿಂದ ಬೆಳಿಗ್ಗೆ 8.30ಕ್ಕೆ ಟೇಕಾಫ್ ಆಗಿದ್ದ ಈ ವಿಮಾನ 11.30ಕ್ಕೆ ಪೋರ್ಟ್‌ಬ್ಲೇರ್‌ನಲ್ಲಿ ಇಳಿಯಬೇಕಿತ್ತು.


**ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಬೆಂಗಳೂರು**

Dr. B.R. Ambedkar School of Economics University Bengaluru

No. BASEU/07/2020 Date: 11-01-2024

**ರೋಲಿಂಗ್ ಜಾಹೀರಾತು**

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ಇಲ್ಲಿ ಸಂಚಿತ ವೇತನ (consolidated pay) ಆಧಾರದ ಮೇರೆಗೆ 'ಅರ್ಥಶಾಸ್ತ್ರ' ವಿಷಯದಲ್ಲಿ **'ಸಹಾಯಕ ಪ್ರಾಧ್ಯಾಪಕ'ರ ಹುದ್ದೆಗೆ (ಅಡ್–ಹಾಕ್ ಆಧಾರದ ಮೇರೆಗೆ)** 11 ತಿಂಗಳ ಅವಧಿಗೆ ಮಾಸಿಕ ಸಂಚಿತ ರೂ. 80,000/– ರಂತೆ ನೇಮಕ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಿದೆ. ಅಭ್ಯರ್ಥಿಗಳು 'ಅರ್ಥಶಾಸ್ತ್ರ' ವಿಷಯದಲ್ಲಿ ಪಿ.ಹೆಚ್‌ಡಿ. ಹೊಂದಿರಬೇಕು (ಕೊನೆಯ ಪಕ್ಷ ಪ್ರಬಂಧ ಸಲ್ಲಿಸಿರಬೇಕು). ವಿವರಗಳಿಗಾಗಿ ವೆಬ್‌ಸೈಟ್ **www.base.ac.in** ಸಂಪರ್ಕಿಸುವುದು. ದೂ: 080–29557767.

DIPR/CP/YC/3001/2023-24 ಸಹಿ/– ಕುಲಸಚಿವರು

ಜ್ಞಾನಭಾರತಿ ಮುಖ್ಯರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು – 560 072.


# ರಾಜ್ಯಕ್ಕೆ ₹363 ಕೋಟಿ ಬಿಡುಗಡೆ

ನವದೆಹಲಿ: ಪರಿಹಾರಾತ್ಮಕ ಅರಣ್ಯೀಕರಣ ನಿಧಿ (ಕಾಂಪಾ) ಅಡಿಯಲ್ಲಿ ರಾಜ್ಯದ ಸಂಚಿತ ನಿಧಿಯ ಪೈಕಿ ₹363.44 ಕೋಟಿಯನ್ನು ಕೇಂದ್ರ ಸರ್ಕಾರವು ರಾಜ್ಯಕ್ಕೆ ಬಿಡುಗಡೆ ಮಾಡಿದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ತಿಳಿಸಿದರು.

ಕೇಂದ್ರ ಅರಣ್ಯ, ಪರಿಸರ ಸಚಿವ ಭೂಪೇಂದರ್ ಯಾದವ್ ಅವರನ್ನು ಶುಕ್ರವಾರ ಭೇಟಿ ಮಾಡಿದ ಖಂಡ್ರೆ, ಹಣ ಬಿಡುಗಡೆ ಮಾಡುವಂತೆ ಮನವಿ ಮಾಡಿದರು. ಬಳಿಕ ಸಚಿವಾಲಯವು ಹಣ ಬಿಡುಗಡೆ ಮಾಡಿತು. 2019ರ ಫೆ. 8ರಿಂದ 2022ರ ಮಾ. 31ರ ಅವಧಿಯಲ್ಲಿ ಕಾಂಪಾ ಹಣದ ಪೈಕಿ ಕೇಂದ್ರ ನಿಧಿಯ ಹಣ ಕಡಿತ ಮಾಡಿ ಉಳಿದ ಹಣ ಬಿಡುಗಡೆ ಮಾಡಲಾಗಿದೆ. ಪರಿಹಾರ ಅರಣ್ಯೀಕರಣಕ್ಕೆ ₹209.21 ಕೋಟಿ, ಅರಣ್ಯದ ಮೌಲ್ಯದ ಆಧಾರದಲ್ಲಿ ₹98.36 ಕೋಟಿ ಮತ್ತು ಇತರ ವೆಚ್ಚಕ್ಕಾಗಿ ₹55.86 ಕೋಟಿ ವರ್ಗಾವಣೆಗೆ ಕೇಂದ್ರ ಅನುಮೋದನೆ ನೀಡಿದೆ .

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

ಕರ್ನಾಟಕ ರಾಜ್ಯ
ರಸ್ತೆ ಸುರಕ್ಷತಾ ಪ್ರಾಧಿಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ

# ಹೆಲ್ಮೆಟ್‌ಗಳು ಜೀವ ಉಳಿಸುತ್ತವೆ

## ಯಾವಾಗಲೂ ಹೆಲ್ಮೆಟ್ ಧರಿಸಿ ಜೊತೆಗೆ ಹೆಲ್ಮೆಟ್ ಬೆಲ್ಟ್ ಕಟ್ಟಿಕೊಳ್ಳಿ.

- ಇಡೀ ಮುಖವನ್ನು ಮುಚ್ಚುವ ಅಥವಾ ಅರ್ಧ ಮುಖವನ್ನು ಮುಚ್ಚುವ ಹೆಲ್ಮೆಟ್ ಅನ್ನು ಧರಿಸಿ, ಅದರ ಬೆಲ್ಟ್ ಅನ್ನು ಕಟ್ಟಿಕೊಂಡರೆ ಮಾತ್ರ ಹೆಲ್ಮೆಟ್ ಅನ್ನು ಸರಿಯಾಗಿ ಧರಿಸಲಾಗಿದೆ ಎಂದು ಪರಿಗಣಿಸಲಾಗುತ್ತದೆ. ಅರ್ಧ ತಲೆ ಹೆಲ್ಮೆಟ್‌ಗೆ ಕಾನೂನು ಪ್ರಕಾರ ಮಾನ್ಯತೆ ಇಲ್ಲ.
- ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 129 ಪ್ರಕಾರ ಹೆಲ್ಮೆಟ್‌ಗಳ ಬೆಲ್ಟ್ / ಸ್ಟ್ರಾಪ್‌ಗಳನ್ನು ಕಟ್ಟಿಕೊಳ್ಳುವುದು ಕಡ್ಡಾಯ. ದ್ವಿಚಕ್ರ ವಾಹನ ಚಲಾಯಿಸುವಾಗ ಹೆಲ್ಮೆಟ್‌ಗಳನ್ನು ಧರಿಸದೇ ಇರುವುದು ಮೋಟಾರು ವಾಹನಗಳ ಕಾಯ್ದೆ 1988 ರ ಪರಿಚ್ಛೇದ 194ಡಿ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವಾಗಿದೆ.

ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ಶ್ರೀ ರಾಮಲಿಂಗಾರೆಡ್ಡಿ ರವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಂದರ್ಭ

* https://ksp.karnataka.gov.in/storage/pdf-files/Road_Accident–Report_2022.pdf

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

**ರಸ್ತೆ ಸುರಕ್ಷತೆ–ನಮ್ಮ ಆದ್ಯತೆ**

ಡಾ. ಎನ್.ವಿ. ಪ್ರಸಾದ್ ಭಾ.ಆ.ಸೇ
ಕಾರ್ಯದರ್ಶಿಗಳು ಸಾರಿಗೆ ಇಲಾಖೆ

ಯೋಗೀಶ್ ಎ.ಎಂ. ಭಾ.ಆ.ಸೇ
ಆಯುಕ್ತರು, ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಬೆಂಗಳೂರು

ಜೆ. ಪುರುಷೋತ್ತಮ್
ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

# ಪರೀಕ್ಷಾ ಪ್ರಾಧಿಕಾರಕ್ಕೆ ಪ್ರಸನ್ನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಉಡುಪಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯಾಗಿದ್ದ ಎಚ್.ಪ್ರಸನ್ನ ಅವರನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ಈ ಹುದ್ದೆಯನ್ನು ಹೆಚ್ಚುವರಿಯಾಗಿ ನಿರ್ವಹಿಸುತ್ತಿದ್ದ ಎಸ್. ರಮ್ಯಾ ಅವರನ್ನು ಹುದ್ದೆಯಿಂದ ಬಿಡುಗಡೆ ಮಾಡಲಾಗಿದೆ.

**ವರ್ಗಾವಣೆಯಾದವರು:** ಎಂ.ಟಿ. ರೇಜು-ವ್ಯವಸ್ಥಾಪಕ ನಿರ್ದೇಶಕ, ಕರ್ನಾಟಕ ರಾಜ್ಯ ಹಣಕಾಸು ನಿಗಮ; ಸಲ್ಮಾ ಕೆ ಫಾಹಿಮಾ- ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ; ಉಜ್ವಲ್ ಕುಮಾರ್ ಘೋಷ್-ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ(ಇ-ಆಡಳಿತ); ಶಿಲ್ಪಾ ಶರ್ಮಾ-ಪರೀಕ್ಷಾ ನಿಯಂತ್ರಕಿ, ಕರ್ನಾಟಕ ಲೋಕಸೇವಾ ಆಯೋಗ; ಭೋಯರ್ ಹರ್ಷಲ್ ನಾರಾಯಣರಾವ್-ನಿರ್ದೇಶಕ, ಅಟಲ್ ಜನಶಕ್ತಿ ಕೇಂದ್ರ.

ಸಂಗಪ್ಪ-ಕಾರ್ಯನಿರ್ವಾಹಕ ನಿರ್ದೇಶಕ, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್; ರಾಹುಲ್ ಶಿಂದೆ- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಬೆಳಗಾವಿ; ಪ್ರತೀಕ್ ಬಾಯಲ್-ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ಉಡುಪಿ.; ರಿಷಿ ಆನಂದ್- ಮುಖ್ಯ ಕಾರ್ಯನಿರ್ವಾಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ವಿಜಯಪುರ.

# ‘17ರ ಲಾರಿ ಮುಷ್ಕರಕ್ಕೆ ಬೆಂಬಲವಿಲ್ಲ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ‘ತಪ್ಪು ಮಾಹಿತಿ ಮತ್ತು ದುರುದ್ದೇಶ ಪೂರಿತ ಪ್ರಚಾರದ ಮೂಲಕ ಲಾರಿ ಚಾಲಕರನ್ನು ಪ್ರಚೋದಿಸಿ, ಮುಷ್ಕರಕ್ಕೆ ಕರೆ ನೀಡಲಾಗಿದೆ. ಈ ಮುಷ್ಕರಕ್ಕೆ ನಾವು ಬೆಂಬಲ ನೀಡುವುದಿಲ್ಲ’ ಎಂದು ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಆ್ಯಂಡ್ ಏಜೆಂಟ್ಸ್ ಅಸೋಸಿಯೇಷನ್ ತಿಳಿಸಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ, ‘ದಕ್ಷಿಣ ಭಾರತದ ಕೆಲ ಲಾರಿ ಮಾಲೀಕರ ಸಂಘ ಜ.17ರಂದು ಕರೆ ನೀಡಿರುವ ಲಾರಿ ಮುಷ್ಕರ ಅವೈಜ್ಞಾನಿಕವಾಗಿದೆ. ಚಾಲಕರನ್ನು ತಪ್ಪು ದಾರಿಗೆ ಎಳೆಯಲಾಗುತ್ತಿದೆ. ‘ಅಪಘಾತ ನಡೆಸಿ ಪರಾರಿ’ಯಾದ (ಹಿಟ್ ಆ್ಯಂಡ್ ರನ್) ಪ್ರಕರಣಗಳಿಗೆ ಸಂಬಂಧಿಸಿದ ರಸ್ತೆ ಸಂಚಾರ ಕಾನೂನು ತಿದ್ದುಪಡಿಯನ್ನು ಕಾರ್ಯಗತಗೊಳಿಸುವುದಿಲ್ಲ ಎಂದು ಕೇಂದ್ರ ಸರ್ಕಾರ ಲಿಖಿತ ಭರವಸೆ ನೀಡಿದೆ. ಆದ್ದರಿಂದ ಚಾಲಕರು ಆತಂಕಕ್ಕೆ ಒಳಗಾಗಬೇಕಿಲ್ಲ’ ಎಂದು ಹೇಳಿದರು.

‘ತಿದ್ದುಪಡಿ ಮಾಡಲಾದ ಕಾನೂನು ಜಾರಿಯಿಂದ ಆಗುವ ಪರಿಣಾಮಗಳ ಬಗ್ಗೆ ಆಲ್ ಇಂಡಿಯಾ ಮೋಟಾರ್ ಟ್ರಾನ್ಸ್‌ಪೋರ್ಟ್ ಕಾಂಗ್ರೆಸ್ (ಎಐಎಂಟಿಸಿ) ತಂಡವು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಸಿದೆ. ಗೃಹ ಸಚಿವಾಲಯದ ಕಾರ್ಯದರ್ಶಿ ಅವರ ನೇತೃತ್ವದಲ್ಲಿ ಸಭೆಯನ್ನೂ ನಡೆಸಲಾಗಿದ್ದು, ನಿಬಂಧನೆಗಳನ್ನು ವಿಧಿಸುವುದಿಲ್ಲವೆಂದು ಅವರು ಲಿಖಿತ ಭರವಸೆ ನೀಡಿದ್ದಾರೆ. ಆದರೆ, ಈಗ ಪಟ್ಟಭದ್ರ ಹಿತಾಸಕ್ತಿಗಳು ಆಧಾರ ರಹಿತ ವದಂತಿಗಳನ್ನು ಹರಡಿ, ಚಾಲಕರ ದಿಕ್ಕನ್ನು ತಪ್ಪಿಸಲು ಮುಂದಾಗಿದ್ದಾರೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

## ಲೋಕಸಭೆ ಚುನಾವಣೆ: ದೆಹಲಿ ಸಭೆಯಲ್ಲಿ ಪಾಲ್ಗೊಂಡಿದ್ದ ಪರಮೇಶ್ವರ ಹೇಳಿಕೆ

# ‘ಸಚಿವರಿಗೆ ಗೆಲುವಿನ ಹೊಣೆ’

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

**ಬೆಂಗಳೂರು:** ‘ಲೋಕಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಹೆಚ್ಚು ಸ್ಥಾನ ಗೆಲ್ಲುವ ನಿರೀಕ್ಷೆ ಕಾಂಗ್ರೆಸ್ ಹೈಕಮಾಂಡ್ ನಲ್ಲಿದೆ. ಗೆಲುವಿನ ಅವಕಾಶಗಳಿರುವ ಕ್ಷೇತ್ರಗಳಲ್ಲಿ ಕೈಚೆಲ್ಲದಂತೆ ಎಲ್ಲ ಸಚಿವರಿಗೂ ಸೂಚನೆ ನೀಡಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, ‘ಲೋಕಸಭಾ ಚುನಾವಣೆ ಸಿದ್ಧತೆ ಕುರಿತು ದೆಹಲಿಯಲ್ಲಿ ನಡೆದ ಸಭೆಯಲ್ಲಿ ವಿಸ್ತೃತವಾಗಿ ಚರ್ಚೆ ನಡೆದಿದೆ. ಪ್ರತಿ ಸಚಿವರ ಜತೆಗೂ ಪ್ರತ್ಯೇಕ ಸಭೆ ನಡೆಸಿರುವ ‘ಎಐಸಿಸಿ ಚುನಾವಣಾ ವಾರ್ ರೂಮ್’ ಮುಖ್ಯಸ್ಥ ಸಸಿಕಾಂತ್ ಸೆಂಥಿಲ್ ಅವರು, ಪಕ್ಷದ ಹೈಕಮಾಂಡ್‌ನ ನಿರೀಕ್ಷೆ ಏನು ಎಂಬುದನ್ನು ತಿಳಿಸಿದ್ದಾರೆ’ ಎಂದರು.

ಹಿಂದೆ ಒಮ್ಮೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು 27 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಆ ರೀತಿಯ ಫಲಿತಾಂಶವನ್ನು ಪಕ್ಷದ ವರಿಷ್ಠರು ಬಯಸಿದ್ದಾರೆ. ಗೆಲುವಿನ ಅವಕಾಶವಿರುವ ಕ್ಷೇತ್ರಗಳಲ್ಲಿ ಸೋತರೆ ಉಸ್ತುವಾರಿ ಹೊತ್ತಿರುವ ಸಚಿವರು ಸಮರ್ಪಕವಾಗಿ ಕೆಲಸ ಮಾಡಿಲ್ಲ ಎಂಬುದಾಗಿ ಭಾವಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ ಎಂದು ಹೇಳಿದರು.

**ಅಭ್ಯರ್ಥಿ ಕುರಿತು ಚರ್ಚೆಸಿಲ್ಲ:** ‘ಅಭ್ಯರ್ಥಿಗಳ ಆಯ್ಕೆ ಕುರಿತು ಯಾವುದೇ ಚರ್ಚೆ ನಡೆದಿಲ್ಲ. ಸಚಿವರ ಸ್ಪರ್ಧೆಯ ಬಗ್ಗೆಯೂ ಯಾವುದೇ ಸೂಚನೆ ನೀಡಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ರಾಜ್ಯದಲ್ಲಿ ಸಭೆ ನಡೆಸಿ, ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಅಂತಿಮಗೊಳಿಸಲಾಗುತ್ತದೆ. ಪಕ್ಷದ ಕೇಂದ್ರ ಚುನಾವಣಾ ಸಮಿತಿಯು ರಾಜ್ಯದಿಂದ ರವಾನೆಯಾಗುವ ಶಿಫಾರಸುಗಳನ್ನು ಪರಿಶೀಲಿಸಿ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲಿದೆ ಎಂದರು.

### ‘ಕಾಂಗ್ರೆಸ್ ಸೇರಲು ಎಸ್‌ಪಿಎಂ ಇಂಗಿತ’

‘ಮಾಜಿ ಸಂಸದ ಎಸ್.ಪಿ. ಮುದ್ದಹನುಮೇಗೌಡ ಅವರು ಕಾಂಗ್ರೆಸ್ ಪಕ್ಷ ಸೇರುವುದಕ್ಕಾಗಿ ನನ್ನನ್ನೂ ಭೇಟಿ ಮಾಡಿ ಚರ್ಚಿಸಿದ್ದಾರೆ’ ಎಂದು ಪರಮೇಶ್ವರ ಹೇಳಿದರು.

‘ಅವರು ಪಕ್ಷ ಸೇರ್ಪಡೆಯಾಗಲು ಯಾವುದೇ ಅಭ್ಯಂತರವಿಲ್ಲ. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗಮನಕ್ಕೂ ತರಲಾಗಿದೆ. ಪಕ್ಷ ಸೇರಲು ಮುಕ್ತ ಅವಕಾಶವಿದೆ. ಟಿಕೆಟ್ ವಿಚಾರದಲ್ಲಿ ಷರತ್ತು ವಿಧಿಸುವಂತಿಲ್ಲ’ ಎಂದು ಹೇಳಿದರು.

### ‘ಹೆಚ್ಚುವರಿ ಡಿಸಿಎಂ: ಬಹಿರಂಗ ಹೇಳಿಕೆ ನೀಡದಂತೆ ಸೂಚನೆ’

‘ಹೆಚ್ಚುವರಿಯಾಗಿ ಮೂವರಿಗೆ ಉಪ ಮುಖ್ಯಮಂತ್ರಿ ಸ್ಥಾನ ನೀಡಬೇಕೆಂಬ ಬೇಡಿಕೆ ಕುರಿತು ದೆಹಲಿ ಸಭೆಯಲ್ಲಿ ಯಾವುದೇ ಚರ್ಚೆಯಾಗಿಲ್ಲ. ಲೋಕಸಭಾ ಚುನಾವಣೆ ಇರುವುದರಿಂದ ಬಹಿರಂಗ ಹೇಳಿಕೆ ನೀಡದಂತೆ ವರಿಷ್ಠರು ಸೂಚಿಸಿದ್ದಾರೆ’ ಎಂದು ಜಿ. ಪರಮೇಶ್ವರ ತಿಳಿಸಿದರು.

# ಮುಂದುವರಿದ ಜಟಾಪಟಿ: ಕೆಪಿಎಸ್‌ಸಿ ಅಧಿಸೂಚನೆ ರದ್ದು

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಅಧ್ಯಕ್ಷರು, ಸದಸ್ಯರು ಮತ್ತು ಕಾರ್ಯದರ್ಶಿಯ ಮಧ್ಯದ ಜಟಾಪಟಿ ಮುಂದುವರಿದಿದೆ. ಕಾನೂನು ಕೋಶದ ಮುಖ್ಯಸ್ಥರ ನೇಮಕಕ್ಕೆ ಕಾರ್ಯದರ್ಶಿ ಹೊರಡಿಸಿದ್ದ ಹೊಸ ಅಧಿಸೂಚನೆಯನ್ನು ಆಯೋಗವು ಶುಕ್ರವಾರ ರದ್ದುಗೊಳಿಸಿದೆ.

ಆಯೋಗದ ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿಗೆ 2023ರ ನವೆಂಬರ್ 11ರಂದು ಅಧಿಸೂಚನೆ ಹೊರಡಿಸಲಾಗಿತ್ತು. ಕೆಪಿಎಸ್‌ಸಿ ಅಧ್ಯಕ್ಷರು ಮತ್ತು ಸದಸ್ಯರ ತಂಡವೊಂದು ಆಯ್ಕೆ ಪ್ರಕ್ರಿಯೆಯನ್ನು ಅಂತಿಮಗೊಳಿಸಿ, ನೇಮಕಾತಿಗೆ ಶಿಫಾರಸು ಮಾಡಿತ್ತು. ಅದಕ್ಕೆ ಕಾರ್ಯದರ್ಶಿ ತಕರಾರು ಎತ್ತಿದ್ದರು.

ಪ್ರಕ್ರಿಯೆ ಕಾನೂನು ಪ್ರಕಾರ ನಡೆದಿಲ್ಲ ಎಂಬ ತಕರಾರಿನೊಂದಿಗೆ ನವೆಂಬರ್ 15ರ ಅಧಿಸೂಚನೆಯನ್ನೇ ರದ್ದುಗೊಳಿಸಿ ಆಯೋಗದ ಕಾರ್ಯದರ್ಶಿ ಜನವರಿ 9ರಂದು ಅಧಿಸೂಚನೆ ಹೊರಡಿಸಿದ್ದರು. ಶುಕ್ರವಾರ ಸಭೆ ನಡೆಸಿರುವ ಆಯೋಗದ ಅಧ್ಯಕ್ಷ ಶಿವಶಂಕರಪ್ಪ ಎಸ್. ಸಾಹುಕಾರ್ ಮತ್ತು ಸದಸ್ಯರು, ಜ.9ರಂದು ಕಾರ್ಯದರ್ಶಿ ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸುವ ತೀರ್ಮಾನ ಕೈಗೊಂಡಿದ್ದಾರೆ.

‘ಕಾನೂನು ಕೋಶದ ಮುಖ್ಯಸ್ಥರ ನೇಮಕಾತಿಗೆ ನವೆಂಬರ್ 15ರಂದು ಹೊರಡಿಸಿದ್ದ ಅಧಿಸೂಚನೆಯನ್ನು ಹಿಂಪಡೆಯಲು ಆಯೋಗದ ನಿರ್ಣಯವಿಲ್ಲದೇ, ಆಯೋಗದ ಗಮನಕ್ಕೆ ತಾರದೇ ಕಾರ್ಯದರ್ಶಿಯವರು ಮಂಗಳವಾರ ಅಧಿಸೂಚನೆ ಹೊರಡಿಸಿದ್ದರು. ಕ್ರಮಬದ್ಧವಾಗಿಲ್ಲದ ಕಾರಣದ ಅದನ್ನು ರದ್ದುಪಡಿಸಲು ಆಯೋಗವು ನಿರ್ಣಯ ಕೈಗೊಂಡಿದೆ’ ಎಂದು ಶಿವಶಂಕರಪ್ಪ ಸಾಹುಕಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


**ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,**
ನಂ.2 ಕಟ್ಟಡಗಳ ವಿಭಾಗ, ಲೋ.ಇ.ಅನೆಕ್ಸ್ ಕಟ್ಟಡ, 1ನೇ ಮಹಡಿ, ಕೆ.ಆರ್.ವೃತ್ತ, ಬೆಂಗಳೂರು–560001. ದೂರವಾಣಿ: 080–22122856
ಸಂಖ್ಯೆ: 07/2023–24 ದಿನಾಂಕ: 12.01.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಮೇಲ್ಕಂಡ ಇಲಾಖೆಯು ಬೆಂಗಳೂರಿನ ವಿವಿಧ ಸೂಚಿತ ಸ್ಥಳಗಳಲ್ಲಿ ಸುಲಭ್ ಶೌಚಾಲಯದ ನವೀಕರಣ, ಫಾಲ್ಸ್ ಸೀಲಿಂಗ್ ಅಳವಡಿಸುವುದು, ಆಧುನಿಕ ಹೈಟೆಕ್ ಶೌಚಾಲಯಗಳ ನಿರ್ಮಾಣ, ಉದ್ಯಾನ ಅಭಿವೃದ್ಧಿ ಕಾಮಗಾರಿಗಳಿಗೆ ದರಪಟ್ಟಿ ಒದಗಿಸುವುದು, ಪೇಂಟಿಂಗ್ ಮತ್ತು ಇತರೆ ಅಭಿವೃದ್ಧಿ ಕಾಮಗಾರಿಗಳು ಸೇರಿದಂತೆ ಒಟ್ಟು 6 ಕಾಮಗಾರಿಗಳಿಗೆ ಲೆಕ್ಕಶೀರ್ಷಿಕೆ– 4059 ನ್ಯಾಯಾಲಯ ಕಟ್ಟಡಗಳ ಅಡಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://kppp.karnataka.gov.in ಮೂಲಕ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತರಾದ ಅರ್ಹ 1ನೇ, 2ನೇ ಮತ್ತು 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಠ ರೂ.20 ಲಕ್ಷಗಳು, ಗರಿಷ್ಠ ರೂ.100 ಲಕ್ಷಗಳು,** ಪ್ರತೀ ಕಾಮಗಾರಿಯ ಕಾಲಾವಧಿ (ಮಳೆಗಾಲ ಸೇರಿ): **1 ರಿಂದ 4 ತಿಂಗಳು. ಮೀಸಲಾತಿ: ಕಾಮಗಾರಿ 1 ಮತ್ತು 2ಕ್ಕೆ ಪರಿಶಿಷ್ಟ ಜಾತಿ, ಕಾಮಗಾರಿ 3ಕ್ಕೆ: ಪರಿಶಿಷ್ಟ ಪಂಗಡ ಮತ್ತು ಕಾಮಗಾರಿ 4ರಿಂದ 6ಕ್ಕೆ: ಇತರೆ.** ಟೆಂಡರ್ ಪ್ರಕ್ರಿಯೆ ಶುಲ್ಕ ಮತ್ತು ಇಎಂಡಿಯನ್ನು ಇ–ಪೋರ್ಟಲ್‌ನಲ್ಲಿ ತಿಳಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ: **17.01.2024 ರಿಂದ 23.01.2024ರ ಸಂಜೆ 4.30 ಗಂಟೆವರೆಗೆ.** ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **23.01.2024, ಸಂಜೆ 4.30 ಗಂಟೆವರೆಗೆ.** ಟೆಂಡರ್‌ಗಳನ್ನು ತೆರೆಯುವ ದಿನಾಂಕ: **25.01.2024, ಸಂಜೆ 4.30 ಗಂಟೆಗೆ.** ಟೆಂಡರ್‌ನ ಸಂಕ್ಷಿಪ್ತ ಕಾಮಗಾರಿ ವಿವರ, ಟೆಂಡರ್‌ಗಿಟ್ಟಿರುವ ಮೊತ್ತ, ಕಾಲಾವಧಿ, ಮೀಸಲಾತಿ ಮತ್ತು ಇತರೆ ಹೆಚ್ಚಿನ ಮಾಹಿತಿಯನ್ನು ಮೇಲ್ಕಂಡ ಕಚೇರಿಯಿಂದ ಅಥವಾ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ http://kppp.karnataka.gov.in ನಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ವಾಸಾಸಂಇ/ಉನಿ-ಸಿ.ಪಿ/3014/ಕೆಎಸ್‌ಎಂಸಿಎ/2023-24



**ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
ಅಲ್ಪಸಂಖ್ಯಾತರ ನಿರ್ದೇಶನಾಲಯ, ನಂ.16 ಸಿ, ಮೌಲಾನಾ ಆಜಾದ್ ಭವನ, ಮಿಲ್ಲರ್ ಟ್ಯಾಂಕ್ ಬೆಡ್ ರಸ್ತೆ, ವಸಂತ ನಗರ, ಬೆಂಗಳೂರು–560052.
ದೂರವಾಣಿ: 080–22535901/02, ಸಹಾಯವಾಣಿ: 8277799990.
Email:directorgokdom@gmail.com Website: https://dom.karnataka.gov.in

**ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ**
**ವಿದ್ಯಾರ್ಥಿವೇತನದ ಶುಲ್ಕ ಮರುಪಾವತಿ ಪ್ರಕಟಣೆ 2023–24**

ಅಲ್ಪಸಂಖ್ಯಾತರ ನಿರ್ದೇಶನಾಲಯ ಬೆಂಗಳೂರು ರವರಿಂದ ಪಿಯುಸಿ, ಡಿಪ್ಲೊಮಾ, ತಾಂತ್ರಿಕ ಮತ್ತು ವೃತ್ತಿಪರ ಪದವಿ ಮತ್ತು ಸ್ನಾತಕೋತ್ತರ ಪದವಿ ಕೋರ್ಸ್‌ಗಳಲ್ಲಿ ಓದುತ್ತಿರುವ ಕರ್ನಾಟಕ ರಾಜ್ಯದಲ್ಲಿರುವ ಅರ್ಹ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ 2023–24 ನೇ ಸಾಲಿನ "ಶುಲ್ಕ ಮರುಪಾವತಿ" ಯೋಜನೆಯಡಿ ಆನ್‌ಲೈನ್ ಅರ್ಜಿಯನ್ನು ಆಹ್ವಾನಿಸಲಾಗಿರುತ್ತದೆ.

**ಆನ್ ಲೈನ್ ಅರ್ಜಿಗಾಗಿ ಈ ಕೆಳಗಿನ ಜಾಲತಾಣಕ್ಕೆ ಭೇಟಿ ನೀಡಿ**

ವಿದ್ಯಾರ್ಥಿಗಳು ಈ ಕೆಳಗಿನ ಲಿಂಕ್‌ಗಳಿಗೆ ಭೇಟಿ ನೀಡುವ ಮೂಲಕ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಸಬಹುದು. https :// https://ssp.postmatric.karnataka.gov.in/(ಸ್ಟೇಟ್ ಸ್ಕಾಲರ್‌ಷಿಪ್ ಪೋರ್ಟಲ್) (ಅಲ್ಪ ಸಂಖ್ಯಾತರ ನಿರ್ದೇಶನಾಲಯ – ಕರ್ನಾಟಕ ಸರಕಾರ) https://dom.karnatak.gov.in (Directorate of Minorities - GOK).

ಆನ್ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : ಪೋಸ್ಟ್ –ಮೆಟ್ರಿಕ್ ಮತ್ತು ಮೆರಿಟ್–ಕಮ್ –ಮೀನ್ಸ್ ಶುಲ್ಕ ಮರುಪಾವತಿ : 30.01.2024.

**ಅರ್ಹತೆಗಳು:**

- ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಬೌದ್ಧ, ಸಿಖ್, ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು
- ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಕನಿಷ್ಠ 50% ಅಂಕಗಳನ್ನು ಪಡೆದಿರಬೇಕು.
- ಮೆಟ್ರಿಕ್ ನಂತರದ (ಶುಲ್ಕ ಮರುಪಾವತಿ)ಗಾಗಿ ಕುಟುಂಬದ ವಾರ್ಷಿಕ ವರಮಾನ ಒಟ್ಟು ಆದಾಯ ರೂ. 2 ಲಕ್ಷಗಳನ್ನು ಮೀರಿರಬಾರದು ಮತ್ತು ಮೆರಿಟ್–ಕಮ್–ಮೀನ್ಸ್ (ಶುಲ್ಕ ಮರುಪಾವತಿ) ಗಾಗಿ ರೂ. 2.5 ಲಕ್ಷ ಮೀರಿರಬಾರದು.

ಅರ್ಜಿಗಳನ್ನು ಸಲ್ಲಿಸುವ ವಿಧಾನ ಮತ್ತು ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಅಧಿಕೃತ ವೆಬ್‌ಸೈಟ್ https://dom.karnataka.gov.in ಅನ್ನು ವೀಕ್ಷಿಸಿ. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳನ್ನು (MIC) ಸಂಪರ್ಕಿಸಬಹುದು
ಅಥವಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ 24x7 ಸಹಾಯವಾಣಿ ನಂ 8277799990 ಸಂಪರ್ಕಿಸಿ.

ಸೂಚನೆ : ಪ್ರಸ್ತುತ ಅಧಿಸೂಚನೆಯು ಶುಲ್ಕ ಮರುಪಾವತಿಗೆ ಮಾತ್ರ ಅನ್ವಯಿಸುತ್ತದೆ. ಅರ್ಜಿಗಳನ್ನು ಶುಲ್ಕ ಮರುಪಾವತಿ ಯೋಜನೆಯಡಿ ಮಾತ್ರ ಪರಿಗಣಿಸಲಾಗುತ್ತದೆ.

ದಿನಾಂಕ : 11.01.2024
ಸ್ಥಳ : ಬೆಂಗಳೂರು
ಸಹಿ/– ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ, ಬೆಂಗಳೂರು.
DIPR/CP/3036/Zen/2023-24



Phone : 0816-2278792 e-mail: dmtumkurkfcsc@yahoo.com
**ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತ**
**Karnataka Food & Civil Supplies Corporation Ltd.,**
(Government of Karnataka Undertaking)
4 ನೇ ಕ್ರಾಸ್, ಶಂಕರಪುರಂ ಬಡಾವಣೆ, ದೊಡ್ಡಮನೆ ನರ್ಸಿಂಗ್ ಹೋಂ ರಸ್ತೆ, ತುಮಕೂರು–572102
4th cross, Shankarapuram, Near Doddamane Nursing Home, Tumakuru– 572102
No:KFCSC/TUM/PRO/MSP/H&T Adv/2023-24/ ದಿನಾಂಕ:–12.01.2024

**ಅಲ್ಪಾವಧಿ ಇ– ಟೆಂಡರ್ ಪ್ರಕಟಣೆ**
**(ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)**

2023–24 ನೇ ಸಾಲಿನ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಖರೀದಿಸುವ ರಾಗಿಯನ್ನು ಖರೀದಿ ಕೇಂದ್ರಗಳಿಂದ ಸಂಗ್ರಹಣಾ ಕೇಂದ್ರಗಳಿಗೆ ಸಾಗಾಣಿಕೆ ಮಾಡಲು ಹಸ್ತಾಂತರ ಮತ್ತು ಸಾಗಾಣಿಕೆ ಗುತ್ತಿಗೆದಾರರನ್ನು ನೇಮಕ ಮಾಡಲು ಕರ್ನಾಟಕ ಪಾರದರ್ಶಕತೆ ವಿಧೇಯಕ–2000ರ ಪ್ರಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (**https://kppp.karnataka.gov.in**) ಮೂಲಕ ಅಲ್ಪಾವಧಿ ಟೆಂಡರ್ ಮರುಪ್ರಕಟಣೆ. ಈ ಮೂಲಕ ಅರ್ಹ ಟೆಂಡರ್‌ದಾರರ ಗಮನಕ್ಕೆ ತರಬಯಸುವುದೇನೆಂದರೆ, ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ತೆರೆದಿರುವ ರಾಗಿ ಖರೀದಿ ಕೇಂದ್ರಗಳಲ್ಲಿ ಖರೀದಿಸಿದ ರಾಗಿಯನ್ನು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿರುವ **KSWC/APMC** ಹಾಗೂ ಖಾಸಗಿ ಗೋದಾಮುಗಳಿಗೆ ಸಾಗಾಣಿಕೆ ಕಾರ್ಯನಿರ್ವಹಿಸಲು ದ್ವಿಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್ ಅನ್ನು ಮತ್ತೊಮ್ಮೆ ಆಹ್ವಾನಿಸಲಾಗಿದೆ. ಟೆಂಡರ್ ಸಂ. **KFCSCL/2023-24/SE0042/CALL-2** ರಲ್ಲಿ ಭಾಗವಹಿಸಲು **ದಿ:12.01.2024 ರ 5.18 ಗಂಟೆಯಿಂದ ದಿ: 19.01.2024 ರ ಸಂಜೆ 5.29 ಗಂಟೆವರೆಗೆ** ಅವಕಾಶವಿರುತ್ತದೆ. ಹೆಚ್ಚಿನ ವಿವರಗಳಿಗಾಗಿ **https://kppp.karnataka.gov.in.** ವೆಬ್‌ಸೈಟ್ ಅನ್ನು ಪರಿಶೀಲಿಸುವುದು.

ಸಹಿ/– ಜಿಲ್ಲಾ ವ್ಯವಸ್ಥಾಪಕರು, ಕಆನಾಸನಿನಿ., ತುಮಕೂರು



**ಕ–ರೈಡ್**
**ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ**
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
**ಬೆಂಗಳೂರು ಉಪನಗರ ರೈಲ್ವೆ ಯೋಜನೆ**
CIN: U60100KA2000SGC028171
ಕ–ರೈಡ್ K RIDE
ನೋಂದಾಯಿತ ಕಚೇರಿ: 1ನೇ ಮಹಡಿ, ಸಂಪರ್ಕ ಸೌಧ, ಓರಿಯನ್ ಮಾಲ್ ಎದುರು, ರಾಜಾಜಿನಗರ, ಬೆಂಗಳೂರು–10
ಇ–ಟೆಂಡರ್ ಸೂಚನ ಸಂ. KRIDE/2023-24/OW/WORK_INDENT17 ದಿನಾಂಕ 11.01.2024

**ಇ–ಟೆಂಡರ್ ಅಧಿಸೂಚನೆ**

ಈ ಕೆಳಗಿನ ಕಾಮಗಾರಿಗಳಿಗಾಗಿ ಅನುಭವಿ ಸಂಸ್ಥೆಗಳಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ.

ಬಿಎಸ್‌ಆರ್‌ಪಿ ಯ ಕಾರಿಡಾರ್–1 ರಲ್ಲಿ ಮರಗಳ ಎಣಿಕೆ ಮಾಡುವುದು, ಗುರುತು ಹಾಕುವುದು ಮತ್ತು ವರದಿ ತಯಾರಿಸುವುದು.

**ಬಿಡ್ ಸಲ್ಲಿಸಲು ಕೊನೆಯ ದಿನಾಂಕ: 29.01.2024**

**ವಿವರಗಳಿಗಾಗಿ ಭೇಟಿ ನೀಡಿ:** https://kppp.karnataka.gov.in **ಅಥವಾ** www.kride.in

ಸಹಿ/– ಕಾರ್ಯಪಾಲಕ ನಿರ್ದೇಶಕರು ಸಿವಿಲ್
DIPR/CP/VCPL/2986/2022-23



ಕರ್ನಾಟಕ ಸರ್ಕಾರ
**ಕಾರ್ಯಾಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.**
ಇ–ಮೇಲ್:zped_cta@yahoo.com ದೂರವಾಣಿ ಸಂ:08194–222372
ಸಂ. ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2023–24/1902 ದಿ: 10.01.2024

**ಟೆಂಡರ್ ಪ್ರಕಟಣೆ**
(Through e-Procurement Portal Only)

ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ ವ್ಯಾಪ್ತಿಯಲ್ಲಿ ವಿವಿಧ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ 11 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ. 6.00 ಲಕ್ಷ ಗರಿಷ್ಠ ರೂ. 27.00 ಲಕ್ಷಗಳಿಗೆ ಒಟ್ಟು ರೂ. 132.63 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ನಿಗದಿಪಡಿಸಿದ ದಿನಾಂಕಗಳು ಈ ಕೆಳಕಂಡಂತಿವೆ. (1) ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ: 17.01.2024ರ ಸಮಯ 16.30 (2) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 18.01.2024ರ ಸಮಯ 16.00 (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19.01.2024ರ ಸಮಯ 16.00 (4) ತಾಂತ್ರಿಕ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 20.01.2024ರ ಸಮಯ 16.01 ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (https://kppp.karnataka.gov.in) or E-Proc Help desk Phone No: 080-25501216, 080-25501227 ಸಂಪರ್ಕಿಸಲು ಅಥವಾ ದೂ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗ ರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.

RO.No.473:DIPR/CTA/KSMCA/2023-24
ಸಹಿ/– ಕಾರ್ಯಪಾಲಕ ಅಭಿಯಂತರರು ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ



**ಕೃಷಿ ಮಾರಾಟ ಇಲಾಖೆ**
**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ತಾಳಿಕೋಟಿ–586214**
ದೂರವಾಣಿ ಸಂ:08356–266231, ಇ–ಮೇಲ್: apmctalikote@gmail.com
ಕ್ರ.ಸಂ:ಕೃಉಮಾಸ/ತಾ/850/2023–24 ದಿನಾಂಕ:10.01.2024

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತಾಳಿಕೋಟೆಯ 2023–24 ನೇ ಸಾಲಿನ ಆರ್.ಐ.ಡಿ.ಎಫ್–29 ರ ಯೋಜನೆಯಡಿ ಅನುಮೋದನೆಗೊಂಡ Construction of C.C.Road & RCC Drain sub market yard Muddebihal and CC, BT and RCC Drain at Main Market yard of APMC Talikote ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಗುತ್ತಿಗೆದಾರರಿಂದ ಎರಡು ಲಕೋಟೆ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ http://kppp.karnataka.gov.in ವೆಬ್‌ಸೈಟ್‌ನಲ್ಲಿ ಐಟಂವಾರು ಟೆಂಡರ್‌ಗಳನ್ನು KW-4 ರನ್ವಯ ಆಹ್ವಾನಿಸಲಾಗಿದೆ.
**ಕಾಮಗಾರಿಯ ಹೆಸರು:** Construction of C.C.Road & RCC Drain sub market yard Muddebihal and CC, BT and RCC Drain at Main Market yard of APMC Talikote **ಟೆಂಡರಿಗಿಟ್ಟ ಮೊತ್ತ ರೂ. 490.77 ಲಕ್ಷಗಳು (ಜಿ.ಎಸ್.ಟಿ ಹೊರತುಪಡಿಸಿ) ಇ.ಎಂ.ಡಿ. ಮೊತ್ತ ರೂ 7.36 ಲಕ್ಷಗಳು. ಟೆಂಡರ್ ಪ್ರೋಸೆಸಿಂಗ್ ಫೀ:** ಇ–ಪೋರ್ಟಲ್ ನಿಯಮಾವಳಿ ಪ್ರಕಾರ. **ಕಾಮಗಾರಿ ಅವಧಿ: 175 ದಿನಗಳು (ಮಳೆಗಾಲ ಹೊರತುಪಡಿಸಿ) ಗುತ್ತಿಗೆದಾರರ ದರ್ಜೆ: 1ನೇ ದರ್ಜೆ ಸಿವಿಲ್ ಗುತ್ತಿಗೆದಾರರಿಂದ.**
1) ಪ್ರೀ ಬಿಡ್ ಮೀಟಿಂಗ್ **ದಿನಾಂಕ: 25.01.2024** ವೇಳೆ ಮಧ್ಯಾಹ್ನ 12.00 ಗಂಟೆಗೆ. ಸ್ಥಳ: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ತಾಳಿಕೋಟೆ ಸಭಾಂಗಣದಲ್ಲಿ.
2) ಭರ್ತಿ ಮಾಡಿದ ಟೆಂಡರ್‌ಗಳನ್ನು ವೆಬ್‌ಸೈಟ್‌ನಲ್ಲಿ ಸಲ್ಲಿಸುವ ಕೊನೆಯ **ದಿನಾಂಕ: 29.01.2024** ರ ಸಾಯಂಕಾಲ 4.30 ಘಂಟೆಗೆ.
3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 31.01.2024** ಸಾಯಂಕಾಲ 4.00 ಗಂಟೆಗೆ.
4) ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09.02.2024** ಬೆಳಿಗ್ಗೆ 11.30 ಗಂಟೆಗೆ (ಸಾಧ್ಯವಾದಲ್ಲಿ)
5) ಹೆಚ್ಚಿನ ಮಾಹಿತಿ ಷರತ್ತ–ವ–ನಿಬಂಧನೆಗಳನ್ನು http://kppp.karnataka.gov.in ವೆಬ್‌ಸೈಟ್‌ನಲ್ಲಿ ಅಥವಾ ಕಛೇರಿ ವೇಳೆಯಲ್ಲಿ ಪಡೆಯಬಹುದು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿದೆ.

ಸಹಿ/– ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ, ತಾಳಿಕೋಟಿ
ಸಹಿ/– ಕಾರ್ಯದರ್ಶಿ, ಕೃ.ಉ.ಮಾ.ಸ, ತಾಳಿಕೋಟಿ
ವಾಸಾಸಂಇ/ವಿಜಯಪುರ/397/ಕೆಎಸ್‌ಎಂಸಿಎ/2023–24



**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ: ಬೆಂಗಳೂರು
ಸಂ: ಕರಾಸಾ/ವಿನಿ/ಕೆಂಬನಿ/ವಾ/1020/2023–24 ದಿನಾಂಕ: 10–01–2024

**ಇ–ಟೆಂಡರು/ಸಂಧಾನ ಪ್ರಕಟಣೆ ಸಂಖ್ಯೆ: 06/2023–24**

ಕೆಂಪೇಗೌಡ ಬಸ್ ನಿಲ್ದಾಣದ ಟರ್ಮಿನಲ್ 1, 2, 2ಎ ಮತ್ತು 3 ರಲ್ಲಿ ಖಾಲಿ ಇರುವ/ಖಾಲಿಯಾಗಲಿರುವ ಮಳಿಗೆ ಸಂಖ್ಯೆ: 24, 47, 117 ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದ ಮಳಿಗೆ ಸಂಖ್ಯೆ: 05, 09ಕ್ಕೆ ಹಾಗೂ ಶ್ರೀ ಬಸವೇಶ್ವರ ಬಸ್ ನಿಲ್ದಾಣದ (ಪೀಣ್ಯಾ) ಕೆಳಮಹಡಿ, ನೆಲಮಹಡಿ, ಮೊದಲನೇ, ಎರಡನೇ ಮಹಡಿ ಮತ್ತು ಪೀಣ್ಯಾದ ಒಟ್ಟಾರೆ ಬಸ್ ನಿಲ್ದಾಣದ ವಾಣಿಜ್ಯ ಸ್ಥಳಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದ ಮೂಲಕ ಹಾಗೂ ಕೆಂಪೇಗೌಡ ಬಸ್ ನಿಲ್ದಾಣದಲ್ಲಿರುವ ಸಾಮಾನ್ಯ ಮಳಿಗೆ ಸಂಖ್ಯೆ: 44, 46, 48, 09 ಹಳೆಯ ಸಿಸಿಸಿಲ್ ಸ್ಥಳ ಮತ್ತು ಮೈಸೂರು ರಸ್ತೆ ಬಸ್ ನಿಲ್ದಾಣದಲ್ಲಿರುವ ಮಳಿಗೆ ಸಂಖ್ಯೆ: 04, 6, 15, 31ಕ್ಕೆ ಪರವಾನಗಿದಾರರನ್ನು ಆಯ್ಕೆ ಮಾಡಲು ಸಂಧಾನದ (ಮಾತುಕತೆ) ಮೂಲಕ **ದಿನಾಂಕ: 13.01.2024 ರಿಂದ 02.02.2024 ರವರೆಗೆ** ಆಸಕ್ತಿದಾರರಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ/ವಿವರಗಳಿಗಾಗಿ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್: ksrtc.karnataka.gov.in ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಹಾಗೂ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ಕೆಂಪೇಗೌಡ ಬಸ್ ನಿಲ್ದಾಣ ವಿಭಾಗ, ಬೆಂಗಳೂರು–560009 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: 7760990557, 7760990554 ಮತ್ತು ಸಹಾಯವಾಣಿ ಸಂಖ್ಯೆ: +91–8046010000/+91–8068948777.

ಸಹಿ/– ವಿಭಾಗೀಯ ನಿಯಂತ್ರಣಾಧಿಕಾರಿ ಕೆಂಬನಿ ವಿಭಾಗ, ಬೆಂಗಳೂರು
ವಾಸಾಸಂಇ/ವಾ.ಪ್ರ/3033/ಎಂಎಎ/2023–24



**ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ನಿರ್ದೇಶನಾಲಯ**
ನಿರ್ದೇಶಕರ ಕಛೇರಿ, ನೆಲಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಗೋಪುರ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು–560001,
ದೂ.ಸಂ.080–22860907 ಫ್ಯಾಕ್ಸ್:080–22868347,
ಇ–ಮೇಲ್ ವಿಳಾಸ dirdwdscka@gmail.com, dir-dwds-ka@nic.in
ಸಂಖ್ಯೆ:DEDASC/2023-24 IND0022 Dated: 12.01.2024

**ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ)**

2023–24ನೇ ಸಾಲಿನಲ್ಲಿ ಅಂಧ ವಿದ್ಯಾರ್ಥಿಗಳಿಗೆ ಬ್ರೈಲ್ ಕಿಟ್‌ಗಳನ್ನು ಖರೀದಿಸಿ ವಿತರಿಸಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಬಿಡ್‌ಗಳನ್ನು ಸ್ವೀಕರಿಸಲು **ಕೊನೆಯ ದಿನಾಂಕ: 29–01–2024 ಮತ್ತು ಸಮಯ ಸಂಜೆ 4.00 ಗಂಟೆವರೆಗೆ, ದಿನಾಂಕ: 30–01–2024 ಸಂಜೆ 4.30 ಗಂಟೆಗೆ ತಾಂತ್ರಿಕ ಬಿಡ್ ಮತ್ತು ದಿನಾಂಕ: 01–02–2024 ಅಪರಾಹ್ನ 12.00 ಗಂಟೆಗೆ** ಆರ್ಥಿಕ ಬಿಡ್‌ನ್ನು ತೆರೆಯಲಾಗುವುದು.

ಯಾವುದೇ ಕಾರಣ ನೀಡದೇ ಎಲ್ಲಾ ಆಫರ್ಸ್/ಬಿಡ್‌ಗಳನ್ನು ಸ್ವೀಕರಿಸುವ, ತಿರಸ್ಕರಿಸುವ, ಮಾರ್ಪಡಿಸುವ ಮತ್ತು ಮರುಟೆಂಡರ್ ಕರೆಯುವ ಹಕ್ಕನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ. ವಿವರಗಳನ್ನು **www.kppp.karnataka.gov.in** ಜಾಲ ತಾಣದಿಂದ ಪಡೆಯಬಹುದು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಡಾ॥ ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು–560001 ಇವರನ್ನು **ದೂರವಾಣಿ ಸಂಖ್ಯೆ: 080–22866066, 22860907** ಹಾಗೂ ಇಲಾಖೆಯ ಜಾಲತಾಣ **www.dwdsc.karnataka.gov.in** ನಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು.
DIPR/CP/RO/3021/2023-24



**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು**
ಮೈಸೂರು–ನಂಜನಗೂಡು ರಸ್ತೆ, ಬಂಡೀಪಾಳ್ಯ,ಮೈಸೂರು–570 025.
E-Mail:apmcmysore@rediffmail.com
apmcmys@gmail.com Ph:0821-2482389
ಸಂ.ಕೃಉಮಾಸ(ಮೈ)//ಆರ್.ಐ.ಡಿ.ಎಫ್–29/4022/2023–24 ದಿ: 10.01.2024

**ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ**
**(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪದ್ಧತಿಯಲ್ಲಿ ಮಾತ್ರ)**

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause-3 (With latest amendments) ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನ ಅಡಿಯಲ್ಲಿ ಸಲ್ಲಿಸಲು ಅಹ್ವಾನಿಸಲಾಗಿದ್ದು, ವಿವರ ಈ ಕೆಳಕಂಡಂತಿದೆ.
**ಕಾಮಗಾರಿಯ ಹೆಸರು:** ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಮೈಸೂರು 2023–24ನೇ ಸಾಲಿನ ನಬಾರ್ಡ್ ಆರ್.ಐ.ಡಿ.ಎಫ್–29 ಯೋಜನೆಯಡಿ ಅನುಮೋದಿತ ಬಂಡೀಪಾಳ್ಯ ಮುಖ್ಯ ಮಾರುಕಟ್ಟೆ ಪ್ರಾಂಗಣದ ‘ಬಿ–ಬ್ಲಾಕ್‌ನಲ್ಲಿ ಸಿ.ಸಿ ರಸ್ತೆ ಮತ್ತು ಯು.ಜಿ.ಡಿ ನಿರ್ಮಾಣ ಹಾಗೂ ಆರ್.ಸಿ.ಸಿ ಚರಂಡಿ ಎತ್ತರಿಸುವ ಕಾಮಗಾರಿ(ಐಟಂವಾರು ಟೆಂಡರ್). ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ (18% ಜಿ.ಎಸ್.ಟಿ ಒಳಗೊಂಡಂತೆ): 3,95,01,906=00, ಇ.ಎಂ.ಡಿ ಮೊಬಲಗು ರೂ ಶೇಕಡ 1.50 ರಂತೆ ಅಥವಾ ಕನಿಷ್ಠ (ಇ ಪೇಮೆಂಟ್): 5,92,500=00 , ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತು ಪಡಿಸಿ) : 5.5 ತಿಂಗಳು , ಅರ್ಹ ಗುತ್ತಿಗೆದಾರರ ದರ್ಜೆ: ಕೆ.ಡಬ್ಲ್ಯು–4 ಕ್ಲಾಸ್–3 ರಲ್ಲಿ ಅರ್ಹರಿರುವ & ಲೋ.ಇ.ಯಲ್ಲಿ ನೊಂದಾಯಿತ ಸಿವಿಲ್ ಗುತ್ತಿಗೆದಾರರು, ಇ ಪ್ರೋಸಸಿಂಗ ಫೀ (ಇ ಪೇಮೆಂಟ್) : ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ನಂತೆ. ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ : ಪ್ರೀ ಬಿಡ್ ಮೀಟಿಂಗ್ ದಿ: 19.01.2024 ರಂದು ಮಧ್ಯಾಹ್ನ 12 ಗಂಟೆ, ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ ಮತ್ತು ವೇಳೆ: 29.01.2024 ರಂದು ಸಂಜೆ 4.00 ಗಂಟೆವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 31.01.2024 ರಂದು ಸಂಜೆ 4.00 ಗಂಟೆ , ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ: 14.02.2024 ರಂದು ಬೆಳಿಗ್ಗೆ 11.00 ಗಂಟೆ. ಟೆಂಡರುಗಳನ್ನು ತೆರೆಯುವ ಸ್ಥಳ ಹಾಗೂ ಪತ್ರ ವ್ಯವಹಾರದ ವಿಳಾಸ: ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಂಡೀಪಾಳ್ಯ–ನಂಜನಗೂಡು ರಸ್ತೆ, ಮೈಸೂರು. ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ.
Tender documents may be downloaded from Karnataka Public Procurement Portal website https://kppp.karnataka.gov.in/#/portal/portal-home under login for Contractors

ಸಹಿ/– ಕಾರ್ಯದರ್ಶಿ ಕೃ.ಉ.ಮಾ.ಸ., ಮೈಸೂರು
ಸಹಿ/– ಆಡಳಿತಾಧಿಕಾರಿ ಕೃ.ಉ.ಮಾ.ಸ., ಮೈಸೂರು
DIPR/DDMYS/KSMCA/893/2023-24



**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರು (ಗುಭ/ಗುನಿ) ವಿಭಾಗರವರ ಕಛೇರಿ, ಯಲಹಂಕ ವಲಯ, ರೂಂ. ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ, ಎನ್.ಆರ್. ಚೌಕ, ಬೆಂಗಳೂರು–02
ನಂ.: ಕಾಪಾಅ(ಗುಭ/ಗುನಿ)/ಯಲಹಂಕ/ಟೆಂಡರ್/01/23–24 ದಿನಾಂಕ: 11.01.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**
**(ದ್ವಿ ಲಕೋಟೆ ಪದ್ಧತಿ) (ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿ ಮೂಲಕ ಮಾತ್ರ)**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಗುಣಮಟ್ಟ ಭರವಸೆ / ಗುಣಮಟ್ಟ ನಿಯಂತ್ರಣ ವಿಭಾಗ (ಯಲಹಂಕ ವಲಯ)ವು ಕೆಳಗಿನ ಕಾಮಗಾರಿಗಳಿಗಾಗಿ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ (PMC) ಸೇರಿದಂತೆ ಯೋಜನಾ ನಿರ್ವಹಣೆಗಾಗಿ ಸಲಹಾ ಸೇವೆಗಳಿಗಾಗಿ ಇದೇ ರೀತಿಯ ಕೆಲಸವನ್ನು ಮಾಡಿದ ಆಸಕ್ತ ವ್ಯಕ್ತಿಗಳು / ಸಂಸ್ಥೆಗಳಿಂದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

| ಕ್ರ. ಸಂ. | ಕಾಮಗಾರಿಯ ಹೆಸರು | ಯೋಜನಾ ವೆಚ್ಚ (ರೂ. ಲಕ್ಷಗಳಲ್ಲಿ) | ಪಿಎಂಸಿ ವೆಚ್ಚ ಲಕ್ಷಗಳಲ್ಲಿ | ಇಎಂಡಿ (ರೂ. ಗಳಲ್ಲಿ) |
|---|---|---|---|---|
| 1 | ಬಿಬಿಎಂಪಿ ವ್ಯಾಪ್ತಿಯ ಯಲಹಂಕ ವಲಯದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ(UPHC's) ಗಳನ್ನು ಮೇಲ್ದರ್ಜೆಗೇರಿಸಲು ಗುಣಮಟ್ಟ ನಿಯಂತ್ರಣ, ಮೇಲ್ವಿಚಾರಣೆಯೊಂದಿಗೆ ಯೋಜನಾ ನಿರ್ವಹಣೆ ಸೇವೆಯನ್ನು ಒದಗಿಸುವುದು. | 153.43 | 2.40 | 6,000/– |

**ವೇಳಾಪಟ್ಟಿ:** (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆರ್‌ಎಫ್‌ಪಿ ದಸ್ತಾವೇಜುಗಳ ಲಭ್ಯತೆ: **16.01.2024.** (3) ಯಾವುದೇ ಸ್ಪಷ್ಟೀಕರಣಕ್ಕೆ: **18.01.2024ರ ಸಂಜೆ 3:00 ಗಂಟೆವರೆಗೆ.** (4) ಪೂರ್ವಭಾವಿ ಸಭೆ: **19.01.2024ರ ಸಂಜೆ 4:00 ಗಂಟೆಗೆ** ಕಾರ್ಯಪಾಲಕ ಅಭಿಯಂತರರು (ಗುಭ/ಗುನಿ)ರವರ ಕಛೇರಿ, ರೂಂ. ನಂ. 101, ಅನೆಕ್ಸ್–3 ಕಟ್ಟಡ, ಬಿಬಿಎಂಪಿ. ಎನ್.ಆರ್. ಚೌಕ, ಬೆಂಗಳೂರು–560002. (5) ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: **24.01.2024ರ ಸಂಜೆ 4:30 ಗಂಟೆವರೆಗೆ.** (6) ತಾಂತ್ರಿಕ ಬಿಡ್ ತೆರೆಯುವುದು: **25.01.2024ರ ಸಂಜೆ 4:00 ಗಂಟೆಗೆ.** ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://kppp.karnataka.gov.in** ನಿಂದ ಪಡೆದುಕೊಳ್ಳಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು (ಗುಭ/ಗುನಿ) ವಿಭಾಗ, ಯಲಹಂಕ ವಲಯ, ಬಿಬಿಎಂಪಿ



**ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.**
ಬಳ್ಳಾರಿ–ಬೆಂಗಳೂರು ರಸ್ತೆ, ಬಂಡಿಮೋಟ್, ಬಳ್ಳಾರಿ–583101
ಇಮೇಲ್– apmcballari@gmail.com,
ದೂ:08392–250442 ಫಾಕ್ಸ್:08392–250890
ಸಂ: ಕೃಉಮಾಸ/ಬ/ಅಭಿಕೆ/1357/2023–24 ದಿನಾಂಕ:10/01/2024

**ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ**

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 01ನೇ ದರ್ಜೆ ಗುತ್ತಿಗೆದಾರರಿಂದ ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ನಬಾರ್ಡ **RIDF** 29ರ ಯೋಜನೆಯಡಿ ಅನುಮೋದನೆಗೊಂಡ **ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಮೂಲಭೂತ ಸೌಕಾರ್ಯಗಳನ್ನು (ಸಿ.ಸಿ ರಸ್ತೆ ಹಾಗೂ ಆರ್.ಸಿ.ಸಿ. ಚರಂಡಿ) ಒದಗಿಸುವ ಕಾಮಗಾರಿಯನ್ನು** ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ ಹಾಗೂ ನಿಯಮಗಳು 1999–2000 ರನ್ವಯ ಇ– ಪೋರ್ಟಲ್‌ನಲ್ಲಿ ಕಾಮಗಾರಿಯು ಟೆಂಡರ್‌ನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ **http://kppp.karnataka.gov.in** ವೆಬ್‌ಸೈಟ್‌ನಲ್ಲಿ ಸ್ಪರ್ಧಾತ್ಮಕ ಐಟಂ ದರವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತೆ ಇರುತ್ತದೆ.
**Apmc/2023-24/BD/WORK_INDENT-239**
01 ಬಿಡ್ ಪೂರ್ವಭಾವಿ ಸಭೆ ದಿನಾಂಕ: **22/01/2024 ಬೆಳಿಗ್ಗೆ 11.30 ಗಂಟೆಗೆ**
02 ಭರ್ತಿ ಮಾಡಿದ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: **29/01/2024 ಸಾಯಂಕಾಲ 04:00 ಗಂಟೆಗೆ.** 03 ತಾಂತ್ರಿಕ ಬಿಡ್ ತರೆಯುವ ದಿನಾಂಕ: **31/01/2024 ಸಾಯಂಕಾಲ 04:30ಗಂಟೆಗೆ.** 04 ಆರ್ಥಿಕ ಬಿಡ್ ತೆರೆಯುವ ದಿನಾಂಕ: (ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಪಡೆದ ಗುತ್ತಿಗೆದಾರರು) **14/02/2024 ಬೆಳಿಗ್ಗೆ 11:00 ಗಂಟಗೆ**

ಇ.ಎಂ.ಡಿ ಹಣವನ್ನು ಇ–ಪ್ರೂಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬ್ಯಾಂಕಿನಲ್ಲಿ ಹೊಂದಿರುವ ಕರ್ನಾಟಕ ಸರ್ಕಾರ ಸೆಂಟ್ರಲ್ ಪೂಲಿಂಗ್ ಅಕೌಂಟಿನಲ್ಲಿ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ತಿಳಿಸಿರುವ ಯಾವುದಾದರೊಂದು ಮಾದರಿಯಲ್ಲಿ ಸಂದಾಯ ಮಾಡುವುದು. ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳಿಗಾಗಿ ರಜಾ ದಿನಗಳನ್ನು ಹೊರತುಪಡಿಸಿ ಸಮಿತಿ ಕಛೇರಿ ವೇಳೆಯಲ್ಲಿ ಅಥವಾ ಮೇಲೆ ಸೂಚಿಸಿರುವ ವೆಬ್ ಸೈಟ್‌ನಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಸರ್ಕಾರ ಇ–ಪ್ರೂಕ್ಯೂರ್‌ಮೆಂಟ್ ಸಹಾಯವಾಣಿ 080–22485867 ಮತ್ತು ಕಾರ್ಯದರ್ಶಿ ಎ.ಪಿ.ಎಂ.ಸಿ ಬಳ್ಳಾರಿಯ ದೂರವಾಣಿ ಸಂಖ್ಯೆ 08392–250442 ರವರಿಂದ ಪಡೆಯಬಹುದಾಗಿದೆ. ಟೆಂಡರ್ ನಿಯಮಾವಳಿಗಳಿಗಾಗಿ ಇ–ಪ್ರೂಕ್ಯೂರ್‌ಮೆಂಟ್ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ ಬಿಡ್ ಡಾಕ್ಯೂಮೆಂಟ್‌ಗಳನ್ನು ನೋಡುವುದು. ಟೆಂಡರ್ ತಿರಸ್ಕರಿಸುವ ಅಥವಾ ಒಪ್ಪುವ ಅಧಿಕಾರ ಸಮಿತಿ ಹೊಂದಿರುತ್ತದೆ. ಯಾವುದೇ ತಿದ್ದುಪಡಿ ಇದ್ದಲ್ಲಿ ಮೇಲಿನ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/– ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.
ಸಹಿ/– ಆಡಳಿತಾಧಿಕಾರಿಗಳು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/709/ಕೆಎಸ್‌ಎಂಸಿಎ/2023–24



**ಕರ್ನಾಟಕ ಸರ್ಕಾರ**
**ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕೋಡಿ**
Tel. No.: 08338-275101 E-Mail:ee.rdws.ckd@gmail.com
ಸಂಖ್ಯೆ: ಕಾಇಂ/ಗ್ರಾಕುನೀ&ನೈ/ವಿಚಿ/ತಾಂಶಾ:ಕೆಡಬ್ಲ್ಯು3&4:ಟೆಂಡರ್: 2023–24/20/2311 ದಿನಾಂಕ: 12/01/2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ KW-3,&4 (ಸ್ಟ್ಯಾಂಡರ್ಡ ಟೆಂಡರ್ ಡಾಕ್ಯುಮೆಂಟ್) ನಿಯಮಾನುಸಾರ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಕಾಯ್ದೆಗಳಲ್ಲಿಯ ನಿಯಮಗಳು ಹಾಗೂ ಸರಕಾರದ ಇತ್ತೀಚಿನ ತಿದ್ದುಪಡಿ ನಿಬಂಧನೆಗೊಳಪಟ್ಟಂತೆ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಚಿಕ್ಕೋಡಿ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿರುವ ಸರಬರಾಜು ಯೋಜನೆ ಕಾಮಗಾರಿಗಳಿಗೆ ಇ–ಪ್ರೊಕ್ಯೂರಮೆಂಟ್ ಮುಖಾಂತರ ಆಹ್ವಾನಿಸಲಾಗಿದೆ.
Work Indent No 7351,7352
ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪ್ರೊಟಾಲ್ (https://kppp.karnataka.gov.in/) ನಲ್ಲಿ ಸಂಪರ್ಕಿಸಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.
01)ಟೆಂಡರ ಪೂರ್ವಬಾವಿ ಸಭೆ:– 17–01–2024 ಕಾರ್ಯನಿರ್ವಾಹಕ ಅಭಿಯಂತರರು ಗ್ರಾ ಕು ನೀ & ನೈ ವಿಭಾಗ ಚಿಕ್ಕೋಡಿ ಕಚೇರಿಯಲ್ಲಿ, (02)ಇ–ಪ್ರೊಕ್ಯೂರಮೆಂಟ್ ಟೆಂಡರಿಂಗ್ ಮೂಲಕ ಭರ್ತಿ ಮಾಡಿದ ಫಾರಂಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 19–01–2024 ಸಾಯಂಕಾಲ 17.00 ಘಂಟೆವರೆಗೆ, 03)ಇ–ಪ್ರೊಕ್ಯೂರಮೆಂಟ್ ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ:20–01–2024 ಬೆಳಗ್ಗೆ 11.00 ಘಂಟೆ ನಂತರ ತೆರೆಯಲಾಗುವುದು.

ಸಹಿ/–ಕಾರ್ಯನಿರ್ವಾಹಕ ಅಭಿಯಂತರು, ಗ್ರಾ. ಕು. ನೀ. & ನೈ. ವಿಭಾಗ, ಚಿಕ್ಕೋಡಿ.
DIPR/BGM/RO-NO-936/KSMCA/2023-24

## ಉದ್ಯೋಗ ನಮೂದಿಸದ ಅರ್ಜಿದಾರನಿಗೆ ಹೈಕೋರ್ಟ್‌ನಿಂದ ಕಿವಿಮಾತು

# 'ಕೃಷಿಕ ಎನ್ನಲು ಹೆಮ್ಮೆ ಪಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು ಎಂಬ ಕವಿ ಸರ್ವಜ್ಞನ ತ್ರಿಪದಿಯನ್ನು ತೆರೆದ ಕಲಾಪದಲ್ಲಿ ಉದ್ಧರಿಸಿದ ಹೈಕೋರ್ಟ್, 'ಕೃಷಿ ಉದ್ಯೋಗದ ಬಗ್ಗೆ ನಮಗೆ ಹೆಮ್ಮೆ ಇರಬೇಕು' ಎಂದು ಕಿವಿಮಾತು ಹೇಳಿತು.

'ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಉಪ್ಪಿನಂಗಡಿ ಹೋಬಳಿಯ ಕೌಕ್ರಾಡಿ ಗ್ರಾಮದಲ್ಲಿ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ' ಎಂದು ಆಕ್ಷೇಪಿಸಿ ಸಲ್ಲಿಸಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿಯ 'ಕಾರಣ ಶೀರ್ಷಿಕೆ'ಯಲ್ಲಿ (ಕಾಸ್ ಟೈಟಲ್) ಅರ್ಜಿದಾರರ ಉದ್ಯೋಗದ ಬಗ್ಗೆ ನಮೂದಾಗದೇ ಇರುವುದನ್ನು ಗಮನಿಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಅವರು, 'ಅರ್ಜಿದಾರರು ಏನು ಉದ್ಯೋಗ ಮಾಡುತ್ತಾರೆ' ಎಂದು ಅವರ ಪರ ವಕೀಲರನ್ನು ಪ್ರಶ್ನೆ ಮಾಡಿದರು.

ಇದಕ್ಕೆ ಅರ್ಜಿದಾರರ ಪರ ವಕೀಲರು, 'ಕೃಷಿಕ' ಎಂದು ಹಿಂಜರಿಕೆಯ ಸ್ವರದಲ್ಲಿ ನುಡಿದರಲ್ಲದೆ, 'ವಿವರವನ್ನು ಕೈಫಿಯತ್ತಿನಲ್ಲಿ ವಿವರಿಸಲಾಗಿದೆ' ಎಂದು ಹೇಳಿದರು. ಇದಕ್ಕೆ ಮುಖ್ಯ ನ್ಯಾಯಮೂರ್ತಿ ವರಾಳೆ ಅವರು, 'ನಿಮ್ಮ ಉದ್ಯೋಗದ ಬಗ್ಗೆ ನಾಚಿಕೆ ಏಕೆ? ಕೃಷಿಕನಾಗುವುದು ತಪ್ಪಲ್ಲ. ವಿಶ್ವದ ಅತ್ಯಂತ ಪುರಾತನ ಉದ್ಯೋಗ ಕೃಷಿ. ಇದನ್ನು ಹೆಮ್ಮೆಯಿಂದ ಹೇಳಿಕೊಳ್ಳಬೇಕು' ಎಂದು ಕಿವಿಮಾತು ಹೇಳಿದರು.

ತಕ್ಷಣವೇ ಈ ಮಾತಿಗೆ ನ್ಯಾಯಮೂರ್ತಿ ದೀಕ್ಷಿತ್ ಅವರು, ಮುಖ್ಯ ನ್ಯಾಯಮೂರ್ತಿಗಳ ಕಿವಿಯಲ್ಲಿ ಸರ್ವಜ್ಞನ ತ್ರಿಪದಿಯನ್ನು ಉಲ್ಲೇಖಿಸಿದರು. ಆಗ ಮುಖ್ಯ ನ್ಯಾಯಮೂರ್ತಿಗಳು, 'ಇದನ್ನು ಜೋರಾಗಿ ಅರ್ಜಿದಾರರಿಗೆ ಹೇಳಿಬಿಡಿ' ಎಂದು ದೀಕ್ಷಿತ್ ಅವರನ್ನು ಪ್ರೋತ್ಸಾಹಿಸಿದರು.

ಕೂಡಲೇ ದೀಕ್ಷಿತ್ ಅವರು, 'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು, ಮೇಟಿಯಿಂ ರಾಟ ನಡೆದುದಲ್ಲದೇ ಲೋಕಕ್ಕೆ, ಮೇಟಿಯೇ ಶ್ರೇಷ್ಠ ಸರ್ವಜ್ಞ' ಎಂಬ ಸಾಲುಗಳನ್ನು ಉಲ್ಲೇಖಿಸಿದರಲ್ಲದೆ, ಅಲ್ಲೇ ಇದ್ದ ಹಿರಿಯ ವಕೀಲ ಎಸ್.ಎಸ್.ನಾಗಾನಂದ ಅವರನ್ನು, 'ಕೋಟಿ ವಿದ್ಯೆಯಲ್ಲಿ ಮೇಟಿ ವಿದ್ಯೆಯೇ ಮೇಲಲ್ಲವೇ' ಎಂದು ಪ್ರಶ್ನಿಸಿದರು.

ಇದಕ್ಕೆ ನಾಗಾನಂದ ಅವರು, 'ಹೌದು ಅದು ಅತ್ಯುತ್ತಮ ಮಾತ್ರವಲ್ಲ, ಅದಕ್ಕೆ ತೆರಿಗೆಯೂ ಇಲ್ಲ. ಆದಾಯ ತೆರಿಗೆ ಅಧಿಕಾರಿಗಳ ದಾಳಿಯೂ ಇರುವುದಿಲ್ಲ' ಎಂದು ಲಘು ಧಾಟಿಯಲ್ಲಿ ಉತ್ತರಿಸಿದರು.

ಅರ್ಜಿದಾರರ ಪರ ವಕೀಲರನ್ನು ಉದ್ದೇಶಿಸಿದ ನ್ಯಾಯಮೂರ್ತಿ ದೀಕ್ಷಿತ್ ಅವರು, 'ನೀವು ಉದ್ಯೋಗವನ್ನು ಕೈಫಿಯತ್ತಿನಲ್ಲಿ ಉಲ್ಲೇಖಿಸಿದರೆ ಸಾಲದು. ಮಂಗಳಸೂತ್ರವನ್ನು ಕೊರಳಿಗೇ ಕಟ್ಟಬೇಕು. ಬೇರೆಲ್ಲಿಯೂ ಕಟ್ಟಿದರೆ ಆಗದು' ಎಂದು ನುಡಿದರು.

ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಮುಂದೂಡಿತು.

# ಮುರುಘಾ ಮಠದ ಸಿಇಒ ಭರತ್ ಕುಮಾರ್‌ಗೆ ಸಮನ್ಸ್

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

**ಮುಖ್ಯಾಂಶಗಳು**

- ಎಂ.ಭರತ್ ಕುಮಾರ್ ವಿರುದ್ಧದ ಕ್ರಿಮಿನಲ್ ನ್ಯಾಯಾಂಗ ನಿಂದನೆ ಆರೋಪ
- ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ, ನ್ಯಾ. ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠದಿಂದ ಸಮನ್ಸ್

ಬೆಂಗಳೂರು: ಕ್ರಿಮಿನಲ್ ನ್ಯಾಯಾಂಗ ನಿಂದನೆ ಆರೋಪದಡಿ ಚಿತ್ರದುರ್ಗ ಮುರುಘಾ ಮಠದ ಎಸ್‌ಜೆಎಂ ವಿದ್ಯಾಪೀಠದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ಕಾರ್ಯನಿರ್ವಾಹಕ ನಿರ್ದೇಶಕರೂ ಆದ ಉದ್ಯಮಿ ಎಂ.ಭರತ್ ಕುಮಾರ್ ಅವರಿಗೆ ಸಮನ್ಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಅವರು ಸ್ವಯಂ ಪ್ರೇರಿತವಾಗಿ ದಾಖಲಿಸಿಕೊಂಡಿರುವ ಕ್ರಿಮಿನಲ್ ನ್ಯಾಯಾಂಗ ನಿಂದನೆ ಮೊಕದ್ದಮೆಯನ್ನು ಮುಖ್ಯ ನ್ಯಾಯಮೂರ್ತಿ (ಸಿಜೆ) ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

'ಪ್ರತಿವಾದಿ ಆರೋಪಿ ಭರತ್ ಕುಮಾರ್‌ಗೆ ಸ್ಥಳೀಯ ವ್ಯಾಪ್ತಿ ಪ್ರದೇಶದ ಪೊಲೀಸರ ಮೂಲಕ ವಾರಂಟ್ ಅವಧಿಯಲ್ಲಿ ಸಮನ್ಸ್ ಜಾರಿಗೊಳಿಸಬೇಕು' ಎಂದು ಆದೇಶಿಸಿರುವ ನ್ಯಾಯಪೀಠ ವಿಚಾರಣೆಯನ್ನು ಫೆಬ್ರುವರಿ 5ಕ್ಕೆ ಮುಂದೂಡಿದೆ.

ನಿಂದನೆ ಏನು?: ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ-2012ರ (ಪೋಕ್ಸೊ) ವಿವಿಧ ಕಲಂಗಳ ಆರೋಪದಡಿ ಚಿತ್ರದುರ್ಗ ಮುರುಘಾ ಮಠದ ಪೀಠಾಧಿಪತಿ ಶಿವಮೂರ್ತಿ ಶರಣರು ಜೈಲು ಸೇರಿದ ನಂತರ ರಾಜ್ಯ ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು 2022ರ ಡಿಸೆಂಬರ್ 13ರಂದು ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿತ್ತು. ಇದಕ್ಕೂ ಮುನ್ನ 2022ರ ಡಿಸೆಂಬರ್ 2ರಂದು ಎಸ್‌ಜೆಎಂ ವಿದ್ಯಾಪೀಠದ ಕಾರ್ಯ ನಿರ್ವಹಣಾಧಿಕಾರಿಯಾಗಿ ಎಂ.ಭರತ್ ಕುಮಾರ್ ಅವರನ್ನು ಶರಣರು ನೇಮಕ ಮಾಡಿದ್ದರು.

ಆಡಳಿತಾಧಿಕಾರಿ ನೇಮಕ ಪ್ರಶ್ನಿಸಿ ಮಠದ ತಾತ್ಕಾಲಿಕ ಉಸ್ತುವಾರಿ ಬಸವಪ್ರಭು ಸ್ವಾಮೀಜಿ ಮತ್ತು ಭಕ್ತರು ಹೈಕೋರ್ಟ್ ಮೆಟ್ಟಿಲೇರಿದ್ದರು. ಏತನ್ಮಧ್ಯೆ ವಸ್ತ್ರದ ಅವರು ಆರು ತಿಂಗಳ ಅವಧಿ ನಂತರ ಹುದ್ದೆಯಿಂದ ತೆರವಾಗಿದ್ದರು. ಈ ಕುರಿತ ಮೇಲ್ಮನವಿಯ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿಗಳ ನೇತೃತ್ವದ ವಿಭಾಗೀಯ ನ್ಯಾಯಪೀಠವು, ಮಠಕ್ಕೆ ತಾತ್ಕಾಲಿಕ ಆಡಳಿತಾಧಿಕಾರಿಯನ್ನಾಗಿ ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರನ್ನು ನೇಮಕ ಮಾಡಿ ಆದೇಶಿಸಿತ್ತು.

ಕಾನೂನು ಹೋರಾಟದ ವಿವಿಧ ಬೆಳವಣಿಗೆಗಳ ಸಮಯದಲ್ಲೇ, ಚಿತ್ರದುರ್ಗ ಜಿಲ್ಲಾ ಪ್ರಧಾನ ನ್ಯಾಯಾಧೀಶರಾಗಿದ್ದ ಬಿ.ಎಸ್.ರೇಖಾ ಅವರನ್ನು ಹೈಕೋರ್ಟ್ ವರ್ಗಾವಣೆ ಮಾಡಿತ್ತು. 'ಈ ವರ್ಗಾವಣೆಯನ್ನು ತಡೆಯಬೇಕು ಮತ್ತು ಮಠದ ಆಡಳಿತ ಹಿತದೃಷ್ಟಿಯಿಂದ ಅವರನ್ನು ಇಲ್ಲಿಯೇ ಉಳಿಸಬೇಕು' ಎಂದು ಕೋರಿ ಎಂ.ಭರತ್ ಕುಮಾರ್ 2023ರ ಡಿಸೆಂಬರ್ 15ರಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳಿಗೆ ಪತ್ರವೊಂದನ್ನು ಬರೆದಿದ್ದರು.

'ನ್ಯಾಯಾಧೀಶರ ವರ್ಗಾವಣೆ ಹೈಕೋರ್ಟ್ ಆಡಳಿತಕ್ಕೆ ಸಂಬಂಧಿಸಿದ್ದು, ಇಂತಹ ಸೂಕ್ಷ್ಮ ವಿಷಯದಲ್ಲಿ ಎಂ.ಭರತ್ ಕುಮಾರ್ ಮೂಗು ತೂರಿಸಿದ್ದಾರೆ. ನ್ಯಾಯಾಂಗದ ಘನತೆಗೆ ಅಗೌರವ ಉಂಟು ಮಾಡಿದ್ದಾರೆ. ಸಂಸ್ಥೆಗೆ ಕೆಟ್ಟ ಹೆಸರು ತರುವ ಕಾರಣಕ್ಕಾಗಿಯೇ ಗುರುತರ ನ್ಯಾಯಾಂಗ ನಿಂದನೆ ಎಸಗಿದ್ದಾರೆ. ಇದು ನ್ಯಾಯಾಂಗ ನಿಂದನೆ ಕಾಯ್ದೆ–1971ರ ಕಲಂ 2ರ ಅನುಸಾರ ಕ್ರಿಮಿನಲ್ ಅಪರಾಧ' ಎಂದು ಆರೋಪಿಸಿ ರಿಜಿಸ್ಟ್ರಾರ್ ಜನರಲ್ 2024ರ ಜನವರಿ 3ರಂದು ದೂರು ದಾಖಲಿಸಿದ್ದರು.

# ಶಾಸಕ ಯತ್ನಾಳ ವಿರುದ್ಧದ ವಿಚಾರಣೆಗೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪಕ್ಕೆ ಸಂಬಂಧಿಸಿದಂತೆ ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧದ ಕ್ರಿಮಿನಲ್ ಪ್ರಕರಣಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಸಂಬಂಧ ಯತ್ನಾಳ ಅವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯ-ಪೀಠ'ದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಶುಕ್ರವಾರ ವಿಚಾರಣೆ ನಡೆಸಿದರು. ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶ್ರೀನಾಥ್ ಕುಲಕರ್ಣಿ, 'ಯತ್ನಾಳ ಅವರ ರಾಜಕೀಯ ವರ್ಚಸ್ಸಿಗೆ ಧಕ್ಕೆ ತರುವ ಉದ್ದೇಶದಿಂದ ಈ ದೂರು ದಾಖಲಿಸಲಾಗಿದೆ. ಆದ್ದರಿಂದ, ವಿಚಾರಣೆಗೆ ತಡೆ ನೀಡಬೇಕು' ಎಂದು ಕೋರಿದರು.

ಇದನ್ನು ಮನ್ನಿಸಿದ ನ್ಯಾಯಪೀಠ, ಗದಗ ಒಂದನೇ ಹೆಚ್ಚುವರಿ ನ್ಯಾಯಾಲದಲ್ಲಿ ನಡೆಯುತ್ತಿರುವ ಪ್ರಕರಣದ ವಿಚಾರಣೆಗೆ ಮಧ್ಯಂತರ ತಡೆ ನೀಡಿತು. ಮೂಲ ದೂರುದಾರ ಮಂಜುನಾಥ್ ಕಲಬುರಗಿ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇ-ಶಿಸಿತಲ್ಲದೆ, ಆಕ್ಷೇಪಣೆ ಸಲ್ಲಿಸುವಂತೆ ಸೂಚಿಸಿ ವಿಚಾರಣೆ ಮುಂದೂಡಿತು.

# 12 ಭಾಷೆಗಳಲ್ಲಿ ಪಠ್ಯಪುಸ್ತಕ ಲೇಖಕರಿಗೆ ಯುಜಿಸಿ ಆಹ್ವಾನ

ನವದೆಹಲಿ (ಪಿಟಿಐ): ಪದವಿಪೂರ್ವ ಕೋರ್ಸ್‌ಗಳಿಗೆ 12 ಭಾಷೆಗಳಲ್ಲಿ ಪಠ್ಯಪುಸ್ತಕ ಬರೆಯಲು ಲೇಖಕರು, ವಿಮರ್ಶಕರು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಬೋಧಕವರ್ಗಕ್ಕೆ ವಿಶ್ವ-ವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಆಹ್ವಾನ ನೀಡಿದೆ.

ಕನ್ನಡ, ಅಸ್ಸಾಂ, ಬಂಗಾಳಿ, ಗುಜರಾತಿ, ಹಿಂದಿ, ಮಲಯಾಳ, ಮರಾಠಿ, ಒಡಿಯಾ, ಪಂಜಾಬಿ, ತಮಿಳು, ತೆಲುಗು ಮತ್ತು ಉರ್ದು ಭಾಷೆಗಳಲ್ಲಿ ಪುಸ್ತಕ ಬರೆಯಲು ಆಯೋಗ ಅರ್ಜಿ ಆಹ್ವಾನಿಸಿದೆ.

'ಆಸಕ್ತ ಲೇಖಕರು ಅರ್ಜಿ ಸಲ್ಲಿಸಲು ಜ.30ರವರೆಗೆ ಸಮಯಾವಕಾಶ ಇದೆ. ಅರ್ಜಿಯಲ್ಲಿ, ವೈಯಕ್ತಿಕ ಮಾಹಿತಿ ಜೊತೆಗೆ ಯಾವ ಕೋರ್ಸ್ ಮತ್ತು ಯಾವ ಭಾಷೆಯಲ್ಲಿ ಪಠ್ಯ ಪುಸ್ತಕ ಬರೆಯಲು ಇಚ್ಛಿಸುತ್ತಾರೆ ಎಂದೂ ತಿಳಿಸಬೇಕು' ಎಂದು ಯುಜಿಸಿ ಹಿರಿಯ ಅಧಿಕಾರಿ-ಯೊಬ್ಬರು ತಿಳಿಸಿದರು. 'ಕಲೆ, ವಿಜ್ಞಾನ, ವಾಣಿಜ್ಯ ಮತ್ತು ಸಮಾಜವಿಜ್ಞಾನ ವಿಷಯ ಕುರಿತ ಪದವಿಪೂರ್ವ ಕೋರ್ಸ್‌ಗಳಿಗೆ 12 ಭಾಷೆಗಳಲ್ಲಿ ಪಠ್ಯಪುಸ್ತಕ ಒದಗಿಸಲು ಯುಜಿಸಿ ಕಾರ್ಯ ತತ್ಪರವಾಗಿದೆ. ಇದಕ್ಕಾಗಿ ಲೇಖಕರ ತಂಡಗಳನ್ನು ರಚನೆ ಮಾಡಲು ಸಹಕಾರ ನೀಡುವ ನೋಡಲ್ ವಿಶ್ವವಿದ್ಯಾಲಯ ಗಳನ್ನು ಗುರುತಿಸುವ ಪ್ರಕ್ರಿಯೆ ಚಾಲ್ತಿ ಯಲ್ಲಿದೆ'ಎಂದು ಅವರು ತಿಳಿಸಿದ್ದಾರೆ.

# ಕೆಎಎಸ್ ಪರೀಕ್ಷೆಗೆ ತರಬೇತಿ

ಬೆಂಗಳೂರು: ಆರ್.ಎಲ್. ಜಾಲಪ್ಪ ಅಕಾಡೆಮಿಯು ಹಿಂದುಳಿದ ಸಮುದಾಯದ ಪ್ರವರ್ಗ 1 ಮತ್ತು ಪ್ರವರ್ಗ 2ಎ ಗೆ ಸೇರಿದ ಗ್ರಾಮೀಣ ಪದವೀಧರರಿಗೆ ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ಫೆಬ್ರುವರಿ 5ರಂದು ಪ್ರಾರಂಭಿಸಲಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ತರಬೇತಿ ನಡೆಯಲಿದ್ದು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿ ನಿಲಯಗಳ ವ್ಯವಸ್ಥೆ ಇದೆ. ಆಸಕ್ತರು www.rljacademy.in ವೆಬ್‌ಸೈಟಿನಲ್ಲಿ ಜ.31ರ ಒಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ 8660495498, 9902004438 ಸಂಪರ್ಕಿಸಬಹುದು ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.


**ಹಾಸನ ವಿಶ್ವವಿದ್ಯಾಲಯ ಹೇಮಗಂಗೋತ್ರಿ ಹಾಸನ**
**HASSAN UNIVERSITY HEMAGANGOTHRI HASSAN**
ಕುಲಸಚಿವರ ಕಾರ್ಯಾಲಯ Office of the Registrar
Email:reg.hassan.uni@gmail.com Landline: 08172-220015
ನಂ./ಹಾ.ವಿ.ಹಾ/ಕು.ಸ.ಕಾ/631/2023–24 ದಿನಾಂಕ:10.01.2024

**ಅಧಿಸೂಚನೆ**

ಸ್ನಾತಕ (UG) ಮತ್ತು ಸ್ನಾತಕೋತ್ತರ (PG) ಪದವಿ ಪರೀಕ್ಷೆಗಳಿಗೆ ಅಗತ್ಯವಿರುವ ಉತ್ತರ ಪತ್ರಿಕೆಗಳನ್ನು ಮುದ್ರಿಸಿ, ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ (ತಾಂತ್ರಿಕ ಪರಿಣಿತಿ ಮತ್ತು ಕನಿಷ್ಠ ಮೊತ್ತ) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕವನ್ನು 20–01–2024 ರವರೆಗೆ ನಿಗದಿ ಪಡಿಸಲಾಗಿದೆ. ಸದರಿ ಟೆಂಡರ್‌ನಲ್ಲಿ ಸರಬರಾಜುದಾರರು ಭಾಗವಹಿಸಿ ತಮ್ಮ ಕನಿಷ್ಠ ಟೆಂಡರ್ ದರಗಳನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲದಲ್ಲಿ https://kppp.karnataka.gov.in ನಲ್ಲಿ ಪಡೆಯಬಹುದು.

ಸಹಿ/–ಕುಲಸಚಿವರು, ಹಾಸನ ವಿಶ್ವವಿದ್ಯಾಲಯ ಹೇಮಗಂಗೋತ್ರಿ ಹಾಸನ–573226
ವಾಸಾಸಂಇ/ಹಿಸನಿ/ಹಾಸನ/647/ಕೆಎಸ್‌ಎಂಸಿಎ/653/2023–24



ಕರ್ನಾಟಕ ಸರ್ಕಾರ (ಸ್ವಾಯತ್ತ ಸಂಸ್ಥೆ)
**ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ**
ಸಂ: ಕ್ರಿಮ್ಸ್/ಇ–ಟೆಂಡರ್/2023–24 ದಿನಾಂಕ: 11.01.2024

**ಟೆಂಡರ್ ಪ್ರಕಟಣೆ (ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)**

ಕ್ರ.ಸಂ.1: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/135/2023–24 ದಿನಾಂಕ: 11.01.2024, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಎಸ್.ಸಿ.ಪಿ./ ಟಿ.ಎಸ್.ಪಿ. ಯೋಜನೆಯಡಿಯಲ್ಲಿ ಟ್ಯಾಬ್‌ಗಳ ಪೂರೈಕೆಗಾಗಿ ಮರು–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 16.01.2024, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 31.01.2024 ರಂದು ಸಂಜೆ 5.00 ರ ಒಳಗೆ

ಕ್ರ.ಸಂ.2: ಟೆಂಡರ್ ಸಂಖ್ಯೆ: ಕ್ರಿಮ್ಸ್/ಇ–ಟೆಂಡರ್/136/2023–24 ದಿನಾಂಕ: 11.01.2024, ಟೆಂಡರ್ ಹೆಸರು: ಕ್ರಿಮ್ಸ್ ಕಾರವಾರಕ್ಕೆ ಯು.ಪಿ.ಎಸ್.ಗಳ ಪೂರೈಕೆಗಾಗಿ ಮರು–ಟೆಂಡರ್ ಆಹ್ವಾನಿಸುವ ಕುರಿತು. ಟೆಂಡರ್ ಪ್ರಾರಂಭ ದಿನಾಂಕ: 16.01.2024, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 31.01.2024 ರಂದು ಸಂಜೆ 5.00 ರ ಒಳಗೆ

ಈ ಮೇಲ್ಕಂಡ ಟೆಂಡರ್‌ಗಳಿಗೆ ಅರ್ಹ ಟೆಂಡರ್‌ದಾರರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್‌ನಲ್ಲಿ http://www.kppp.karnataka.gov.in ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಬಹುದು.

DIPR/KWR/KSMCA/540/23-24 dt. 11.01.2024 ಸಹಿ/– ನಿರ್ದೇಶಕರು



ಕರ್ನಾಟಕ ಸರ್ಕಾರ
**ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ**
ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು – 560001.
ದೂರವಾಣಿ: 080–22215601, ಫ್ಯಾಕ್ಸ್ : 22215602
ಸಂಖ್ಯೆ: ಡಿವೈಇಎಸ್/ಸಿ1/90/2017–18 ದಿನಾಂಕ: 11.01.2024

**ಜಾಹೀರಾತು**

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್ ಗಳಲ್ಲಿ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು–ಎ ಮತ್ತು ಗುಂಪು–ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ ವಿಶೇಷ ನೇಮಕಾತಿಗಾಗಿ ಅರ್ಜಿ ಆಹ್ವಾನ. ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಪ್ಯಾರಾ ಏಷಿಯನ್ ಗೇಮ್ಸ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತರಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು–ಎ ಮತ್ತು ಗುಂಪು– ಬಿ ಮತ್ತು ಇತರೆ ವೃಂದದ ಹುದ್ದೆಗಳಿಗೆ ವಿಶೇಷ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ನಮೂನೆ ಮತ್ತು ವಿಶೇಷ ನೇಮಕಾತಿ ನಿಯಮಗಳನ್ನೊಳಗೊಂಡ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 204 ಸೇನೆನಿ 2022. ದಿನಾಂಕ: 21–03–2023 ನ್ನು ಇಲಾಖಾ ಜಾಲತಾಣ https://dyes.karnataka.gov.in ರಲ್ಲಿ ಒದಗಿಸಿದೆ. ನಿಗಧಿತ ಅರ್ಜಿ ನಮೂನೆಯಲ್ಲಿ ಮಾಹಿತಿಯನ್ನು ಭರ್ತಿ ಮಾಡಿ, ಸೂಕ್ತ ಪೂರಕ ದಾಖಲೆಗಳನ್ನು ಸ್ವಯಂ– ದೃಢೀಕರಿಸಿ, ಆಯುಕ್ತರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು–560001 ಇವರಿಗೆ ಸಲ್ಲಿಸತಕ್ಕದ್ದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 09–02–2024 ರಂದು ಸಂಜೆ 5.00 ಗಂಟೆ. ನಿರ್ಧಿಷ್ಟಪಡಿಸಿದ ಅವಧಿಯ ತರುವಾಯ ಸಲ್ಲಿಸಲಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಆಯ್ಕೆ ಸಮಿತಿ ಹಾಗೂ ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ
DIPR/CP/3037/Zen/2023-24



**ಕರ್ನಾಟಕ ರಾಜ್ಯ ಪೊಲೀಸ್ ವಸತಿ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ರಿಚ್ ಮಂಡ್ ರಸ್ತೆ (ಜನರಲ್ ಕೆ.ಎಸ್. ತಿಮ್ಮಯ್ಯ ರಸ್ತೆ), ಬೆಂಗಳೂರು–25
ದೂರವಾಣಿ : 080–25584102/25594893
Website: www.ksphc.org e mail : eecontractksphc@gmail.com,
ಸಂಖ್ಯೆ:ಕಾಅ/ಕರಾಪೊವ&ಮೂಸೌಅನಿನಿ/ಕಾಂಟ್ರಾಕ್ಟ್/ಟೆಂಡರ್/13/2023–24/231 ದಿನಾಂಕ: 12.01.2024

**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**

**ಕರಾಪೊವ ಮತ್ತು ಮೂಸೌಅನಿನಿ** ಕರ್ನಾಟಕ ಪಾರದರ್ಶಕತೆ 2000 ಕಾಯ್ದೆ ಹಾಗೂ ಸ್ಟಾಂಡರ್ಡ್ ಟೆಂಡರ್ ದಾಖಲಾತಿ ಪ್ರಕಾರ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ **https://kppp. karnataka.gov.in** ಮೂಲಕ ಆನ್‌ಲೈನ್‌ನಲ್ಲಿ **ಕರ್ನಾಟಕದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಗೃಹ–2025 ಹಂತ–IV ರ ಅಡಿಯಲ್ಲಿ ಪೊಲೀಸ್ ಕ್ವಾರ್ಟರ್ಸ್ ನಿರ್ಮಾಣದ ಕಾಮಗಾರಿಗಳಿಗಾಗಿ** ಟೆಂಡರ್ ಅನ್ನು ಆಹ್ವಾನಿಸಿದೆ.

ಆಸಕ್ತ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ಟೆಂಡರ್ ಶುಲ್ಕ, ಇ.ಎಂ.ಡಿ, ಟೆಂಡರ್ ಡಾಕ್ಯುಮೆಂಟ್‌ಗಳು ಇತ್ಯಾದಿ ವಿವರಗಳು **18.01.2024 ರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ (KPPP) ಲಭ್ಯವಿರುತ್ತದೆ.**

ಕರಾಪೊವ ಮತ್ತು ಮೂಸೌಅನಿನಿ ಯಾವುದೇ ಕಾರಣವನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಹೊಂದಿದೆ.

**ಸೂಚನೆ: ಇನ್ನು ಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆ / ಮಾರ್ಪಾಡು ಇದ್ದಲ್ಲಿ ಇದನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ ನಲ್ಲಿ ಮಾತ್ರ ಪ್ರಕಟಿಸಿಲಾಗುವುದು.** ಸಹಿ/– ಕಾರ್ಯನಿರ್ವಾಹಕ ಅಭಿಯಂತರರು–ಗುತ್ತಿಗೆ

DIPR/CP/RO3023/AAPL/2023-24



ಕರ್ನಾಟಕ ಸರ್ಕಾರ
**ಕೃಷಿ ಇಲಾಖೆ**
ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು–1
ಸಂ: ಸಸಂವಿ/ತಾಂ/ಸ.ಸಂ.ಪೀ.ಟೆಂ/2024 ದಿನಾಂಕ: 10.01.2024

**ಇ–ಟೆಂಡರ್ ಪ್ರಕಟಣೆ**

ಕೃಷಿ ಇಲಾಖೆಯ ವಿವಿಧ ಯೋಜನೆಗಳಡಿ ರಿಯಾಯಿತಿ ದರದಲ್ಲಿ ರೈತರಿಗೆ ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು ಪೂರೈಸಲು ಇ–ಸಂಗ್ರಹಣೆ ಮುಖಾಂತರ ಎಂಪ್ಯಾನಲ್‌ಮೆಂಟ್‌ಗೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಆಸಕ್ತ ಸರಬರಾಜುದಾರರು ಎಂಪ್ಯಾನಲ್‌ಮೆಂಟ್‌ನಲ್ಲಿ ಭಾಗವಹಿಸಲು ಇ–ಸಂಗ್ರಹಣೆಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಯನ್ನು http://kppp.karnataka.gov.in ಗೆ ಲಾಗ್ ಆನ್ ಮಾಡಿ ಅಥವಾ ಸಹಾಯವಾಣಿ ಸಂಖ್ಯೆ: +918046010000, +91-8068948777 Or E-mail: support@eprochelpdesk.com ಗಳನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು. ಇ–ಟೆಂಡರ್ ಅರ್ಜಿಗಳನ್ನು ಹಾಗೂ ವಿವರಗಳನ್ನು ದಿನಾಂಕ 30.12.23 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಇ–ಸಂಗ್ರಹಣೆ ಮುಖಾಂತರ ಅರ್ಜಿಗಳನ್ನು ಸಲ್ಲಿಸಲು ಅಂತಿಮ ದಿನಾಂಕ 30–01–2024 ಸಂಜೆ 5.30 ಗಂಟೆಯವರೆಗೆ. ಎಂಪ್ಯಾನಲ್‌ಮೆಂಟ್‌ನ ತಾಂತ್ರಿಕ ಬಿಡ್‌ಗಳನ್ನು ದಿನಾಂಕ 01–02–204 ರಂದು ಪೂರ್ವಾಹ್ನ 10.30 ಗಂಟೆಗೆ ಸಂಭ್ರಮ ಸಭಾಂಗಣ, ಕೃಷಿ ಆಯುಕ್ತರ ಕಾರ್ಯಾಲಯ, ಶೇಷಾದ್ರಿ ರಸ್ತೆ, ಬೆಂಗಳೂರು ಇಲ್ಲಿ ತೆರೆಯಲಾಗುವುದು.

ಸಹಿ/–
ವಾ.ಸಾ.ಸಂ.ಇ/ವಾಪ್ರ/3035/ಆಕಾರ್/22–23 ಕೃಷಿ ನಿರ್ದೇಶಕರು



**ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ**
ಮುಖ್ಯ ಅಭಿಯಂತರರವರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಇ–ಮೇಲ್ : kwbcen@gmail.com

**ಟೆಂಡರ್ ಪ್ರಕಟಣೆ** (ಎಲೆಕ್ಟ್ರಾನಿಕ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಲಕೋಟೆ ಪದ್ಧತಿಯಲ್ಲಿ) ಟೆಂಡರ್ ಆಹ್ವಾನಿಸಲಾಗಿದೆ. **ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:1901 ದಿನಾಂಕ: 12–01–2024.**

**1) Design, Build, Operation and Transfer (DBOT) ಮಾದರಿಯಲ್ಲಿ ಅಮೃತ್–2.0 ಯೋಜನೆ ಅಡಿ ಕಾಳಿ ನದಿ ಮೂಲದಿಂದ ಹಳಿಯಾಳ** ಪಟ್ಟಣಕ್ಕೆ ನೀರು ಸರಬರಾಜು ಸುಧಾರಣಾ ವ್ಯವಸ್ಥೆ ಕಲ್ಪಿಸುವುದು ಹಾಗೂ **ದಾಂಡೇಲಿ ನಗರಕ್ಕೆ ನೀರು ಸರಬರಾಜು ವಿತರಣಾ** ಕೊಳವೆ ಮಾರ್ಗದ ವ್ಯವಸ್ಥೆ ಕಲ್ಪಿಸುವುದು 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) **INDENT:KUWSDB/2023-24/WS/WORK_INDENT111**

**2)Design, Build, Operation and Transfer (DBOT) ಮಾದರಿಯಲ್ಲಿ ಅಮೃತ್–2.0 ಯೋಜನೆ ಅಡಿ ಸವಣೂರು, ಹಿರೇಕೆರೂರು & ಭಟ್ಕಳ ಪಟ್ಟಣಗಳಿಗೆ** ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವುದು 5 ವರ್ಷಗಳ ನಿರ್ವಹಣೆ ಮತ್ತು ದುರಸ್ತಿ (1 ವರ್ಷದ DLP ಒಳಗೊಂಡು) (ಇಡುಗಂಟು ಟೆಂಡರ್– ವೇರಿಯೇಷನ್ ಇರುವುದಿಲ್ಲಾ) **INDENT:KUWSDB/2023-24/WS/WORK_INDENT112** ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರು,
ವಾ.ಸಾ.ಇ./ಧಾ/674/ದೇಶಪಾಂಡೆಪಬ್ಲಿಸಿಟಿ/2023–24 ಕನನೀಸ ಮತ್ತು ಒಚ ಮಂಡಳಿ, ಧಾರವಾಡ.



**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ಸಂ.49, 4 & 5ನೇ ಮಹಡಿ, ಪೂರ್ವ ವಿಭಾಗ, ಖನಿಜ ಭವನ
ರೇಸ್‌ಕೋರ್ಸ್ ರಸ್ತೆ, ಬೆಂಗಳೂರು–560001.
ಫೋನ್ ಸಂ. 080–22265383 ವೆಬ್‌ಸೈಟ್: ತಿತಿತಿ.ಇುಚಿಜಭ.ಟಿ
ನಂ.ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–29/491/2023–24 ದಿನಾಂಕ: 12.01.2024

**ಟೆಂಡರ್ ಆಹ್ವಾನ ಪ್ರಕಟಣೆ**
(ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವ ಸಂಪನ್ಮೂಲ ಹಾಗೂ ಇದೇ ರೀತಿಯ ಕಾಮಗಾರಿಯಲ್ಲಿ ಸಾಕಷ್ಟು ಅನುಭವ ಹೊಂದಿರುವ ಕೆಸಿಇಐ, ಕರ್ನಾಟಕ ಸರ್ಕಾರ ನೀಡಿರುವ ಪರವಾನಗಿ ದರ್ಜೆ–II ಮತ್ತು ಮೇಲ್ಪಟ್ಟ (ವಿದ್ಯುತ್) ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಟೆಂಡರನ್ನು ಆಹ್ವಾನಿಸಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆ ದೊಡ್ಡಬಳ್ಳಾಪುರ, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶ (ಐಟಿಐಆರ್) ರಲ್ಲಿ ಹಾದು ಹೋಗಿರುವ DTC's/11ಕೆವಿ/ಎಲ್‌ಟಿ ಲೈನನ್ನು ಸ್ಥಳಾಂತರಗೊಳಿಸುವ ಕಾಮಗಾರಿ.

ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಹಾಗೂ ಸಮಯ: 29.01.2024 ಸಂಜೆ 4.30 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ವಾ.ಸಾ.ಸಂ.ಇ/ವಾಪ್ರ/3040/ಆಕಾರ್/2023–24 ಮುಖ್ಯ ಅಭಿಯಂತರರು–1



ಕರ್ನಾಟಕ ಸರ್ಕಾರ
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**
ನಂ.1, ಉನ್ನತ ಶಿಕ್ಷಣ ಸೌಧ, ಶೇಷಾದ್ರಿ ರಸ್ತೆ, ಬೆಂಗಳೂರು–560001.
ಫೋನ್: 080 22223906, ಇ–ಮೇಲ್: dce.tender2017@gmail.com
ಸಂಖ್ಯೆ: DCE/ITS/PUR/1/2024-INFO (Computer No.1284537) ದಿನಾಂಕ: 12.01.2024

**ಇ–ಟೆಂಡರ್ ಅಧಿಸೂಚನೆ**

ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಈ ಕೆಳಕಂಡ ಟೆಂಡರ್‌ಗಾಗಿ ಅರ್ಹ ಬಿಡ್‌ದಾರರಿಂದ ಇ–ಸಂಗ್ರಹಣೆ ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಬಿಡ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್ ದಸ್ತಾವೇಜು ಮತ್ತು ವಿವರಗಳಿಗಾಗಿ https://eproc.karnataka.gov.in. ಅನ್ನು ಸಂಪರ್ಕಿಸಬಹುದಾಗಿದೆ.

ಟೆಂಡರ್ ವೇಳಾಪಟ್ಟಿ ಈ ಕೆಳಗಿನಂತಿದೆ

| ಕ್ರ. ಸಂ. | ಟೆಂಡರ್ ಸಂಖ್ಯೆ | ಇ–ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜನ್ನು ಅಪ್‌ಲೋಡ್ ಮಾಡುವ ದಿನಾಂಕ | ಪ್ರೀ–ಬಿಡ್ ಸಭೆಯ ದಿನಾಂಕ | ಬಿಡ್ ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|
| 1 | ಟೆಂಡರ್ ಸಂಖ್ಯೆ:ಡಿಸಿಇ/2023–24/ಐಎನ್‌ಡಿ0008 ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖಾ ವ್ಯಾಪ್ತಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಡೆಸ್ಕ್‌ಟಾಪ್ ಕಂಪ್ಯೂಟರ್, ಯುಪಿಎಸ್ ಮತ್ತು ಪ್ರಿಂಟರ್‌ಗಳ ಖರೀದಿ ಬಗ್ಗೆ | 11.01.2024 | 16/01/2024 ಬೆಳಿಗ್ಗೆ 11.00 ಗಂಟೆಗೆ | 29/01/2024 ಸಂಜೆ 5.00 ಗಂಟೆಗೆ |

ಸಹಿ/–
DIPR/CP/3039/Zen/2022-23 ಕಾಲೇಜು ಶಿಕ್ಷಣ ನಿರ್ದೇಶಕರು, ಬೆಂಗಳೂರು, ಕರ್ನಾಟಕ



**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
ಕಾರ್ಯಪಾಲಕ ಅಭಿಯಂತರರ ಕಚೇರಿ–3, ಘನ ತ್ಯಾಜ್ಯ ನಿರ್ವಹಣೆ,
ದಾಸಪ್ಪ ಆಸ್ಪತ್ರೆ ಕಾಂಪೌಂಡ್, ನರಸಿಂಹರಾಜ ರಸ್ತೆ, ಬೆಂಗಳೂರು – 560 002.
ಸಂಖ್ಯೆ:ಕಾಪಾಅ–3/ಘತ್ಯಾನಿ/ಹರಾಜು/01/2023–24 ದಿನಾಂಕ: 12.01.2024

**ಅಲ್ಪಾವಧಿ ಟೆಂಡರ್ ಪ್ರಕಟಣೆ**
(ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮುಖಾಂತರ ಮಾತ್ರ)

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು **ಡಿಪಿಎಸ್ ಪಿಂಚಣಿ ನಿಧಿ ಸ್ಥಿರ ಠೇವಣಿ**ಗಳಿಗಾಗಿ ವರ್ಗೀಕೃತ ವಾಣಿಜ್ಯ ಬ್ಯಾಂಕುಗಳಿಂದ (ಸಾರ್ವಜನಿಕ ವಲಯ ಮತ್ತು ಖಾಸಗಿ ವಲಯ ಬ್ಯಾಂಕ್‌ಗಳು ಪ್ರತ್ಯೇಕವಾಗಿ) ಕೆಪಿಪಿಪಿ ಪೋರ್ಟಲ್ ಇ–ಬಿಡ್ಡಿಂಗ್ ಮೂಲಕ ದರಪಟ್ಟಿಗಳನ್ನು ಆಹ್ವಾನಿಸಿದೆ. ಇ–ಹರಾಜು/ಇ–ಬಿಡ್ಡಿಂಗ್‌ನಲ್ಲಿ ಪ್ರಾದೇಶಿಕ / ವಲಯ / ಮುಖ್ಯ ಕಚೇರಿಗಳನ್ನು ಹೊಂದಿರುವ ಬ್ಯಾಂಕುಗಳು ಮಾತ್ರ ಭಾಗವಹಿಸಬಹುದು ಮತ್ತು ವೈಯಕ್ತಿಕ (individual) ಬ್ಯಾಂಕ್ ಶಾಖೆ ಹೊಂದಿರುವವರು ಭಾಗವಹಿಸುವಂತಿಲ್ಲ.

ಇ–ಹರಾಜಿನ ಮಾಹಿತಿಗಳನ್ನು ಕೆಪಿಪಿಪಿ ಫ್ಲಾಟ್‌ಫಾರ್ಮ್ **https://kppp.karnataka.gov.in/eprocurement /common/eproc_auctions_list.seam** ನಲ್ಲಿ ಪಡೆದುಕೊಳ್ಳಬಹುದು.

ವಿಸ್ತೃತ ಬಿಡ್ ಪ್ರಕಟಣೆ, ಬಿಡ್ಡರುಗಳ ಪೂರ್ವಾರ್ಹತೆ ಮಾನದಂಡಗಳು, ಬಿಡ್ ವೇಳಾಪಟ್ಟಿ ಹಾಗೂ ಇತರೆ ಮಾಹಿತಿಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿಪಿ ಪೋರ್ಟಲ್‌ನಲ್ಲಿ ಪಡೆದುಕೊಳ್ಳಬಹುದು.

ಈ ನಿಟ್ಟಿನಲ್ಲಿ ಕೆಪಿಪಿಪಿ ಪೋರ್ಟಲ್ ಇ–ಹರಾಜಿನ ಮೂಲಕ ಬಿಡ್ ದಾಖಲೆಗಳಲ್ಲಿ ತಿಳಿಸಿರುವಂತೆ ಬೆಂಗಳೂರಿನಲ್ಲಿ ಶಾಖೆಗಳನ್ನು ಹೊಂದಿರುವ ಹಾಗೂ ಅರ್ಹತಾ ಮಾನದಂಡಗಳನ್ನು ಸರಿದೂಗಿಸುವ ಸಾರ್ವಜನಿಕ ವಲಯ ಬ್ಯಾಂಕುಗಳು ಹಾಗೂ ಖಾಸಗಿ ವಲಯ ಬ್ಯಾಂಕುಗಳಿಂದ ಸ್ಪರ್ಧಾತ್ಮಕ ಬಿಡ್ಡುಗಳನ್ನು ಆಹ್ವಾನಿಸಲಾಗಿದೆ.

ಅರ್ಹ ಬ್ಯಾಂಕುಗಳು ಬಿಡ್ ದಾಖಲೆಗಳನ್ನು ಕೆಪಿಪಿಪಿ ಪೋರ್ಟಲ್ ಮೂಲಕ ಅಥವಾ ಷರತ್ತು ಮತ್ತು ನಿಬಂಧನೆಗಳನ್ನು ಮೇಲ್ಕಂಡ ಬಿಡ್ ದಾಖಲೆಗಳಲ್ಲಿ (ಇ–ಹರಾಜು) (ಬಿಡ್‌ಗಾಗಿ ಕೋರಿಕೆ) ತಿಳಿದುಕೊಳ್ಳಬಹುದಾಗಿದೆ. ಇನ್ನು ಮುಂದೆ ಎಲ್ಲಾ ಟೆಂಡರ್ ಪ್ರಕಟಣೆಗಳು, ಬಿಡ್ ದಾಖಲೆಗಳು ಮತ್ತು ಯಾವುದೇ ಬದಲಾವಣೆಗಳಿದ್ದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಎಂಬುದನ್ನು ತಿಳಿದುಕೊಳ್ಳುವುದು.

**DPS PENSION FUND FIXED DEPOSIT DETAILS**
The deposits proposed for and the dates for e-bidding are as detailed below:-

| Name of the Fund | Amount available (Rs. in Crores) | Period of Investment (Callable) | EMD | Auction Fee | Validity Period |
|---|---|---|---|---|---|
| Fixed Deposit Fund (Public Sector Banks) | Rs.107.70 (1077 FDs in Rs.10 Lakh Each) | 1 year | Rs. 5,000/- | As per KPPP | 15 Days |
| Fixed Deposit Fund (Private Sector Banks) | Rs.107.70 (1077 FDs in Rs.10 Lakh Each) | 1 year | Rs. 5,000/- | As per KPPP | 15 Days |

ಸ್ಥಿರ ಠೇವಣಿಗಳ ಅವಧಿಯನ್ನು ಒಂದು ವರ್ಷದ ಅವಧಿಗೆ ಸುತ್ತೋಲೆ ಸಂಖ್ಯೆ: FD 91 TAR 2022, Bengaluru, Dated 02.07.2022, Guidelines on Investment of Funds by Boards. Corporation, Local bodies, Authorities and Autonomous Bodies etc., and Finance Department Circular No. FD 28(T) Exp-1/2023 Bengaluru dated 01.08.2023ರ ಆಧಾರದಲ್ಲಿ ನಿಗದಿಪಡಿಸಲಾಗಿದೆ.

**ಟೆಂಡರ್ ವೇಳಾಪಟ್ಟಿ**

- ಇ–ಹರಾಜು ಪ್ರಕಟಣೆಯ ದಿನಾಂಕ 16.01.2024
- ನೇರ ಹರಾಜು ಆರಂಭವಾಗುವ ಸಮಯ 24.01.2024ರ ಬೆಳಿಗ್ಗೆ 11:00 ಗಂಟೆಗೆ.
- ನೇರ ಹರಾಜು ಕೊನೆಗೊಳ್ಳುವ ಸಮಯ 25.01.2024ರ ಸಂಜೆ 4:00 ಗಂಟೆಗೆ.

ಸಹಿ/– ಕಾರ್ಯಪಾಲಕ ಅಭಿಯಂತರರು–3, ಘನ ತ್ಯಾಜ್ಯ ನಿರ್ವಹಣೆ



**ನಗರಸಭೆ ಕಾರ್ಯಾಲಯ, ಬೀದರ**
ಸಂಖ್ಯೆ:ಬಿಎಂಸಿ/ಎನ್‌ಜಿ/ಸಿಆರ್–85/86/2023–24 ದಿನಾಂಕ:12–01–2024

**:: ಟೆಂಡರ್ ಪ್ರಕಟಣೆ ::**

1) ಕಾಮಗಾರಿ / ಸರಕು / ಸೇವೆಯ ವಿವರ: DMA/2023-24/OW/WORK_INDENT11511 (FOR SC CONTRACTORS), DMA/2023-24/OW/WORK_INDENT10090(FOR ST CONTRACTORS), DMA/2023-24/OW/WORK_INDENT10103, DMA/2023-24/OW/WORK_INDENT10106(FOR SC CONTRACTORS), DMA/2023-24/OW/WORK_INDENT10105(FOR ST CONTRACTORS), DMA/2023-24/OW/WORK_INDENT10165, 2) ಕಾಮಗಾರಿಯ ಅಂದಾಜು ಮೊತ್ತ : e-portal ನಲ್ಲಿ ನಮೂದಿಸಿದಂತೆ, 3) ಗುತ್ತಿಗೆದಾರರ ಅರ್ಹತೆ ವಿವರ : e-portal ನಲ್ಲಿ ನಮೂದಿಸಿದಂತೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : e-portal ನಲ್ಲಿ ನಮೂದಿಸಿದಂತೆ, 5) ಪ್ರಿ ಬಿಡ್ ಮೀಟಿಂಗ್ : 23-01-2024 at 11.00 AM, 6) ಟೆಂಡರ ಫಾರಂ ಪಡೆಯಲು ಅಂತಿಮ ದಿನಾಂಕ & ಭರ್ತಿ ಮಾಡಿ ಸಲ್ಲಿಸಲು: 30-01-2024 upto 04.00 PM, 7) ಟೆಂಡರ ತೆರೆಯುವ ದಿನಾಂಕ : 31-01-2024 at 04.30 PM 8) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ ಕಛೇರಿ ವಿಳಾಸ, ದೂರವಾಣಿ ಸಂಖ್ಯೆ : ಪೌರಾಯುಕ್ತರು ನಗರಸಭೆ ಬೀದರ, ಇ–ಮೇಲ್: itstaff_ulb_bidar@yahoo.com 08482-240432, 9) ಅಂತರಜಾಲ ತಾಣದ ವಿಳಾಸ : https://kppp.karnataka.gov.in/

ಸಹಿ/– ಪೌರಾಯುಕ್ತರು
ವಾ.ಸಾ.ಸಂ.ಇ/ಬೀದರ/232/ಕೆ.ಎಸ್.ಎಂ.ಸಿ.&ಎ/2023–24 ನಗರಸಭೆ ಬೀದರ



Infosys®
Navigate your next

**Infosys Limited**
CIN : L85110KA1981PLC013115
44, Infosys Avenue, Electronics City, Hosur Road, Bengaluru - 560 100
Phone: 91 80 2852 0261, Fax: 91 80 2852 0362
investors@infosys.com, www.infosys.com

**NOTICE OF LOSS OF SHARE CERTIFICATES**

Notice is hereby given that the following share certificate(s) issued by the Company are stated to have been lost or misplaced and the registered share holder(s) thereof have applied for issue of duplicate share certificate(s).

Notice is hereby given that the company will proceed to **issue letter of confirmation in lieu of duplicate share certificate(s)** unless a valid objection is received by the company within 15 days from the date of publication of this notice. No claims will be entertained by the company with respect to the original share certificate(s) subsequent to the issue of duplicates thereof.

| Name of Shareholder | Folio No. | Certificate No. | Distinctive Nos. | | No. of Shares |
|---|---|---|---|---|---|
| | | | From | To | |
| SHEKHAR SHAMRAO RAJADHYAX | ITL950085 | 600099 | 574762011 | 574762012 | 2 |
| | | 1000102 | 1149530171 | 1149530174 | 4 |

Any person who has/have a claim in respect of the said certificate(s) should lodge his/her/their claim with all supporting documents with the company at its registered office. If no valid and legitimate claim is received within 15 days from the date of publication of this notice, the company will proceed to issue Letter of Confirmation in lieu of duplicate share certificate(s) to the person listed above and no further claim would be entertained from any other person(s).

**Registered Office:**
Electronics City, Hosur Road,
Bengaluru - 560 100

For **Infosys Limited**
Sd/-
**A.G.S. Manikantha**
*Company Secretary*

January 12, 2024
Bengaluru, India

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

**ಸುಭಾಷಿತ**

ರಾಕ್ಷಸರು ಇರುವುದು ನಿಜ, ಭೂತಗಳು ಇರುವುದೂ ನಿಜ. ಅವು ನಮ್ಮೊಳಗೆ ವಾಸ ಮಾಡುತ್ತವೆ ಮತ್ತು ಕೆಲವೊಮ್ಮೆ ಜಯಶಾಲಿಯೂ ಆಗಿಬಿಡುತ್ತವೆ.

–ಸ್ಟೀಫನ್ ಕಿಂಗ್

# ಮಹಾರಾಷ್ಟ್ರ: ಸ್ಪೀಕರ್ ರೂಲಿಂಗ್ ನಿರೀಕ್ಷಿತ ಇನ್ನುಳಿದಿರುವುದು ಮತದಾರರ ರೂಲಿಂಗ್

**ಶಿವಸೇನಾ** ಪಕ್ಷವು 2022ರಲ್ಲಿ ಹೋಳಾಯಿತು. ಇದಾದ ನಂತರದಲ್ಲಿ, ಏಕನಾಥ ಶಿಂದೆ ನೇತೃತ್ವದ ಬಣವೇ ನಿಜವಾದ ಶಿವಸೇನಾ, ಪಕ್ಷ ವಿಭಜನೆಯಾದ ನಂತರದಲ್ಲಿ ಈ ಬಣದ ಶಾಸಕರಿಗೆ ಅನರ್ಹತೆ ಅನ್ವಯವಾಗುವುದಿಲ್ಲ ಎಂದು ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ರಾಹುಲ್ ನಾರ್ವೇಕರ್ ಅವರು ರೂಲಿಂಗ್ ನೀಡಿರುವುದು ನಿರೀಕ್ಷಿತವೇ ಆಗಿತ್ತು. ಶಿಂದೆ ಮತ್ತು ಅವರ ಬಣವು ಬಂಡಾಯವೆದ್ದು, ಅಂದಿನ ಮಹಾರಾಷ್ಟ್ರ ವಿಕಾಸ ಆಘಾಡಿ ಸರ್ಕಾರವನ್ನು ಉರುಳಿಸಿ, ಬಿಜೆಪಿ ಜೊತೆ ಸೇರಿ ಹೊಸ ಸರ್ಕಾರ ರಚಿಸಿದಾಗ ಅವರನ್ನು ಪಕ್ಷದಿಂದ ಹೊರಹಾಕುವ ಅಧಿಕಾರವು ಪಕ್ಷದ ಅಂದಿನ ಮುಖ್ಯಸ್ಥ ಉದ್ಧವ್ ಠಾಕ್ರೆ ಅವರಿಗೆ ಇರಲಿಲ್ಲ ಎಂದು ಸ್ಪೀಕರ್ ರೂಲಿಂಗ್ ನೀಡಿದ್ದಾರೆ. ಶಿಂದೆ ಬಣದ ಶಾಸಕರನ್ನು ಅನರ್ಹ-ಗೊಳಿಸಲು ಠಾಕ್ರೆ ಬಣವು ಪರಿಗಣಿಸಬಹುದಾದಂತಹ ಯಾವುದೇ ಆಧಾರವನ್ನು ಒದಗಿಸಿಲ್ಲ ಎಂದು ಸ್ಪೀಕರ್ ಹೇಳಿದ್ದಾರೆ. 2018ರಲ್ಲಿ ತಿದ್ದುಪಡಿ ಮಾಡಲಾದ ಪಕ್ಷದ ಸಂವಿಧಾನವು ಪಕ್ಷದ ಮುಖ್ಯಸ್ಥನಿಗೆ ಹೆಚ್ಚಿನ ಅಧಿಕಾರ ನೀಡಿದೆ. ಆದರೆ ಈ ಸಂವಿಧಾನವು ಚುನಾವಣಾ ಆಯೋಗದ ದಾಖಲೆಗಳಲ್ಲಿ ಇರಲಿಲ್ಲ, ಹೀಗಾಗಿ ಈ ಸಂವಿಧಾನವನ್ನು ಪರಿಗಣಿಸಲು ಆಗದು ಎಂದು ಸ್ಪೀಕರ್ ತಿಳಿಸಿದ್ದಾರೆ.

ಯಾವುದೇ ಸ್ಪೀಕರ್ ಪಕ್ಷಾಂತರ ನಿಷೇಧ ಕಾನೂನಿನ ಅಡಿಯಲ್ಲಿ ಶಾಸಕರ ಅನರ್ಹತೆಗೆ ಸಂಬಂಧಿಸಿದಂತೆ, ತಾನು ಪ್ರತಿನಿಧಿಸುವ ಆಡಳಿತಾರೂಢ ಪಕ್ಷದ ಹಿತಾಸಕ್ತಿಗಳಿಗೆ ವಿರುದ್ಧವಾಗಿ ರೂಲಿಂಗ್ ನೀಡಿದ ನಿದರ್ಶನ ಈಚಿನ ವರ್ಷಗಳಲ್ಲಿ ಇಲ್ಲ. ನಾರ್ವೇಕರ್ ಅವರು ಬಿಜೆಪಿಯಿಂದ ಶಾಸಕರಾಗಿ ಆಯ್ಕೆಯಾದವರು. ಅವರು ಮಹಾರಾಷ್ಟ್ರದ ಈಗಿನ ಸರ್ಕಾರದ ಹಿತಾಸಕ್ತಿಗಳಿಗೆ ಅನುಗುಣವಾಗುವ ರೀತಿಯಲ್ಲಿ ಮಾತ್ರ ರೂಲಿಂಗ್ ನೀಡುವುದು ನಿರೀಕ್ಷಿತವೇ ಆಗಿತ್ತು. ಸ್ಪೀಕರ್ ಹುದ್ದೆಯು ಸಾಂವಿಧಾನಿಕ ಮಾನ್ಯತೆ ಹೊಂದಿದ್ದರೂ ಸ್ಪೀಕರ್ ಸ್ಥಾನದಲ್ಲಿ ಇರುವವರು ಪಕ್ಷಪಾತಿ ಧೋರಣೆಗಳಿಂದ ಆಚೆ ನಿಂತು, ಪೂರ್ವಗ್ರಹಗಳನ್ನು ಮೀರಿ ನಿರ್ಣಯ ಕೈಗೊಳ್ಳಬೇಕಿದ್ದರೂ ವಾಸ್ತವದಲ್ಲಿ ಆ ರೀತಿ ಆಗುತ್ತಿಲ್ಲ. ರೂಲಿಂಗ್ ನೀಡಲು ಸುಪ್ರೀಂ ಕೋರ್ಟ್ ನೀಡಿದ್ದ ಗಡುವಿನ ಕೊನೆಯ ದಿನ ನಾರ್ವೇಕರ್ ಆ ಕೆಲಸ ಮಾಡಿದ್ದಾರೆ. ನಿರ್ಣಯವನ್ನು ತ್ವರಿತವಾಗಿ ಕೈಗೊಳ್ಳಲು ನಾರ್ವೇಕರ್ ಅವರಿಗೆ ಸುಪ್ರೀಂ ಕೋರ್ಟ್ ಮತ್ತೆ ಮತ್ತೆ ಸೂಚನೆ ನೀಡಿತ್ತು. ‘ಸ್ಪೀಕರ್ ನಿಷ್ಪಕ್ಷಪಾತಿಯಾಗಿ ಇರಬೇಕಿರುವುದು ಸಾಂವಿಧಾನಿಕ ಕರ್ತವ್ಯ. ಆದರೆ ಸ್ಪೀಕರ್ ಸ್ಥಾನದಲ್ಲಿ ಇರುವವರು ಇದಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವ ಪ್ರವೃತ್ತಿ ಹೆಚ್ಚುತ್ತಿದೆ’ ಎಂದು ಸುಪ್ರೀಂ ಕೋರ್ಟ್ ಹಿಂದೊಮ್ಮೆ ಹೇಳಿತ್ತು. ಮಣಿಪುರದಲ್ಲಿ ಸಚಿವರೊಬ್ಬರ ವಿರುದ್ಧ ಸಲ್ಲಿಕೆಯಾಗಿದ್ದ ಅನರ್ಹತೆಗೆ ಸಂಬಂಧಿಸಿದ ಅರ್ಜಿಯನ್ನು ಅಲ್ಲಿನ ಸ್ಪೀಕರ್ ವರ್ಷಗಳ ಕಾಲ ಹಾಗೇ ಉಳಿಸಿಕೊಂಡ ಕಾರಣ, ಸುಪ್ರೀಂ ಕೋರ್ಟ್ ಆ ಸಚಿವರನ್ನು ಸಚಿವ ಸ್ಥಾನದಿಂದ ಕೆಳಗಿಳಿಸಿದ್ದ ನಿದರ್ಶನವೂ ಇದೆ.

**ಸ್ಪೀಕರ್ ಸ್ಥಾನದಲ್ಲಿ ಇರುವವರು ಪೂರ್ವಗ್ರಹಗಳನ್ನು ಮೀರಿ ನಿರ್ಣಯ ಕೈಗೊಳ್ಳಬೇಕಿದ್ದರೂ ವಾಸ್ತವದಲ್ಲಿ ಆ ರೀತಿ ಆಗುತ್ತಿಲ್ಲ**

ಈಗ ನಾರ್ವೇಕರ್ ಅವರು ನೀಡಿರುವ ರೂಲಿಂಗ್, ಠಾಕ್ರೆ ಬಣಕ್ಕೆ ಆಗಿರುವ ರಾಜಕೀಯ ಹಿನ್ನಡೆ. ಶಿಂದೆ ಬಣಕ್ಕೆ ಸಿಕ್ಕಿರುವ ಇನ್ನೊಂದು ಜಯ. ಚುನಾವಣಾ ಆಯೋಗವು ಶಿಂದೆ ಬಣವನ್ನೇ ಶಿವಸೇನಾ ಎಂದು ಗುರುತಿಸಿದೆ. ಈ ಬಣಕ್ಕೆ ಶಿವಸೇನಾ ಪಕ್ಷದ ಚಿಹ್ನೆಯನ್ನು ಬಳಸುವ ಅವಕಾಶ ನೀಡಿದೆ. ಚುನಾವಣಾ ಆಯೋಗದ ತೀರ್ಮಾನವನ್ನು ಠಾಕ್ರೆ ಬಣವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದೆ. ಅನರ್ಹತೆಗೆ ಸಂಬಂಧಿಸಿದ ನಿರ್ಣಯವನ್ನು ಕೂಡ ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುವುದಾಗಿ ಠಾಕ್ರೆ ಬಣ ಹೇಳಿದೆ. ಇದರ ಬಗ್ಗೆ ತೀರ್ಮಾನ ಕೈಗೊಳ್ಳಲು ಕೋರ್ಟ್‌ಗೆ ಕೆಲವು ಸಮಯ ಬೇಕಾಗಬಹುದು. ಈ ವರ್ಷದಲ್ಲಿ ಮಹಾರಾಷ್ಟ್ರ ವಿಧಾನಸಭೆಗೆ ಚುನಾವಣೆ ನಡೆಯಲಿರುವ ಕಾರಣ, ಈ ಅರ್ಜಿಯು ಪ್ರಸ್ತುತತೆಯನ್ನು ಕಳೆದುಕೊಳ್ಳಲೂಬಹುದು. ಮಹಾರಾಷ್ಟ್ರದ ಸ್ಪೀಕರ್ ಈಗ ಎನ್‌ಸಿಪಿ ಬಣಗಳ ಅನರ್ಹತೆಗೆ ಸಂಬಂಧಿಸಿದ ಅರ್ಜಿಗಳ ಬಗ್ಗೆ ತೀರ್ಮಾನವನ್ನು ಜನವರಿ 31ಕ್ಕೆ ಮೊದಲು ಹೇಳಬೇಕಿದೆ. ಮಹಾರಾಷ್ಟ್ರದ ರಾಜಕಾರಣವು ಎರಡು ಪ್ರಮುಖ ಪಕ್ಷಗಳಾದ ಶಿವಸೇನಾ ಮತ್ತು ಎನ್‌ಸಿಪಿ ಹೋಳಾಗಿದ್ದನ್ನು ಈಚೆಗೆ ಕಂಡಿದೆ. ಎರಡೂ ಪಕ್ಷಗಳ ತಲಾ ಒಂದು ಬಣವು ಬಿಜೆಪಿ ಜೊತೆ ಕೈಜೋಡಿಸಿವೆ. ಪಕ್ಷಗಳ ವಿಭಜನೆಗೆ ಸಂಬಂಧಿಸಿದ ಕಾನೂನಿನ ಅಂಶವನ್ನು ಸ್ಪೀಕರ್ ಮತ್ತು ಕೋರ್ಟ್‌ಗಳು ತೀರ್ಮಾನಿಸುತ್ತವೆಯಾದರೂ, ಇಲ್ಲಿ ಅಡಗಿರುವ ನಿಜವಾದ ಸಂಗತಿಯನ್ನು ಆಯಾ ಪಕ್ಷಗಳ ಕಾರ್ಯಕರ್ತರು ತಳಮಟ್ಟದಲ್ಲಿ ಹಾಗೂ ಮತದಾರರು ಚುನಾವಣೆಯಲ್ಲಿ ತೀರ್ಮಾನಿಸಲಿದ್ದಾರೆ.

## ದಿನದ ಟ್ವೀಟ್

### ಪರೀಕ್ಷೆ ನಡೆಯಲಿ

**ಪಿತೃತ್ವ ಪರೀಕ್ಷೆ ನಡೆಸಿ, ಯಾರು ಕಾರಣ ಎಂಬುದನ್ನು ಪತ್ತೆಹಚ್ಚಬಾರದೇಕೆ? ವಾರ್ಡನ್ ಕಾರ್ಯವ್ಯಾಪ್ತಿಯ ಪ್ರದೇಶದಲ್ಲಿ ತಪ್ಪು ನಡೆದಿಲ್ಲ ಎಂದಾದರೆ ಅವರನ್ನು ಅಮಾನತು ಮಾಡುವುದೇಕೆ? ಶಾಲೆಯಲ್ಲಿನ ಶಿಕ್ಷಕ, ವಾರ್ಡನ್ ಅಂತಹವರಿಂದ ಕೃತ್ಯ ನಡೆದಿದೆ ಎಂದಾದರೆ ಮಾತ್ರ ಅಮಾನತಿನಂಥ ಕ್ರಮ ಜರುಗಿಸುವುದು ಒಳ್ಳೆಯದು. ಇಲ್ಲವೆಂದಾದರೆ, ವಿದ್ಯಾರ್ಥಿಗಳನ್ನು ಕೌನ್ಸೆಲಿಂಗ್‌ಗೆ ಒಳಪಡಿಸಬೇಕು, ಪೋಷಕರೂ ಅದರಲ್ಲಿ ಒಳಗೊಳ್ಳಬೇಕು...**

(ಮಧುಗಿರಿ ತಾಲ್ಲೂಕಿನ ವಸತಿ ಶಾಲೆಯ ಹಾಸ್ಟೆಲ್ ವಿದ್ಯಾರ್ಥಿನಿಯೊಬ್ಬಳು ಆಸ್ಪತ್ರೆಯಲ್ಲಿ ಮಗುವಿಗೆ ಜನ್ಮ ನೀಡಿದ ಪ್ರಕರಣದ ಸಂಬಂಧ, ವಸತಿ ನಿಲಯದ ಮಹಿಳಾ ವಾರ್ಡನ್ ಅವರನ್ನು ಅಮಾನತು ಮಾಡಿರುವುದಕ್ಕೆ ಪ್ರತಿಕ್ರಿಯೆ)

**ಸಹನಾ**

## ಕಿಡಿನುಡಿ

**ಉತ್ತಮ ರೀತಿಯಲ್ಲಿ ನಿರ್ವಹಣೆಗೆ ಒಳಗಾಗಿರುವ ಬೆಂಗಳೂರಿನ 2.2 ಕಿ.ಮೀ. ಉದ್ದದ ಎಂ.ಜಿ. ರಸ್ತೆಗೆ ₹ 45 ಕೋಟಿ ಅಂದಾಜು ವೆಚ್ಚದಲ್ಲಿ ವೈಟ್ ಟಾಪಿಂಗ್ ಮಾಡುವ ಬಿಬಿಎಂಪಿಯ ಪ್ರಸ್ತಾವ ಹಗಲು ದರೋಡೆಯ ಉದ್ದೇಶವನ್ನು ಹೊಂದಿರುವುದಲ್ಲದೆ ಬೇರೇನೂ ಅಲ್ಲ. ಇದರ ಬದಲು, ತುರ್ತು ದುರಸ್ತಿಯ ಅಗತ್ಯ ಇರುವ ರಸ್ತೆಗಳತ್ತ ಬಿಬಿಎಂಪಿ ಆಯುಕ್ತರು ಗಮನಹರಿಸುವುದು ಒಳ್ಳೆಯದು.**

**ಗೌತಮ್ ಮಾಚಯ್ಯ,** ಪತ್ರಕರ್ತ

## 25 ವರ್ಷಗಳ ಹಿಂದೆ

ಬುಧವಾರ, 13-1-1999

**• ದಳ ಬಿಕ್ಕಟ್ಟಿಗೆ ತೆರೆ ಪಟೇಲ್ ಮುಂದುವರಿಕೆ**

**ನವದೆಹಲಿ, ಜ. 12–** ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನಾಯಕತ್ವದಲ್ಲಿ ಮುಂದುವರಿಕೆ. ಜನತಾದಳದ ಅಧ್ಯಕ್ಷ ಬಿ.ಎಲ್. ಶಂಕರ್‌ಗೆ ಕೊಕ್. ಉಪಮುಖ್ಯಮಂತ್ರಿ ಸ್ಥಾನದ ಜತೆಗೆ ಸಿದ್ದರಾಮಯ್ಯ ಅವರಿಗೆ ರಾಜ್ಯ ಜನತಾದಳದ ಅಧ್ಯಕ್ಷ ಸ್ಥಾನದ ಹೆಚ್ಚಿನ ಹೊಣೆಗಾರಿಕೆ ಹಾಗೂ ಸಂಪುಟ ಪುನರ್‌ರಚನೆ.

–ಆಡಳಿತಾರೂಢ ಜನತಾದಳದ ಮೂರು ತಿಂಗಳ ಬಿಕ್ಕಟ್ಟಿಗೆ ಪಕ್ಷದ ರಾಜಕೀಯ ವ್ಯವಹಾರಗಳ ಸಮಿತಿ ಇಂದು ಕೈಗೊಂಡ ಒಮ್ಮತದ ತೀರ್ಮಾನಗಳಿವು.

ಸಂಪುಟ ಪುನರ್‌ರಚನೆ ಬಗೆಗೆ ಮುಖ್ಯಮಂತ್ರಿ ಅವರಿಗೆ ಪೂರ್ಣ ಅಧಿಕಾರ ಇದ್ದರೂ, ದಳದ ನಾಯಕರಾದ ಎಚ್.ಡಿ. ದೇವೇಗೌಡ, ಎಸ್.ಆರ್. ಬೊಮ್ಮಾಯಿ ಮತ್ತು ಸಿದ್ದರಾಮಯ್ಯ ಅವರೊಡನೆ ಮುಕ್ತವಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು ಎಂದು ಪಟೇಲ್ ಅವರಿಗೆ ಸಲಹೆ ಮಾಡಿರುವುದಾಗಿ ದಳದ ಅಧ್ಯಕ್ಷ ಶರದ್ ಯಾದವ್ ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

**• ‘ಪಕ್ಷ ಅಧಿಕಾರಕ್ಕೆ ತರುವ ಗುರಿ’**

**ನವದೆಹಲಿ, ಜ. 12–** ‘ಮುಂದಿನ ಚುನಾವಣೆಯಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದು ನನ್ನ ಮುಂದಿರುವ ತುರ್ತು ಕೆಲಸ ಮತ್ತು ಗುರಿ’.

ಉಪಮುಖ್ಯಮಂತ್ರಿ ಸ್ಥಾನದ ಜತೆಗೆ, ಚುನಾವಣೆ ಹತ್ತಿರವಾಗುತ್ತಿರುವ ದಿನಗಳಲ್ಲಿ ಜನತಾದಳದ ನೂತನ ಅಧ್ಯಕ್ಷರಾಗಿ ಇಂದು ನೇಮಕಗೊಂಡ, ಐವತ್ತು ವರ್ಷ ದಾಟಿರುವ ಸಿದ್ದರಾಮಯ್ಯ ಅವರ ಗುರಿಯಿದು.

## 50 ವರ್ಷಗಳ ಹಿಂದೆ

ಭಾನುವಾರ, 13-1-1974

**• ತೆರಿಗೆಗಳ್ಳತನ ನಿವಾರಣೆಗಾಗಿ ಶೋಧ, ವಶದ ನಿಯಮ ಕ್ರಮಬದ್ಧ: ‘ಸುಪ್ರೀಂ’**

**ನವದೆಹಲಿ, ಜ.12–** ಆದಾಯ ತೆರಿಗೆ ಕಾನೂನಿನಂತೆ ಶೋಧಿಸಿ ವಶಪಡಿಸಿಕೊಳ್ಳಲು ಇರುವ ಅವಕಾಶವನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ.

ತೆರಿಗೆಗಳ್ಳತನವನ್ನು ದಮನ ಮಾಡಲು ಹಾಗೂ ಸರ್ಕಾರಕ್ಕೆ ಬರಬೇಕಾದ ಬಾಕಿಯ ವಸೂಲಿಗೆ ಇರುವ ಉಗ್ರ ಕ್ರಮಗಳು ತಾವಾಗಿಯೇ ನ್ಯಾಯಬದ್ಧವಾದವು. ಸಮುದಾಯದ ಆರ್ಥಿಕ ಜೀವನದ ಸತ್ವವನ್ನು ಇಂತಹ ತೆರಿಗೆಗಳ್ಳತನ ಎಷ್ಟು ಕೊರೆದು ಹಾಕುತ್ತದೆ ಎಂಬುದನ್ನು ಯಾರೂ ಉಪೇಕ್ಷಿಸುವಂತಿಲ್ಲ ಎಂದು ಹೇಳಿದೆ. ಈ ನಿಯಮದ ಕ್ರಮಬದ್ಧತೆಯನ್ನು ಪ್ರಶ್ನಿಸಿದ್ದ ರಿಟ್ ಅರ್ಜಿಗಳನ್ನು ವಜಾ ಮಾಡಿದೆ.

**• ತುಳು, ಕೊಂಕಣಿ ಭಾಷೆಗಳಿಗೂ ಅವಕಾಶ ಸಿಗಲಿ: ಅರಸು**

**ಮಂಗಳೂರು, ಜ. 12–** ‘ಕರಾವಳಿ ಜಿಲ್ಲೆಗಳಲ್ಲಿ ವಿಶಿಷ್ಟವಾದ ಸಂಸ್ಕೃತಿ ಇದ್ದು, ಕನ್ನಡ ಭಾಷೆ ಜೊತೆಗೆ ತುಳು ಮತ್ತು ಕೊಂಕಣಿ ಭಾಷೆಗಳಿಗೂ, ಅಭಿವೃದ್ಧಿ ಕಾರ್ಯಕ್ರಮಗಳ ಪ್ರಚಾರಕ್ಕೂ ಮಂಗಳೂರು ಆಕಾಶವಾಣಿ ಕೇಂದ್ರದಲ್ಲಿ ಸಾಕಷ್ಟು ಅವಕಾಶ ಸಿಗುವಂತಾಗಲಿ’ ಎಂದು ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರು ಹಾರೈಸಿದರು.

ಇಂದು ಇಲ್ಲಿನ ಕದ್ರಿಗುಡ್ಡದಲ್ಲಿ ಆಕಾಶವಾಣಿ ನಿಲಯಕ್ಕೆ ಕೇಂದ್ರ ಸರ್ಕಾರದ ಸುದ್ದಿ ಮತ್ತು ಪ್ರಸಾರ ಖಾತೆಯ ಉಪಸಚಿವ ಧರ್ಮವೀರ ಸಿನ್ಹ ಅವರ ಅಧ್ಯಕ್ಷತೆಯಲ್ಲಿ ದೇವರಾಜ ಅರಸು ಅವರು ಶಂಕುಸ್ಥಾಪನೆ ಮಾಡಿದರು.

ದೇಶದ ಒಗ್ಗಟ್ಟು ಮತ್ತು ಒಡಕು ಎರಡನ್ನೂ ಏಕಕಾಲಕ್ಕೆ ಪ್ರತಿಫಲಿಸುತ್ತಿದೆ ‘ಮಂದಿರಗನ್ನಡಿ’

# ಕಾಲ ನಮ್ಮ ಕೈಗಿತ್ತಿರುವ ಮಂದಿರಗನ್ನಡಿ

ಪಡಸಾಲೆ

ರಘುನಾಥ ಚ.ಹ.

ಎಲ್ಲ ಮಹತ್ವದ ವಾಸ್ತುಶಿಲ್ಪಗಳು ತಮ್ಮ ಕಾಲದ ಪ್ರತಿಬಿಂಬಗಳೂ ಆಗಿರುತ್ತವೆ, ಗತಿಬಿಂಬಗಳೂ ಆಗಿರುತ್ತವೆ; ಭವಿಷ್ಯದಲ್ಲಿ ಇತಿಹಾಸವನ್ನು ಉಸುರಲು ವರ್ತಮಾನದಲ್ಲಿ ನಿರ್ಮಿಸಿದ ಸ್ಥಾವರಗಳಾಗಿರುತ್ತವೆ. ಅಯೋಧ್ಯೆಯ ರಾಮ ಮಂದಿರ ಅಂತಹದೊಂದು ಅನನ್ಯ ವಾಸ್ತುಶಿಲ್ಪ. ಈ ಮಂದಿರ, ಕಾಲ ನಮ್ಮ ಕೈಗೆ ಕೊಟ್ಟಿರುವ ಕನ್ನಡಿ. ಅದರಲ್ಲಿ ಇಣುಕಿ ನೋಡಿದರೆ ರಾಮನಷ್ಟೇ ಕಾಣುವುದಿಲ್ಲ; ರಾಮನ ಹೆಸರಿನಲ್ಲಿ ದೇಶದಲ್ಲಿ ನಡೆಯುತ್ತಿರುವ ಅಸಂಖ್ಯ ವಿದ್ಯಮಾನಗಳೂ ಕಾಣಿಸುತ್ತವೆ; ನಾವು ನೀವು ಅವರೂ ಇವರೂ ಎಲ್ಲರೂ ಅಲ್ಲಿ ಕಾಣಿಸುತ್ತೇವೆ. ಮಂದಿರಗನ್ನಡಿಯಲ್ಲಿ ಕೆಲವರಿಗೆ ಭಾರತದಲ್ಲಿನ ಅಖಂಡ ಹಿಂದೂ ಪ್ರಜ್ಞೆಯ ಒಗ್ಗಟ್ಟು ಕಾಣಿಸಬಹುದು, ಮತ್ತೆ ಕೆಲವರಿಗೆ ಸಮಾಜದಲ್ಲಿನ ಒಡಕಲು ಬಿಂಬಗಳು ಕಾಣಿಸಬಹುದು. ದೇಶದ ಒಗ್ಗಟ್ಟು ಮತ್ತು ಒಡಕು ಎರಡನ್ನೂ ಏಕಕಾಲಕ್ಕೆ ಬಿಂಬಿಸುತ್ತಿರುವುದು ‘ಮಂದಿರಗನ್ನಡಿ’ಯ ವಿಶೇಷ.

ಮಂದಿರಗಳಿಂದ ದೂರವುಳಿದ ಜನರಿಗಾಗಿ ಪರ್ಯಾಯ ದೇಗುಲಗಳನ್ನು ನಿರ್ಮಿಸುತ್ತಾ ಹೋದ ನಾರಾಯಣ ಗುರುಗಳು ಕೂಡ ವಿಗ್ರಹದ ಜಾಗದಲ್ಲಿ ಕನ್ನಡಿಯನ್ನು ಇರಿಸುವ ಪ್ರಯೋಗ ಮಾಡಿದರು. ಎದುರು ನಿಂತವರೆಲ್ಲರ ಬಿಂಬವನ್ನು ಕನ್ನಡಿ ಪ್ರತಿಫಲಿಸಿದರೂ, ಯಾವ ಪ್ರತಿಬಿಂಬವನ್ನೂ ತನ್ನದಾಗಿಸಿಕೊಳ್ಳುವುದಿಲ್ಲ. ದೇವರ ನಿರಾಕಾರವನ್ನು ಹಾಗೂ ಆ ಆಕಾರ ನಮ್ಮೊಳಗೇ ಇರುವುದನ್ನು ಕನ್ನಡಿಗಿಂತಲೂ ಸಮರ್ಥವಾಗಿ ಬಿಂಬಿಸುವುದು ಬೇರಾವುದಕ್ಕೆ ಸಾಧ್ಯವಿದೆ? ದೇವರ ದರ್ಶನವೆನ್ನುವುದು ನಮ್ಮ ಅಂತರಂಗದ ಹುಡುಕಾಟವೇ ಆಗಿದೆ ಎನ್ನುವುದನ್ನು ನಾರಾಯಣ ಗುರುಗಳ ‘ಕನ್ನಡಿ ಸಿದ್ಧಾಂತ’ ಹೇಳುವಂತಿದೆ. ಈ ದರ್ಪಣ ತಾತ್ವಿಕತೆಯನ್ನು ಇಂದಿನ ರಾಮ ಮಂದಿರಕ್ಕೂ ಅನ್ವಯಿಸಿದರೆ, ಇಡೀ ಮಂದಿರವೇ ಒಂದು ಕನ್ನಡಿಯಾಗಿ ಈ ಕಾಲಘಟ್ಟದ ಅಗಣಿತ ಬಿಂಬಗಳನ್ನು ತೋರಿಸುವಂತಿದೆ ಹಾಗೂ ಆ ಬಿಂಬಗಳ ನಡುವೆಯೇ ನಮಗೆ ಬೇಕಾದ ರಾಮನನ್ನು ಹುಡುಕಿಕೊಳ್ಳಲು ಒತ್ತಾಯಿಸುತ್ತಿದೆ.

ಮಂದಿರಗನ್ನಡಿ ನಮಗೆ ಕಾಣಿಸುತ್ತಿರುವ ಬಿಂಬಗಳನ್ನು ಜೋಡಿಸಿಕೊಂಡು ನಾವು ರಾಮನ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಲಿಕ್ಕೆ ಸಾಧ್ಯವಿದೆ. ರಾಮನನ್ನು ಓರ್ವ ಪುರಾಣ ಪುರುಷನ ರೂಪದಲ್ಲಿ ಅಥವಾ ದೈವದ ರೂಪದಲ್ಲಿ ನೋಡುವುದರಿಂದ ಆತನ ವ್ಯಕ್ತಿತ್ವವನ್ನು ಕುಗ್ಗಿಸಿದಂತಾಗುತ್ತದೆ. ರಾಮ ಮೌಲ್ಯದ ಸಂಕೇತ. ಶಬರಿಯ ಎಂಜಲು ಹಣ್ಣುಗಳನ್ನು ಪವಿತ್ರವೆಂದು ಸ್ವೀಕರಿಸಿದಂತೆಯೇ, ಅಳಿಲಿನ ಅಸ್ತಿತ್ವಕ್ಕೂ ಮನ್ನಣೆ ಕೊಡುವಂತಹದ್ದು, ಸಮಾಜದ ಕಟ್ಟಕಡೆಯ ವ್ಯಕ್ತಿಯ ಮಾತಿಗೂ ಮನ್ನಣೆ ಕೊಡುವಂತಹ ಪ್ರಜಾಪ್ರಭುತ್ವವಾದಿ ನಿಲುವಿನದು ಆ ಮೌಲ್ಯ.

ಪ್ರಜಾಪ್ರಭುತ್ವದ ಸೊಗಸು ಮತ್ತು ಸಾಧ್ಯತೆಗಳನ್ನು ಅರ್ಥ ಮಾಡಿಕೊಳ್ಳಲು ಮಂದಿರಗನ್ನಡಿಗಿಂತಲೂ ಸೃಜನಶೀಲವಾದ ಮತ್ತೊಂದು ಪರಿಕರವಿಲ್ಲ. ಬಹುಸಂಖ್ಯಾತರ ಒಲವು-ಒಮ್ಮತದಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಪ್ರತಿನಿಧಿಗಳನ್ನು ಚುನಾಯಿಸುತ್ತದಷ್ಟೇ. ಹೀಗೆ ಆಯ್ಕೆಯಾದ ಪ್ರತಿನಿಧಿಗಳು ತಮ್ಮ ನಿಷ್ಠೆಯನ್ನು ತಮಗೆ ಮತ ಚಲಾಯಿಸಿದವರಿಗಷ್ಟೇ ಸೀಮಿತಗೊಳಿಸುವಂತಿಲ್ಲ. ಭಿನ್ನಮತ, ತಕರಾರು ಹೊಂದಿರುವ ವ್ಯಕ್ತಿಗಳ ಮಾತನ್ನೂ ಅವರು ಕೇಳಿಸಿಕೊಳ್ಳಬೇಕು ಹಾಗೂ ಆ ಅಭಿಪ್ರಾಯಗಳಿಗೆ ಸ್ಪಂದಿಸಬೇಕು. ರಾಮನ ಉದಾಹರಣೆಯನ್ನೇ ನೋಡಿ: ಆತ ಅಧಿಕಾರಕ್ಕೆ ಅಂಟಿಕೊಂಡವನಲ್ಲ. ತಂದೆಯ ಮಾತಿಗೆ ಕಟ್ಟುಬಿದ್ದು ಕಾಡಿಗೆ ನಡೆದದ್ದು ನಿಜವಾದರೂ, ಆ ನಡೆಯಲ್ಲಿ ಅಧಿಕಾರದ ಕುರಿತ ನಿರ್ಮೋಹವೂ ಇತ್ತು. ಇಡೀ ಸಾಮ್ರಾಜ್ಯ ಉಘೇ ಉಘೇ ಎನ್ನುತ್ತಿದ್ದರೂ ಸಾಮಾನ್ಯ ವ್ಯಕ್ತಿಯೊಬ್ಬನ ಅಪಸ್ವರ ರಾಮನ ಸಾಕ್ಷಿಪ್ರಜ್ಞೆಯನ್ನು ಕಲಕಿದ್ದು ಅಸಾಧಾರಣ ಸಂಗತಿ. ಪ್ರಜಾಪ್ರಭುತ್ವ ವ್ಯವಸ್ಥೆಯ ಕುರಿತ ರಾಮನ ಬದ್ಧತೆ ಎಷ್ಟು ಸೂಕ್ಷ್ಮವಾಗಿತ್ತೆಂದರೆ, ಜನಸಾಗರದ ಜಯಘೋಷದ ನಡುವೆಯೂ ಕ್ಷೀಣಾತಿಕ್ಷೀಣ ಧ್ವನಿಯನ್ನು ಗಮನಿಸುವ ಹಾಗೂ ಆ ಮಾತನ್ನು ಮುಖ್ಯವೆಂದು ಭಾವಿಸಿ ಸ್ಪಂದಿಸುವ ಮನಸ್ಸು ಆತನದಾಗಿತ್ತು. ಅಧಿಕಾರದ ಅಗ್ನಿದಿವ್ಯಕ್ಕೆ ಒಪ್ಪಿಸಿಕೊಂಡವರಿಗೆ ವೈಯಕ್ತಿಕ ಸುಖ ನಗಣ್ಯವಾಗಬೇಕು, ಕುಟುಂಬದ ಹಿತ ಅಮುಖ್ಯವಾಗಬೇಕು ಎನ್ನುವುದನ್ನು ಅನುಸರಿಸಿ ತೋರಿದವನು ರಾಮ. ಆ ರಾಮಮಾರ್ಗದ ಬಿಂಬವೂ ಇಂದಿನ ಕನ್ನಡಿಯೊಳಗಿನ ಅಗಣಿತ ಬಿಂಬಗಳಲ್ಲಿ ಎಲ್ಲೋ ಅವಿತಿದೆ, ಹುಡುಕಿಕೊಳ್ಳಬೇಕಷ್ಟೆ.

ಭಾರತದ ಚೆಲುವು ಅದರ ಬಹುತ್ವದಲ್ಲಿರುವುದನ್ನು ಸಂವಿಧಾನ ಧ್ವನಿಸುತ್ತದೆ. ಈ ಬಹುತ್ವ, ವರ್ತಮಾನದ ಭಾರತದಲ್ಲಿ ಅಭಿಪ್ರಾಯಭೇದಗಳ ರೂಪದಲ್ಲಿ ಮೈದೋರಿದೆ. ಜಾತಿ, ಧರ್ಮ, ಭಾಷೆಗಳೆಲ್ಲವೂ ಭಿನ್ನಾಭಿಪ್ರಾಯಕ್ಕೆ ಕಾರಣಗಳೇ ಆಗಿವೆ. ಈ ಬಿಂಬಗಳೆಲ್ಲವೂ ಮಂದಿರಗನ್ನಡಿಯಲ್ಲಿ ಪ್ರತಿಫಲನಗೊಳ್ಳುತ್ತಿವೆ. ಧರ್ಮವೊಂದಕ್ಕೆ ಬದ್ಧವಾಗುವ ಭರದಲ್ಲಿ ಸರ್ಕಾರಕ್ಕೆ ರಾಜಧರ್ಮದ ಮರೆವೆಯಾಗಿದೆ. ತಾವು ಎಲ್ಲ ಪ್ರಜೆಗಳಿಗೂ ಸೇರಿದವರು ಎನ್ನುವುದನ್ನು ರಾಜಕಾರಣಿಗಳು ಮರೆತಿದ್ದಾರೆ. ಮಂದಿರದ ಮೂಲಕ ರಾಮರಾಜ್ಯದ ಶಕೆಯಾರಂಭವಾಯಿತು ಎಂದು ಬೀಗುತ್ತಿರುವವರೇ, ಪ್ರಜಾಪ್ರಭುತ್ವವಾದಿ ರಾಮನ ಆಶಯಗಳನ್ನು ಮೂಲೆಗುಂಪು ಮಾಡಿರುವ ವಿರೋಧಾಭಾಸಕ್ಕೂ ಮಂದಿರ ಕನ್ನಡಿ ಹಿಡಿಯುತ್ತಿದೆ. ರಾಮನ ಆಡಳಿತದಲ್ಲಿ ಸಮಾಜದಲ್ಲಿನ ಕಟ್ಟಕಡೆಯ ವ್ಯಕ್ತಿಯ ಅಭಿಪ್ರಾಯಕ್ಕೆ ಮನ್ನಣೆಯಿದ್ದುದಕ್ಕೂ, ವರ್ತಮಾನದ ಆಡಳಿತ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯಗಳು ಪಿತೂರಿಯಂತೆ ಕಾಣಿಸುತ್ತಿರುವ ವಿರೋಧಾಭಾಸಕ್ಕೂ ಮಂದಿರ ಕನ್ನಡಿಯಾಗಿದೆ. ದೇಶದ ಅಸ್ಮಿತೆಯ ಸಂಕೇತವಾಗಬೇಕಾದ ಮಂದಿರ, ಒಂದು ಪಕ್ಷದ, ಒಂದು ಧರ್ಮದ, ಒಂದು ಸಮುದಾಯದ ತುತ್ತೂರಿಯಾಗಿ ಬಿಂಬಿತಗೊಳ್ಳುತ್ತಿದೆ. ರಾಮ ಮಂದಿರದ ಬಗ್ಗೆ ಯಾವ ಸಮುದಾಯ ಹೆಮ್ಮೆಯಿಂದ ಮಾತನಾಡುತ್ತಿದೆಯೋ, ಅದೇ ಸಮುದಾಯದ ಕೆಲವು ಪೀಠಾಧಿಪತಿಗಳೇ ಭಿನ್ನರಾಗ ಹಾಡುತ್ತಿದ್ದಾರೆ. ಜಾತಿ, ಧರ್ಮ, ಆಹಾರ, ಭಾಷೆ ಸೇರಿದಂತೆ ಹಲವು ಕಾರಣಗಳು ಜನರ ನಡುವೆ ಗೆರೆಗಳಾಗಿವೆ. ಆ ಕಾರಣಗಳ ಪಟ್ಟಿಗೆ ಮಂದಿರವೂ ಸೇರಿಕೊಂಡಿದೆ. ಮಂದಿರದ ಪರ-ಹತ್ತಿರ ಹಾಗೂ ಮಂದಿರದಿಂದ ದೂರ ಎಂದು ಜನಮನ ಎರಡಾಗಿ ಹಂಚಿಹೋಗಿರುವ ಒಡಕಲು ಬಿಂಬವನ್ನೂ ಕನ್ನಡಿ ಕಾಣಿಸುತ್ತಿದೆ. ಮಂದಿರಗನ್ನಡಿಗೆ ನಿಲುಕದ ಬಿಂಬವಾದರೂ ಯಾವುದು?

ಭಾರತದ ವರ್ತಮಾನದ ಸಂಕೀರ್ಣತೆಯನ್ನು ಅರಿಯಲಿಕ್ಕೂ ಮಂದಿರ ಅಂಗೈಗನ್ನಡಿ. ಈ ದೇಶದ ಯಾವುದೋ ಭಾಗದಲ್ಲಿನ ಮಸೀದಿಯಲ್ಲಿ ಅಲ್ಲಾಹುವಿನ ಮೊರೆ ಹೋಗುವ ಸಹೃದಯನ ಮನಃಪಟಲದಲ್ಲಿ ರಾಮನೋ ಕೃಷ್ಣನೋ ಮೂಡಬಹುದು. ಮಂದಿರದಲ್ಲಿ ರಾಮನನ್ನು ಧ್ಯಾನಿಸುವ ಸಹೃದಯಿಯ ಚಿತ್ತದಲ್ಲಿ ಅಲ್ಲಾಹುವಿನ ನೆರಳು ಹಾದುಹೋಗಬಹುದು. ಧ್ಯಾನವೂ, ಧ್ಯಾನದ ಕೇಂದ್ರದಲ್ಲಿರುವ ಮೂರ್ತಿಗಳ ಚಹರೆಗಳೂ ಬೆರೆತುಹೋಗಿರುವ ಕಲಸುಮೇಲೋಗರ ಆಗಿರುವ ಕಾಲಘಟ್ಟವಿದು. ಒಂದು ಧರ್ಮದ ಸ್ಥಾವರದ ಅಡಿಯಲ್ಲಿ ಮತ್ತೊಂದು ಧರ್ಮದ ಚಹರೆಗಳನ್ನು ಹುಡುಕುವುದರಲ್ಲಿ ಸುಖ ಕಾಣುವ ಉನ್ಮಾದದ ದಿನಗಳಿವು.

‘ತುಪ್ಪೇರಿದ ದರ್ಪಣದೊಳ್ ಪಜ್ಜಳಿಸಲಾರ್ಪುದೇ ಪ್ರತಿಬಿಂಬಂ’ ಎನ್ನುವುದು ಕವಿ ಜನ್ನನ ಮಾತು. ತುಕ್ಕು ಹಿಡಿದಿರುವ ಅಂತರಂಗದಲ್ಲಿ ಮಾನವೀಯತೆಯ ಬಿಂಬ ಪ್ರತಿಫಲಿಸುವುದು ಹೇಗೆ? ಈಗಿನ ಸಂದರ್ಭ ಭಿನ್ನವಾದುದು: ಮಂದಿರಗನ್ನಡಿಯೇನೋ ಸ್ವಚ್ಛವಾಗಿದೆ, ನೋಡುವ ಕಣ್ಣುಗಳಿಗೆ ಜಿಡ್ಡು ಆವರಿಸಿಕೊಂಡಿದೆ. ಜಿಡ್ಡು ಕಳೆದುಕೊಂಡು, ಕಣ್ಣುಗಳನ್ನು ತಿಳಿಯಾಗಿಸಿಕೊಂಡು, ನೋಟವನ್ನು ನಿರ್ಮಲವಾಗಿಸಿಕೊಳ್ಳಲು ದೊರೆತಿರುವ, ರಾಮನೇ ಕಲ್ಪಿಸಿರುವ ಅವಕಾಶವನ್ನು ಶ್ರೀಸಾಮಾನ್ಯರು ಉಪಯೋಗಿಸಿಕೊಳ್ಳಬೇಕಾಗಿದೆ.

ಭೀತಿಯನ್ನು ನಿವಾರಿಸುವವನು, ಅಸಹಾಯಕರಲ್ಲಿ ಭರವಸೆಯನ್ನು ತುಂಬುವವನು ರಾಮ. ಜನತಂತ್ರದ ಶ್ರೇಷ್ಠ ಪ್ರತಿನಿಧಿಯಾದ ರಾಮನಿಗೆ ಅರಮನೆ ಹಾಗೂ ಪರ್ಣಕುಟೀರಗಳ ನಡುವೆ, ಸಾಮ್ರಾಜ್ಯ ಹಾಗೂ ಕಾಡುಗಳ ನಡುವೆ ವ್ಯತ್ಯಾಸವಿಲ್ಲ. ಹೀಗಳೆದವರನ್ನೂ ಪ್ರೇಮದಿಂದ ನೋಡುವ ಉದಾತ್ತ ವ್ಯಕ್ತಿತ್ವ ಅವನದು. ಇಂಥ ರಾಮ ಈಗ ನಮ್ಮೆದುರಿಗೆ ನಿಂತಿರುವ ಸ್ವರೂಪ ಯಾವುದು ಎನ್ನುವುದನ್ನೂ ಮಂದಿರಗನ್ನಡಿ ತೋರುತ್ತಿದೆ. ರಾಮನ ಹೆಸರಿನಲ್ಲಿ ಯಾರು ಆರಾಮವಾಗಿದ್ದಾರೆ, ಯಾರು ಆರಾಮ ಕಳೆದುಕೊಂಡಿದ್ದಾರೆ ಎನ್ನುವುದನ್ನು ಅನುಮಾನಕ್ಕೆಡೆಯಿಲ್ಲದಂತೆ ಕಾಣಿಸುತ್ತಿದೆ; ಧರ್ಮ ಮತ್ತು ರಾಜಧರ್ಮದ ನಡುವಿನ ಗೆರೆ ಅಳಿಸಿಹೋಗಿರುವ ಬಿಂಬವನ್ನೂ ಮೂಡಿಸುತ್ತಿದೆ. ರಾಮನ ಕಾರಣದಿಂದಾಗಿ ಯಾರಾದರೂ ಆರಾಮ ಕಳೆದುಕೊಳ್ಳುವ ಸ್ಥಿತಿಯಿದೆ ಎನ್ನುವುದಾದರೆ, ಆ ಸ್ಥಿತಿಯನ್ನು ರಾಮರಾಜ್ಯ ಎನ್ನುವುದಾದರೂ ಹೇಗೆ? ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವಂತೆ ‘ಮಂದಿರಗನ್ನಡಿ’ ಜನಸಾಮಾನ್ಯರನ್ನು ಒತ್ತಾಯಿಸುತ್ತಿದೆ.

## ಚುರುಮುರಿ

### ಸಂಕಟದ ಸಕ್ಕರೆ ಅಚ್ಚು!

• ತುರುವೇಕೆರೆ ಪ್ರಸಾದ್

‘ಯಾಕೋ ಹ್ಯಾಪ್ ಮೋರೆ ಹಾಕ್ಕಂಡು ಕೂತಿದೀಯ?’ ಹರಟೆಕಟ್ಟೇಲಿ ಮಾಲಿಂಗ ಕೆದಕಿದ.

‘ಅಯ್ಯೋ! ನನ್ ಎಂಡ್ರು ಸಂಕ್ರಾಂತಿಗೆ ಸಕ್ಕರೆ ಅಚ್ಚು ಮಾಡಕ್ಕೆ ಹೆಲ್ಪ್ ಮಾಡು ಅಂದಿದ್ಲಾ. ಮಣೆಗೆ ಅಚ್ಚು ಹಾಕಿ ತೆಗೀಬೇಕಾರೆ ಎಲ್ಲಾ ಪುಡಿಪುಡಿ ಆಗೋಯ್ತು’ ಎಂದ ಗುದ್ಲಿಂಗ.

‘ಇದೆಲ್ಲಾ ಇದ್ದದ್ದೇ ಕಣೋ. ದೇಶದಲ್ಲೇ ಯಾವ ಸಕ್ರೆ ಅಚ್ಚೂ ನೆಟ್ಟಗೆ ಬರ್ತಿಲ್ಲ, ಇನ್ನು ಮನೆ ಸಕ್ರೆ ಅಚ್ಚು ಮುರಿದೋಗೋದ್ರಲ್ಲಿ ನಿನ್ ತಪ್ಪೇನಿಲ್ಲ’.

‘ಅದ್ಯಾವಪ್ಪಾ ದೇಶದ ಸಕ್ರೆ ಅಚ್ಚುಗಳು?’

‘ನೋಡ್ರೋ, ಮೈ ತುಂಬಾ ಸಕ್ರೆ ಮೆತ್ಗಂಡು ಒಳ್ಗೂ ಸಕ್ರೆ ಫ್ಯಾಕ್ಟರಿ ಮಡಿಕ್ಕಂಡಿರೊ ಬೇಕಾದಷ್ಟು ಸಕ್ರೆ ಅಚ್ಚುಗಳಿವೆ. ಈಗ ನೋಡಿ, ಮಹಾಘಟ ಸಕ್ರೆ ಅಚ್ಚು ಇಡಿಯಾಗಿ ಎತ್ತೋಕೇ ಬರ್ತಿಲ್ಲ, ಒಂದ್ಸಾರಿ ಕೈ ಮುರ್ದೋಗುತ್ತೆ, ಇನ್ನೊಂದ್ಸಾರಿ ಕುಡುಗೋಲು ಕಳಚ್ಕಳುತ್ತೆ. ತೇಪೆ ಹಾಕೋದೇ ಆಗಿದೆ’.

‘ಓ! ನೀನು ನಮ್ ರಾಜಕೀಯದ ಸಕ್ರೆ ಅಚ್ಚುಗಳ ಬಗ್ಗೆ ಯೋಳ್ತಿದೀಯಾ? ಅಂಗ್ ನೋಡುದ್ರೆ ಕಮಲದ್ದೂ ಅಂಗೇ ಆಗದೆ. ಓದ್ಸಾರಿ ಎಲ್ಲಾ ಹಳೇ ಅಚ್ಚು ಬದಲಿಸಿ ಹೊಸ ಅಚ್ಚಲ್ಲಿ ಸೂಪರ್ ಡಿಸೈನ್ ತೆಗೀತೀವಿ ಅಂತ ಓಗಿ ಎಲ್ಲಾ ನುಚ್ಚುನೂರಾಗೋಯ್ತು...’

‘ತೆನೆ ಪಕ್ಷದ್ದಂತೂ ದೊಡ್ ಸಮಸ್ಯೆ, ಪಾಕ ಸಿಕ್ಕಾಪಟ್ಟೆ ನೀರಾಗಿ ಅಚ್ಚಿನಾಚೆ ಹರ್ಕೊಂಡ್ ಹೋಗದೆ. ಅದಕ್ಕೇ ಕಮಲದ್ ಉರಟಾಡೋ ಮಣೆ ಒಳಗೇ ನಾವೂ ಒಂದಿಷ್ಟು ಅಚ್ಚು ತಕ್ಕತೀವಿ ಅಂತ ಓಗವ್ರೆ’.

‘ಇನ್ನು ಕಮಲದಿಂದ ಎದ್ ಓಗಿರೋ ಅಚ್ಚುಗಳಿಗೆ ಕೈ ಮಣೆ ಹಾಕ್ತಿಲ್ಲ, ಕೈಯಲ್ಲೇ ಇರೋ ಅಚ್ಚುಗಳಿಗೆ ತಮ್ಮನ್ನಿನ್ನೂ ಸಣ್ಣಚ್ಚಲ್ಲೇ ಮಡಗವ್ರೆ, ದೊಡ್ಡಚ್ಚಿಗೆ ಉಯ್ದಿಲ್ಲ ಅನ್ನೋ ಸಂಕಟ’.

‘ಅದೆಲ್ಲಕ್ಕಿಂತ ದೊಡ್ ಸಂಕಟ ಬಂದದೆ. ‘ಲೋಕಾ ಉತ್ತರಾಯಣ’ ಅಂದ್ರೆ ಮತ್ತೆ ಜನಕ್ಕೆ ಉತ್ರ ಯೋಳೋ ಎಲೆಕ್ಷನ್ ಬತ್ತಿದ್ಯಲ್ಲ. ಅದ್ರಲ್ಲಿ ಈಗ ಗಟ್ಟಿಯಾಗಿ ಮಂತ್ರಿ ಅಚ್ಚಲ್ಲಿ ಕುಂತಿರೋವನ್ನ ಲೋಕಾ ಅಚ್ಚಿಗೆ ಉಯ್ಯಕ್ಕೆ ವೊಂಟವ್ರೆ’.

‘ಒಳ್ಳೇದೇ ಆಯ್ತಲ್ಲ, ಲೋಕಾ ಎಲೆಕ್ಷನ್ನಲ್ಲಿ ಗೆದ್ರೆ ದೊಡ್ ಅಚ್ಚೇ ಸಿಗುತ್ತಲ್ಲ’.

‘ನಿನ್ ತಲೆ, ಇಲ್ಲಿ ಬೆಲ್ಲದಚ್ಚೂ ಆಗದೆ, ಅಲ್ಲಿ ಸಕ್ಕರೆ ಅಚ್ಚೂ ಆಗದೆ, ಪಾಕ ಹದ ತಪ್ಪಿ ಕಲಗಚ್ಚು ಆದ್ರೆ ಎಂಗೆ ಅಂತ ಯೋಚ್ನೆಗೆ ಬಿದ್ದವ್ರೆ’ ಎಂದ ಪರ್ಮೇಶಿ. ಎಲ್ಲಾ ಗೊಳ್ಳೆಂದು ನಕ್ಕರು.

## ಸಂಗತ

# ‘ಜಾತಿಗಣತಿ’: ಬೇಕಿದೆ ಮಾತೃವಾತ್ಸಲ್ಯ

**ಈ ವರದಿಯ ಬಗ್ಗೆ ಕೆಲವರಿಗೆ ಹುಸಿ ಕಲ್ಪನೆಗಳಿರುವುದು ದುರದೃಷ್ಟಕರ**

• ಬಿ.ಎಸ್.ಶಿವಣ್ಣ

**ರಾಜ್ಯದ** ಹಿಂದುಳಿದ ವರ್ಗಗಳಲ್ಲಿ ತಮ್ಮ ರಾಜಕೀಯ ಹಕ್ಕುಗಳ ಬಗ್ಗೆ ಆಗಷ್ಟೇ ಪ್ರಜ್ಞೆ ಮೂಡುತ್ತಿದ್ದ ಕಾಲ. ವಿಧಾನಸೌಧದಂಥ ಆಡಳಿತ ಕೇಂದ್ರದಲ್ಲಿ ಹಿಂದುಳಿದ ವರ್ಗ ಹಾಗೂ ಪರಿಶಿಷ್ಟ ಸಮುದಾಯದ ಹಲವು ಶಾಸಕರು ಇದ್ದರೂ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲೂ ರಾಜಕೀಯ ಮೀಸಲು ಪಡೆಯಬಹುದೆಂಬ ಭಾವನೆ ಚಿಗುರೊಡೆಯುತ್ತಿದ್ದ ಸಮಯ. ಆಗ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ನಗರಪಾಲಿಕೆ, ನಗರಸಭೆ, ಪುರಸಭೆಯಂತಹ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲು ಜಾರಿ ಮಾಡಬೇಕೆಂಬ ಒತ್ತಡವು ಶೋಷಿತ ಹಾಗೂ ಹಿಂದುಳಿದ ವರ್ಗಗಳಿಂದ ಪ್ರಬಲವಾಗಿ ಪ್ರತಿಪಾದನೆಯಾಗುತ್ತಿತ್ತು. ಸಹಜವಾಗಿಯೇ ಸಮಾಜದ ಪ್ರಬಲ ವರ್ಗಗಳಿಂದ ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದ ಕೆಲವು ಶಾಸಕರು ಹಾಗೂ ಸಚಿವರಿಂದ ಇದಕ್ಕೆ ಭಾರಿ ವಿರೋಧ ವ್ಯಕ್ತವಾಗಿತ್ತು.

ಅಂದಿನ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಅವರು ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಕಲ್ಪಿಸುವ ಉದ್ದೇಶದಿಂದ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸಂಪುಟ ಉಪಸಮಿತಿಯನ್ನು ರಚಿಸಿದ್ದರು. ಆ ಸಮಿತಿಯು ಮೀಸಲಾತಿಗೆ ಶಿಫಾರಸು ಮಾಡಿದಾಗ, ಪ್ರಬಲ ವರ್ಗದವರಿಂದ ತೀವ್ರ ವಿರೋಧ ವ್ಯಕ್ತವಾಯಿತು. ಆಗ, ‘ವರದಿಯನ್ನು ಒಪ್ಪಿಕೊಳ್ಳುವುದು ಕಷ್ಟವಾಗಬಹುದು’ ಎಂದು ಸಿದ್ದರಾಮಯ್ಯ ಅವರನ್ನು ಓಲೈಸುವ ಪ್ರಯತ್ನವನ್ನು ಕೆಲವರು ಮಾಡಿದ್ದರು. ಆ ಸಂದರ್ಭದಲ್ಲಿ, ಹಟ ಬಿಡದ ಸಿದ್ದರಾಮಯ್ಯ ಅವರಿಗೆ ಒತ್ತಾಸೆಯಾಗಿ ನಿಂತವರು ಜೆ.ಎಚ್.ಪಟೇಲ್.

ಮೀಸಲಾತಿಗೆ ವಿರೋಧ ವ್ಯಕ್ತಪಡಿಸಿದ ಸಚಿವರನ್ನು ಸಂಪುಟ ಸಭೆಯಲ್ಲಿ ತರಾಟೆಗೆ ತೆಗೆದುಕೊಂಡ ಪಟೇಲರು, ‘ಸಮಾಜದಲ್ಲಿ ಮೇಲ್ವರ್ಗದವರು ಎನಿಸಿಕೊಂಡಿರುವ ನಾವು ಹಿಂದುಳಿದ ಜಾತಿಗಳವರ ಬಗ್ಗೆ ಸದಾ ಮಾತೃವಾತ್ಸಲ್ಯ ಹೊಂದಿರಬೇಕು. ಅದನ್ನು ಬಿಟ್ಟು ಮೀಸಲಾತಿಯನ್ನು ವಿರೋಧಿಸುವುದು ಸರಿಯಲ್ಲ. ಭಾಷಣದಲ್ಲಿ ಬಸವಣ್ಣನ ಸಮಾನತೆಯ ವಚನ ಹೇಳಿ ಕೃತಿಯಲ್ಲಿ ಹಿಂದುಳಿದ ಸಮುದಾಯಗಳನ್ನು ಅಧಿಕಾರದಿಂದ ವಂಚಿಸುವಂಥ ಕೆಲಸ ಆಗಬಾರದು’ ಎಂದಿದ್ದರು. ಇದರ ಪರಿಣಾಮವಾಗಿ, ವರದಿಯನ್ನು ಒಪ್ಪುವುದು ಸರ್ಕಾರಕ್ಕೆ ಅನಿವಾರ್ಯವಾಯಿತು. ಅದರ ಫಲವನ್ನು ‘ಅಹಿಂದ’ ವರ್ಗದವರು ಈಗ ಅನುಭವಿಸುತ್ತಿದ್ದಾರೆ.

ಸಮಾಜದಲ್ಲಿ ಪ್ರಬಲರು ಎನಿಸಿಕೊಂಡವರು ಸಮ ಸಮಾಜದ ದೃಷ್ಟಿಯಿಂದ ಅಂಥದ್ದೇ ವರದಿಯೊಂದನ್ನು ಒಪ್ಪಿಕೊಳ್ಳುವ ಔದಾರ್ಯ ತೋರುವುದಕ್ಕೆ ಈಗ ಕಾಲ ಪಕ್ವವಾಗಿದೆ. ಅದು, ಸಾಮಾಜಿಕ-ಶೈಕ್ಷಣಿಕ-ಆರ್ಥಿಕ ಸಮೀಕ್ಷೆ ಅರ್ಥಾತ್ ‘ಜಾತಿ ಜನಗಣತಿ’ ವರದಿ.

ಸಿದ್ದರಾಮಯ್ಯ ಮೊದಲನೇ ಬಾರಿ ಮುಖ್ಯಮಂತ್ರಿ ಆಗಿದ್ದಾಗ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜ ಅವರ ನೇತೃತ್ವದಲ್ಲಿ ಈ ಸಮೀಕ್ಷೆ ನಡೆಸುವುದಕ್ಕೆ ಆದೇಶ ನೀಡಿದ್ದರು. ಆದರೆ ಆಯೋಗವು ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ಅಣಿಯಾದ ಹೊತ್ತಿಗೆ ಕಾಂಗ್ರೆಸ್- ಜೆಡಿಎಸ್ ಸಮ್ಮಿಶ್ರ ಸರ್ಕಾರ ಅಧಿಕಾರಕ್ಕೆ ಬಂದಿತು. ವರದಿ ಮೂಲೆ ಸೇರಿತು. ನಂತರ ಅಧಿಕಾರದ ಚುಕ್ಕಾಣಿಯು ಬಿಜೆಪಿ ಕೈಸೇರಿತು. ಆ ಅವಧಿಯಲ್ಲೂ ವರದಿಗೆ ಮುಕ್ತಿ ಸಿಗಲಿಲ್ಲ.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕಾಂತರಾಜ ಆಯೋಗದ ವರದಿಯನ್ನು ಜಾರಿಗೊಳಿಸುವುದಾಗಿ ಸಿದ್ದರಾಮಯ್ಯ ಈ ಬಾರಿ ಚುನಾವಣೆಗೂ ಮುನ್ನ ಅಹಿಂದ ಸಮುದಾಯಕ್ಕೆ ವಚನ ನೀಡಿದ್ದರು. ಹೀಗಾಗಿ, ಸಹಜವಾಗಿಯೇ ಶೋಷಿತ ಸಮುದಾಯವು ಈ ವಚನ ಪಾಲನೆಯ ಬಗ್ಗೆ ಕಾತರದಿಂದಿದೆ. ಆದರೆ ಸಮಾಜದ ಎರಡು ಪ್ರಬಲ ಸಮುದಾಯಗಳಿಂದ ವಿರೋಧ ವ್ಯಕ್ತವಾಗಿರುವುದು ಈಗ ತೊಡಕಾಗಿ ಪರಿಣಮಿಸಿದೆ.

ಅಷ್ಟಕ್ಕೂ ಈ ವರದಿಯ ಬಗ್ಗೆ ಕೆಲವರಿಗೆ ಮಿಥ್ಯಾ ಕಲ್ಪನೆಗಳಿದ್ದರೆ, ಇನ್ನು ಕೆಲವರಂತೂ ಇದರಲ್ಲಿ ಸೇಡಿನ ಕ್ರಮವನ್ನು ಹುಡುಕುವ ಪ್ರಯತ್ನ ನಡೆಸಿದ್ದಾರೆ. ವರದಿ ಸಲ್ಲಿಕೆಯಾಗಿ, ಅದರಲ್ಲಿನ ಅಂಶಗಳು ಬಹಿರಂಗವಾದರೆ ತಮ್ಮ ಸಮುದಾಯದ ರಾಜಕೀಯ ಪ್ರಾಬಲ್ಯಕ್ಕೆ ಧಕ್ಕೆ ಬರುತ್ತದೆ, ಜನಸಂಖ್ಯೆಗೆ ಅನುಗುಣವಾಗಿ ಸಿಗಬೇಕಾದ ಹಕ್ಕುಗಳನ್ನು ತಪ್ಪಿಸುವ ಕುತಂತ್ರ ಇದರಲ್ಲಿ ಅಡಕವಾಗಿದೆ ಎಂಬಂತಹ ತಪ್ಪು ಮಾಹಿತಿಯನ್ನು ಹರಡಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲು ನಿಗದಿಪಡಿಸುವುದಕ್ಕೆ ಯಾವ ಮಾನದಂಡವನ್ನು ಅನುಸರಿಸುತ್ತೀರಿ ಎಂದು ವರ್ಷದ ಹಿಂದೆ ಸುಪ್ರೀಂ ಕೋರ್ಟ್ ಪ್ರಶ್ನಿಸಿದಾಗ, ಸಾಮಾಜಿಕ, ಆರ್ಥಿಕ, ರಾಜಕೀಯ ಹಾಗೂ ಶೈಕ್ಷಣಿಕ ಹಿಂದುಳಿದಿರುವಿಕೆಯನ್ನು ನ್ಯಾಯಾಲಯಕ್ಕೆ ಮನದಟ್ಟು ಮಾಡುವುದಕ್ಕೆ ರಾಜ್ಯ ಸರ್ಕಾರದ ಮುಂದೆ ಯಾವುದೇ ದತ್ತಾಂಶಗಳು ಇರಲಿಲ್ಲ. ಈ ಸಮೀಕ್ಷೆಯ ವರದಿಯನ್ನು ಸರ್ಕಾರ ಸ್ವೀಕರಿಸದೇ ಇದ್ದುದರಿಂದ ಲಭ್ಯ ದತ್ತಾಂಶವನ್ನು ಸಾದರಪಡಿಸುವುದು ಅಸಾಧ್ಯವಾಗಿತ್ತು. ಹೀಗಾಗಿ, ಈ ವರದಿ ಎಲ್ಲ ದೃಷ್ಟಿಯಿಂದಲೂ ಸಾಮಾಜಿಕ ಸ್ವಾಸ್ಥ್ಯಕ್ಕೆ ಅನುಕೂಲಕರವಾಗಿದೆಯೇ ವಿನಾ ಮಾರಕ ಅಲ್ಲ. ಹೀಗಾಗಿ, ಪ್ರಬಲ ವರ್ಗಗಳವರು ಮತ್ತೆ ಮಾತೃವಾತ್ಸಲ್ಯ ಪ್ರದರ್ಶಿಸುವ ಕಾಲ ಈಗ ಬಂದಿದೆ.

ಈ ಹಿಂದೆ ಹಾವನೂರು ವರದಿ ಮತ್ತು ಮಂಡಲ್ ವರದಿ ಜಾರಿ ಸಂದರ್ಭದಲ್ಲಿ ರಾಜಕೀಯ ಪಟ್ಟಭದ್ರರು ಹಾಗೂ ಸಾಮಾಜಿಕ ನ್ಯಾಯದ ವಿರೋಧಿಗಳು ಪ್ರಬಲ ವಿರೋಧ ವ್ಯಕ್ತಪಡಿಸಿದ್ದರೂ ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಮತ್ತು ಪ್ರಧಾನಿಯಾಗಿದ್ದ ವಿ.ಪಿ.ಸಿಂಗ್ ಅವರು ರಾಜಕೀಯ ಇಚ್ಛಾಶಕ್ತಿಯಿಂದ ಆ ವರದಿಗಳನ್ನು ಜಾರಿಗೊಳಿಸಿದ್ದರು. ಇದರಿಂದ ಅಹಿಂದ ವರ್ಗಗಳ ಕೋಟ್ಯಂತರ ಯುವಕರು ಶಿಕ್ಷಣ ಮತ್ತು ಉದ್ಯೋಗಗಳಲ್ಲಿ ಮೀಸಲಾತಿ ಸೌಲಭ್ಯ ಪಡೆದುದು ನಮ್ಮೆಲ್ಲರ ಕಣ್ಣುಮುಂದಿದೆ. ಸಾಮಾಜಿಕ ನ್ಯಾಯದ ಪ್ರಬಲ ಪ್ರತಿಪಾದಕರಾದ ಸಿದ್ದರಾಮಯ್ಯ ಅವರು ಈಗ ‘ಜಾತಿ ಜನಗಣತಿ’ ವರದಿಯನ್ನು ತಕ್ಷಣವೇ ಸ್ವೀಕರಿಸಲಿ.

ಲೇಖಕ: ಅಧ್ಯಕ್ಷ, ರಾಮಮನೋಹರ ಲೋಹಿಯಾ ವಿಚಾರ ವೇದಿಕೆ

## ವಾಚಕರ ವಾಣಿ

### ಮೂವರು ಡಿಸಿಎಂ: ಯಾರ ಹಿತಕ್ಕಾಗಿ?

ಲೋಕಸಭಾ ಚುನಾವಣೆಗೂ ಮೊದಲು ಹೆಚ್ಚುವರಿ ಉಪಮುಖ್ಯಮಂತ್ರಿ ಹುದ್ದೆಗಳನ್ನು ಸೃಷ್ಟಿಸಬೇಕೆಂದು ಕಾಂಗ್ರೆಸ್ ಹೈಕಮಾಂಡ್ ಮೇಲೆ ಒತ್ತಡ ಹೇರಲು ಕೆಲವು ಸಚಿವರು ತಂತ್ರಗಾರಿಕೆ ಹೆಣೆಯುತ್ತಿರುವುದು ವರದಿಯಾಗಿದೆ. ಲಿಂಗಾಯತ, ಪರಿಶಿಷ್ಟ ಮತ್ತು ಅಲ್ಪಸಂಖ್ಯಾತ ಸಮುದಾಯಗಳನ್ನು ಪ್ರತಿನಿಧಿಸುವ ಮೂವರು ಹಿರಿಯ ಸಚಿವರಿಗೆ ಉಪಮುಖ್ಯಮಂತ್ರಿ ಹುದ್ದೆ ನೀಡುವುದರಿಂದ ಈ ಸಮುದಾಯಗಳ ಓಲೈಕೆ ಸಾಧ್ಯವಾಗಲಿದೆ, ಚುನಾವಣೆಯಲ್ಲಿ ಹೆಚ್ಚು ಸ್ಥಾನ ಗೆಲ್ಲುವ ಪಕ್ಷದ ಗುರಿಗೆ ಈ ನಡೆ ಪೂರಕವಾಗಲಿದೆ ಎಂಬ ವಾದವನ್ನು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಎದುರು ಕೆಲವು ಸಚಿವರು ಪ್ರತಿಪಾದಿಸಿದ್ದಾರೆ. ಇದರಿಂದ, ಉಪಮುಖ್ಯಮಂತ್ರಿಗಳ ಆಯ್ಕೆಯು ರಾಜ್ಯದ ಅಭಿವೃದ್ಧಿಯ ಅಗತ್ಯವಲ್ಲ, ಚುನಾವಣೆಯ ಅಗತ್ಯ ಎನ್ನುವುದನ್ನು ಅವರೇ ಈ ಮೂಲಕ ಘೋಷಿಸಿದಂತಾಗಿದೆ. ಚುನಾವಣೆಯ ಗೆಲುವಿಗಾಗಿ ರಾಜ್ಯದ ಜನರ ಮೇಲೆ ಮೂವರು ಉಪಮುಖ್ಯಮಂತ್ರಿಗಳನ್ನು ಹೇರುವುದು ಎಷ್ಟು ಸರಿ? ಇಂತಹ ಹುದ್ದೆಗಳ ಸೃಷ್ಟಿಯು ಯಾವ ಕಾರಣಕ್ಕೂ ಒಂದು ಪಕ್ಷದ ಅಥವಾ ಸರ್ಕಾರದ ಹೆಗ್ಗಳಿಕೆಯಾಗುವುದಿಲ್ಲ. ಅಂತಹ ಸ್ಥಿತಿ ನಿರ್ಮಾಣವಾಗಿದೆಯೆಂದರೆ, ಆ ಪಕ್ಷದಲ್ಲಿ ಭಿನ್ನಮತ ಅತಿರೇಕಕ್ಕೆ ತಲುಪಿದೆ ಎಂದೇ ಅರ್ಥ.

ಉಪಮುಖ್ಯಮಂತ್ರಿ ಸ್ಥಾನಕ್ಕೆ ಯಾವುದೇ ಮಾನ್ಯತೆ ಇಲ್ಲ ಎನ್ನುವುದು ಈ ಸಂಬಂಧ ಲಾಬಿ ಮಾಡುತ್ತಿರುವ ಎಲ್ಲರಿಗೂ ಚೆನ್ನಾಗಿಯೇ ಗೊತ್ತು. ಯಾವುದೇ ಅಧಿಕೃತ ರಾಜಕೀಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಇವರಿಗೆ ಅವಕಾಶ ಇರದು. ಮುಖ್ಯಮಂತ್ರಿಯ ಅನುಪಸ್ಥಿತಿಯಲ್ಲಿ ಇವರು ಅಧಿಕಾರವನ್ನು ಕೈಗೆತ್ತಿಕೊಳ್ಳಬಹುದೇ ವಿನಾ ಮುಖ್ಯಮಂತ್ರಿ ಇರುವವರೆಗೂ ಇವರದು ಡಮ್ಮಿ ಸ್ಥಾನವಾಗಿರುತ್ತದೆ. ಆದ್ದರಿಂದ ಈ ಸಚಿವರು ಅನಗತ್ಯವಾಗಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಯ ಗೊಂದಲವನ್ನು ಮೂಡಿಸದೆ, ತಮಗೆ ಸಿಕ್ಕಿರುವ ಖಾತೆಗಳನ್ನೇ ಸರಿಯಾಗಿ ನಿರ್ವಹಿಸುವುದು ಒಳ್ಳೆಯದು.

**ಬೇ.ನ.ಶ್ರೀನಿವಾಸಮೂರ್ತಿ,** ತುಮಕೂರು

**ಇರಲಿ ಕಾಯಕ...**

ಯುವದಿನದಂದು
ಸರ್ಕಾರದಿಂದ ಚಾಲನೆ
ಸಿಕ್ಕಿದೆ ಯುವನಿಧಿಗೆ,
ಫಲಾನುಭವಿಗಳು
ಕಾಯಕ ಹುಡುಕುವುದನ್ನು
ಸರಿಸದಿರಲಿ ಬದಿಗೆ!

**ಮಹಾಂತೇಶ ಮಾಗನೂರ,** ಬೆಂಗಳೂರು

### ಈವರೆಗೆ ನಾವು ಸಾಧಿಸಿದ್ದೇನು?!

ದಲಿತರ ದೇವಸ್ಥಾನ ಪ್ರವೇಶಕ್ಕೆ ಸಂಬಂಧಿಸಿದ ವಿಷಯ ಇತ್ತೀಚೆಗೆ ಚರ್ಚೆಗೆ ಬಂದಿದೆ. ಒಂದುವೇಳೆ ದಲಿತರು ಪ್ರವೇಶಿಸಿದರೆ ದೇವಸ್ಥಾನವನ್ನೇ ಮುಚ್ಚುವ ಅಥವಾ ‘ಮೈಲಿಗೆ’ಯಾದ ದೇವಸ್ಥಾನವನ್ನು ಬಿಟ್ಟು ಬೇರೊಂದು ದೇವಸ್ಥಾನವನ್ನೇ ಕಟ್ಟುವಂತಹ ಮಾತುಗಳೂ ಕೇಳಿಬರುತ್ತಿವೆ. ವಾಸ್ತವದಲ್ಲಿ ದೇಶದ ಬಹುತೇಕ ಗ್ರಾಮೀಣ ಪ್ರದೇಶಗಳಲ್ಲಿ ದೇವಸ್ಥಾನಗಳಿಗೆ ಇಂದಿಗೂ ದಲಿತರಿಗೆ ಪ್ರವೇಶವಿಲ್ಲ. ಇದು ಹೊಸ ವಿಷಯವಲ್ಲ, ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿರುವುದು. ಕಾನೂನು ಪ್ರಕಾರ ಬಹುತೇಕ ದೇವಸ್ಥಾನಗಳಿಗೆ ಮುಕ್ತವಾದ ಪ್ರವೇಶವಿದ್ದರೂ ದಲಿತರು ಸ್ವಯಂಪ್ರೇರಿತರಾಗಿ ಅವುಗಳನ್ನು ಪ್ರವೇಶಿಸುವುದು ತೀರಾ ಕಡಿಮೆ. ದೇವರ ಶಾಪ, ನಂಬಿಕೆ, ಸಂಪ್ರದಾಯ, ಮಡಿ ಮೈಲಿಗೆ ಎನ್ನುವುದಕ್ಕಿಂತ ಹೆಚ್ಚಾಗಿ ತಮ್ಮ ಊರಿನ ಅಥವಾ ಗ್ರಾಮದ ಪ್ರಬಲ ವರ್ಗದವರ ವಿರೋಧ ಕಟ್ಟಿಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕೆ ದೇವಸ್ಥಾನವನ್ನು ಪ್ರವೇಶಿಸಲು ಹಿಂಜರಿಯುತ್ತಾರೆ.

ಅಂಬೇಡ್ಕರ್ ಅವರ ಕಾಳರಾಮ ದೇವಸ್ಥಾನ ಪ್ರವೇಶ ಚಳವಳಿಯ ವಿಷಯದಲ್ಲಿಯೂ ಹೀಗೇ ಆಗಿತ್ತು. ಪರ-ವಿರೋಧದ ಹೋರಾಟಗಳು ನಡೆದು, ಕೊನೆಗೆ ದೇವಸ್ಥಾನವನ್ನು ವರ್ಷಗಟ್ಟಲೆ ಮುಚ್ಚಲಾಗಿತ್ತು. ಅದಾಗಿ ಸುಮಾರು ನೂರು ವರ್ಷಗಳ ನಂತರವೂ ಇಂತಹ ವಿಚಾರಗಳಲ್ಲಿ ಅಷ್ಟೇನೂ ಬದಲಾವಣೆ ಆಗಿರುವುದು ಕಂಡುಬರುವುದಿಲ್ಲ. ಹೀಗಿರುವಾಗ, ನಮ್ಮ ರಾಜಕೀಯ ಸ್ವಾತಂತ್ರ್ಯ, ಸಂವಿಧಾನ ಮತ್ತು ವಿವಿಧ ಕಾನೂನುಗಳ ಜಾರಿ, ಶೈಕ್ಷಣಿಕ ಸಾಧನೆ, ಆಧುನಿಕತೆ, ವಿಜ್ಞಾನ- ತಂತ್ರಜ್ಞಾನ ಅಭಿವೃದ್ಧಿಯಿಂದ ಏನು ಸಾಧಿಸಿದಂತಾಗಿದೆ ಎಂಬುದೇ ಅರ್ಥವಾಗುವುದಿಲ್ಲ. ಜಾತಿ ವ್ಯವಸ್ಥೆ ಮತ್ತು ಅಸ್ಪೃಶ್ಯತೆ ಆಚರಣೆಯು ಇವೆಲ್ಲಕ್ಕಿಂತ ದೊಡ್ಡವೇ ಎಂಬುದು ಭಾರತೀಯರೆಲ್ಲರೂ ಕೇಳಿಕೊಳ್ಳಬೇಕಾಗಿರುವ ಪ್ರಶ್ನೆ.

**ಶಿವರಾಜು ಎ.ಆರ್.,** ಜೆಟ್ಟಿ ಅಗ್ರಹಾರ, ಕೊರಟಗೆರೆ

### ಆಯಾ ಪದ್ಧತಿಗೆ ಅನುಗುಣವಾಗಿ ಪೂಜಾರಾಧನೆ

ಅಯೋಧ್ಯೆಯಲ್ಲಿ ನಿರ್ಮಾಣ ಹಂತದಲ್ಲಿರುವ ರಾಮ ಮಂದಿರದಲ್ಲಿ ನಡೆಯಲಿರುವ ಪ್ರಾಣ ಪ್ರತಿಷ್ಠಾಪನೆಗೆ ಸಂಬಂಧಿಸಿದಂತೆ, ಧಾರ್ಮಿಕ ಪ್ರಮುಖರಾದ ಇಬ್ಬರು ಶಂಕರಾಚಾರ್ಯರು ಅತೃಪ್ತಿ ವ್ಯಕ್ತಪಡಿಸಿದ ಕೂಡಲೇ ಇತರ ಕೆಲವರೂ ಈ ಸಂಬಂಧ ತಮ್ಮ ಅಸಮ್ಮತಿ ಸೂಚಿಸುತ್ತಿದ್ದಾರೆ. ಇದುವರೆಗೂ ಈ ಬಗ್ಗೆ ಮೌನ ವಹಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ‘... ಶೈವ- ಶಾಕ್ತರಿಗೆ ಅವಮಾನವಾಗಿದೆ’ ಎಂದು ಹೇಳಿರುವುದು ವರದಿಯಾಗಿದೆ (ಪ್ರ.ವಾ., ಜ. 12). ಶ್ರೀರಾಮನ ದೇವಾಲಯವು ವೈಷ್ಣವ ಸಂಪ್ರದಾಯದ ಒಂದು ಶ್ರದ್ಧಾ ಕೇಂದ್ರ ಹಾಗೂ ಇಲ್ಲಿನ ಪೂಜಾರಾಧನೆಗಳು ಆ ಪದ್ಧತಿಗೆ ಅನುಗುಣವಾಗಿ ಇರುವುದು ಸಹಜವಾಗಿಯೇ ಇದೆ. ಶಿವ- ಶಕ್ತಿ ದೇವಾಲಯಗಳಿಗೆ ವಿಷ್ಣು ಭಕ್ತರು ತೆರಳಿ ಪೂಜೆ ಸಲ್ಲಿಸಿದರೂ, ಅದರ ಆಡಳಿತ, ಪೂಜಾ ವಿಧಾನಗಳು ಆಯಾ ಸಂಪ್ರದಾಯಕ್ಕೆ ಸೂಕ್ತವಾದ ರೀತಿಯಲ್ಲಿ ಇರುತ್ತವೆ. ತಿರುಮಲೆ, ಚಿದಂಬರಂ, ಕಾಂಚೀ, ಜಗನ್ನಾಥಪುರಿ ದೇವಾಲಯಗಳಲ್ಲಿ ಆಯಾ ಪಂಥಗಳ ಆಡಳಿತ ವ್ಯವಸ್ಥೆ ಇರುತ್ತದೆ. ಇತರರಿಗೆ ಇದರಲ್ಲಿ ಶ್ರದ್ಧೆ, ಅನುಭವ ಇಲ್ಲದಿರುವ ಕಾರಣ ಅವರು ಈ ಆಡಳಿತ ವಿಶ್ವಸ್ಥ ಸಮಿತಿಗಳಲ್ಲಿ ಇರುವುದಿಲ್ಲ. ಆದರೆ, ಪೂಜೆ ಸಲ್ಲಿಸಲು ಬರುವ ಭಕ್ತರು ಯಾರೂ ಆಗಿರಬಹುದು. ತಿರುಮಲೆಯ ಶ್ರೀನಿವಾಸನ ದರ್ಶನದ ಸರತಿ ಸಾಲಿನಲ್ಲಿ ‘ನಮಃ ಶಿವಾಯ’ ಎಂದು ಸಾಮಾನ್ಯ ಭಕ್ತರು ಉಚ್ಚರಿಸುವುದು ಅಚ್ಚರಿಯೇನಲ್ಲ. ‘ಶಿವ- ಕೇಶವ’ ಎರಡೂ ಒಬ್ಬನೇ ದೇವನ ಭಿನ್ನ ಹೆಸರುಗಳು ಎಂದು ನಂಬುವ ಬಹುಸಂಖ್ಯಾತ ಭಕ್ತರು ಇದ್ದಾರೆ. ತಿರುಮಲೆಯಲ್ಲಿ ಶೈವ- ಶಾಕ್ತರಿಗೆ ಪ್ರವೇಶವಿಲ್ಲ, ಅಲ್ಲಿ ಅವರಿಗೆ ಅವಮಾನವಾಗಿದೆ ಎಂದು ಯಾರೂ ಹೇಳಿರುವುದನ್ನು ನಾವು ಕೇಳಿಲ್ಲ.

ಆಸ್ತಿಕತೆ, ನಾಸ್ತಿಕತೆ ಇವು ವೈಯಕ್ತಿಕ ಅಭಿಪ್ರಾಯಗಳು. ಸಾಮಾನ್ಯರಿಗೆ ಇದರಲ್ಲಿ ಆಸಕ್ತಿ ಇರುವುದಿಲ್ಲ. ಯಾರೋ ಒಬ್ಬ ದೇವರಿಂದ ನಮಗೆ ಒಳಿತಾದರೆ ಸಾಕು ಎಂದೇ ಅವರು ದೇವರ ದರ್ಶನ, ಪೂಜೆ ಸಲ್ಲಿಸುತ್ತಾರೆ. ಆದರೆ, ರಾಜಕೀಯ ಪಕ್ಷಗಳ ನಾಯಕರು ಇದರಲ್ಲೂ ಲೋಪ ಹುಡುಕುತ್ತಾರೆ! ಶಂಕರಾಚಾರ್ಯದ್ವಯರು ಅಯೋಧ್ಯೆಯಲ್ಲಿ ಅಪೂರ್ಣ ನಿರ್ಮಾಣದ ಮಂದಿರದಲ್ಲಿ ಮೂರ್ತಿ ಪ್ರತಿಷ್ಠಾಪನೆಗೆ ಅಸಮ್ಮತಿ ಸೂಚಿಸಿದ್ದಾರೆಯೇ ವಿನಾ ಇಲ್ಲಿ ಶೈವರಿಗೆ ಅವಮಾನವಾಗಿದೆ ಎಂದಲ್ಲ!

**ಪದ್ಮನಾಭ ರಾವ್,** ಬೆಂಗಳೂರು

Printed and published by B A Ravi on behalf of The Printers (Mysore ) Private Ltd., at The Printers (Mysore ) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

## ತೆರಿಗೆ ಆದಾಯ ಹಂಚಿಕೆ: ಕೇಂದ್ರದಿಂದ ರಾಜ್ಯಕ್ಕೆ ತಾರತಮ್ಯ ಆಗಿದೆಯೇ?

# ರಾಜ್ಯಕ್ಕೆ ಪದೇ ಪದೇ ಅನ್ಯಾಯ

• ಸಿದ್ದರಾಮಯ್ಯ

**2021-22ರ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯವೊಂದರಿಂದಲೇ ಸುಮಾರು 4.75 ಲಕ್ಷ ಕೋಟಿ ರೂಪಾಯಿಗಳನ್ನು ತೆರಿಗೆ ಮೂಲಕ ಸಂಗ್ರಹಿಸಿದೆ. ಇದರಲ್ಲಿ ನೇರ ತೆರಿಗೆ ₹2.40 ಲಕ್ಷ ಕೋಟಿ, ಜಿಎಸ್‌ಟಿ ₹1.30 ಲಕ್ಷ ಕೋಟಿ, ಮತ್ತು ಸೆಸ್ ₹30,000 ಕೋಟಿ ಸೇರಿದೆ. ಕೇಂದ್ರ ಸರ್ಕಾರವು ಕರ್ನಾಟಕದಿಂದ ಸಂಗ್ರಹಿಸಿದರೂ ₹4.75 ಲಕ್ಷ ಕೋಟಿಯಲ್ಲಿ ರಾಜ್ಯಕ್ಕೆ ತನ್ನ ಪಾಲಿನ ರೂಪದಲ್ಲಿ ಸಿಕ್ಕಿರುವುದು ಅಂದಾಜು ₹50,000 ಕೋಟಿ ಮಾತ್ರ**

**ಸಂಸದೀಯ ಪ್ರಜಾಪ್ರಭುತ್ವ** ವ್ಯವಸ್ಥೆಯಲ್ಲಿ ದೇಶ ಎಂದರೆ ರಾಜ್ಯಗಳ ಒಕ್ಕೂಟ. ಆಡಳಿತಾತ್ಮಕ ಅನುಕೂಲ ಮತ್ತು ದೇಶದ ಭದ್ರತೆಯ ದೃಷ್ಟಿಯಿಂದ ಕೇಂದ್ರ ಸರ್ಕಾರಕ್ಕೆ ಒಂದಷ್ಟು ಅಧಿಕಾರಗಳನ್ನು ಸಂವಿಧಾನ ಹೆಚ್ಚುವರಿಯಾಗಿ ನೀಡಿದ್ದರೂ ನಾವೇ ಒಪ್ಪಿಕೊಂಡಿರುವ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಮತ್ತು ರಾಜ್ಯಗಳು ಸಮಾನ ಪಾಲುದಾರರು. ಅಧಿಕಾರ ವಿಕೇಂದ್ರೀಕರಣ ಎನ್ನುವುದು ಒಕ್ಕೂಟ ವ್ಯವಸ್ಥೆಯ ನಿಯಮ, ಅಧಿಕಾರದ ಕೇಂದ್ರೀಕರಣ ನಿಯಮಗಳಿಗೆ ಅಪವಾದ ಅಷ್ಟೆ.

ಕಳೆದ 8-9 ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವಿನ ಸಂಬಂಧದಲ್ಲಿ ಒಂದಿಷ್ಟು ಬಿಗುವು ಮತ್ತು ಬಿಕ್ಕಟ್ಟುಗಳು ಕಾಣಿಸಿಕೊಂಡಿರುವುದು ನಿಜ. ಬಹಳ ಮುಖ್ಯವಾಗಿ ಸಂಪನ್ಮೂಲ ಹಂಚಿಕೆಯಲ್ಲಿನ ವ್ಯತ್ಯಾಸಗಳು ಕರ್ನಾಟಕವೂ ಸೇರಿದಂತೆ ದಕ್ಷಿಣದ ರಾಜ್ಯಗಳನ್ನು ಕೆರಳಿಸಿದೆ. ತೆರಿಗೆ ಹಂಚಿಕೆಯಲ್ಲಿ ತಮಗೆ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಿ ನ್ಯಾಯ ನೀಡಬೇಕೆಂದು ಈ ರಾಜ್ಯಗಳು ಆಗ್ರಹಿಸುತ್ತಿವೆ.

ಹಣಕಾಸು ಆಯೋಗವು ಸಾಂವಿಧಾನಿಕ ಸ್ವಾಯತ್ತೆ ಹೊಂದಿರುವ ಮತ್ತು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಪನ್ಮೂಲ ಹಂಚಿಕೆಯನ್ನು ನಿಗದಿಪಡಿಸುವ ಸ್ವತಂತ್ರ ಸಂಸ್ಥೆ. ಈ ಆಯೋಗವೇ ಇತ್ತೀಚಿನ ವಿವಾದದ ಕೇಂದ್ರ ಬಿಂದು. ಸಂವಿಧಾನದ 7ನೇ ಶೆಡ್ಯೂಲಿನಲ್ಲಿ ನಿಗದಿಪಡಿಸಿರುವಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ವೆಚ್ಚಗಳ ಜವಾಬ್ದಾರಿಯನ್ನು ಪೂರೈಸಲು ಅನುವಾಗುವಂತೆ ಕೇಂದ್ರೀಯ ತೆರಿಗೆಗಳನ್ನು ಹಂಚಿಕೆ ಮಾಡಿಕೊಳ್ಳಬೇಕು. ಈ ಹಂಚಿಕೆ ಮಾಡಲು ಹಣಕಾಸು ಆಯೋಗ ಪ್ರತಿಯೊಂದು ರಾಜ್ಯದ ಜನಸಂಖ್ಯೆ, ವಿಸ್ತೀರ್ಣ, ವರಮಾನ ಅಂತರ, ಅರಣ್ಯಪ್ರದೇಶ, ತೆರಿಗೆ ಮತ್ತು ಹಣಕಾಸು ಪರಿಸ್ಥಿತಿ, ಸಮುದಾಯದ ಅಭಿವೃದ್ಧಿಯ ಆರು ಮಾನದಂಡಗಳನ್ನು ನಿಗದಿಪಡಿಸಿದೆ. ಬಡರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲವನ್ನು ಹಂಚಿಕೆ ಮಾಡುವ ಉದ್ದೇಶದ ಈ ಮಾನದಂಡಗಳು ಅಂತಿಮವಾಗಿ ಅಭಿವೃದ್ಧಿ ಹೊಂದಿರುವ ರಾಜ್ಯಗಳಿಗೆ ಮಾರಕವಾದುದು ಎನ್ನುವುದು ದಕ್ಷಿಣದ ರಾಜ್ಯಗಳ ಆಕ್ಷೇಪ.

ದೇಶದ ವಿತ್ತೀಯ ವ್ಯವಸ್ಥೆಯ ಭಾಗವಾಗಿ ಒಂದು ಸ್ವತಂತ್ರ ಹಣಕಾಸು ಆಯೋಗವಿರುವುದು ಭಾರತದ ಒಕ್ಕೂಟ ವ್ಯವಸ್ಥೆಯ ಒಂದು ಶಕ್ತಿ. ಅದು ಒಕ್ಕೂಟ ರಚನೆಯ ತಳಹದಿಯನ್ನು ಮತ್ತಷ್ಟು ಗಟ್ಟಿಗೊಳಿಸುವ ಪಾತ್ರವನ್ನು ವಹಿಸುತ್ತಾ ಬಂದಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಯಕತ್ವದ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಮೊದಲು ಯೋಜನಾ ಆಯೋಗವನ್ನು ರದ್ದುಗೊಳಿಸಿ ರಾಜ್ಯ ಸರ್ಕಾರಗಳಿಗೆ ದನಿಯೇ ಇಲ್ಲದ ರೀತಿಯಲ್ಲಿ ನೀತಿ ಆಯೋಗವನ್ನು ರಚಿಸಲಾಯಿತು. ಅದರ ಬೆನ್ನಲ್ಲಿಯೇ ಹದಿನೈದನೇ ಹಣಕಾಸು ಆಯೋಗವನ್ನು ರಚಿಸಿ ಅದರ ಕಾರ್ಯೋದ್ದೇಶಗಳನ್ನು ನಿಗದಿಗೊಳಿಸುವ ಮಾರ್ಗಸೂಚಿ ಅಂಶಗಳಲ್ಲಿ ಬದಲಾವಣೆ ಮಾಡಲಾಯಿತು. ಈ ಬದಲಾವಣೆಗಳು ಸಹಜವಾಗಿ ಕರ್ನಾಟಕವೂ ಸೇರಿದಂತೆ ಅಭಿವೃದ್ಧಿಯ ಪಥದಲ್ಲಿರುವ ದಕ್ಷಿಣದ ರಾಜ್ಯಗಳಲ್ಲಿ ಆತಂಕ ಹಾಗೂ ಅನುಮಾನಗಳನ್ನು ಹುಟ್ಟಿಸಿತ್ತು. ಅವೆಲ್ಲವೂ ನಿಧಾನವಾಗಿ ನಿಜವಾಗುತ್ತಿವೆ.

ಬಹುಮುಖ್ಯವಾಗಿ ತೆರಿಗೆ ಹಂಚಿಕೆಯ ಲೆಕ್ಕಾಚಾರಕ್ಕೆ 1971ರ ಜನಗಣತಿಯ ಬದಲಿಗೆ 2011ರ ಜನಗಣತಿಯನ್ನು ಆಧಾರವಾಗಿಟ್ಟುಕೊಳ್ಳಬೇಕೆಂಬ ನಿರ್ದೇಶನವನ್ನು 15ನೇ ಹಣಕಾಸು ಆಯೋಗಕ್ಕೆ ನೀಡಲಾಗಿತ್ತು. ಉತ್ತರದ ರಾಜ್ಯಗಳಿಗೆ ಹೋಲಿಸಿದರೆ ದಕ್ಷಿಣದ ರಾಜ್ಯಗಳು ಪರಿಣಾಮಕಾರಿಯಾಗಿ ಕುಟುಂಬ ನಿಯಂತ್ರಣವನ್ನು ಮಾಡಿಕೊಂಡು ಬಂದಿವೆ. ಇದರಿಂದಾಗಿ ದಕ್ಷಿಣದ ರಾಜ್ಯಗಳ ಒಟ್ಟು ಜನಸಂಖ್ಯೆ ಕಡಿಮೆಯಾಗುತ್ತಾ ಬರುತ್ತಿದೆ. ಅದೇ ರೀತಿ ರಾಷ್ಟ್ರೀಯ ತಲಾ ಆದಾಯಕ್ಕಿಂತ ದಕ್ಷಿಣದ ರಾಜ್ಯಗಳ ತಲಾವಾರು ಆದಾಯ ಹೆಚ್ಚಾಗಿದೆ. ಈ ತಪ್ಪು ಮಾನದಂಡಗಳನ್ನು ಕೇಂದ್ರ ಹಣಕಾಸು ಆಯೋಗ ಅನುಸರಿಸುತ್ತಿರುವ ಕಾರಣದಿಂದಾಗಿ ದಕ್ಷಿಣದ ರಾಜ್ಯಗಳು ನಿರಂತರವಾಗಿ ಅನ್ಯಾಯಕ್ಕೀಡಾಗಿವೆ. ಕರ್ನಾಟಕಕ್ಕೆ ಆಗುತ್ತಿರುವ ಅನ್ಯಾಯದ ವಿವರದಲ್ಲಿಯೇ ಇದಕ್ಕೆ ಸಾಕ್ಷ್ಯ ಇದೆ. ಹದಿನಾಲ್ಕನೇ ಹಣಕಾಸು ಆಯೋಗ ಕರ್ನಾಟಕದ ತೆರಿಗೆ ಪಾಲು ಶೇ 4.72 ಎಂದು ನಿಗದಿಪಡಿಸಿತ್ತು, ಈಗಿನ 15ನೇ ಹಣಕಾಸು ಆಯೋಗ ಈ ಪಾಲನ್ನು ಕಡಿಮೆಗೊಳಿಸಿ ಶೇ 3.64ಕ್ಕೆ ಇಳಿಸಿತ್ತು. ಇದರಿಂದ ಕಳೆದ ನಾಲ್ಕು ವರ್ಷಗಳಲ್ಲಿ ತೆರಿಗೆ ಪಾಲಿನಲ್ಲಿ ಅಂದಾಜು ₹45,000 ಕೋಟಿಯನ್ನು ಕರ್ನಾಟಕ ಕಳೆದುಕೊಂಡಿದೆ.

2021-22ರ ಹಣಕಾಸು ವರ್ಷದಲ್ಲಿ ಕೇಂದ್ರ ಸರ್ಕಾರ ಕರ್ನಾಟಕ ರಾಜ್ಯವೊಂದರಿಂದಲೇ ಸುಮಾರು ₹4.75 ಲಕ್ಷ ಕೋಟಿಯನ್ನು ತೆರಿಗೆ ಮೂಲಕ ಸಂಗ್ರಹಿಸಿದೆ. ಇದರಲ್ಲಿ ನೇರ ತೆರಿಗೆ ₹2.40 ಲಕ್ಷ ಕೋಟಿ, ಜಿಎಸ್‌ಟಿ ₹1.30 ಲಕ್ಷ ಕೋಟಿ, ಮತ್ತು ಸೆಸ್ ₹30,000 ಕೋಟಿ ಸೇರಿದೆ. ಕೇಂದ್ರ ಸರ್ಕಾರವು ಕರ್ನಾಟಕದಿಂದ ಸಂಗ್ರಹಿಸಿದ ₹4.75 ಲಕ್ಷ ಕೋಟಿಯಲ್ಲಿ ರಾಜ್ಯಕ್ಕೆ ತನ್ನ ಪಾಲಿನ ರೂಪದಲ್ಲಿ ಸಿಕ್ಕಿರುವುದು ಅಂದಾಜು ₹50,000 ಕೋಟಿ ಮಾತ್ರ. ಇದರಲ್ಲಿ ತೆರಿಗೆ ಪಾಲು ₹37,000 ಕೋಟಿ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೀಡಿದ ಪಾಲಿನ ಹಣ ₹13,005 ಕೋಟಿ. ಇದರ ಜೊತೆಗೆ ರಾಜ್ಯದಲ್ಲಿ ಜಾರಿಯಲ್ಲಿರುವ ಕೇಂದ್ರ ಅನುದಾನಿತ ಯೋಜನೆಗಳಿಗೆ ನೀಡುವ ತನ್ನ ಪಾಲನ್ನು ಕೂಡಾ ನರೇಂದ್ರ ಮೋದಿ ಸರ್ಕಾರ ಕಡಿತಗೊಳಿಸಿದೆ. 2021-22ರಲ್ಲಿ ₹20,986 ಕೋಟಿಯ ತನ್ನ ಪಾಲನ್ನು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ನೀಡಿದ್ದ ಬಿಜೆಪಿ ಸರ್ಕಾರವು 2022-23ರ ಅವಧಿಯಲ್ಲಿ ಅದನ್ನು ₹13,005 ಕೋಟಿಗೆ ಇಳಿಸಿದೆ.

ಅಂದಹಾಗೆ ಮಹಾರಾಷ್ಟ್ರದ ನಂತರ ಕೇಂದ್ರ ಸರ್ಕಾರಕ್ಕೆ ಅತ್ಯಧಿಕ ಪ್ರಮಾಣದ ತೆರಿಗೆ ನೀಡುವ ರಾಜ್ಯ ನಮ್ಮದು. ಒಂದು ಅಂದಾಜಿನ ಪ್ರಕಾರ ಕರ್ನಾಟಕದಿಂದ ಸಂಗ್ರಹವಾಗುವ ಒಂದು ರೂಪಾಯಿ ತೆರಿಗೆಯಲ್ಲಿ 15 ಪೈಸೆ ಮಾತ್ರ ವಾಪಸು ಬರುತ್ತಿದೆ. ಉತ್ತರ ಪ್ರದೇಶಕ್ಕೆ ಒಂದು ರೂಪಾಯಿಗೆ ₹2.73ರಷ್ಟು ಹಣ ವಾಪಸು ಹೋಗುತ್ತಿದೆ. ಇದು ಹಣಕಾಸು ಆಯೋಗದ ತಪ್ಪು ಮಾನದಂಡಗಳಿಂದಾಗಿ ದಕ್ಷಿಣದ ರಾಜ್ಯಗಳಿಗೆ ಆಗುತ್ತಿರುವ ಅನ್ಯಾಯ.

ಈ ಅನ್ಯಾಯದ ಮನವರಿಕೆಯಾದ ನಂತರ ಹದಿನೈದನೇ ಹಣಕಾಸು ಆಯೋಗ ಕರ್ನಾಟಕಕ್ಕೆ ವಿಶೇಷ ಅನುದಾನದ ರೂಪದಲ್ಲಿ ₹5,495 ಕೋಟಿ ನೀಡಬೇಕೆಂದು ಶಿಫಾರಸು ಮಾಡಿತ್ತು. ಕನ್ನಡಿಗರ ಜನಪ್ರತಿನಿಧಿಯಾಗಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರೇ ಈ ಶಿಫಾರಸನ್ನು ನಿರಾಕರಿಸಿರುವ ಕಾರಣ ಆ ದುಡ್ಡು ಕೂಡಾ ಬರಲಿಲ್ಲ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಆರು ತಿಂಗಳಲ್ಲಿ 61 ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ಜಾರಿಗೆ ತರುತ್ತಿರುವ 23 ಇಲಾಖೆಗಳಿಗೆ ಅನುದಾನವನ್ನೇ ಬಿಡುಗಡೆ ಮಾಡಿಲ್ಲ.

ಇದು ಹಣಕಾಸು ಆಯೋಗದ ಕತೆಯಾದರೆ ಎನ್‌ಡಿಆರ್‌ಎಫ್‌ನದ್ದು ಇನ್ನೊಂದು ಕತೆ. ಪ್ರಕೃತಿ ವಿಕೋಪದಿಂದ ಆಗಿರುವ ಹಾನಿಗೆ ಪರಿಹಾರ ನೀಡಲು ರಚನೆಗೊಂಡಿರುವ ಸಂಸ್ಥೆ ಎನ್‌ಡಿಆರ್‌ಎಫ್. ಈ ವರ್ಷ ರಾಜ್ಯದ 216 ತಾಲ್ಲೂಕುಗಳನ್ನು ಬರಪೀಡಿತ ಎಂದು ಅಧಿಕೃತವಾಗಿ ಘೋಷಿಸಲಾಗಿದೆ. ಪ್ರಸಕ್ತ ವರ್ಷ ಬರಗಾಲದಿಂದಾಗಿ ಅಂದಾಜು ₹33,770 ಕೋಟಿಯಷ್ಟು ನಷ್ಟವಾಗಿರಬಹುದೆಂದು ರಾಜ್ಯ ಸರ್ಕಾರ ಸಮೀಕ್ಷೆ ನಡೆಸಿ ಅಂದಾಜು ಮಾಡಿತ್ತು. ಇದರಲ್ಲಿ ಕನಿಷ್ಠ ₹17,901 ಕೋಟಿಯನ್ನು ನೀಡಬೇಕೆಂದು ಕೇಂದ್ರ ಸರ್ಕಾರವನ್ನು ಕೋರಲಾಗಿತ್ತು. ನಮ್ಮ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಸಚಿವರುಗಳು ದೆಹಲಿಗೆ ಹೋಗಿ ಮನವಿ ಸಲ್ಲಿಸಿದ್ದರು. ನಾನೇ ಖುದ್ದಾಗಿ ಹೋಗಿ ಪ್ರಧಾನಿ ನರೇಂದ್ರ ಮೋದಿಯವರನ್ನು ಭೇಟಿ ಮಾಡಿ ಮನವರಿಕೆ ಮಾಡಿಕೊಟ್ಟರೂ ಇಲ್ಲಿಯವರೆಗೆ ಹಣ ಬಿಡುಗಡೆಯಾಗಿಲ್ಲ.

ಈ ಅನ್ಯಾಯ ಇದೇ ಮೊದಲ ಸಲವೇನಲ್ಲ, 2017ರಲ್ಲಿಯೂ ಕರ್ನಾಟಕದಲ್ಲಿ ಬರಗಾಲ ಬಂದಿತ್ತು. ಇದರಿಂದಾಗಿ ಅಂದಾಜು ₹30,000 ಕೋಟಿಯಷ್ಟು ನಷ್ಟ ಉಂಟಾಗಿತ್ತು. ಕೇಂದ್ರ ಸರ್ಕಾರ ನೀಡಿದ್ದು ಕೇವಲ ₹1,435 ಕೋಟಿ ಪರಿಹಾರ. ಅದೇ ವರ್ಷ ಮಹಾರಾಷ್ಟ್ರಕ್ಕೆ ₹8,195 ಕೋಟಿ ಮತ್ತು ಗುಜರಾತ್‌ಗೆ ₹3,894 ಕೋಟಿ ಪರಿಹಾರ ನೀಡಲಾಗಿತ್ತು. 2019ರಲ್ಲಿ ರಾಜ್ಯದಲ್ಲಿ ಬಿಜೆಪಿಯದ್ದೇ ಸರ್ಕಾರವಿದ್ದಾಗಲೂ ಅತಿವೃಷ್ಟಿಯಿಂದಾಗಿರುವ ಹಾನಿಗೆ ಪರಿಹಾರ ನೀಡದೆ ಸತಾಯಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿಯವರ ಸಮ್ಮುಖದಲ್ಲಿಯೇ ಆಗಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರು ಅತಿವೃಷ್ಟಿ ಹಾನಿ ಪರಿಹಾರ ನೀಡುವಂತೆ ಕೇಳಿದರೂ ₹50,000 ಕೋಟಿ ನಷ್ಟಕ್ಕೆ ₹1,869 ಕೋಟಿಯಷ್ಟೇ ಪರಿಹಾರ ನೀಡಲಾಯಿತು.

ಕೇಂದ್ರ ಮತ್ತು ರಾಜ್ಯಗಳೆರಡರಲ್ಲಿಯೂ ಒಂದೇ ಪಕ್ಷ ಅಧಿಕಾರದಲ್ಲಿದ್ದರೆ ರಾಜ್ಯದಲ್ಲಿ ಅಭಿವೃದ್ಧಿಯ ಪರ್ವ ಪ್ರಾರಂಭವಾಗಲಿದೆ ಎಂಬ ಕನಸನ್ನು ಕಳೆದ ಲೋಕಸಭಾ ಚುನಾವಣೆಯ ಕಾಲದಲ್ಲಿ ಕನ್ನಡಿಗರ ತಲೆಗೆ ತುಂಬಲಾಯಿತು. ಆಗಿದ್ದೇನು? ನೆಲ-ಜಲ-ಭಾಷೆಯ ವಿಚಾರದಲ್ಲಿ ಮಾತ್ರವಲ್ಲ ಸಂಪತ್ತಿನ ಹಂಚಿಕೆಯಲ್ಲಿ ಆಗುತ್ತಿರುವ ಅನ್ಯಾಯದ ವಿರುದ್ಧವೂ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿಗೆ ಸೇರಿರುವ ಒಬ್ಬ ಸಂಸದನೂ ದನಿ ಎತ್ತುತ್ತಿಲ್ಲ ಮಾತ್ರವಲ್ಲ, ಪ್ರತ್ಯಕ್ಷವಾಗಿ ಕೇಂದ್ರ ಸರ್ಕಾರದ ನಡೆಯನ್ನು ಸಮರ್ಥಿಸುತ್ತಾ ಕನ್ನಡಿಗರ ಕೊರಳು ಹಿಚುಕುವ ಕೇಂದ್ರ ಸರ್ಕಾರದ ಕೈಗಳಿಗೆ ಬಲ ತುಂಬುತ್ತಿರುವುದು ವಿಷಾದನೀಯ ಬೆಳವಣಿಗೆ.

ಲೇಖಕ: ಮುಖ್ಯಮಂತ್ರಿ

ಪ್ರಜಾವಾಣಿ ಚರ್ಚೆ

# ಆರ್ಥಿಕ ದಿವಾಳಿಯತ್ತ ರಾಜ್ಯ

• ಬಸವರಾಜ ಬೊಮ್ಮಾಯಿ

**ತಮ್ಮ ಗ್ಯಾರಂಟಿಗಳ ನಿರ್ವಹಣೆಗೆ ಬೇಕಾಗಿರುವ ಹಣಕಾಸಿನ ವ್ಯವಸ್ಥೆ ಮಾಡದ ಮುಖ್ಯಮಂತ್ರಿ, ಬಜೆಟ್‌ನಲ್ಲಿ ವಿವಿಧ ಇಲಾಖೆಗಳಿಗೆ ನೀಡಲಾಗಿದ್ದ ಹಣ ನೀಡದೇ, ಅಭಿವೃದ್ಧಿ ಕೆಲಸಕ್ಕೆ ತಿಲಾಂಜಲಿ ನೀಡಿದ್ದಾರೆ. ಈಗ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ಯಥಾ ಪ್ರಕಾರ ಮುಂದುವರಿಸಿದ್ದಾರೆ**



**ಮುಖ್ಯಮಂತ್ರಿ ಸಿದ್ದರಾಮಯ್ಯ** ಅವರು ಅತಿ ಹೆಚ್ಚು ಬಜೆಟ್ ಮಂಡನೆ ಮಾಡಿರುವ ಖ್ಯಾತಿ ಹೊಂದಿದ್ದರೂ ಗ್ಯಾರಂಟಿಗಳ ಸುಳಿಯಲ್ಲಿ ಸಿಕ್ಕಿಕೊಂಡ ಅವರು ಆರ್ಥಿಕತೆಯನ್ನು ಸಬಲೀಕರಣ ಮಾಡುವ ಎಲ್ಲ ಅವಕಾಶಗಳನ್ನು ಗಾಳಿಗೆ ತೂರಿದ್ದಾರೆ. ಇದರಿಂದಾಗಿ ಆರ್ಥಿಕ ಸಂಕಷ್ಟ, ಅಭಿವೃದ್ಧಿಯ ಶೂನ್ಯತೆ ಮತ್ತು ಆರ್ಥಿಕ ನಿರ್ವಹಣೆಯಲ್ಲಿ ಪಾರದರ್ಶಕತೆಯ ಕೊರತೆ ಜತೆಗೆ ಖಜಾನೆ ನಿರ್ವಹಣೆಯಲ್ಲಿ ವಿಫಲರಾಗಿದ್ದಾರೆ. ಹೀಗಾಗಿ, ಸರ್ಕಾರದ ಖಜಾನೆ ಕೇವಲ ಏಳು ತಿಂಗಳಲ್ಲಿಯೇ ಖಾಲಿಯಾಗಿದ್ದು, ಮುಂದಿನ ಹಲವಾರು ವರ್ಷ ರಾಜ್ಯ ದುಷ್ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.

ತಮ್ಮ ಗ್ಯಾರಂಟಿಗಳ ನಿರ್ವಹಣೆಗೆ ಬೇಕಾಗಿರುವ ಹಣಕಾಸಿನ ವ್ಯವಸ್ಥೆ ಮಾಡದ ಮುಖ್ಯಮಂತ್ರಿ, ಬಜೆಟ್‌ನಲ್ಲಿ ವಿವಿಧ ಇಲಾಖೆಗಳಿಗೆ ನೀಡಲಾಗಿದ್ದ ಹಣ ನೀಡದೇ, ಅಭಿವೃದ್ಧಿ ಕೆಲಸಕ್ಕೆ ತಿಲಾಂಜಲಿ ನೀಡಿದ್ದಾರೆ. ಈಗ ತಮ್ಮ ವೈಫಲ್ಯ ಮುಚ್ಚಿಕೊಳ್ಳಲು ಕೇಂದ್ರ ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನವನ್ನು ಯಥಾ ಪ್ರಕಾರ ಮುಂದುವರಿಸಿದ್ದಾರೆ.

ಸಿದ್ದರಾಮಯ್ಯ ಮಂಡಿಸಿರುವ ಜುಲೈ ತಿಂಗಳ ಬಜೆಟ್‌ನಲ್ಲಿ ಅಬಕಾರಿ ತೆರಿಗೆ, ವಾಹನ ತೆರಿಗೆ, ನೋಂದಣಿ ಮುದ್ರಾಂಕ ಶುಲ್ಕ ಹೆಚ್ಚಳದಿಂದಾಗಿ ಸಾಮಾನ್ಯ ಜನರ ಮೇಲೆ ಬಹಳ ದೊಡ್ಡ ಭಾರ ಬಿದ್ದಿದೆ. ಇದೇ ಸಂದರ್ಭದಲ್ಲಿ ವಿದ್ಯುತ್ ಶಕ್ತಿ ಬಳಕೆಯ ಶುಲ್ಕವನ್ನು ಎರಡರಿಂದ ಮೂರು ಪಟ್ಟು ಹೆಚ್ಚಿಸಿರುವುದು, ಹಾಲಿನ ದರ ಹೆಚ್ಚಳ ಇವೆಲ್ಲವೂ ಜನರಿಗೆ ಹೊರೆಯಾಗಿವೆ. ಇದಲ್ಲದೇ ಇವರು ಸುಮಾರು ₹85,818 ಕೋಟಿ ಸಾಲ ಮಾಡಿ ಅತಿ ಹೆಚ್ಚು ಸಾಲ ಮಾಡಿದ ಸರ್ಕಾರವೆಂಬ 'ಕೀರ್ತಿ'ಯನ್ನೂ ಸಂಪಾದಿಸಿದ್ದಾರೆ.

15ನೇ ಹಣಕಾಸು ಆಯೋಗವು ಕಡಿಮೆ ಅನುದಾನ ನೀಡುವ ಮೂಲಕ ಕೇಂದ್ರ ಸರ್ಕಾರ ಅತ್ಯಂತ ಕಡಿಮೆ ಹಣವನ್ನು ಕೊಟ್ಟಿದೆ ಎಂದು ಮುಖ್ಯಮಂತ್ರಿ ಪದೇ ಪದೇ ಆಪಾದನೆ ಮಾಡುತ್ತಾರೆ. 15ನೇ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಎನ್‌ಡಿಎ ಸರ್ಕಾರ ಈಗಾಗಲೇ ₹1,16,828 ಕೋಟಿ ಬಿಡುಗಡೆ ಮಾಡಿದೆ. ಈ ಆಯೋಗದ ಅವಧಿ 2026ರವರೆಗೆ ಇದ್ದು ಒಟ್ಟು ₹2.5 ಲಕ್ಷ ಕೋಟಿಗೂ ಮೀರಿ ತೆರಿಗೆಯ ಹಂಚಿಕೆ ಕರ್ನಾಟಕಕ್ಕೆ ಬರಲಿದೆ. ಈ ಮೊತ್ತವು ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಇದ್ದಾಗ, 14ನೇ ಹಣಕಾಸಿನ ಶಿಫಾರಸ್ಸಿನಂತೆ ನೀಡಿದ್ದ ಮೊತ್ತಕ್ಕಿಂತ ₹1,51,309 ಕೋಟಿಗಳಷ್ಟು ಅತ್ಯಧಿಕವಾಗಿದೆ.

15ನೇ ಹಣಕಾಸಿನ ಆಯೋಗದ ಅವಧಿಯಲ್ಲಿ ರಾಜ್ಯ ಸರ್ಕಾರದ ಪಾಲು ಶೇ 3.6ಕ್ಕೆ ಇಳಿಯಲು ನೇರವಾಗಿ ಸಿದ್ದರಾಮಯ್ಯ ಸರ್ಕಾರವೇ ಕಾರಣ. ಏಕೆಂದರೆ 15ನೇ ಹಣಕಾಸು ಆಯೋಗದ ವರದಿ ತಯಾರಿ ಮಾಡುವಾಗ ರಾಜ್ಯದಲ್ಲಿ ಸಿದ್ದರಾಮಯ್ಯ ಸರ್ಕಾರ ಇತ್ತು. ರಾಜ್ಯದ ವಾಸ್ತವ ಆರ್ಥಿಕ ಸ್ಥಿತಿಯನ್ನು ಬಿಂಬಿಸಲು ವಿಫಲವಾಗಿ ಹಣಕಾಸಿನ ಆಯೋಗಕ್ಕೆ ಮನವರಿಕೆ ಮಾಡಿಕೊಡಲು ಸೋತಿದ್ದರಿಂದ ರಾಜ್ಯಕ್ಕೆ ಹಿನ್ನಡೆಯಾಗಿದೆ. ಇದನ್ನು ಸಿದ್ದರಾಮಯ್ಯ ಮುಚ್ಚಿಡುತ್ತಿದ್ದಾರೆ.

ಜಿಎಸ್‌ಟಿ ಪರಿಹಾರ ಬಂದಿಲ್ಲ ಎಂದು ಸಿದ್ದರಾಮಯ್ಯ ಮತ್ತೊಂದು ಗುರುತರ ಆಪಾದನೆ ಮಾಡುತ್ತಿದ್ದಾರೆ. ಈ ಮೊತ್ತವನ್ನು ಕೇಂದ್ರ ಸರ್ಕಾರ ಕಾಲ ಕಾಲಕ್ಕೆ ಬಿಡುಗಡೆ ಮಾಡಿದೆ. 2023ರ ಅಕ್ಟೋಬರ್ 25ಕ್ಕೆ ಒಟ್ಟು ₹2,300 ಕೋಟಿ ಬಾಕಿ ಇದ್ದು, ₹1191.40 ಕೋಟಿಯನ್ನು ಕೇಂದ್ರ ಬಿಡುಗಡೆ ಮಾಡಿದೆ. ಇದಲ್ಲದೇ 2020-21, 2021-22ರಲ್ಲಿ ವಿಶೇಷ ₹23,000 ಕೋಟಿ ಸಾಲವನ್ನು ನೀಡಿದ್ದು, ಅದರ ಬಡ್ಡಿಯನ್ನು ಕೇಂದ್ರ ಸರ್ಕಾರವೇ ಭರಿಸಲಿದೆ ಮತ್ತು ಕೇಂದ್ರದ ಸೆಸ್‌ನಲ್ಲಿಯೇ ಸಾಲ ಮರುಪಾವತಿಯಾಗಲಿದೆ.

ಇದಲ್ಲದೇ, ರಾಜ್ಯಕ್ಕೆ ಕಿಸಾನ್ ಸಮ್ಮಾನ್ ಯೋಜನೆ ಅಡಿಯಲ್ಲಿ ₹10,990 ಕೋಟಿ ಕಳೆದ ಮಾರ್ಚ್‌ವರೆಗೂ ಬಂದಿದೆ. ರಾಷ್ಟ್ರೀಯ ಹೆದ್ದಾರಿ ಅನುದಾನದಡಿ ಕಳೆದ ಐದು ವರ್ಷಗಳಲ್ಲಿ ₹30 ಸಾವಿರ ಕೋಟಿ ಲಭಿಸಿದೆ. ಕಳೆದ 75 ವರ್ಷದಲ್ಲಿ ರಾಜ್ಯದ 25 ಲಕ್ಷ ಮನೆಗಳಿಗೆ ನೀರು ಕೊಡಲಾಗಿತ್ತು. ಮೋದಿಯವರ ದೂರದೃಷ್ಟಿಯಿಂದಾಗಿ ಕಳೆದ ಮೂರು ವರ್ಷಗಳಲ್ಲಿ ಜಲ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ 30 ಲಕ್ಷ ಮನೆಗಳಿಗೆ ಕುಡಿಯುವ ನೀರು ಒದಗಿಸಲಾಗಿದೆ. ಇದಲ್ಲದೇ ಭದ್ರಾ ಮೇಲ್ದಂಡೆ ಯೋಜನೆಗೆ ₹5,000 ಕೋಟಿ, ಉಪನಗರ ರೈಲಿಗೆ ₹15 ಸಾವಿರ ಕೋಟಿ, ಮೆಟ್ರೊ ರೈಲು ಯೋಜನೆಗಳಿಗೆ ಭರಪೂರ ನೆರವು ಕೇಂದ್ರದಿಂದ ಬಂದಿದೆ.

ಒಟ್ಟಾರೆ 2019-20ರಿಂದ 2022-23ಕ್ಕೆ ₹1,57,218 ಕೋಟಿ, 105 ಕೇಂದ್ರ ಪುರಸ್ಕೃತ ಯೋಜನೆಗಳಾದ ಎನ್‌ಎಚ್‌ಎಂ, ಅಮೃತ ಯೋಜನೆ, ನರೇಗಾ, ಸ್ಮಾರ್ಟ್ ಸಿಟಿ ಇತ್ಯಾದಿಗಳಿಗೆ ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡಿದೆ. ಇಷ್ಟೆಲ್ಲ ಕೇಂದ್ರದಿಂದ ಹಣ ಬಂದರೂ ಕೂಡ ಮುಖ್ಯಮಂತ್ರಿಯವರು ಇದನ್ನು ಮರೆಮಾಚಿ ಕೇಂದ್ರದಿಂದ ಅನ್ಯಾಯವಾಗಿದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ.

ಕರ್ನಾಟಕ ರಾಜ್ಯ ಆರ್ಥಿಕವಾಗಿ ಹಿನ್ನಡೆಯತ್ತ ಸಾಗಿರುವುದು ಬಹಳ ಸ್ಪಷ್ಟ. ರಾಜ್ಯದ ಆರ್ಥಿಕತೆಯು ಮುಖ್ಯಮಂತ್ರಿ ಹೇಳಿದಂತೆ ಸದೃಢವಾಗಿದ್ದರೆ, ಅವರ ಬಜೆಟ್‌ನಲ್ಲಿ ಅನುಮೋದನೆ ಪಡೆದಿರುವ ₹3,27,747 ಕೋಟಿಗಳಲ್ಲಿ ಸರ್ಕಾರಿ ನೌಕರರ ಸಂಬಳ, ಪಿಂಚಣಿ ಮತ್ತು ಸಾಲ ಮರುಪಾವತಿ ಬಿಟ್ಟರೆ ಅಭಿವೃದ್ಧಿಗಾಗಿ ಎಷ್ಟು ಹಣ ಖರ್ಚು ಮಾಡಿದ್ದಾರೆ ಎನ್ನುವುದನ್ನು ಜನರಿಗೆ ಅವರು ತಿಳಿಸಲಿ.

ಕರ್ನಾಟಕ ರಾಜ್ಯಕ್ಕೆ ಹರಿದು ಬರುತ್ತಿದ್ದ ವಿದೇಶಿ ನೇರ ಬಂಡವಾಳದಲ್ಲಿ ಶೇ 46ರಷ್ಟು ಕುಸಿದಿದೆ. ಕಳೆದ ಮೂರು ವರ್ಷದಲ್ಲಿ ರಾಜ್ಯದ ತೆರಿಗೆ ಸಂಗ್ರಹದಲ್ಲಿ ಶೇ 17 ಪ್ರತಿ ವರ್ಷ ಹೆಚ್ಚಳವಾಗಿತ್ತು. ಆದರೆ, ಈ ವರ್ಷ ಡಿಸೆಂಬರ್‌ವರೆಗೆ ಶೇ 14ರಷ್ಟು ಮಾತ್ರ ಸಂಗ್ರಹವಾಗಿರುವುದನ್ನು ನೋಡಿದರೆ, ತೆರಿಗೆ ಸಂಗ್ರಹದಲ್ಲಿ ರಾಜ್ಯ ಹಿಂದೆ ಬಿದ್ದಿರುವುದಕ್ಕೆ ಬೇರೆ ಸಾಕ್ಷ್ಯ ಬೇಕಿಲ್ಲ.

ನಮ್ಮ ಸರ್ಕಾರದ ಅವಧಿಯಲ್ಲಿ ರಾಜ್ಯದ ಒಟ್ಟು ಸಾಲದ ಹೊರೆಯನ್ನು ಇಳಿಕೆ ಮಾಡಿದ್ದೆವು. ಈ ಸರ್ಕಾರ ಮತ್ತೆ ಅತಿ ಹೆಚ್ಚು ಸಾಲವನ್ನು ಮಾಡಿ ಜನರ ಮೇಲೆ ಸಾಲದ ಭಾರವನ್ನು ಹೆಚ್ಚಿಸಿದೆ. ಮುಖ್ಯಮಂತ್ರಿಗಳೇ, ಆರೇ ತಿಂಗಳಿನಲ್ಲಿ ತಾವು ಸುಮಾರು ₹13,500 ಕೋಟಿ ಹೊಸ ತೆರಿಗೆ ಭಾರ ಮತ್ತು ₹8,000 ಕೋಟಿ ಸಾಲವನ್ನು ರಾಜ್ಯದ ಜನರ ಮೇಲೆ ಹೇರಿದ್ದೀರಿ.

ಒಂದು ಕಡೆ ರಾಜ್ಯ ಆರ್ಥಿಕವಾಗಿ ದಿವಾಳಿಯಾಗಿದ್ದು, ಇನ್ನೊಂದೆಡೆ ಅಭಿವೃದ್ಧಿ ಸಂಪೂರ್ಣ ನಿಂತುಹೋಗಿದೆ. ಗ್ಯಾರಂಟಿಗಳನ್ನು ಜಾರಿಗೊಳಿಸಲು ವಿಫಲವಾಗಿರುವುದರ ಜತೆಗೆ, ರಾಜ್ಯವನ್ನು ಆರ್ಥಿಕವಾಗಿ ತ್ರಿಶಂಕು ಸ್ಥಿತಿಯಲ್ಲಿ ಇಟ್ಟಿದ್ದೀರಿ. ಇದರಿಂದ ಕನ್ನಡ ನಾಡನ್ನು ಹೊರ ತರುವ ಜವಾಬ್ದಾರಿ ನಿಮ್ಮದಾಗಿದೆ.

ಲೇಖಕ: ಮಾಜಿ ಮುಖ್ಯಮಂತ್ರಿ ಮತ್ತು ಶಾಸಕ

### ಮುಖ್ಯಮಂತ್ರಿ ಗಮನಕ್ಕೆ...

- ಆರ್ಥಿಕ ದುಃಸ್ಥಿತಿಯನ್ನು ಒಪ್ಪಿಕೊಳ್ಳಿ; ಇಲ್ಲದಿದ್ದರೆ ಎಲ್ಲ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳನ್ನು ಆರಂಭಿಸಿ
- ಬರದ ಸಂಕಷ್ಟಕ್ಕೆ ಸಿಲುಕಿರುವ ರೈತರಿಗೆ ಕೂಡಲೇ ಎನ್‌ಡಿಆರ್‌ಎಫ್ ನಿಯಮದಂತೆ ಪರಿಹಾರ ಒದಗಿಸಿ
- ತಮ್ಮ ಬಜೆಟ್‌ನಲ್ಲಿ ಒದಗಿಸಿರುವ ಬಂಡವಾಳ ವೆಚ್ಚವನ್ನು ಪೂರ್ಣ ಪ್ರಮಾಣದಲ್ಲಿ ಬಿಡುಗಡೆ ಮಾಡಿ
- ಕಲ್ಯಾಣ ಕರ್ನಾಟಕಕ್ಕೆ ಈಗಾಗಲೇ ರಾಜ್ಯಪಾಲರಿಂದ ಅನುಮೋದನೆಗೊಂಡ ₹3000 ಕೋಟಿ ಅನುದಾನವನ್ನು ಕೂಡಲೇ ಬಿಡುಗಡೆ ಮಾಡಿ
- ಗ್ಯಾರಂಟಿಗೆ ಬಳಸಿರುವ ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ₹11,000 ಕೋಟಿ ಹಣವನ್ನು ವಾಪಸ್ ಕೊಡಿ
- ಕೃಷ್ಣಾ ಮೇಲ್ದಂಡೆ ಮತ್ತು ಇತರ ನೀರಾವರಿ ಯೋಜನೆಗಳಿಗೆ ಕೂಡಲೇ ಹಣ ಬಿಡುಗಡೆ ಮಾಡಿ.
- ಬಾಕಿ ಇರುವ ಎಲ್ಲ ಕಾಮಗಾರಿಗಳ ಬಿಲ್ಲನ್ನು ಕೂಡಲೇ ಬಿಡುಗಡೆ ಮಾಡಿ

---

ನಾವು ನೋಡಿದ ಸಿನಿಮಾ

# ಜಾತಿ ತಾರತಮ್ಯದ ಮತ್ತೊಂದು ಕಥೆ

**ಕ್ಯಾಪ್ಟನ್ ಮಿಲ್ಲರ್ (ತಮಿಳು-ಕನ್ನಡಕ್ಕೆ ಡಬ್ ಆದ ಆವೃತ್ತಿ)**

- **ನಿರ್ದೇಶನ:** ಅರುಣ್ ಮಾದೇಶ್ವರನ್
- **ನಿರ್ಮಾಣ:** ಸತ್ಯಜ್ಯೋತಿ ಫಿಲ್ಮ್ಸ್
- **ತಾರಾಗಣ:** ಧನುಷ್, ಶಿವರಾಜ್‌ಕುಮಾರ್, ಪ್ರಿಯಾಂಕ ಮೋಹನ್, ಸಂದೀಪ್ ಕಿಶನ್ ಮತ್ತಿತರರು

**ತಮಿಳು ಚಿತ್ರರಂಗದಲ್ಲಿ** ಇತ್ತೀಚೆಗೆ ಅಸ್ಪೃಶ್ಯತೆ, ಜಾತಿ ತಾರತಮ್ಯವನ್ನು ಆಧರಿಸಿದ ಸಿನಿಮಾಗಳ ಸಂಖ್ಯೆ ಹೆಚ್ಚುತ್ತಿದೆ. 'ಜೈಭೀಮ್', 'ಮಾಮಣ್ಣನ್', 'ಕರ್ಣನ್', 'ಅಸುರನ್' ಹೀಗೆ ಸಾಲು ಸಾಲು ಸಿನಿಮಾಗಳು ಭಿನ್ನ ಜಾನರ್‌ಗಳಲ್ಲಿ ತೆರೆಗೆ ಬಂದರೂ ಅವುಗಳ ಕಥೆಯ ಎಳೆ ಜಾತಿ ವ್ಯವಸ್ಥೆಯ ಕುರಿತೇ ಆಗಿತ್ತು. 'ಕ್ಯಾಪ್ಟನ್ ಮಿಲ್ಲರ್' ಸಿನಿಮಾ ಕೂಡ ಇದೇ ಎಳೆಯನ್ನು ಹಿಡಿದು ಸ್ವಾತಂತ್ರ್ಯಪೂರ್ವದ ಅವಧಿಗೆ ಹೊರಳಿದೆ. ಆರಂಭದಲ್ಲಿ ಕಥೆ ಧುಮ್ಮಿಕ್ಕಿ ಹರಿದರೂ ನಂತರದಲ್ಲಿ ವೇಗ ಕಳೆದುಕೊಂಡ ಸಿನಿಮಾ ಸಾಕೆನಿಸಿಬಿಡುತ್ತದೆ.

ತಮಿಳುನಾಡಿನ ಹಳ್ಳಿಯೊಂದರ ಹಾಗೂ ಅಲ್ಲಿರುವ ಬುಡಕಟ್ಟು ಜನಾಂಗದ ಕಾವಲು ದೇವರು ಕೊರನಾರ್. 600 ವರ್ಷಗಳ ಹಿಂದೆ ಇದೇ ಜನಾಂಗದ ಜನರು ದೇವಸ್ಥಾನ ನಿರ್ಮಾಣ ಮಾಡಿದರೂ, ಅದರೊಳಗೆ ಅವರಿಗೆ ಪ್ರವೇಶವಿಲ್ಲ. ಈಗ ರಾಜನ ಆಳ್ವಿಕೆಯ ಕಾಲ. ಬ್ರಿಟಿಷರ ಮೇಲುಸ್ತುವಾರಿ. ದೇವಸ್ಥಾನದ ಮುಂಭಾಗದಲ್ಲೇ ಈ ಜನರು ಗುಡಿಸಲು ನಿರ್ಮಿಸಿ ವಾಸಿಸುತ್ತಿದ್ದರೂ, ಇಲ್ಲಿಯವರೆಗೂ ದೇವರು ಕೈಗೆಟುಕಿಲ್ಲ. ಇದರಿಂದ ಬೇಸತ್ತ ಯುವಕ ಅನಲೀಸನ್ ಅಲಿಯಾಸ್ ಈಸ(ಧನುಷ್), ಬ್ರಿಟಿಷ್ ಸೈನ್ಯಕ್ಕೆ ಸೇರಿ ಸೈನಿಕನಾದರೆ ತನಗೆ ಕನಿಷ್ಠ ಗೌರವವಾದರೂ ಸಿಗಲಿದೆ ಎಂದು ನಂಬಿದಾತ. ಇತ್ತ ಬ್ರಿಟಿಷರ ವಿರುದ್ಧ ಹೋರಾಟದಲ್ಲಿ ತೊಡಗಿಸಿಕೊಂಡಿರುವ 'ಈಸ'ನ ಅಣ್ಣ 'ಶಿವಣ್ಣ'(ಶಿವರಾಜ್‌ಕುಮಾರ್). ಹೀಗೆ 'ಈಸ'ನಿಂದ 'ಮಿಲ್ಲರ್' ಆದ ಆತ ತನ್ನನ್ನು ತಾನೇ 'ಕ್ಯಾಪ್ಟನ್ ಮಿಲ್ಲರ್' ಎಂದು ಕರೆದುಕೊಂಡ. ತನ್ನ ಬಂದೂಕಿನ ನಳಿಕೆ ತನ್ನವರನ್ನೇ ಸುಟ್ಟಾಗ 'ಮಿಲ್ಲರ್' ಏನಾಗುತ್ತಾನೆ ಎನ್ನುವುದೇ ಚಿತ್ರದ ಮುಂದಿನ ಕಥೆ.

ಚಿತ್ರದ ಮೊದಲ ಅರ್ಧಗಂಟೆ ಗಮನಸೆಳೆಯುವಂತಿದೆ. ಕೇವಲ ಬ್ರಿಟಿಷರಿಂದಲ್ಲ, ತನ್ನ ನೆಲದಲ್ಲೇ ಹುಟ್ಟಿ ತುಳಿಯುತ್ತಿರುವವರಿಂದ ಸ್ವಾತಂತ್ರ್ಯಕ್ಕಾಗಿ ತುಡಿಯುವವರ ಕಥೆ ಇಲ್ಲಿದೆ. ಜಾತಿ ತಾರತಮ್ಯದ ಎಳೆಯಿಂದಲೇ ಸಿನಿಮಾದ ಕಥೆ ಆರಂಭವಾಗುತ್ತದೆ. ರಿವರ್ಸ್ ಸ್ಕ್ರೀನ್‌ಪ್ಲೇ ಹಾಗೂ ಅನನುಕ್ರಮಣಿಕೆಯ ನಿರೂಪಣೆ ಇರುವ ಚಿತ್ರಕಥೆ ಸರಾಗವಾಗಿ ಸಾಗಿದರೂ, ಮಧ್ಯಂತರದ ಹೊತ್ತಿಗೆ ವೇಗ ಕಳೆದುಕೊಳ್ಳುತ್ತದೆ. ನಂತರದ ಚಿತ್ರಕಥೆ ಆಕರ್ಷಿಸುವುದೇ ಇಲ್ಲ. ದ್ವಿತೀಯಾರ್ಧದಲ್ಲಿ ಬರುವ ಚೇಸಿಂಗ್ ದೃಶ್ಯವೊಂದು 10 ನಿಮಿಷಗಳ ಬಳಿಕ ಮುಗಿದಾಗ ಕಿವಿಯಲ್ಲಿ ಬಂದೂಕಿನ ಆರ್ಭಟ ಪ್ರತಿಧ್ವನಿಸುತ್ತಲೇ ಇರುತ್ತದೆ. ಟ್ರಕ್‌ಗಳಲ್ಲಿ ತುಂಬುವಷ್ಟು ಬುಲೆಟ್‌ಗಳ ಶೆಲ್‌ಗಳು ಉದುರಿ ಬಿದ್ದಿರುತ್ತವೆ. ಹಿನ್ನೆಲೆ ಸಂಗೀತ (ಬಿಜಿಎಂ) ಇಂಪು ಎನಿಸಿದರೂ, ಕೊನೆಯಲ್ಲಿ ಸಾಕೆನಿಸುವಂತಾಗುತ್ತದೆ. ಆರು ಅಧ್ಯಾಯಗಳಲ್ಲಿ ನಿರ್ದೇಶಕರು ಈ ಕಥೆಯನ್ನು ಹೆಣೆದಿದ್ದು, ಕೊನೆಯ ಅಧ್ಯಾಯ ಸಿನಿಮಾದ ಎರಡನೇ ಭಾಗದ ಸುಳಿವು ನೀಡಿದೆ.

ಶಿವರಾಜ್‌ಕುಮಾರ್ ಹಾಗೂ ಧನುಷ್

ಧನುಷ್ ತಮ್ಮ ಪಾತ್ರವನ್ನು ಸಮರ್ಥವಾಗಿ ನಿಭಾಯಿಸಿದ್ದಾರೆ. ಮೂರ್ನಾಲ್ಕು ಶೇಡ್‌ಗಳಲ್ಲಿ ಅವರಿಲ್ಲಿ ಕಾಣಿಸಿಕೊಂಡಿದ್ದಾರೆ. ಇಡೀ ಸಿನಿಮಾವನ್ನು ಅವರೇ ಮುನ್ನಡೆಸಿದ್ದಾರೆ. ಕನ್ನಡದಲ್ಲಿ ಡಬ್ ಆದ ಸಿನಿಮಾದಲ್ಲಿ ಶಿವರಾಜ್‌ಕುಮಾರ್ 'ಶಿವಣ್ಣ'ನಾಗಿ ಕಾಣಿಸಿಕೊಂಡಿದ್ದು, ಈ ಪಾತ್ರದ ಹೆಣಿಗೆಯಲ್ಲಿ ನಿರ್ದೇಶಕರು ಸೋತಿದ್ದಾರೆ. ಟೀಸರ್‌ನಲ್ಲೇ ಶಿವರಾಜ್‌ಕುಮಾರ್ ಅವರ ಆ್ಯಕ್ಷನ್ ದೃಶ್ಯವನ್ನು ತೋರಿಸಿರುವ ನಿರ್ದೇಶಕರು, ಸಸ್ಪೆನ್ಸ್ ಕಾಪಾಡಿಕೊಳ್ಳುವಲ್ಲಿ ಎಡವಿದ್ದಾರೆ. ಪಾತ್ರ ನಿರ್ವಹಣೆಯಲ್ಲಿ ಶಿವರಾಜ್‌ಕುಮಾರ್ ಎಂದಿನಂತೆ ಮಿಂಚಿದ್ದಾರೆ. ಆ್ಯಕ್ಷನ್ ದೃಶ್ಯಗಳು, ಡ್ಯಾನ್ಸ್‌ನಲ್ಲಿ ರಂಜಿಸುತ್ತಾರೆ. ಚಿತ್ರದ ಛಾಯಾಚಿತ್ರಗ್ರಹಣ ಸೆಳೆಯುವಂತಿದೆ. ಕನ್ನಡದಲ್ಲಿ ಡಬ್ಬಿಂಗ್ ಗುಣಮಟ್ಟ ಹೆಚ್ಚುತ್ತಿದೆ ಎನ್ನುವುದಕ್ಕೆ ಈ ಸಿನಿಮಾವೂ ಸಾಕ್ಷ್ಯವಾಗಿದೆ. ಒಟ್ಟಿನಲ್ಲಿ ಈ ಸಿನಿಮಾದ ಎಳೆ ಇಂದಿಗೂ ಪ್ರಸ್ತುತ.

**ಅಭಿಲಾಷ್ ಪಿ. ಎಸ್.**

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

---

## ಪದಬಂಧ 5559

– ವಿದ್ಯಾ ವಿನಯ್



**ಎಡದಿಂದ ಬಲಕ್ಕೆ**

1.ಊಟ ಮಾಡದಿರುವುದು (4)
3.ಮಜವಾಗಿ ಪ್ರಾರಂಭಿಸಿದ ವಿಷಯದ ನಿರೂಪಣೆ (4)
5.ಶಾಶ್ವತವಲ್ಲದ್ದು ಉಲ್ಟಾ ಕಾಣುತ್ತಿದೆಯಲ್ಲಾ? (3)
6.ಹಾರವನ ವ್ಯಾಪಾರ (4)
7.ಮಾಡಿದ ತಪ್ಪು ಕೆಲಸಕ್ಕಾಗಿ ಮರುಗುವಿಕೆ (4)
9.ಗಂಡೂ ಅಲ್ಲದ ಹೆಣ್ಣೂ ಅಲ್ಲದ ವ್ಯಕ್ತಿ (4)
11.ಕನ್ನಡಿಗನಿಗೆ ಸಿಕ್ಕಿರುವ ಟ್ರೈನಿಂಗ್ ! (4)
13.ಪಿತನ ಹತ್ತಿರ ಕ್ಷೌರಿಕನಿದ್ದಾನೆ (3)
15.ಸ್ಮಶಾನವನ್ನು ಹೀಗೂ ಹೇಳುವರು (4)
16.ನೂತನ ದಂಪತಿಗಳು ಕೈಗೊಳ್ಳುವ ವಿಹಾರ ಯಾತೆ (4)

**ಮೇಲಿಂದ ಕೆಳಕ್ಕೆ**

1.ಮಾತನ್ನು ಹೀಗೂ ಹೇಳುವರು (2)
2.ದಾರ ಹಿಡಿದಿರುವ ಮುಖಂಡ (4)
3.ಮನದಿಂದ ಮೂಡಿದ ದ್ವೇಷ! (4)
4.ಜರೂರಾಗಿ ಹಾಕಿದ ಸಹಿ (2)
6.ವ್ಯವಸಾಯಗಾರನ ದುಃಖ (3)
8.ಪತಿಯ ಬಳಿಯಿರುವ ಕಾಲಾಳು (3)
10.ಕನ್ನಡನಾಡನ್ನು ಹೀಗೂ ಕರೆವರು (4)
11.ತಮ್ಮನಿಗೆ ಈ ತರ ತೋರಿದ ಭೇದಭಾವ (4)
12.ಹೆರಿಗೆಯ ಸತ್ತೆ (2)
14.ಸ್ವರ್ಗಾಧಿಪತಿ ಇಲ್ಲಿದ್ದಾನೆ(2)

### 5558ನೇ ಪದಬಂಧದ ಉತ್ತರ

**ಎಡದಿಂದ ಬಲಕ್ಕೆ:**
1.ವಿನಾಯಕ 3.ಮದನಕೈ 5.ಶಯನ 6.ಮಕರಂದ 8.ವಿದಾಯ 10.ನಸುಕು 12.ಸಮರಸ 15.ದುಸ್ತರ 16.ಪರಭಾರೆ 17.ಕುದುಗೋಲು

**ಮೇಲಿಂದ ಕೆಳಕ್ಕೆ:**
1.ವಿರಾಮ 2.ಕಶದ 3.ಮನವಿ 4.ಕೈದಿ 7.ಕರತಾಡನ 9.ಯಮಕಿಂಕರ 11.ಕುದುರೆ 12.ಸರಕು 13.ಸವಾಲು 14.ಜಪ

## ಸುಡೊಕು 5944

| | | | | | | | | |
|---|---|---|---|---|---|---|---|---|
| 7 | | 5 | 9 | | | | 2 | |
| | | | | | 2 | | 9 | |
| 2 | | 9 | 3 | | 1 | 5 | | 4 |
| 9 | | 4 | | | | | | 2 |
| | | | 4 | 6 | 9 | 1 | | |
| | 3 | | | | | 9 | | 6 |
| 4 | | | | | 8 | | 7 | |
| | | 1 | 7 | | | 2 | | 3 |
| 8 | | 2 | | 5 | | | 1 | 9 |

### ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5943 ಸುಡೊಕು

| | | | | | | | | |
|---|---|---|---|---|---|---|---|---|
| 2 | 5 | 4 | 6 | 9 | 1 | 7 | 8 | 3 |
| 6 | 1 | 8 | 4 | 3 | 7 | 9 | 5 | 2 |
| 7 | 3 | 9 | 2 | 5 | 8 | 4 | 6 | 1 |
| 4 | 9 | 1 | 3 | 2 | 5 | 8 | 7 | 6 |
| 3 | 8 | 7 | 1 | 4 | 6 | 5 | 2 | 9 |
| 5 | 2 | 6 | 8 | 7 | 9 | 1 | 3 | 4 |
| 1 | 6 | 5 | 9 | 8 | 2 | 3 | 4 | 7 |
| 9 | 7 | 3 | 5 | 6 | 4 | 2 | 1 | 8 |
| 8 | 4 | 2 | 7 | 1 | 3 | 6 | 9 | 5 |

## ಗುಂಡಣ್ಣ




## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಜನವರಿ 13, 2024

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ:** ಪುಷ್ಯ ಶುಕ್ಲ ದ್ವಿತೀಯ ಗಂ. 11-12 ನಕ್ಷತ್ರ: ಶ್ರವಣ ಗಂ. 12-50 ಯೋಗ: ವಜ್ರ ಗಂ. 10-13 ನಂತರ ಸಿದ್ಧಿ (ಆಸ್ರಿಕ್) ಗಂ. 30-23 ಕರಣ: ಕೌಲವ ಗಂ. 11-12, ಧನು ಮಾಸದ 27 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 1. ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 07-00 ಸೂರ್ಯಾಸ್ತ : 06-18
ಮುಸ್ಲಿಂ ದಿನಾಂಕ : 01 ರಜಬ್ , ದಿನ ವಿಶೇಷ : ಲೋಹ್ರಿ
ಅದೃಷ್ಟ ಸಂಖ್ಯೆ : 12, 4

**ಮೇಷ:** ಅಭಿವೃದ್ಧಿಯ ದಾರಿಗೆ ಕಗ್ಗಂಟುಗಳನ್ನು ಉಂಟುಮಾಡುವ ಸಂಬಂಧಿಕರಲ್ಲಿ ಯಾವುದೇ ವಿಚಾರ ವಿನಿಮಯ ಮಾಡದಿರುವುದು ಉತ್ತಮ. ನಂಬಿಸಿ ಮೋಸ ಮಾಡುವವರ ಬಲೆಗೆ ಬೀಳುವ ಸಾಧ್ಯತೆಗಳಿವೆ.

**ವೃಷಭ:** ರಾಜಕೀಯ ಭವಿಷ್ಯದ ಬಗ್ಗೆ ಪ್ರಭಾವಿ ರಾಜಕಾರಣಿಯೊಂದಿಗೆ ಮಾತುಕತೆ ನಡೆಸಿ. ಮಿತ್ರವೃಂದದಲ್ಲಿ ಹಣಕಾಸಿನ ವಿಚಾರವಾಗಿ ಸಣ್ಣ-ಪುಟ್ಟ ಮಾತುಗಳು ಬರುವುದು ಅಥವಾ ಸಂಬಂಧಕ್ಕೆ ಧಕ್ಕೆ ಉಂಟಾಗಬಹುದು.

**ಮಿಥುನ:** ವ್ಯಾಪಾರಸ್ಥರು ವ್ಯಾಪಾರ ಸ್ಥಳದ ವಿನ್ಯಾಸ ಹೊಸದಾಗಿಡಲೂ ಪ್ರಯತ್ನಿಸಿ. ಅನಗತ್ಯವಾಗಿ ಮಧ್ಯಸ್ಥಿಕೆ ವಹಿಸುವುದು ಸಮಸ್ಯೆಯನ್ನು ಕೈ ಬೀಸಿ ಕರೆದಂತಾಗುತ್ತದೆ. ದೂರ ಪ್ರಯಾಣ ಸಂಭವವಿದೆ.

**ಕರ್ಕಾಟಕ:** ಸಂತೋಷದ ಮನೋಭಾವದಲ್ಲಿರುವ ನೀವು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿರಿ. ಪತಿ –ಪತ್ನಿಯ ಅನ್ಯೋನ್ಯತೆಯ ಕನಸು ನನಸಾಗಲಿದೆ. ಕಾಗದ ಪತ್ರ ನಿರ್ವಹಣೆಯಲ್ಲಿ ಎಚ್ಚರವಹಿಸಿ.

**ಸಿಂಹ:** ದೇವತಾನುಗ್ರದಿಂದ ತುರ್ತು ಕಾರ್ಯಗಳು ಶೀಘ್ರವಾಗಿ ಆಗಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಹಿರಿಯ ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಲಿದೆ. ಚಿನ್ನಾಭರಣಗಳ ಖರೀದಿಯ ಯೋಗವಿದೆ.

**ಕನ್ಯಾ:** ದೈನಂದಿನ ಚಟುವಟಿಕೆಗಳನ್ನು ಹೊರತುಪಡಿಸಿ ವಿಭಿನ್ನ ಪ್ರಯೋಗಗಳಲ್ಲಿ ತೊಡಗಿಸಿಕೊಳ್ಳಿ. ರಾಜಕೀಯದಲ್ಲಿ ಹೆಚ್ಚಿನ ಪ್ರಭಾವ ಹೊಂದಲು ರಾಜಕೀಯ ಧುರೀಣರ ಕೃಪಾಕಟಾಕ್ಷ ಪಡೆದುಕೊಳ್ಳುವಿರಿ.

**ತುಲಾ:** ಸಹವರ್ತಿಗಳಲ್ಲಿ ಸಲಹೆ ಸಹಕಾರಗಳನ್ನು ಕೋರುವುದು ಅನಿವಾರ್ಯ-ವಾಗಲಿದೆ. ಕ್ರೀಡಾಸಕ್ತರಿಗೆ ಅಥವಾ ಕ್ರೀಡಾಪಟುಗಳಿಗೆ ಶುಭದಾಯಕವಾದ ದಿನ. ವೈವಾಹಿಕ ಸಂಬಂಧಿ ಮಾತುಕತೆಗಳು ಇಂದು ಫಲ ನೀಡಲಿವೆ.

**ವೃಶ್ಚಿಕ:** ಮಹತ್ವದ ನಿರ್ಧಾರಗಳನ್ನು ಕೈಗೊಳ್ಳಲು ಕಾದು ನೋಡುವ ತಂತ್ರ ಅನುಸರಿಸುವುದು ಸೂಕ್ತ. ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ ಉಂಟಾಗುವುದು. ಕಲ್ಪನಾಶಕ್ತಿ ಇಂದು ಚುರುಕಾಗಿ ಕೆಲಸ ಮಾಡಲಿದೆ.

**ಧನು:** ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಹೆಚ್ಚಿನ ಜನ ಮನ್ನಣೆ ಲಭ್ಯವಾಗುವುದು. ಕೆಲಸ ಕಾರ್ಯಗಳಲ್ಲಿ ಕಷ್ಟಗಳು ಎದುರಾಗಬಹುದು, ಹಾಗೆಂದು ಕರ್ತವ್ಯವನ್ನು ನಿರ್ಲಕ್ಷಿಸಬೇಡಿ.

**ಮಕರ:** ಯಶಸ್ಸಿನ ಕೆಲಸಗಳಿಗೆ ಹಿಂದಿನ ನಿಮ್ಮ ಸೋಲು ನಿಮ್ಮನ್ನು ಬಾಧಿಸುತ್ತಿರುವುದರ ಜತೆಯಲ್ಲಿ ಇಂದಿನ ಉತ್ಸಾಹದಲ್ಲಿ ಕೊರತೆ ಎದ್ದು ಕಾಣಲಿದೆ. ಎಲ್ಲಾ ಕೆಲಸಗಳೂ ಉತ್ತಮ ಉದ್ದೇಶವನ್ನೇ ಹೊಂದಿರುವುದು.

**ಕುಂಭ:** ದೇಹದಲ್ಲಿ ಅಧಿಕ ಉಷ್ಣಾಂಶದ ಪರಿಣಾಮದಿಂದಾಗಿ ಅನಾರೋಗ್ಯ ಉಂಟಾಗಬಹುದು. ಸಿನಿಮಾ ರಂಗದಲ್ಲಿ ಕಿರುತೆರೆಯಲ್ಲಿ ಅಭಿನಯಿಸಲು ಅವಕಾಶ ಲಭಿಸುವುದು. ಅನನ್ಯ ಭಕ್ತಿಯಿಂದ ಮಲ್ಲಿಕಾರ್ಜುನನನ್ನು ಆರಾಧಿಸಿ.

**ಮೀನ:** ಭಾವನೆಗಳನ್ನು ಆತ್ಮೀಯರಲ್ಲಿ ಹಂಚಿಕೊಳ್ಳಲು ಸೂಕ್ತವಾದ ಸಮಯ. ಯಾವುದು ಸರಿ ಯಾವುದು ತಪ್ಪು ತೀರ್ಮಾನಕ್ಕೆ ಬರುವುದು ಕಷ್ಟಕರವಾದ ವಿಚಾರ. ಕಾರ್ಯ ಸಿದ್ಧಿಯಾಗುವುದು.

### ಷೇರುಪೇಟೆ ವಹಿವಾಟು 847




### ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 21,647 |
| ಇಂದಿನ ಅಂತ್ಯ | 21,894 |
| ▲ | 247 |
| ದಿನದ ಗರಿಷ್ಠ | 21,928 |

### ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹565 |
| 12 ಮೊಟ್ಟೆಗೆ | ₹75 |
| ಮೈಸೂರು | |
| 100 ಮೊಟ್ಟೆಗೆ | ₹565 |

### ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹910 (905) |
| ಸೂರ್ಯಕಾಂತಿ (ರಿಫೈನ್ಡ್) | ₹935 (930) |
| ಪಾಮೋಲಿನ್ | ₹848 (840) |

### ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹216-478 |
| ದ್ವಿತಳಿ (ಬಿ.ವಿ) | ₹225-580 |

### ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹153.50 |
| ಆರ್‌ಎಸ್‌ಎಸ್-5 | ₹148.50 |
| ಗುಡ್ ಲಾಟ್ | ₹131.50 |

### ವಿನಿಮಯ ದರ

| | |
|---|---|
| $ ಡಾಲರ್ | 82.95 |
| £ ಪೌಂಡ್ | 105.74 |
| € ಯುರೊ | 90.90 |
| ¥ ಯೆನ್ (100ಕ್ಕೆ) | 57 |

### ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ಅರಸೀಕೆರೆ | ₹9000-9850 |
| ತಿಪಟೂರು | ₹8500-10000 |
| ತುರುವೇಕೆರೆ | ₹9800-9800 |

# ಇನ್ಫೊಸಿಸ್, ಟಿಸಿಎಸ್ ಷೇರು ಜಿಗಿತ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದ ವರದಿ ಬಿಡುಗಡೆಯಾದ ಬೆನ್ನಲ್ಲೇ ಶುಕ್ರವಾರ ಇನ್ಫೊಸಿಸ್ ಷೇರಿನ ಮೌಲ್ಯ ಶೇ 8ರಷ್ಟು ಏರಿಕೆಯಾಗಿದ್ದರೆ, ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ಷೇರಿನ ಮೌಲ್ಯ ಶೇ 4ರಷ್ಟು ಹೆಚ್ಚಳವಾಗಿದೆ.

ಇನ್ಫೊಸಿಸ್ ಮಾರುಕಟ್ಟೆ ಮೌಲ್ಯ ₹6,69,135 ಕೋಟಿಗೆ ತಲುಪಿದೆ. ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ₹48,652 ಕೋಟಿ ಸೇರ್ಪಡೆಯಾಗಿದೆ.

ಸೆನ್ಸೆಕ್ಸ್‌ನಲ್ಲಿ ಕಂಪನಿಯ ಷೇರಿನ ಮೌಲ್ಯ ಶೇ 7.84ರಷ್ಟು ಹೆಚ್ಚಾಗಿದ್ದು, ಪ್ರತಿ ಷೇರಿನ ಬೆಲೆ ₹1,612ಕ್ಕೆ ಮುಟ್ಟಿದೆ. ಆರಂಭಿಕ ವಹಿವಾಟಿನಲ್ಲಿ ಷೇರಿನ ಮೌಲ್ಯವು ಶೇ 8ರಷ್ಟು ಏರಿಕೆಯಾಗಿತ್ತು. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 8ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹1,615 ಆಗಿದೆ.

**ಟಿಸಿಎಸ್ ₹53,239 ಕೋಟಿ ಗಳಿಕೆ:** ಷೇರಿನ ಮೌಲ್ಯ ಏರಿಕೆ ಕಂಡಿದ್ದರಿಂದ ಟಿಸಿಎಸ್ ಮಾರುಕಟ್ಟೆ ಮೌಲ್ಯವು ₹14,20,333 ಕೋಟಿಗೆ ತಲುಪಿದೆ. ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹53,239 ಕೋಟಿ ಸೇರ್ಪಡೆಯಾಗಿದೆ.

ಬಿಎಸ್‌ಇಯಲ್ಲಿ ಟಿಸಿಎಸ್‌ನ ಷೇರಿನ ಮೌಲ್ಯ ಶೇ 3.89ರಷ್ಟು ಏರಿಕೆಯಾಗಿದೆ. ಪ್ರತಿ ಷೇರಿನ ಬೆಲೆ ₹3,881ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 3.91ರಷ್ಟು ಏರಿಕೆ ಕಂಡಿದ್ದು, ಪ್ರತಿ ಷೇರಿನ ಬೆಲೆ ₹3,881 ಆಗಿದೆ.

## ಸೆನ್ಸೆಕ್ಸ್ 847, ನಿಫ್ಟಿ 247 ಅಂಶ ಏರಿಕೆ

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 847 ಅಂಶ (ಶೇ 1.18) ಏರಿಕೆ ಕಂಡು, 72,568 ಅಂಶಗಳಿಗೆ ಸ್ಥಿರಗೊಂಡಿತು. ದಿನದ ವಹಿವಾಟಿನಲ್ಲಿ 999 ಅಂಶ ಏರಿಕೆಯಾಗಿ ಸಾರ್ವಕಾಲಿಕ ಗರಿಷ್ಠವಾದ 72,720ಕ್ಕೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 247 ಅಂಶ (ಶೇ1.14) ಏರಿಕೆಯಾಗಿ, 21,894ರಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು.

ಮಾರುಕಟ್ಟೆಯ ನಾಲ್ಕು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹6.68 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

ಟೆಕ್ ಮಹೀಂದ್ರ, ಎಚ್‌ಸಿಎಲ್ ಟೆಕ್ನಾಲಜೀಸ್, ವಿಪ್ರೊ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಲಾರ್ಸನ್ ಆ್ಯಂಡ್ ಟೂಬ್ರೊ ಷೇರುಗಳು ಗಳಿಕೆ ಕಂಡಿವೆ. ಬಜಾಜ್ ಫಿನ್‌ಸರ್ವ್, ಪವರ್‌ಗ್ರಿಡ್, ಅಲ್ಟ್ರಾಟೆಕ್ ಸಿಮೆಂಟ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ ಇಳಿಕೆ ಕಂಡಿವೆ.

ಬ್ರೆಂಟ್ ಕಚ್ಚಾ ತೈಲ ಶೇ 2.49ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್ 79.34 ಡಾಲರ್‌ನಂತೆ ಮಾರಾಟವಾಯಿತು.

**ರೂಪಾಯಿಗೆ ಬಲ:** ದೇಶೀಯ ಷೇರುಯಲ್ಲಿನ ಏರಿಕೆಯಿಂದಾಗಿ ಡಾಲರ್ ಎದುರು ರೂಪಾಯಿ ಮೌಲ್ಯವು ಗುರುವಾರದ ವಹಿವಾಟಿಗೆ ಹೋಲಿಸಿದರೆ ಶುಕ್ರವಾರ 6 ಪೈಸೆ ಏರಿಕೆ ಕಂಡು, ₹82.95ಕ್ಕೆ ವಿನಿಮಯಗೊಂಡಿದೆ.

### ಖಾಸಗಿ ವಲಯದ ಚಂದಾದಾರರ ಸಂಖ್ಯೆ 55 ಲಕ್ಷಕ್ಕೆ ಹೆಚ್ಚಿಸಲು ಕ್ರಮ: ಪಿಎಫ್‌ಆರ್‌ಡಿಎ

# ಎನ್‌ಪಿಎಸ್ ಹೂಡಿಕೆ: ಸ್ತ್ರೀಯರ ನಿರಾಸಕ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಪಿಂಚಣಿ ಯೋಜನೆಯಡಿ (ಎನ್‌ಪಿಎಸ್) ಖಾಸಗಿ ವಲಯದ 51 ಲಕ್ಷ ಚಂದಾದಾರರಿದ್ದಾರೆ. 2023–24ನೇ ಹಣಕಾಸು ವರ್ಷದ ಅಂತ್ಯಕ್ಕೆ ಚಂದಾದಾರರನ್ನು 55 ಲಕ್ಷಕ್ಕೆ ಹೆಚ್ಚಿಸಲು ನಿರ್ಧರಿಸಲಾಗಿದೆ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ (ಪಿಎಫ್‌ಆರ್‌ಡಿಎ) ತಿಳಿಸಿದೆ.

‘2023ರ ಡಿಸೆಂಬರ್ 23ರವರೆಗೆ ಖಾಸಗಿ ವಲಯದ ಎನ್‌ಪಿಎಸ್ ನಿರ್ವಹಣಾ ಸಂಪತ್ತಿನ ಮೌಲ್ಯವು (ಎಯುಎಂ) ₹2.04 ಲಕ್ಷ ಕೋಟಿ ಇದೆ. ಹಣಕಾಸು ವರ್ಷದ ಅಂತ್ಯಕ್ಕೆ ₹2.20 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ’ ಎಂದು ಪಿಎಫ್‌ಆರ್‌ಡಿಎ ಅಧ್ಯಕ್ಷ ಡಾ.ದೀಪಕ್ ಮೊಹಂತಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

**ಅಂಕಿ-ಅಂಶಗಳು**

**6.99** ಕೋಟಿ
ಎನ್‌ಪಿಎಸ್ ಮತ್ತು ಅಟಲ್ ಪಿಂಚಣಿ ಯೋಜನೆಯ ಚಂದಾದಾರರು

**51** ಲಕ್ಷ
ಖಾಸಗಿ ವಲಯದ ಎನ್‌ಪಿಎಸ್ ಚಂದಾದಾರರು

**₹10.85** ಲಕ್ಷ ಕೋಟಿ
ನಿರ್ವಹಣಾ ಸಂಪತ್ತಿನ ಒಟ್ಟು ಮೌಲ್ಯ
(2023ರ ಡಿಸೆಂಬರ್ 23ರವರೆಗೆ)

ಪಿಂಚಣಿ ಮತ್ತು ಹೂಡಿಕೆ ಬಗ್ಗೆ ಮಹಿಳೆಯರಲ್ಲಿ ಆಸಕ್ತಿ ಕಡಿಮೆಯಿದೆ. ಎನ್‌ಪಿಎಸ್ ಚಂದಾದಾರರ ಪೈಕಿ ಶೇ 21.2ರಷ್ಟು ಮಹಿಳೆಯರಿದ್ದಾರೆ. ಹಾಗಾಗಿ, ಸ್ತ್ರೀಯರಲ್ಲಿ ಪಿಂಚಣಿ ಮಹತ್ವ ಕುರಿತು ಅರಿವು ಮೂಡಿಸಲು ಪ್ರಾಧಿಕಾರವು ದೇಶದಾದ್ಯಂತ ಜಾಗೃತಿ ಅಭಿಯಾನ ಹಮ್ಮಿಕೊಂಡಿದೆ ಎಂದರು.

ಎನ್‌ಪಿಎಸ್ ಹಣವನ್ನು ಷೇರು ಮಾರುಕಟ್ಟೆ, ಸಾಲ ಪತ್ರಗಳು, ಸರ್ಕಾರಿ ಬಾಂಡ್‌ಗಳು, ಕಾರ್ಪೊರೇಟ್ ಬಾಂಡ್‌ಗಳಲ್ಲಿ ಹೂಡಿಕೆ ಮಾಡಲಾಗುತ್ತದೆ. ಕಳೆದ ಮೂರು ವರ್ಷಗಳಲ್ಲಿ ವಾರ್ಷಿಕವಾಗಿ ಸರಾಸರಿ ಶೇ17ರಷ್ಟು ಗಳಿಕೆ ಕಂಡಿದೆ ಎಂದು ತಿಳಿಸಿದರು.

ಚಂದಾದಾರರ ಸಂಖ್ಯೆ ಹೆಚ್ಚಿಸುವುದಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಕೃತ ಬ್ಯಾಂಕ್‌ಗಳು, ವ್ಯಾಪಾರಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಡಿಜಿಟಲ್ ಮಾಧ್ಯಮ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲೂ ಅರಿವು ಮೂಡಿಸಲಾಗುತ್ತಿದೆ ಎಂದು ತಿಳಿಸಿದರು.

**ಗ್ರಾಮೀಣ ಬ್ಯಾಂಕ್‌ನಲ್ಲೂ ನೋಂದಣಿಗೆ ಅವಕಾಶ:** ಗ್ರಾಮೀಣರಿಗೂ ಎನ್‌ಪಿಎಸ್ ಸೌಲಭ್ಯ ಸಿಗಬೇಕಿದೆ. ಹಾಗಾಗಿ, ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳಲ್ಲೂ ಎನ್‌ಪಿಎಸ್ ನೋಂದಣಿ ಆರಂಭಿಸುವುದಕ್ಕೆ ಸಂಬಂಧಿಸಿದಂತೆ ಬ್ಯಾಂಕ್‌ಗಳ ಮುಖ್ಯಸ್ಥರ ಜೊತೆಗೆ ಚರ್ಚಿಸಲಾಗಿದೆ ಎಂದು ಮೊಹಂತಿ ತಿಳಿಸಿದರು.

ಅಸಂಘಟಿತ ಕಾರ್ಮಿಕರಿಗೆ ರೂಪಿಸಿರುವ ಅಟಲ್ ಪಿಂಚಣಿ ಯೋಜನೆಯನ್ನೂ ಗ್ರಾಮೀಣ ಬ್ಯಾಂಕ್‌ಗಳ ಮೂಲಕ ಅನುಷ್ಠಾನಕ್ಕೆ ಕ್ರಮವಹಿಸಲಾಗಿದೆ ಎಂದರು.

## ತೆರಿಗೆ ವಿನಾಯಿತಿ ಸೌಲಭ್ಯ

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಸಿಸಿಡಿ(1ಬಿ) ಅಡಿಯಲ್ಲಿ ₹50 ಸಾವಿರದವರೆಗೆ ಎನ್‌ಪಿಎಸ್‌ನಲ್ಲಿ ಹೂಡಿಕೆ ಮಾಡಬಹುದು. ಸದ್ಯ ಹಳೆಯ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡಿರುವ ಖಾಸಗಿ ವಲಯದ ಉದ್ಯೋಗಿಗಳು ತಮ್ಮ ವೇತನದ ಶೇ 10ರಷ್ಟನ್ನು (ಮೂಲ ವೇತನ ಮತ್ತು ಡಿ.ಎ ಸೇರಿ) ಎನ್‌ಪಿಎಸ್‌ನಲ್ಲಿ ಹೂಡಿಕೆಗೆ ಅವಕಾಶವಿದೆ ಎಂದು ಮೊಹಂತಿ ಹೇಳಿದರು.

ಉದ್ಯೋಗಿಗಳ ವೇತನದಲ್ಲಿ ಶೇ 12ರಷ್ಟು ಭವಿಷ್ಯ ನಿಧಿ ಕಡಿತವಾಗುತ್ತದೆ. ಹಾಗಾಗಿ, ಎನ್‌ಪಿಎಸ್‌ನಲ್ಲಿಯೂ ವೇತನದ ಶೇ 12ರಷ್ಟನ್ನು ಹೂಡಿಕೆಗೆ ಅವಕಾಶ ಕಲ್ಪಿಸುವಂತೆ ನೌಕರರ ಭವಿಷ್ಯ ನಿಧಿ ಸಂಘಟನೆಗೆ (ಇಪಿಎಫ್‌ಒ) ಕೋರಲಾಗಿದೆ. ಇದರಿಂದ ಉದ್ಯೋಗಿಗಳಿಗೆ ಹೆಚ್ಚಿನ ತೆರಿಗೆ ವಿನಾಯಿತಿ ಸೌಲಭ್ಯ ಸಿಗಲಿದೆ ಎಂದರು.

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 1000-1100 |
| ನಡುಗೋಲು | 1250-1300 |
| ರಾಶಿ | 1350-1400 |
| ರಾಶಿ ಉತ್ತಮ | 1450-1500 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1300-1400 |
| ಹಸಿರು ಉತ್ತಮ | 1800-1850 |
| ಹಸಿರು ಅತಿ ಉತ್ತಮ | 2200-2300 |
| ಕಾಳು ಮೆಣಸು | 580 |
| **ಅಡಿಕೆ** | |
| **ಬಂಟ್ವಾಳ** | |
| ಕೋಕ | 18000-28500 |
| ಹೊಸತು | 28500-37000 |
| ಹಳತು | 42000-44500 |
| **ಕಾರ್ಕಳ** | |
| ಹೊಸತು | 25000-37000 |
| ಹಳತು | 30000-44500 |
| **ಕುಮಟ** | |
| ಚಿಪ್ಪು | 26899-32999 |
| ಕೋಕ | 20109-32019 |
| ಫ್ಯಾಕ್ಟರಿ | 11609-23299 |
| ಹಳೆಚಾಲಿ | 37299-38999 |
| ಹೊಸಚಾಲಿ | 33299-35899 |
| **ಶಿವಮೊಗ್ಗ** | |
| ಬೆಟ್ಟೆ | 26069-55109 |
| ಗೊರಬಲು | 16009-37909 |
| ರಾಶಿ | 34779-49519 |
| ಸರಕು | 46000-82296 |
| **ಸಿದ್ದಾಪುರ** | |
| ಬಿಳಿಗೋಟು | 31319-33499 |
| ಚಾಲಿ | 37419-40099 |
| ಕೋಕ | 30899-33300 |
| ಹೊಸಚಾಲಿ | 32099-34099 |
| ಕೆಂಪುಗೋಟು | 30099-33199 |
| ರಾಶಿ | 46269-49199 |
| ತಟ್ಟಿಬೆಟ್ಟೆ | 41222-48399 |
| **ಶಿರಸಿ** | |
| ಬೆಟ್ಟೆ | 38299-45499 |
| ಬಿಳಿಗೋಟು | 28199-35100 |
| ಚಾಲಿ | 37108-40881 |
| ಕೆಂಪುಗೋಟು | 28618-34799 |
| ರಾಶಿ | 43208-48849 |
| **ಯಲ್ಲಾಪುರ** | |
| ಅಪಿ | 56899-66369 |
| ಬಿಳಿಗೋಟು | 23899-35499 |
| ಚಾಲಿ | 36001-40709 |
| ಕೋಕ | 17310-32412 |
| ಕೆಂಪುಗೋಟು | 24899-37719 |
| ರಾಶಿ | 47000-55099 |
| ತಟ್ಟಿಬೆಟ್ಟೆ | 38099-46869 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | - | 14100 | - | 184.75 |
| ಎಸಿ | - | 7800 | - | |
| ಆರ್‌ಪಿ | - | 11800 | - | ಲಂಡನ್ |
| ಆರ್‌ಸಿ | - | 7000 | - | 2938 ಡಾಲರ್ಸ್ |

### ಮುಂಬೈ ಧಾರಣೆ

**ಶೇಂಗಾ**

12-01-2024

| | |
|---|---|
| ಜಾವಾ 70/80(ಹೊಸ) | 12000-12100 |
| ಜಾವಾ 80/90(ಹೊಸ) | 11300-11400 |
| ದಪ್ಪ ಮಧ್ಯಪ್ರದೇಶ(ಹೊಸ) | 9900-10000 |
| ದಪ್ಪ ಗುಜರಾತ್(ಹೊಸ) | 10700-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಸೋಯಾ ಕಚ್ಚಾ | 880 (860) |
| ಪಾಮ್ ವಾರದ ಡೆಲಿವರಿ | 846 (837) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 875 (845) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

ಅಪರಂಜಿ ಚಿನ್ನ 10ಗ್ರಾಂ
62,250 (62,050)
ಬೆಳ್ಳಿ ಕೆ.ಜಿ 71,600 (71,550)

**ಆವರಣದಲ್ಲಿ ಹಿಂದಿನ ದಿನದ ಧಾರಣೆ**

ಸುಧಾ, ಮಯೂರ ಓದಿ

## ಕೆಐಎ: 3.72 ಕೋಟಿ ಪ್ರಯಾಣಿಕರ ಸಂಚಾರ

ದೇವನಹಳ್ಳಿ: 2023ನೇ ಸಾಲಿನಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ (ಕೆಐಎ) 3.72 ಕೋಟಿ ಪ್ರಯಾಣಿಕರು ಸಂಚಾರ ಮಾಡಿದ್ದಾರೆ. 2022ಕ್ಕೆ ಹೋಲಿಸಿದರೆ ಶೇ 35ರಷ್ಟು ಏರಿಕೆ ಕಂಡಿದೆ ಎಂದು ವಿಮಾನ ನಿಲ್ದಾಣದ ಪ್ರಕಟಣೆ ತಿಳಿಸಿದೆ.

3.27 ಕೋಟಿ ಪ್ರಯಾಣಿಕರು ದೇಶೀಯವಾಗಿ ಮತ್ತು 45 ಲಕ್ಷ ಪ್ರಯಾಣಿಕರು ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಯಾಣಿಸಿದ್ದಾರೆ. ಏಪ್ರಿಲ್ 29ರಂದು ಒಂದೇ ದಿನ 1.16 ಲಕ್ಷ ಮಂದಿ ಪ್ರಯಾಣಿಸಿರುವುದು ದಾಖಲೆಯಾಗಿದೆ. ಸರಕು ಸಾಗಣೆ ಕೇಂದ್ರವಾಗಿ ಬೆಂಗಳೂರು ವಿಮಾನ ನಿಲ್ದಾಣ ವೇಗವಾಗಿ ಬಲವರ್ಧನೆಗೊಳ್ಳುತ್ತಿದೆ. 53,751 ಮೆಟ್ರಿಕ್ ಟನ್ ಸರಕು ಸಾಗಣೆ ಮಾಡುವ ಮೂಲಕ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿ ಮುಂದುವರಿದಿದೆ ಎಂದು ಮಾಹಿತಿ ನೀಡಿದೆ.

# ಡಿಸೆಂಬರ್‌ನಲ್ಲಿ ಚಿಲ್ಲರೆ ಹಣದುಬ್ಬರ ಏರಿಕೆ

### 4 ತಿಂಗಳ ಗರಿಷ್ಠ ಮಟ್ಟದಲ್ಲಿ ದಾಖಲು: ಆಹಾರ ಪದಾರ್ಥಗಳ ದರ ಹೆಚ್ಚಳ

ನವದೆಹಲಿ (ಪಿಟಿಐ): 2023ರ ಡಿಸೆಂಬರ್‌ನಲ್ಲಿ ದೇಶದ ಚಿಲ್ಲರೆ ಹಣದುಬ್ಬರವು ಶೇ 5.69ರಷ್ಟು ಏರಿಕೆಯಾಗಿದ್ದು, ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ತಲುಪಿದೆ.

ತರಕಾರಿಗಳು, ಬೇಳೆ ಮತ್ತು ಸಾಂಬಾರು ಪದಾರ್ಥಗಳ ಬೆಲೆ ಏರಿಕೆಯೇ ಇದಕ್ಕೆ ಕಾರಣವಾಗಿದೆ ಎಂದು ಸರ್ಕಾರದ ಅಂಕಿ ಅಂಶಗಳು ತಿಳಿಸಿವೆ.

ಗ್ರಾಹಕರ ದರ ಸೂಚ್ಯಂಕ (ಸಿಪಿಐ) ಆಧಾರಿತ ಚಿಲ್ಲರೆ ಹಣದುಬ್ಬರವು ನವೆಂಬರ್‌ನಲ್ಲಿ ಶೇ5.55ರಷ್ಟು ಏರಿಕೆಯಾಗಿತ್ತು. 2022ರ ಡಿಸೆಂಬರ್‌ನಲ್ಲಿ ಶೇ 5.72ರಷ್ಟು ದಾಖಲಾಗಿತ್ತು.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ಅಂಕಿಅಂಶದ ಪ್ರಕಾರ ಆಹಾರ ಪದಾರ್ಥಗಳ ಹಣದುಬ್ಬರವು 2022ರ ಡಿಸೆಂಬರ್‌ನಲ್ಲಿ ಶೇ 4.9ರಷ್ಟಿತ್ತು. 2023ರ ಡಿಸೆಂಬರ್‌ನಲ್ಲಿ ಶೇ 9.53ರಷ್ಟು ಏರಿಕೆ ಕಂಡಿದೆ.

ವಾರ್ಷಿಕವಾಗಿ ತರಕಾರಿ ಬೆಲೆಯು ಶೇ27.64ರಷ್ಟು ಏರಿಕೆಯಾಗಿದೆ. ಬೇಳೆಗಳ ದರ ಶೇ20.73 ಮತ್ತು ಸಾಂಬಾರು ಪದಾರ್ಥಗಳ ಬೆಲೆಯು ಶೇ 19.69ರಷ್ಟು ಏರಿಕೆಯಾಗಿದೆ. ಆದಾಗ್ಯೂ, ಖಾದ್ಯ ತೈಲ ಮತ್ತು ಕೊಬ್ಬಿನಾಂಶ ಇರುವ ಉತ್ಪನ್ನಗಳ ದರವು ಶೇ14.96ರಷ್ಟು ಕಡಿಮೆಯಾಗಿದೆ. ಹಣದುಬ್ಬರವು ಗ್ರಾಮೀಣ ಮಟ್ಟದಲ್ಲಿ ಶೇ5.93ರಷ್ಟು ಹಾಗೂ ನಗರ ಮಟ್ಟದಲ್ಲಿ ಶೇ 5.46ರಷ್ಟಿದೆ. ಆದರೆ, ನಗರಕ್ಕೆ ಹೋಲಿಸಿದರೆ ಗ್ರಾಮೀಣ ಪ್ರದೇಶದಲ್ಲಿ ಆಹಾರ ಪದಾರ್ಥಗಳ ಬೆಲೆ ಕಡಿಮೆ ಇದೆ.

## ಕೈಗಾರಿಕಾ ಉತ್ಪಾದನೆ 8 ತಿಂಗಳ ಕನಿಷ್ಠ

ದೇಶದ ಕೈಗಾರಿಕಾ ವಲಯದ ಉತ್ಪಾದನೆಯು ನವೆಂಬರ್‌ನಲ್ಲಿ ಶೇ 2.4ರಷ್ಟು ಆಗಿದ್ದು, ಎಂಟು ತಿಂಗಳ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ತಯಾರಿಕೆ, ವಿದ್ಯುತ್ ಮತ್ತು ಗಣಿ ವಲಯದ ಬೆಳವಣಿಗೆಯಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣವಾಗಿದೆ.

2022ರ ನವೆಂಬರ್‌ನಲ್ಲಿ ಶೇ 7.6ರಷ್ಟು ದಾಖಲಾಗಿತ್ತು. 2023ರ ಮಾರ್ಚ್‌ನಲ್ಲಿ ಬೆಳವಣಿಗೆಯು ಶೇ 1.9ರಷ್ಟು ಕನಿಷ್ಠ ಮಟ್ಟಕ್ಕೆ ಇಳಿದಿತ್ತು. ತಯಾರಿಕಾ ವಲಯದ ಬೆಳವಣಿಗೆಯು ಕಳೆದ ವರ್ಷದ ನವೆಂಬರ್‌ನಲ್ಲಿ ಶೇ 6.7ರಷ್ಟು ಇದ್ದಿದ್ದು ಶೇ 1.2ರಷ್ಟು ಇಳಿಕೆಯಾಗಿದೆ. ವಿದ್ಯುತ್ ವಲಯದ ಬೆಳವಣಿಗೆಯು ಶೇ 12.7ರಿಂದ ಶೇ 5.8ಕ್ಕೆ ಕುಸಿದಿದೆ.

ಗಣಿ ಉತ್ಪಾದನಾ ವಲಯದ ಬೆಳವಣಿಗೆಯು ಶೇ 9.7ರಿಂದ ಶೇ 6.8ಕ್ಕೆ ಇಳಿಕೆಯಾಗಿದೆ. ಬಂಡವಾಳ ಸರಕುಗಳ ಬೆಳವಣಿಗೆಯು ಶೇ 20.7ರಿಂದ ಶೇ 1.1ಕ್ಕೆ ಇಳಿಕೆಯಾಗಿದೆ. ಮೂಲಸೌಕರ್ಯ ಮತ್ತು ತಯಾರಿಕಾ ಸರಕುಗಳ ಬೆಳವಣಿಗೆಯು ಶೇ 14.3ರಿಂದ ಶೇ 1.5ಕ್ಕೆ ಕುಸಿದಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಹೃತ್ಪೂರ್ವಕ ಶ್ರದ್ಧಾಂಜಲಿ

ಶ್ರೀ. ನಾರಾಯಣ ಮೂರ್ತಿ
ಸಂಸ್ಥಾಪಕರು – ಜ್ಞಾನ ದೀಪ್ತಿ ಎಜುಕೇಶನ್ ಟ್ರಸ್ಟ್, ಗಿರಿನಗರ
ಇವರು ದಿನಾಂಕ 11.01.2024 ರಂದು ನಮ್ಮನ್ನು ಅಗಲಿದರು
ಶಿಕ್ಷಣ ಕ್ಷೇತ್ರದಲ್ಲಿ ಮಹತ್ವದ ಪ್ರಭಾವ ಬೀರಿದ ಇಂತಹ ಅಸಾಧಾರಣ ವಿದ್ಯಾಪರಿಣಿತರು ನಮ್ಮನ್ನು ಅಗಲಿರುವುದರಿಂದ ನಮ್ಮೆಲ್ಲರಿಗೆ ಅತೀವ ದುಃಖವಾಗಿದೆ. ಅವರ ಪರಿಶ್ರಮ ಮತ್ತು ಉತ್ಸಾಹವು, ಶಿಕ್ಷಣ ಜಗತ್ತಿನಲ್ಲಿ ಅಚ್ಚಳಿಯದ ಪ್ರಭಾವವನ್ನು ಬೀರಿದೆ.
ಮ್ಯಾನೇಜ್‌ಮೆಂಟ್ ಕಮಿಟಿ ಮತ್ತು ಸಿಬ್ಬಂದಿವರ್ಗ:
ಎಸ್. ಎಸ್. ಬಿ. ಎಜುಕೇಶನ್ ಸೊಸೈಟಿ
ಇಂದಿರಾನಗರ, ಬೆಂಗಳೂರು – 560038

ಮೊದಲನೇ ವರ್ಷದ ಪುಣ್ಯತಿಥಿ

ಶ್ರೀ ಪಿ ಸಿ ಶೇಖರ್
22-05-1960 – 13-01-2023
(ಶ್ರೀ ಆರ್ ಪರಮಶಿವಣ್ಣನವರ ದ್ವಿತೀಯ ಪುತ್ರ )
ಮೆ॥ ವಿಜಯ ಎಂಟರ್‌ಪ್ರೈಸಸ್
ಬೆಂಗಳೂರು ಮತ್ತು
ಆರ್ ಪರಮಶಿವಣ್ಣ ಅಂಡ್ ಕಂ., ಮೈಸೂರು
ಸದಾ ನಿಮ್ಮದೇ
ನೆನಪಿನಲ್ಲಿರುವ ಕುಟುಂಬದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

**ಉದ್ಯೋಗಾವಕಾಶ**

**General**

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೆಂಗಳೂರಿನಲ್ಲಿ SLVಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18 ರಿಂದ 45) ಊಟ ವಸತಿಯೊಂದಿಗೆ ಟ್ರೇನಿಂಗ ಕೊಟ್ಟು ಸಂಬಳ 12,000/ ರಿಂದ 20,000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆಮಾಡಿ. 7019869181, 9071106371

**Part-Time Jobs**

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663563555/ 9035492999

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

**ವ್ಯಾಪಾರ**

**Business to Business**

**Business**

ದೀಪಶ್ರೀ ಸಿಲ್ಕ್ ಮತ್ತು ಸ್ಯಾರೀಸ್, ಒಂದು ಸೀರೆ ತೆಗೆದುಕೊಂಡಲ್ಲಿ, ಒಂದು ಸೀರೆ ಉಚಿತ, ಸಾಲ ಸೌಲಭ್ಯವು ದೊರೆಯುತ್ತದೆ: 8892501007/ 9606701007

**Business Offers**

**General**

ಹೊಸ ಉದ್ಯಮ ಮಾಡಲು ಇಚ್ಛೆಸಿದ್ದೀರಾ ಹಾಗೂ ಹಳೆಯ ಉದ್ಯಮವನ್ನು ನವೀಕರಿಸಲು ಸಲಹೆ ಸೂಚನೆಗಳಿಗೆ ಸಂಪರ್ಕಿಸಿರಿ. 6361469906, 8310754239, 8618934496

**ಭವಿಷ್ಯ**

**Astrology**

★ಮಹಾಮಾಂತ್ರಿಕ ಜ್ಯೋತಿಷ್ಯ★ ವಿದ್ವಾನ್.ಗುರು ಶ್ರೀ.ದೇವಾನಂದ್ ರವರಿಂದ ಅಂಡ,ಪಿಂಡ,ಬ್ರಹ್ಮಾಂಡದ 100008 ಅತೀಂದ್ರಿಯ 888 ಚಾರಣಮಾರಣ ಸಂಮೋಹನ ಸ್ತಂಭನ,ವಶೀಕರಣ,ಉಚ್ಛಾಟನಾ ಕ್ರಿಯಾಕರ್ಮಗಳಿಂದ ಸಂಸಾರಿಕ ವೈಯಕ್ತಿಕ,ಆರ್ಥಿಕ,ಆರೋಗ್ಯ ಸಂಬಂಧಿಕ ಕರ್ಮಗಳ ಇಂದೇ ಪರಿಹಾರಕ್ಕೆ ಸಂಪರ್ಕಿಸಿ:9845005009

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

**ಪ್ರವಾಸ**

**Travel**

27.01.2024 12.03.2024 12.04.2024 17.05.2024 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 06.02.2024 05.03.2024 ದುಬೈ,ಅಬುದಾಬಿ 5 ದಿನಗಳು. 15.03.2024 15.04.2024 21.05.2024 ನೇಪಾಳ 9 ದಿನಗಳು. 06.03.2024 12.04.2024 05.05.2024 ಭೂತಾನ್ 8 ದಿನಗಳು . 05.02.2024 25.03.2024 02.04.2024 ಶ್ರೀಲಂಕಾ 6 ದಿನಗಳು. 02.03.2024 03.04.2024 02.06.2024 ಅಸ್ಸಾಂ,ಮೇಘಾಲಯ 9 ದಿನಗಳು. 17.01.2024 27.02.2024 09.03.2024 ಗುಜರಾತ್ 8 ದಿನಗಳು. 10.02.2024 15.03.2024 ರಾಜಸ್ಥಾನ್ 10 ದಿನಗಳು. 15.03.2024 29.03.2024 16.04.2024 ಕಾಶಿ,ಗಯಾ,ಅಯೋಧ್ಯಾ 7 ದಿನಗಳು. 12.04.2024 06.05.2024 05.06.2024 ಕಾಶ್ಮೀರ್ 6 ದಿನಗಳು. 05.04.2024 25.04.2024 21.05.2024 ಶಿಮ್ಲಾ,ಕುಲುಮನಾಲಿ 8 ದಿನಗಳು. 15.02.2024 26.03.2024 ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.03 9448402248 7022547922

**Pilgrimage Tours**

★ಆರ್.ಗಾಂಧಿ ಟೂರ್ಸ್★ 1.02.2024 13ದಿನಗಳು ಕಾಶಿ ಹರಿದ್ವಾರ, 9ದಿನಗಳು ಆಂಧ್ರ ಭದ್ರಾಚಲಂ. 22.02.2024 10ದಿನಗಳು ಗುಜರಾತ್ ಉಜ್ಜೈನ್,ಓಂಕಾರೇಶ್ವರ. 9945445809/ 9902433500

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...
ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
JOB
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9901641752 | +91 9731810277 | +91 9900428036 |
+91 9886213331 | +91 9845114560 | 080-45557163/164

### ಅಮೆರಿಕದ ಡಿಸಿಎಫ್‌ನಿಂದ ಸಾಲದ ನೆರವು

# ಸೌರಫಲಕ ಘಟಕಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಅಮೆರಿಕದ ಡೆವಲಪ್‌ಮೆಂಟ್ ಫೈನಾನಸ್ ಕಾರ್ಪೊರೇಷನ್ ಸಾಲದ ನೆರವಿನಿಂದ ಚೆನ್ನೈನಲ್ಲಿ ಸ್ಥಾಪಿಸಲಾಗಿರುವ ಸೌರಫಲಕಗಳ ಉತ್ಪಾದನಾ ಘಟಕದ ಉದ್ಘಾಟನೆ ಇತ್ತೀಚೆಗೆ ನಡೆಯಿತು. ತಮಿಳುನಾಡು ಕೈಗಾರಿಕಾ ಸಚಿವ ಟಿ.ಆರ್‌.ಬಿ.ರಾಜಾ, ಭಾರತದಲ್ಲಿ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ, ಚೆನ್ನೈನಲ್ಲಿರುವ ಕಾನ್ಸುಲೇಟ್‌ನ ಕಾನ್ಸುಲ್ ಜನರಲ್ ಕ್ರಿಸ್ಟೋಫರ್ ಹಾಡ್ಜಸ್, ಡಿಸಿಎಫ್ ಸಿಇಒ ಸ್ಕಾಟ್ ನೇಥನ್, ಫರ್ಸ್ಟ್ ಸೋಲಾರ್‌ನ ಕುಂತಲಕುಮಾರ್ ವರ್ಮ, ಐಐಟಿ–ಮದ್ರಾಸ್ ಪ್ರಾಧ್ಯಾಪಕ ಅಶೋಕ್ ಜುಂಜುನ್‌ವಾಲಾ ಹಾಗೂ ಇತರರು ಪಾಲ್ಗೊಂಡಿದ್ದರು

ಚೆನ್ನೈ: ಅಮೆರಿಕದ ಡೆವಲಪ್‌ಮೆಂಟ್ ಫೈನಾನ್ಸ್ ಕಾರ್ಪೊರೇಷನ್‌ನ (ಡಿಎಫ್‌ಸಿ) ನೆರವಿನಲ್ಲಿ ಸ್ಥಾಪಿಸಿರುವ ಸೌರ ಫಲಕಗಳು ಹಾಗೂ ಇತರ ಪರಿಕರಗಳನ್ನು ಉತ್ಪಾದಿಸುವ ಸೌಲಭ್ಯವನ್ನು ಈಚೆಗೆ ಉದ್ಘಾಟಿಸಲಾಯಿತು.

ಉದ್ಘಾಟನೆ ಬಳಿಕ ನಡೆದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಡಿಎಫ್‌ಸಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ಕಾಟ್ ನೇಥನ್, ‘ಈ ಘಟಕ ಸ್ಥಾಪನೆಗೆ ಸಂಸ್ಥೆಯು ₹ 4 ಸಾವಿರ ಕೋಟಿ ಸಾಲ ಒದಗಿಸಿದೆ. ಈ ಹಣಕಾಸು ನೆರವು ಭಾರತವು ಅಮೆರಿಕದ ಪ್ರಮುಖ ಪಾಲುದಾರ ದೇಶ ಎಂಬುದನ್ನು ತೋರಿಸುತ್ತದೆ’ ಎಂದರು.

‘ಡಿಸಿಎಫ್ ನೆರವಿನೊಂದಿಗೆ ಆರಂಭವಾಗಿರುವ ಈ ಘಟಕವು ನಿರ್ಮಾಣ ಹಂತದಲ್ಲಿ 2 ಸಾವಿರ ಉದ್ಯೋಗಗಳನ್ನು ಸೃಷ್ಟಿಸಿತ್ತು. ಈ ಪೈಕಿ ಶೇ 40ರಷ್ಟು ಮಹಿಳೆಯರು ಇದ್ದರು. ಈ ಕ್ರಮವು ಸೌರ ಫಲಕ ಉತ್ಪಾದನೆಯಲ್ಲಿ ಭಾರತ ಸ್ವಾವಲಂಬನೆ ಸಾಧಿಸಲು ನೆರವಾಗಲಿದೆ’ ಎಂದೂ ಹೇಳಿದರು.

‘ಜಗತ್ತಿನ ಹಲವಾರು ನವೋದ್ಯಮಗಳಲ್ಲಿ ಡಿಸಿಎಫ್ ಹೂಡಿಕೆ ಮಾಡಿದೆ. ಭಾರತದ ಖಾಸಗಿ ವಲಯದ ಉದ್ಯಮಗಳಲ್ಲಿಯೂ ಗಮನಾರ್ಹ ಹೂಡಿಕೆ ಮಾಡಿದೆ. ಭಾರತದಲ್ಲಿ ಬಯೋಸಿಮಿಲರ್ ಇನ್ಸುಲಿನ್ ಉತ್ಪಾದಿಸುವುದಕ್ಕಾಗಿ ಜಿನೆಸಿಸ್ ಬಯೋಲಾಜಿಕಲ್ ಕಂಪನಿಗೆ ನೆರವು ನೀಡಿದೆ. ಕಣ್ಣಿನ ಚಿಕಿತ್ಸಾಲಯಗಳ ಸ್ಥಾಪನೆಗೂ ಕೈಜೋಡಿಸಿದೆ’ ಎಂದರು.

ಭಾರತದಲ್ಲಿನ ಅಮೆರಿಕ ರಾಯಭಾರಿ ಎರಿಕ್ ಗಾರ್ಸೆಟ್ಟಿ, ‘ದುಬೈನಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ ‘ಸಿಒಪಿ28’ ಹವಾಮಾನ ಶೃಂಗಸಭೆ ನಿಗದಿಪಡಿಸಿರುವ ಗುರಿಗಳನ್ನು ಸಾಧಿಸಲು ಎಲ್ಲ ರಾಷ್ಟ್ರಗಳು ಶ್ರಮಿಸಬೇಕು’ ಎಂದರು.

‘ಚೆನ್ನೈನಲ್ಲಿ ಸ್ಥಾಪಿಸಲಾಗಿರುವ ಈ ಘಟಕವು ಸೌರಶಕ್ತಿ ವಿದ್ಯುತ್ ಉತ್ಪಾದನೆಗೆ ಸಂಬಂಧಿಸಿ ಉಪಕರಣಗಳ ಆಮದನ್ನು ತಗ್ಗಿಸಲಿದೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಫರ್ಸ್ಟ್ ಸೋಲಾರ್‌ನ ಮುಖ್ಯಸ್ಥ ವಾಣಿಜ್ಯ ಅಧಿಕಾರಿ ಜಾರ್ಜ್ ಅಂತೋನ್ ಇದ್ದರು.

## ‘ಆಕಾಶ್ ಎನ್‌ಜಿ’ ಕ್ಷಿಪಣಿ ಪರೀಕ್ಷಾರ್ಥ ಪ್ರಯೋಗ ಯಶಸ್ವಿ

ನವದೆಹಲಿ(ಪಿಟಿಐ): ಹೊಸ ತಲೆಮಾರಿನ ‘ಆಕಾಶ್ ಎನ್‌ಜಿ’ ಕ್ಷಿಪಣಿಯ ಪರೀಕ್ಷಾರ್ಥ ಪ್ರಯೋಗವನ್ನು ಒಡಿಶಾದ ಚಾಂದಿಪುರದಲ್ಲಿರುವ ಸಮಗ್ರ ಪರೀಕ್ಷಾ ವಲಯದಲ್ಲಿ ಶುಕ್ರವಾರ ಯಶಸ್ವಿಯಾಗಿ ನಡೆಸಲಾಯಿತು ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಈ ಕ್ಷಿಪಣಿಯ ಕಾರ್ಯಾಚರಣೆ ವ್ಯಾಪ್ತಿಯು 80 ಕಿ.ಮೀ. ‘ಕಡಿಮೆ ಎತ್ತರದಲ್ಲಿ ಅತಿ ವೇಗದಿಂದ ಹಾರಾಟ ನಡೆಸುತ್ತಿದ್ದ, ಮಾನವ ರಹಿತ ವೈಮಾನಿಕ ಗುರಿಯನ್ನು ಈ ಕ್ಷಿಪಣಿಯು ಅತ್ಯಂತ ನಿಖರವಾಗಿ ಹೊಡೆದುರುಳಿಸಿತು. ಈ ಕ್ಷಿಪಣಿ ವ್ಯವಸ್ಥೆಯು ದೇಶದ ಸೇನೆಯ ಸಾಮರ್ಥ್ಯವನ್ನು ಮತ್ತಷ್ಟು ಬಲಪಡಿಸಲಿದೆ’ ಎಂದು ಸಚಿವಾಲಯ ತಿಳಿಸಿದೆ.

‘ಈ ಕ್ಷಿಪಣಿಯಲ್ಲಿ, ದೇಶೀಯವಾಗಿ ಅಭಿವೃದ್ಧಿಪಡಿಸಿದ ರೇಡಿಯೊ ತರಂಗಾಂತರ ಸೀಕರ್, ಲಾಂಚರ್, ರಾಡಾರ್ ಮತ್ತು ಕಮಾಂಡ್, ನಿಯಂತ್ರಣ ಮತ್ತು ಸಂವಹನ ವ್ಯವಸ್ಥೆಯನ್ನು ಅಳವಡಿಸಲಾಗಿತ್ತು. ಈ ಎಲ್ಲ ಸಾಧನಗಳನ್ನು ಒಳಗೊಂಡ ಕ್ಷಿಪಣಿ ವ್ಯವಸ್ಥೆಯು ಕ್ರಮಬದ್ಧವಾಗಿದೆ ಎಂಬುದನ್ನು ಈ ಪರೀಕ್ಷಾರ್ಥ ಪ್ರಯೋಗ ಸಾಬೀತುಪಡಿಸಿತು’ ಎಂದು ತಿಳಿಸಿದೆ. ಡಿಆರ್‌ಡಿಒ, ವಾಯುಪಡೆ, ಭಾರತ್ ಡೈನಾಮಿಕ್ಸ್ ಲಿಮಿಟೆಡ್ ಹಾಗೂ ಬಿಇಎಲ್‌ನ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

**ಅಭಿನಂದನೆ:** ‘ಆಕಾಶ್ ಎನ್‌ಜಿ’ ಕ್ಷಿಪಣಿ ವ್ಯವಸ್ಥೆಯ ಪರೀಕ್ಷಾರ್ಥ ಪ್ರಯೋಗ ಯಶಸ್ವಿಯಾಗಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ವಾಯುಪಡೆ ಹಾಗೂ ಯೋಜನೆಯ ಭಾಗವಾಗಿರುವ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಅಭಿನಂದಿಸಿದ್ದಾರೆ.

## ವಿಪ್ರೊ ಲಾಭ ಕುಸಿತ

ನವದೆಹಲಿ (ಪಿಟಿಐ): 2023–24ನೇ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಪ್ರಮುಖ ಐ.ಟಿ ಕಂಪನಿ ವಿಪ್ರೊ ಲಿಮಿಟೆಡ್ ಆದಾಯವು, ಶೇ 11.7ರಷ್ಟು ಕುಸಿತ ಕಂಡಿದೆ.

ಮೂರನೇ ತ್ರೈಮಾಸಿಕದಲ್ಲಿ ಕಂಪನಿಯು ₹2,694.2 ಕೋಟಿ ನಿವ್ವಳ ಲಾಭಗಳಿಸಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ₹3,052.9 ಕೋಟಿ ವರಮಾನ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಆದಾಯ ಕುಸಿತಗೊಂಡಿದೆ ಎಂದು ಕಂಪನಿ ತಿಳಿಸಿದೆ. ಕಂಪನಿಯ ಕಾರ್ಯಾಚರಣಾ ವರಮಾನವು ಪ್ರಸಕ್ತ ಹಣಕಾಸು ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಶೇ 4.4ರಷ್ಟು ಇಳಿಕೆಯಾಗಿದೆ.

**ಎಚ್‌ಸಿಎಲ್ ಲಾಭ ಏರಿಕೆ:** ಡಿಸೆಂಬರ್ ತ್ರೈಮಾಸಿಕದಲ್ಲಿ ಎಚ್‌ಸಿಎಲ್ ಟೆಕ್ ಶೇ 6.2ರಷ್ಟು ಆದಾಯಗಳಿಸಿದೆ. 2022ರ ಡಿಸೆಂಬರ್‌ನಲ್ಲಿ ₹4,096 ಕೋಟಿ ನಿವ್ವಳ ಲಾಭ ಗಳಿಸಿದ್ದ ಕಂಪನಿಯು, 2023ರ ಡಿಸೆಂಬರ್‌ನಲ್ಲಿ ₹4,350 ಕೋಟಿ ಗಳಿಸಿದೆ. 2023ರಲ್ಲಿ ಕಂಪನಿಯಲ್ಲಿ ಉದ್ಯೋಗಿಗಳ ಸಂಖ್ಯೆಯಲ್ಲಿ ಶೇ 1.11ರಷ್ಟು ಹೆಚ್ಚಳವಾಗಿದೆ. 2022ರಲ್ಲಿ 2.22 ಲಕ್ಷವಿದ್ದ ಉದ್ಯೋಗಿಗಳ ಸಂಖ್ಯೆ 2023ರಲ್ಲಿ 2.24 ಲಕ್ಷಕ್ಕೆ ಏರಿದೆ. 3,818 ಉದ್ಯೋಗಿಗಳ ನೇಮಕ ಮಾಡಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

### ರಣಜಿ ಟ್ರೋಫಿ: 264 ರನ್‌ಗಳಿಗೆ ಆಲೌಟ್ ಆದ ಗುಜರಾತ್

# ಮತ್ತೆ ಮಿಂಚಿದ ವೇಗಿ ಕೌಶಿಕ್

ಅಹಮದಾಬಾದ್: ಅಮೋಘ ಬೌಲಿಂಗ್ ಪ್ರದರ್ಶನ ಮುಂದುವರಿಸಿದ ಮಧ್ಯಮ ವೇಗದ ಬೌಲರ್ ವಾಸುಕಿ ಕೌಶಿಕ್ ನಾಲ್ಕು ವಿಕೆಟ್ ಪಡೆದು ಮೊದಲ ದಿನ ಗಮನ ಸೆಳೆದರು. ಅವರ ಪರಿಣಾಮಕಾರಿ ಬೌಲಿಂಗ್ (49ಕ್ಕೆ4) ನೆರವಿನಿಂದ ಕರ್ನಾಟಕ ತಂಡ ರಣಜಿ ಟ್ರೋಫಿ 'ಸಿ' ಗುಂಪಿನ ಪಂದ್ಯದ ಮೊದಲ ದಿನವಾದ ಶುಕ್ರವಾರ ಗುಜರಾತ್ ತಂಡವನ್ನು 264 ರನ್‌ಗಳಿಗೆ ಕಟ್ಟಿಹಾಕಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಬ್ಯಾಟ್ ಮಾಡಲು ಕಳುಹಿಸಲ್ಪಟ್ಟ ಗುಜರಾತ್ 88ನೇ ಓವರ್‌ನಲ್ಲಿ ಆಲೌಟ್ ಆಯಿತು. ಕರ್ನಾಟಕ ಶನಿವಾರ ಮೊದಲ ಇನಿಂಗ್ಸ್ ಆರಂಭಿಸಲಿದೆ.

ಆದರೆ ಕರ್ನಾಟಕ ಆರಂಭದಲ್ಲಿ ಹೊಂದಿದ್ದ ಬಿಗಿಹಿಡಿತವನ್ನು ನಂತರ ಸ್ವಲ್ಪ ಮಟ್ಟಿಗೆ ಕಳೆದುಕೊಂಡಿತು. ಮಧ್ಯಮ ಕ್ರಮಾಂಕದ ಆಟಗಾರರಾದ ಕ್ಷಿತಿಜ್ ಪಟೇಲ್ (95, 111 ಎಸೆತ, 4X11) ಮತ್ತು ಉಮಂಗ್ ಕುಮಾರ್ (72, 143 ಎಸೆತ, 4X12) ಅವರು ತಂಡದ ರಕ್ಷಣೆಗೆ ನಿಂತರು. ತಂಡ ಮತ್ತೆ ಕುಸಿತ ಕಾಣುವಾಗ ನಾಯಕ ಚಿಂತನ್ ಗಜ ಅಜೇಯ 45 ರನ್ (92ಎ, 4x1, 6x3) ಗಳಿಸಿ ತಂಡ 250 ರನ್‌ಗಳ ಗಡಿದಾಟಲು ನೆರವಾದರು. ಇಲ್ಲದಿದ್ದರೆ ಕರ್ನಾಟಕಕ್ಕೆ ಮೊದಲ ದಿನವೇ ಬ್ಯಾಟಿಂಗ್ ಅವಕಾಶ ದೊರೆಯುತಿತ್ತು.

ಗುಜರಾತ್ ಆರಂಭದಲ್ಲೇ ತೊಂದರೆಗೆ ಸಿಲುಕಿಕೊಂಡಿತು. ಪಂಜಾಬ್ ವಿರುದ್ಧದ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಏಳು ವಿಕೆಟ್ ಪಡೆದಿದ್ದ 31 ವರ್ಷದ ಕೌಶಿಕ್, ಆರಂಭ ಆಟಗಾರ ಹೆಟ್ ಪಟೇಲ್ (4) ಮತ್ತು ಸನ್‌ಪ್ರೀತ್ ಸಿಂಗ್ ಬಗ್ಗಾ (0) ಅವರ ವಿಕೆಟ್‌ಗಳನ್ನು ಪಡೆದು ಆತಿಥೇಯರಿಗೆ ಪೆಟ್ಟು ನೀಡಿದರು. ಐದು ಬೌಂಡರಿಗಳಿದ್ದ 24 ರನ್ ಹೊಡೆದ ಆರಂಭ ಆಟಗಾರ ಪ್ರಿಯಾಂಕ್ ಪಾಂಚಾಲ್ ನಿರ್ಗಮಿಸಿದಾಗ ತಂಡದ ಮೊತ್ತ 4 ವಿಕೆಟ್‌ಗೆ 45. ಈ ಹಂತದಲ್ಲಿ ಕ್ಷಿತಿಜ್ ಮತ್ತು ಉಮಂಗ್ ಅವರು 152 ರನ್‌ಗಳ ಉಪಯುಕ್ತ ಜೊತೆಯಾಟವಾಡಿದರು.

ಕ್ಷಿತಿಜ್, ಶತಕಕ್ಕೆ ಐದು ರನ್ ಗಳಿರುವಾಗ ಕೌಶಿಕ್ ಬೌಲಿಂಗ್‌ನಲ್ಲಿ ವಿಕೆಟ್ ಕೀಪರ್‌ಗೆ ಕ್ಯಾಚ್ ನೀಡಿ ನಿರಾಶರಾಗಿ ಹಿಂತಿರುಗಿದರೆ, ಮೂರು ಓವರುಗಳ ನಂತರ ಅರ್ಧ ಶತಕ ಹೊಡೆದ ಉಮಂಗ್, ಎಡಗೈ ಸ್ಪಿನ್ನರ್ ರೋಹಿತ್ ಅವರಿಗೆ ವಿಕೆಟ್ ನೀಡಿದರು.

ವೈಶಾಖ್ ವಿಜಯಕುಮಾರ್, ಪ್ರಸಿದ್ಧ ಕೃಷ್ಣ ಮತ್ತು ರೋಹಿತ್ ಕುಮಾರ್ ತಲಾ ಎರಡು ವಿಕೆಟ್ ಪಡೆದರು.

ವಿ. ಕೌಶಿಕ್

ಕರ್ನಾಟಕ ರಣಜಿ ತಂಡಕ್ಕೆ ಪದಾರ್ಪಣೆ ಮಾಡಿದ ಬೆಳಗಾವಿಯ ಸುಜಯ್ ಸತೇರಿ ಅವರಿಗೆ ನಾಯಕ ಮಯಂಕ್ ಅಗರವಾಲ್ ಕ್ಯಾಪ್ ನೀಡಿದರು

#### ಸ್ಕೋರ್ ಕಾರ್ಡ್

**ಒಂದನೇ ಇನಿಂಗ್ಸ್: ಗುಜರಾತ್: 264 (88 ಓವರ್)**
ಪಾಂಚಾಲ್ ಬಿ ವೈಶಾಖ್ 24
ಹೆಟ್ ಪಟೇಲ್ ಸಿ ಪಡಿಕ್ಕಲ್ ಬಿ ವೈಶಾಕ್ 4
ಸನ್‌ಪ್ರೀತ್‌ಸಿಂಗ್ ಎಲ್‌ಬಿಡಬ್ಲ್ಯು ಬಿ ಕೌಶಿಕ್ 0
ಮನನ್ ಸಿ ಸುಜಯ್ ಬಿ ಪ್ರಸಿದ್ಧ 4
ಕ್ಷಿತಿಜ್ ಸಿ ಸುಜಯ್ ಬಿ ವೈಶಾಖ್ 95
ಉಮಂಗ್ ಸಿ ಪಡಿಕ್ಕಲ್ ಬಿ ರೋಹಿತ್ 72
ರಿಪಲ್ ಸಿ ಪ್ರಸಿದ್ಧ ಬಿ ರೋಹಿತ್ 0
ಚಿಂತನ್ ಗಜ ಔಟಾಗದೇ 45
ಸಿದ್ಧಾರ್ಥ ಸಿ ಪಡಿಕ್ಕಲ್ ಬಿ ಪ್ರಸಿದ್ಧ 4
ರಿಂಕೇಶ್ ಸಿ ಸುಜಯ್ ಬಿ ಕೌಶಿಕ್ 0
ಅರ್ಜಾನ್ ಸಿ ನಿಖಿನ್ ಬಿ ಕೌಶಿಕ್ 6
**ಇತರೆ:** 10 (ಬೈ 4, ಲೆಗ್‌ಬೈ 2, ನೋಬಾಲ್ 3, ವೈಡ್ 1)
**ವಿಕೆಟ್ ಪತನ:** 1–5 (ಹೆಟ್ ಪಟೇಲ್, 1.6), 2–17 (ಸನ್‌ಪ್ರೀತ್ ಸಿಂಗ್ ಬಗ್ಗಾ), 3–27 (ಮನನ್ ಹಿಂಗ್ರೇಜಿಯಾ, 6.6), 4–45 (ಪ್ರಿಯಾಂಕ್ ಪಾಂಚಾಲ್, 16.5), 5–202 (ಕ್ಷಿತಿಜ್ ಪಟೇಲ್, 62.5), 6–208 (ಉಮಂಗ್ ಕುಮಾರ್, 65.1), 7–213 (ರಿಪಲ್ ಪಟೇಲ್, 67.1), 8–222 (ಸಿದ್ಧಾರ್ಥ ದೇಸಾಯಿ, 70.6), 9–240 (ರಿಂಕೇಶ್ ವಘೇಲಾ, 78.4), 10–264 (ಅರ್ಜಾನ್ ನಾಗ್ವಾಸ್ವಲ್ಲಾ, 87.6).
**ಬೌಲಿಂಗ್:** ಪ್ರಸಿದ್ಧ ಕೃಷ್ಣ 14.5–4–62–2; ವಾಸುಕಿ ಕೌಶಿಕ್ 20–6–49–4, ವೈಶಾಕ್ ವಿಜಯಕುಮಾರ್ 18.1–3–42–2, ರೋಹಿತ್ ಕುಮಾರ್ 26–4–70–2, ಶುಭಾಂಗ್ ಹೆಗ್ಡೆ 9–0–35–0

#### ಪ್ರಸಿದ್ಧಗೆ ಗಾಯ

ಪ್ರಸಿದ್ಧಕೃಷ್ಣ 15ನೇ ಓವರ್ ಕೊನೆಯ ಎಸೆತಕ್ಕೆ ಮೊದಲು ಗಾಯಾಳಾದ ಕಾರಣ, ವೈಶಾಖ್ ಆ ಓವರ್ ಪೂರೈಸಿದರು. ಆದರೆ, ಗಾಯದ ತೀವ್ರ ತಿಳಿಸಿಲ್ಲ.

### ಇಂಗ್ಲೆಂಡ್ ವಿರುದ್ಧದ ಟೆಸ್ಟ್‌ಗೆ ತಂಡ ಪ್ರಕಟ: ಧ್ರುವ್‌ಗೆ ಅವಕಾಶ

ನವದೆಹಲಿ (ಪಿಟಿಐ): ಇಂಗ್ಲೆಂಡ್ ವಿರುದ್ಧದ ಮೊದಲ ಎರಡು ಟೆಸ್ಟ್ ಪಂದ್ಯಗಳಿಗೆ 16 ಆಟಗಾರರ ಭಾರತ ತಂಡವನ್ನು ಪ್ರಕಟಿಸಲಾಗಿದೆ. ಉತ್ತರ ಪ್ರದೇಶದ ವಿಕೆಟ್ ಕೀಪರ್– ಬ್ಯಾಟರ್ ಧ್ರುವ್ ಜುರೇಲ್‌ಗೆ ಮೊದಲ ಬಾರಿ ಅವಕಾಶ ಸಿಕ್ಕಿದೆ.

2023ರ ಏಕದಿನ ವಿಶ್ವಕಪ್ ವೇಳೆ ಆದ ಪಾದದ ಗಾಯದಿಂದ ಚೇತರಿಸಿಕೊಳ್ಳುತ್ತಿರುವ ವೇಗದ ಬೌಲರ್ ಮೊಹಮ್ಮದ್ ಶಮಿ ಅವರನ್ನು ಕೈಬಿಡಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ಟೆಸ್ಟ್ ಸರಣಿಯ ಎರಡೂ ಪಂದ್ಯಗಳಲ್ಲಿ ವಿಕೆಟ್ ಕೀಪಿಂಗ್ ಮಾಡಿದ್ದ ಕನ್ನಡಿಗ ಕೆ.ಎಲ್. ರಾಹುಲ್ ಈ ಟೆಸ್ಟ್ ಸರಣಿಗೂ ಆಯ್ಕೆಯಾಗಿದ್ದಾರೆ. ಆದರೆ, ಇಶಾನ್ ಕಿಶನ್ ಅವರಿಗೆ ಕೊಕ್ ನೀಡಲಾಗಿದೆ. ವೇಗದ ಬೌಲರ್ ಪ್ರಸಿದ್ಧ ಕೃಷ್ಣ ಗಾಯಾಳಾಗಿದ್ದು, ಅವರನ್ನೂ ತಂಡಕ್ಕೆ ಪರಿಗಣಿಸಿಲ್ಲ.

ಇದೇ 25ರಿಂದ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಆರಂಭವಾಗಲಿದೆ. ಮೊದಲ ಪಂದ್ಯ ಹೈದರಾಬಾದ್‌ನಲ್ಲಿ ಮತ್ತು ಎರಡನೇ ಪಂದ್ಯ ವಿಶಾಖಪಟ್ಟಣದಲ್ಲಿ ನಡೆಯಲಿದೆ.

**ತಂಡ ಹೀಗಿದೆ:** ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ಯಶಸ್ವಿ ಜೈಸ್ವಾಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್. ರಾಹುಲ್ (ವಿಕೆಟ್ ಕೀಪರ್), ಕೆ.ಎಸ್. ಭರತ್ (ವಿಕೆಟ್ ಕೀಪರ್), ಧ್ರುವ್ ಜುರೇಲ್ (ವಿಕೆಟ್ ಕೀಪರ್), ರವಿಚಂದ್ರನ್ ಅಶ್ವಿನ್, ರವೀಂದ್ರ ಜಡೇಜ, ಅಕ್ಷರ್ ಪಟೇಲ್, ಕುಲದೀಪ್ ಯಾದವ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ಜಸ್‌ಪ್ರೀತ್ ಬೂಮ್ರಾ (ಉಪನಾಯಕ), ಆವೇಶ್ ಖಾನ್

ವಿಜಯಪುರದಲ್ಲಿ ಶುಕ್ರವಾರ ಮುಕ್ತಾಯವಾದ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ರನ್ನರ್ಸ್ ಅಪ್ ಆದ ಆತಿಥೇಯ ಕರ್ನಾಟಕದ ಸೈಕ್ಲಿಸ್ಟ್‌ಗಳು ಟ್ರೋಫಿಯನ್ನು ಸ್ವೀಕರಿಸಿದರು —ಪ್ರಜಾವಾಣಿ ಚಿತ್ರ/ ಸಂಜೀವ ಅಕ್ಕಿ

# ರಾಜಸ್ಥಾನ ಮಡಿಲಿಗೆ ಪ್ರಶಸ್ತಿ

### ರಾಷ್ಟ್ರೀಯ ಸೈಕ್ಲಿಂಗ್ ಚಾಂಪಿಯನ್‌ಷಿಪ್: ಕರ್ನಾಟಕ ರನ್ನರ್ಸ್

• ಬಸವರಾಜ್ ಸಂಪಳ್ಳಿ

ವಿಜಯಪುರ: ರಾಜಸ್ಥಾನದ ಸೈಕ್ಲಿಸ್ಟ್‌ಗಳು, ನಗರದಲ್ಲಿ ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಅಸೋಸಿಯೇಷನ್ ಆಶ್ರಯದಲ್ಲಿ ನಡೆದ 28ನೇ ರಾಷ್ಟ್ರೀಯ ರೋಡ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್ ಪಟ್ಟ ಗೆದ್ದುಕೊಂಡರು. ನಾಲ್ಕು ದಿನಗಳ ಈ ಚಾಂಪಿಯನ್‌ಷಿಪ್‌ಗೆ ಶುಕ್ರವಾರ ತೆರೆಬಿತ್ತು.

ಮೊದಲ ದಿನದಿಂದಲೇ ಉತ್ತಮ ಪ್ರದರ್ಶನ ನೀಡಿದ ರಾಜಸ್ಥಾನ ತಂಡ 13 ಚಿನ್ನ, 6 ಬೆಳ್ಳಿ ಮತ್ತು 2 ಕಂಚಿನ ಪದಕಗಳೊಂದಿಗೆ 109 ಪಾಯಿಂಟ್ಸ್ ಸಂಪಾದಿಸಿ, ಸಮಗ್ರ ಪ್ರಶಸ್ತಿಗೆ ಪಾತ್ರವಾಯಿತು. ರಾಜಸ್ಥಾನ ಸೈಕ್ಲಿಸ್ಟ್‌ಗಳಿಗೆ ಪೈಪೋಟಿ ನೀಡಿದ ಆತಿಥೇಯ ಕರ್ನಾಟಕದ ಸೈಕ್ಲಿಸ್ಟ್‌ಗಳು 5 ಚಿನ್ನ, 5 ಬೆಳ್ಳಿ ಮತ್ತು 6 ಕಂಚಿನ ಪದಕಗಳೊಂದಿಗೆ 67 ಪಾಯಿಂಟ್ಸ್ ಸಂಗ್ರಹಿಸಿ ರನ್ನರ್ಸ್ ಅಪ್ ಆದರು.

ಪುರುಷರ ವಿಭಾಗದಲ್ಲಿ ಮೂರು ಚಿನ್ನದ ಪದಕ (2 ವೈಯಕ್ತಿಕ, 1 ತಂಡ) ಗಳನ್ನು ಗಳಿಸಿದ ರಾಜಸ್ಥಾನದ ಖೇತ ರಾಮ್ 'ಉತ್ತಮ ಪುರುಷ ಸೈಕ್ಲಿಸ್ಟ್' ಹಾಗೂ ಮಹಿಳೆಯರ ವಿಭಾಗದಲ್ಲಿ ಎರಡು ಚಿನ್ನದ ಪದಕ ವಿಜೇತ ಭಾರತೀಯ ರೈಲ್ವೆಯ ಸ್ವಸ್ತಿ ಸಿಂಗ್ 'ಉತ್ತಮ ಮಹಿಳಾ ಸೈಕ್ಲಿಸ್ಟ್' ಪ್ರಶಸ್ತಿಗೆ ಭಾಜನರಾದರು. ತಮಿಳುನಾಡು ತಂಡ 'ಬೆಸ್ಟ್ ಫೇರ್ ಪ್ಲೇ' ಗೌರವಕ್ಕೆ ಪಾತ್ರವಾಯಿತು.

ಏಷ್ಯನ್ ಸೈಕ್ಲಿಂಗ್ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಓಂಕಾರ್ ಸಿಂಗ್, ಭಾರತೀಯ ಸೈಕ್ಲಿಂಗ್ ಫೆಡರೇಷನ್‌ನ ಪ್ರಧಾನ ಕಾರ್ಯದರ್ಶಿ ಮಣಿಂದರ್ ಪಾಲ್ ಸಿಂಗ್ ಹಾಗೂ ಕರ್ನಾಟಕ ಅಮೆಚೂರ್ ಸೈಕ್ಲಿಂಗ್ ಸಂಸ್ಥೆಯ ಅಧ್ಯಕ್ಷ ರಾಜು ಬಿರಾದಾರ ಅವರು ವಿಜೇತರಿಗೆ ಪದಕ ನೀಡಿದರು.

**ಸೈಕ್ಲಿಂಗ್ ಚಾಂಪಿಯನ್‌ಷಿಪ್ ಫಲಿತಾಂಶ**

| ಸ್ಥಾನ | ತಂಡ | ಅಂಕ | ಚಿನ್ನ | ಬೆಳ್ಳಿ | ಕಂಚು |
|---|---|---|---|---|---|
| **ಸೀನಿಯರ್ ವಿಭಾಗ** | | | | | |
| ಚಾಂಪಿಯನ್ಸ್ | ರೈಲ್ವೆ | 33 | 6 | 1 | 0 |
| ರನ್ನರ್ಸ್ | ರಾಜಸ್ಥಾನ | 13 | 1 | 2 | 2 |
| **ಜೂನಿಯರ್ ವಿಭಾಗ** | | | | | |
| ಚಾಂಪಿಯನ್ಸ್ | ರಾಜಸ್ಥಾನ | 34 | 4 | 2 | 0 |
| ರನ್ನರ್ಸ್ | ಕರ್ನಾಟಕ | 20 | 1 | 2 | 1 |
| **ಸಬ್ ಜೂನಿಯರ್** | | | | | |
| ಚಾಂಪಿಯನ್ಸ್ | ರಾಜಸ್ಥಾನ | 57 | 7 | 3 | 0 |
| ರನ್ನರ್ಸ್ | ಕರ್ನಾಟಕ | 32 | 2 | 2 | 4 |

#### ಸಂಕ್ಷಿಪ್ತ ಸುದ್ದಿ

### ಪ್ರಧಾನ ಸುತ್ತಿಗೆ ಸುಮಿತ್ ನಗಾಲ್

ಮೆಲ್ಬರ್ನ್ (ಪಿಟಿಐ): ಭಾರತದ ಸುಮಿತ್ ನಗಾಲ್ ಅವರು ಶುಕ್ರವಾರ ನಡೆದ ಅರ್ಹತಾ ಟೂರ್ನಿಯ ಅಂತಿಮ ಸುತ್ತಿನ ಪಂದ್ಯದಲ್ಲಿ ಸ್ಲೊವಾಕಾದ ಅಲೆಕ್ಸ್ ಮೊಲ್ಕನ್ ಅವರನ್ನು ಸೋಲಿಸಿ ಪ್ರಧಾನ ಸುತ್ತು ತಲುಪಿದರು. ಈ ಗೆಲುವಿನೊಂದಿಗೆ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದುಕೊಂಡರು.

2 ಗಂಟೆ 3 ನಿಮಿಷಗಳ ಸೆಣಸಾಟದಲ್ಲಿ ನಗಾಲ್ 6-4, 6-4 ಸೆಟ್‌ಗಳಿಂದ ಮೊಲ್ಕನ್ ವಿರುದ್ಧ ಜಯ ಸಾಧಿಸಿದರು.

ಭಾರತದ 26 ವರ್ಷದ ಆಟಗಾರ ಮೊದಲ ಸುತ್ತಿನಲ್ಲಿ ಕಜಕಿಸ್ತಾನದ ವಿಶ್ವದ 31ನೇ ಕ್ರಮಾಂಕದ ಅಲೆಕ್ಸಾಂಡರ್ ಬುಬ್ಲಿಕ್ ಅವರನ್ನು ಎದುರಿಸಲಿದ್ದಾರೆ.

ನಗಾಲ್ ಪ್ರಸ್ತುತ ವಿಶ್ವ ಕ್ರಮಾಂಕದ ಸಿಂಗಲ್ಸ್‌ನಲ್ಲಿ 139ನೇ ಸ್ಥಾನ ಪಡೆದಿದ್ದಾರೆ. ಅರ್ಹತಾ ಪಂದ್ಯ ಗೆಲ್ಲುವ ಮೂಲಕ 2021ರ ಬಳಿಕ ಮೊದಲ ಬಾರಿ ಹಾಗೂ ಒಟ್ಟಾರೆ ನಾಲ್ಕನೇ ಬಾರಿ ಗ್ರ್ಯಾನ್ ಸ್ಲಾಮ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದುಕೊಂಡರು.

### ಡಬ್ಲ್ಯುಪಿಎಲ್: ಮೊದಲ ಲೆಗ್‌ಗೆ ಬೆಂಗಳೂರು ಆತಿಥ್ಯ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್‌ನ ಎರಡನೇ ಆವೃತ್ತಿಯ ಮೊದಲ ಲೆಗ್‌ನ ಆತಿಥ್ಯವನ್ನು ಬೆಂಗಳೂರು ವಹಿಸಲಿದ್ದು, ಫೆಬ್ರುವರಿ 22ರಿಂದ ಮಾರ್ಚ್ 17ರವರೆಗೆ ಪಂದ್ಯಗಳು ನಡೆಯಲಿವೆ.

ಬೆಂಗಳೂರು ಮತ್ತು ಮೈಸೂರಿನಲ್ಲಿ ಪಂದ್ಯಗಳನ್ನು ಆಯೋಜಿಸುವ ಉದ್ದೇಶವನ್ನು ಬಿಸಿಸಿಐ ಹೊಂದಿತ್ತು. ಆದರೆ, ಮೈಸೂರಿನ ಕ್ರೀಡಾಂಗಣದಲ್ಲಿ ಪ್ರೇಕ್ಷಕರಿಗೆ ಪಂದ್ಯ ವೀಕ್ಷಿಸಲು ಸ್ಥಳದ ಅಭಾವ ಇರುವ ಕಾರಣ ಅದನ್ನು ಕೈಬಿಡಲಾಯಿತು ಎಂದು ಮೂಲಗಳು ತಿಳಿಸಿವೆ.

ಹುಬ್ಬಳ್ಳಿಯ ಕರ್ನಾಟಕ ಜಿಮ್ಖಾನ ಮೈದಾನದಲ್ಲಿ ಶುಕ್ರವಾರ ನಡೆದ ಅಂಧ ಮಹಿಳೆಯರ ರಾಷ್ಟ್ರೀಯ ಟಿ–20 ಕ್ರಿಕೆಟ್ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆದ ಕರ್ನಾಟಕ ತಂಡದ ಆಟಗಾರ್ತಿಯರು ಪ್ರಜಾವಾಣಿ ಚಿತ್ರ/ ಗೋವಿಂದರಾಜ ಜವಳಿ

### ಅಂಧ ಮಹಿಳೆಯರ ರಾಷ್ಟ್ರೀಯ ಟಿ20 ಕ್ರಿಕೆಟ್ ಟೂರ್ನಿ

## ಒಡಿಶಾಕ್ಕೆ ಪ್ರಶಸ್ತಿ, ಕರ್ನಾಟಕ ದ್ವಿತೀಯ

ಹುಬ್ಬಳ್ಳಿ: ಒಡಿಶಾ ತಂಡವು ಇಲ್ಲಿನ ಕರ್ನಾಟಕ ಜಿಮ್ಖಾನ ಮೈದಾನದಲ್ಲಿ ನಡೆದ ಇಂಡಸ್‌ಇಂಡ್ ಬ್ಯಾಂಕ್ ಅಂಧ ಮಹಿಳೆಯರ ರಾಷ್ಟ್ರೀಯ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಸಲ ಚಾಂಪಿಯನ್ ಆಗಿ ಹೊರಹೊಮ್ಮಿತು. ಈ ತಂಡ ಶುಕ್ರವಾರ ನಡೆದ ಫೈನಲ್ ಪಂದ್ಯದಲ್ಲಿ ಕರ್ನಾಟಕ ತಂಡವನ್ನು 6 ವಿಕೆಟ್‌ಗಳಿಂದ ಮಣಿಸಿತು.

ಟಾಸ್ ಗೆದ್ದ ಒಡಿಶಾ ತಂಡ ಆತಿಥೇಯ ತಂಡವನ್ನು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಕರ್ನಾಟಕ ತಂಡವು 18.3 ಓವರ್‌ಗಳಲ್ಲಿ 93 ರನ್‌ಗಳಿಗೆ ಕುಸಿಯಿತು. ಒಡಿಶಾ ತಂಡವು 13.1 ಓವರ್‌ಗಳಲ್ಲಿ4 ವಿಕೆಟ್‌ಗೆ 94 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಒಡಿಶಾ ತಂಡಕ್ಕೆ ಟ್ರೋಫಿ ಹಾಗೂ ₹1,04,000 ನಗದು ಬಹುಮಾನ, ರನ್ನರ್ಸ್ ಅಪ್ ಕರ್ನಾಟಕಕ್ಕೆ ಟ್ರೋಫಿ ಮತ್ತು ₹80,000 ನಗದು ಬಹುಮಾನ ನೀಡಲಾಯಿತು.

ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ ಇನ್ ಇಂಡಿಯಾ (ಸಿಎಬಿಐ), ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ ಫಾರ್ ದಿ ಬ್ಲೈಂಡ್ (ಸಿಎಬಿಐ), ಸಮರ್ಥನಂ ಟ್ರಸ್ಟ್ ಫಾರ್ ದಿ ಡಿಸಬಲ್ಡ್ ಸಹಯೋಗದಲ್ಲಿ ಟೂರ್ನಿ ಆಯೋಜಿಸಲಾಗಿತ್ತು. ವಿವಿಧ ರಾಜ್ಯಗಳ 16 ತಂಡಗಳು ಪಾಲ್ಗೊಂಡಿದ್ದವು.

ಸಂಕ್ಷಿಪ್ತ ಸ್ಕೋರು: ಕರ್ನಾಟಕ: 18.3 ಓವರ್‌ಗಳಲ್ಲಿ 93 (ರೇಣುಕಾ ರಜಪೂತ 17, ದೀಪಿಕಾ ಟಿ.ಸಿ 16, ದಿವಕ್ಕ 12, ಜಮುನಾ ರಾಣಿ ಟುಡು 19ಕ್ಕೆ 2). ಒಡಿಶಾ: 13.1 ಓವರ್‌ಗಳಲ್ಲಿ 4 ವಿಕೆಟ್‌ಗೆ 94 (ಬಸಂತಿ ಹನ್ಸ್ ದಾ 34, ಜಮುನಾ ರಾಣಿ ಟುಡು 24, ಪದ್ಮಿನಿ ಟುಡು 14, ಸುನಿತಾ ಧೋಂಡಪ್ಪನವರ 15 ಕ್ಕೆ 1).

## ಶೂಟಿಂಗ್: ಶೆರಾನ್‌ಗೆ ಚಿನ್ನ, ತೋಮಾರ್‌ಗೆ ಬೆಳ್ಳಿ

ಜಕಾರ್ತಾ (ಪಿಟಿಐ): ಏಷ್ಯನ್ ಒಲಿಂಪಿಕ್ಸ್ ಕ್ವಾಲಿಫೈಯರ್ಸ್‌ನಲ್ಲಿ ಪುರುಷರ 50 ಮೀಟರ್ ರೈಫಲ್ 3 ಪೊಸಿಷನ್ ಸ್ಪರ್ಧೆಯಲ್ಲಿ ಶುಕ್ರವಾರ ಭಾರತದ ಶೂಟರ್‌ಗಳಾದ ಅಖಿಲ್ ಶೆರಾನ್ ಮತ್ತು ಐಶ್ವರಿ ಪ್ರತಾಪ್ ಸಿಂಗ್ ತೋಮಾರ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದಿದ್ದಾರೆ. ಈ ಕೂಟದಲ್ಲಿ ಭಾರತ ಸ್ಪರ್ಧಿಗಳ ಪದಕಗಳ ಬೇಟೆ ಮುಂದುವರಿದಿದೆ.

ಎಂಟು ಪುರುಷರ ಫೈನಲ್‌ನಲ್ಲಿ ಶೆರಾನ್ 460.2 ಅಂಕ ಗಳಿಸಿ ಜಯಶಾಲಿ ಯಾದರೆ, ಟೋಕಿಯೊ ಒಲಿಂಪಿಯನ್ ತೋಮಾರ್ 459.0 ಅಂಕಗಳೊಂದಿಗೆ ಎರಡನೇ ಸ್ಥಾನ ಪಡೆದರು. ಥಾಯ್ಲೆಂಡ್‌ನ ಥೊಂಗ್ಫಾಫಮ್ ವೊಂಗ್ಸುಕ್ಡಿ 448.8 ಅಂಕಗಳೊಂದಿಗೆ ಕಂಚಿನ ಪದಕಕ್ಕೆ ತೃಪ್ತಿಪಟ್ಟರು.

ಶೆರಾನ್ ಮತ್ತು ತೋಮಾರ್ ಜೋಡಿ ಸ್ವಪ್ನಿಲ್ ಕುಸಾಲೆ ಅವರೊಂದಿಗೆ ಸೇರಿಕೊಂಡು ಚೀನಾ ಮತ್ತು ದಕ್ಷಿಣ ಕೊರಿಯಾದ ತಂಡಗಳನ್ನು ಹಿಂದಿಕ್ಕಿ ಇದೇ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರು. ಭಾರತ ಸ್ಪರ್ಧಿಗಳು ಒಟ್ಟು 1758 ಅಂಕಗಳನ್ನು ಗಳಿಸಿದ್ದು, ಎರಡನೇ ಸ್ಥಾನದಲ್ಲಿರುವ ತಂಡಕ್ಕಿಂತ 14 ಅಂಕಗಳು ಹೆಚ್ಚಾಗಿದೆ. ವೈಯಕ್ತಿಕ ಅರ್ಹತಾ ಸುತ್ತಿನಲ್ಲಿ ತೋಮಾರ್ ಒಟ್ಟು 588 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರೆ, ಶೆರಾನ್ 586 ಅಂಕಗಳೊಂದಿಗೆ ಆರನೇ ಸ್ಥಾನ ಪಡೆದರು.

ಈ ಮೂಲಕ ಭಾರತ 10 ಚಿನ್ನ, 8 ಬೆಳ್ಳಿ ಹಾಗೂ 6 ಕಂಚಿನ ಪದಕಗಳನ್ನು ತನ್ನದಾಗಿಸಿಕೊಂಡಿದೆ.

### ಆಯುಷ್ ಶತಕ: ಮುಂಬೈ ಮೇಲುಗೈ

ಶಿವಮೊಗ್ಗ: ಮುಂಬೈ ತಂಡದ ಆರಂಭಿಕ ಬ್ಯಾಟರ್ ಆಯುಷ್ ಮ್ಹಾತ್ರೆ (145; 180ಎ, 17ಬೌಂಡರಿ, 3 ಸಿಕ್ಸರ್) ಹಾಗೂ ಮಧ್ಯಮ ಕ್ರಮಾಂಕದ ಆಟಗಾರ ಆಯುಷ್ ಸಚಿನ್ ವರ್ತಕ್ (ಔಟಾಗದೆ 64; 87ಎ, 4X7, 6X2) ಇಲ್ಲಿನ ನವುಲೆಯಲ್ಲಿರುವ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಶುಕ್ರವಾರ ಕರ್ನಾಟಕದ ಬೌಲರ್‌ಗಳನ್ನು ಕಾಡಿದರು.

ಇವರ ದಿಟ್ಟ ಬ್ಯಾಟಿಂಗ್ ನೆರವಿನಿಂದ ಮುಂಬೈ ತಂಡ ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದ ಮೊದಲ ದಿನ 90 ಓವರ್‌ಗಳಲ್ಲಿ 6 ವಿಕೆಟ್‌ಗೆ 328 ರನ್ ಗಳಿಸಿ ಮೊದಲ ದಿನ ಮೇಲುಗೈ ಸಾಧಿಸಿತು.

### ಆಂಧ್ರ ನಾಯಕತ್ವ ತೊರೆದ ಹನುಮ

ಮುಂಬೈ (ಪಿಟಿಐ): ಭಾರತ ತಂಡದ ಆಟಗಾರ ಹನುಮ ವಿಹಾರಿ ಅವರು ಆಂಧ್ರ ರಣಜಿ ತಂಡದ ನಾಯಕತ್ವ ತೊರೆದಿದ್ದಾರೆ. ಗುರುವಾರ ಮುಂಬೈ ವಿರುದ್ಧ ಆರಂಭವಾದ ರಣಜಿ ಟ್ರೋಫಿ 'ಬಿ' ಗುಂಪಿನ ಪಂದ್ಯದಲ್ಲಿ ಅವರ ಬದಲು ರಿಕಿ ಭುಯಿ ಅವರು ತಂಡವನ್ನು ಮುನ್ನಡೆಸಿದರು.

ವೈಯಕ್ತಿಕ ಕಾರಣಗಳಿಂದ ಅವರು ನಾಯಕತ್ವ ತೊರೆದಿದ್ದು, ಬ್ಯಾಟಿಂಗ್ ಮೇಲೆ ಹೆಚ್ಚಿನ ಗಮನಹರಿಸಲು ಬಯಸಿದ್ದಾರೆ ಎನ್ನಲಾಗಿದೆ. ಬಂಗಾಳ ವಿರುದ್ಧ 'ಡ್ರಾ'ದಲ್ಲಿ ಅಂತ್ಯಗೊಂಡ ಮೊದಲ ಪಂದ್ಯದಲ್ಲಿ ವಿಹಾರಿ 51 ರನ್ ಗಳಿಸಿದ್ದರು.

ಅವರು 16 ಟೆಸ್ಟ್‌ಗಳಲ್ಲಿ ಭಾರತದ ಪರ 33.56 ಸರಾಸರಿಯಲ್ಲಿ 839 ರನ್ ಗಳಿಸಿದ್ದಾರೆ.

### ಇಂಗ್ಲೆಂಡ್ ಲಯನ್ಸ್ ವಿರುದ್ಧ ಭಾರತ 'ಎ' ಮೇಲುಗೈ

ಅಹಮದಾಬಾದ್ (ಪಿಟಿಐ): ಆರಂಭಿಕ ಬ್ಯಾಟರ್ ರಜತ್ ಪಾಟಿದಾರ್ (ಔಟಾಗದೆ 61) ಅರ್ಧಶತಕ ಮತ್ತು ಮಾನವ್ ಸುತಾರ್ (45ಕ್ಕೆ 3) ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಭಾರತ 'ಎ' ತಂಡವು ಇಂಗ್ಲೆಂಡ್ ಲಯನ್ಸ್ ವಿರುದ್ಧದ ಎರಡು ದಿನಗಳ ಅಭ್ಯಾಸ ಪಂದ್ಯದಲ್ಲಿ ಮೊದಲ ದಿನವಾದ ಶುಕ್ರವಾರ ಮೇಲುಗೈ ಸಾಧಿಸಿತು.

ಆತಿಥೇಯ ಬೌಲರ್‌ಗಳ ಶಿಸ್ತಿನ ದಾಳಿಯಿಂದ ಪ್ರವಾಸಿ ತಂಡವು ಮೊದಲ ಇನಿಂಗ್ಸ್‌ನಲ್ಲಿ 51.1 ಓವರ್‌ಗಳಲ್ಲಿ 233 ರನ್‌ಗೆ ಅಲೌಟ್ ಆಯಿತು. ಪ್ರತ್ಯುತ್ತರವಾಗಿ ನಾಯಕ ಅಭಿಮನ್ಯು ಈಶ್ವರನ್ (32) ಮತ್ತು ರಜತ್ ಪಾಟಿದಾರ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿ ಭಾರತ 'ಎ' ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ಮೊದಲ ದಿನದಾಟದ ಅಂತ್ಯಕ್ಕೆ ಭಾರತ ಎ ತಂಡವು 26 ಓವರ್‌ಗಳಲ್ಲಿ ಒಂದು ವಿಕೆಟ್ ನಷ್ಟಕ್ಕೆ 123 ರನ್ ಗಳಿಸಿದೆ.

### ನ್ಯೂಜಿಲೆಂಡ್‌ಗೆ ಜಯ: 150 ವಿಕೆಟ್ ಮೈಲಿಗಲ್ಲು ದಾಟಿದ ಟಿಮ್ ಸೌಥಿ

ಆಕ್ಲೆಂಡ್ (ಎಎಫ್‌ಪಿ): ಅನುಭವಿ ವೇಗಿ ಟಿಮ್ ಸೌಥಿ (25ಕ್ಕೆ4) ಅವರು ಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ 150 ವಿಕೆಟ್‌ಗಳ ಮೈಲಿಗಲ್ಲನ್ನು ತಲುಪಿದ ಮೊದಲಿಗರೆನಿಸಿದರು. ಅವರ ನಾಲ್ಕು ವಿಕೆಟ್‌ಗಳ ನೆರವಿನಿಂದ ನ್ಯೂಜಿಲೆಂಡ್ ತಂಡ ಈಡನ್ ಪಾರ್ಕ್‌ನಲ್ಲಿ ಶುಕ್ರವಾರ ನಡೆದ ಮೊದಲ ಟಿ20 ಪಂದ್ಯದಲ್ಲಿ ಪಾಕಿಸ್ತಾನ ತಂಡವನ್ನು 46 ರನ್‌ಗಳಿಂದ ಸೋಲಿಸಿತು.

ನ್ಯೂಜಿಲೆಂಡ್ ತಂಡದ 8 ವಿಕೆಟ್‌ಗೆ 226 ರನ್‌ಗಳ ದೊಡ್ಡ ಮೊತ್ತಕ್ಕೆ ಉತ್ತರವಾಗಿ ಪಾಕಿಸ್ತಾನ 18ನೇ ಓವರ್‌ನ ಕೊನೆಯಲ್ಲಿ 180 ರನ್‌ಗಳಿಗೆ ಆಲೌಟ್ ಆಯಿತು. ಸೌಥಿ ಒಟ್ಟು 151 ವಿಕೆಟ್ ಗಳಿಸಿದಂತಾಗಿದೆ. ಶಕಿಬ್ ಅಲ್ ಹಸನ್ 140 ವಿಕೆಟ್ ಗಳಿಸಿ ಎರಡನೇ ಸ್ಥಾನದಲ್ಲಿದ್ದಾರೆ. ಐದು ಪಂದ್ಯಗಳ ಸರಣಿಯಲ್ಲಿ ಆತಿಥೇಯರು ಈಗ 1–0 ಮುನ್ನಡೆ ಸಾಧಿಸಿದ್ದಾರೆ.

ಸ್ಕೋರುಗಳು: ನ್ಯೂಜಿಲೆಂಡ್: 20 ಓವರುಗಳಲ್ಲಿ 8 ವಿಕೆಟ್‌ಗೆ 226 (ಫಿನ್ ಅಲೆನ್ 34, ಕೇನ್ ವಿಲಿಯಮ್ಸನ್ 57, ಡೆರಿಲ್ ಮಿಚೆಲ್ 61, ಮಾರ್ಕ್ ಚಾಪ್ಮನ್ 26; ಶಹೀನ್ ಶಾ ಅಫ್ರಿದಿ 46ಕ್ಕೆ3, ಅಬ್ಬಾಸ್ ಅಫ್ರಿದಿ 34ಕ್ಕೆ3); ಪಾಕಿಸ್ತಾನ: 18 ಓವರುಗಳಲ್ಲಿ 180 (ಸಯೀಮ್ ಅಯೂಬ್ 27, ಮೊಹಮ್ಮದ್ ರಿಜ್ವಾನ್ 25, ಬಾಬರ್ ಆಜಂ 57, ಇಫ್ತಿಕಾರ್ ಅಹ್ಮದ್ 24; ಟಿಮ್ ಸೌಥಿ 25ಕ್ಕೆ4).

## ಟೆನಿಸ್: ನಾಲ್ಕರ ಹಂತಕ್ಕೆ ಕರಣ್

ಪ್ರಜಾವಾಣಿ ವಾರ್ತೆ

ಮಂಡ್ಯ: ಅಗ್ರ ಶ್ರೇಯಾಂಕದ ಕ್ರಿಸ್ ವಾನ್ ವಿಕ್ ಅವರಿಗೆ ಆಘಾತ ನೀಡಿದ ಭಾರತದ ಯುವ ಆಟಗಾರ ಕರಣ್ ಸಿಂಗ್, ಪಿಇಟಿ ಮಂಡ್ಯ ಓಪನ್ ಐಟಿಎಫ್ ಟೆನಿಸ್ ಪುರುಷರ ಸಿಂಗಲ್ಸ್ ಟೂರ್ನಿಯ ಪುರುಷರ ಸಿಂಗಲ್ಸ್ ಸೆಮಿಫೈನಲ್‌ಗೆ ಲಗ್ಗೆಯಿಟ್ಟರು.

ಶುಕ್ರವಾರ ನಡೆದ ಮೊದಲ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಕರಣ್ ಸಿಂಗ್ 6-3, 6-3 ರಲ್ಲಿ ನೇರ ಸೆಟ್‌ಗಳಿಂದ ದಕ್ಷಿಣ ಆಫ್ರಿಕಾದ ವಾನ್ ವಿಕ್ ಅವರನ್ನು ಸೋಲಿಸಿದರು. ಈ ಪಂದ್ಯ 53 ನಿಮಿಷಗಳಲ್ಲಿ ಮುಗಿಯಿತು. ಶನಿವಾರ ನಡೆಯುವ ಮೊದಲ ಸೆಮಿಫೈನಲ್ ಪಂದ್ಯದಲ್ಲಿ 20 ವರ್ಷದ ಭಾರತದ ಆಟಗಾರ ನೆದರ್ಲೆಂಡ್ಸ್‌ನ ಜೆಲ್ಲೆ ಸೆಲ್ಸ್ ಅವರನ್ನು ಎದುರಿಸಲಿದ್ದಾರೆ.

ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಜೆಲ್ಲೆ ಸೆಲ್ಸ್ ಸ್ವದೇಶದ ಥಿಜ್ಮೆನ್ ಲೂಫ್ ಅವರನ್ನು 6-7(4), 6-1, 6-4 ರಿಂದ ಹಿಮ್ಮೆಟ್ಟಿಸಿದರು. ಎಂಟರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಭಾರತದ ಸಿದ್ಧಾರ್ಥ ವಿಶ್ವಕರ್ಮ 6-1, 6-4 ರಲ್ಲಿ ನೇರ ಸೆಟ್‌ಗಳಿಂದ ಐದನೇ ಶ್ರೇಯಾಂಕದ ವಿಯೆಟ್ನಾಂನ ನಾಮ್ ಹೊವಾಂಗ್ ಲೀ ಅವರನ್ನು ಸೋಲಿಸಿದರು.

ಕರಣ್ ಸಿಂಗ್ ಆಟದ ವೈಖರಿ

# ಉಕ್ರೇನ್‌ಗೆ ಬ್ರಿಟನ್ ಮತ್ತಷ್ಟು ಸೇನಾ ನೆರವು

ಕೀವ್ (ಉಕ್ರೇನ್) (ಎಪಿ): ಬ್ರಿಟನ್ ಪ್ರಧಾನಿ ರಿಷಿ ಸುನಕ್ ಶುಕ್ರವಾರ ಉಕ್ರೇನ್ ರಾಜಧಾನಿ ಕೀವ್‌ಗೆ ಭೇಟಿ ನೀಡಿದ್ದು, ರಷ್ಯಾ ಜತೆಗಿನ ಯುದ್ಧದಲ್ಲಿ ಉಕ್ರೇನ್‌ಗೆ ಮತ್ತಷ್ಟು ಸೇನಾ ನೆರವು ಹೆಚ್ಚಿಸುವ ಜತೆಗೆ ಹೊಸ ಪ್ಯಾಕೇಜ್ ಘೋಷಿಸಲಿದ್ದಾರೆ ಎಂದು ಸುನಕ್ ಅವರ ಕಚೇರಿಯು ಹೇಳಿಕೆಯಲ್ಲಿ ತಿಳಿಸಿದೆ.

ಬ್ರಿಟನ್ ಮತ್ತು ಅಮೆರಿಕ ಸೇನೆಗಳು ಯೆಮೆನ್ ಮೇಲೆ ಬಾಂಬ್ ದಾಳಿ ನಡೆಸಿದ ಕೆಲವು ಗಂಟೆಗಳ ನಂತರ ಸುನಕ್ ಅವರು ಕೀವ್‌ಗೆ ಭೇಟಿ ನೀಡಿದ್ದಾರೆ. ಇರಾನ್ ಬೆಂಬಲಿತ ಹೌತಿ ಬಂಡುಕೋರರು ಬಳಸುತ್ತಿದ್ದ 12ಕ್ಕೂ ಹೆಚ್ಚು ನೆಲೆಗಳನ್ನು ಗುರಿಯಾಗಿಸಿಕೊಂಡು ಬಾಂಬ್ ದಾಳಿ ನಡೆದಿದೆ.

'ಮುಂದಿನ ಹಣಕಾಸು ವರ್ಷದಲ್ಲಿ ಉಕ್ರೇನ್‌ಗೆ 26,537 ಕೋಟಿ ಸೇನಾ ನೆರವಿನ ನಿಧಿಯನ್ನು ಸುನಕ್ ಅವರು ಘೋಷಿಸುವ ನಿರೀಕ್ಷೆಯಿದೆ. ಈ ಸೇನಾ ನೆರವಿನಲ್ಲಿ ದೂರ ವ್ಯಾಪ್ತಿಯ ಕ್ಷಿಪಣಿಗಳು, ವಾಯು ರಕ್ಷಣಾ ವ್ಯವಸ್ಥೆ, ಫಿರಂಗಿ ಮದ್ದುಗುಂಡುಗಳು ಮತ್ತು ಸಾಗರ ಭದ್ರತೆ ಒಳಗೊಂಡಿರಲಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದೆ.

'ನಾನು ಈ ದಿನ ಒಂದು ಸಂದೇಶ ರವಾನಿಸಲು ಇಲ್ಲಿರುವೆ. ಬ್ರಿಟನ್ ಕೂಡ ಕುಗ್ಗುವುದಿಲ್ಲ. ನಾವು ಉಕ್ರೇನ್‌ನ ಕಷ್ಟಕಾಲದಲ್ಲೂ ಅದರ ಬೆಂಬಲಕ್ಕೆ ಇದ್ದೇವೆ. ಉಕ್ರೇನ್‌ನ ಭದ್ರತೆಯನ್ನು ನಮ್ಮ ಭದ್ರತೆಯಾಗಿ ಪರಿಗಣಿಸಿದ್ದೇವೆ' ಎಂದು ಸುನಕ್ ಹೇಳಿದ್ದಾರೆ.

ಬ್ರಿಟನ್ ಉಕ್ರೇನ್‌ನ ಪ್ರಬಲ ಬೆಂಬಲಿಗ ರಾಷ್ಟ್ರವಾಗಿದೆ. ಯುದ್ಧ ಕಾಲದಲ್ಲಿ ಉಕ್ರೇನ್‌ಗೆ ಅತಿ ಹೆಚ್ಚಿನ ಸೇನಾ ನೆರವು ಮತ್ತು ಆರ್ಥಿಕ ನೆರವು ನೀಡಿದ ರಾಷ್ಟ್ರಗಳಲ್ಲಿ ಅಮೆರಿಕದ ನಂತರದ ಸ್ಥಾನದಲ್ಲಿ ಬ್ರಿಟನ್ ಇದೆ. ಸುನಕ್ ಅವರು ಪ್ರಧಾನಿಯಾದ ಕೂಡಲೇ 2022ರ ನವೆಂಬರ್‌ನಲ್ಲಿ ಉಕ್ರೇನ್‌ಗೆ ಮೊದಲ ಭೇಟಿ ಕೊಟ್ಟಿದ್ದರು.

ಉಕ್ರೇನ್ ರಾಜಧಾನಿ ಕೀವ್‌ನಲ್ಲಿರುವ ಅಧ್ಯಕ್ಷರ ಅರಮನೆ ಮುಂದೆ ಶುಕ್ರವಾರ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಒಟ್ಟಿಗೆ ಹೆಜ್ಜೆ ಹಾಕುತ್ತಾ ಸಮಾಲೋಚನೆ ನಡೆಸಿದರು —ಎಎಫ್‌ಪಿ

> **ಉಕ್ರೇನ್‌ಗೆ ಸಾವಿರಾರು ಡ್ರೋನ್ ಜತೆಗೆ ಮಿಲಿಟರಿ ನೆರವು ಹೆಚ್ಚಿಸುವ, ದೀರ್ಘಾವಧಿಯ ಅಗತ್ಯಗಳನ್ನು ಪೂರೈಸುವ ಐತಿಹಾಸಿಕ ಹೊಸ ಭದ್ರತಾ ಒಪ್ಪಂದಕ್ಕೆ ಸಹಿ ಹಾಕುತ್ತೇವೆ**
> **ರಿಷಿ ಸುನಕ್**, ಬ್ರಿಟನ್ ಪ್ರಧಾನಿ

## 'ಮ್ಯಾನ್ಮಾರ್ ಸೇನೆ, ಬಂಡುಕೋರರು ಕದನ ವಿರಾಮಕ್ಕೆ ಒಪ್ಪಿಗೆ'

ಬೀಜಿಂಗ್(ಎಎಫ್‌ಪಿ): ಮ್ಯಾನ್ಮಾರ್ ಸೇನೆ ಮತ್ತು ಬಂಡುಕೋರ ಗುಂಪುಗಳು ಹೋರಾಟ ನಿಲ್ಲಿಸಿ ತಕ್ಷಣ ಕದನ ವಿರಾಮ ಘೋಷಿಸಲು ಒಪ್ಪಿಕೊಂಡಿವೆ ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರೆ ಮಾವೊ ನಿಂಗ್ ಶುಕ್ರವಾರ ಹೇಳಿದ್ದಾರೆ.

ಯುನಾನ್ ಪ್ರಾಂತ್ಯದ ಕುನ್ಮಿಂಗ್‌ನಲ್ಲಿ ಬುಧವಾರ ಮತ್ತು ಗುರುವಾರ ಚೀನಾದ ಮಧ್ಯಸ್ಥಿಕೆಯಲ್ಲಿ ಮಾತುಕತೆ ನಡೆದಿದೆ ಎಂದು ಅವರು ಹೇಳಿದ್ದಾರೆ.

ಯಾವ ಪ್ರದೇಶದಲ್ಲಿ ಕದನ ವಿರಾಮ ಘೋಷಿಸಲಾಗಿದೆ ಎಂಬುದನ್ನು ಮಾವೊ ಅವರು ಬಹಿರಂಗಪಡಿಸಿಲ್ಲ.

ಉತ್ತರ ಮ್ಯಾನ್ಮಾರ್‌ನ ಪ್ರಮುಖ ನಗರವಾದ ಲೌಕಾಯಿಯನ್ನು ವಶಪಡಿಸಿಕೊಂಡಿರುವುದಾಗಿ ಮ್ಯಾನ್ಮಾರ್‌ನ ಬಂಡುಕೋರ ಗುಂಪುಗಳಾದ ನ್ಯಾಷನಲ್ ಡೆಮಾಕ್ರೆಟಿಕ್ ಅಲಯನ್ಸ್ ಆರ್ಮಿ (ಎಂಎನ್‌ಡಿಎಎ), ದಿ ಅರಾಕನ್ ಆರ್ಮಿ (ಎ.ಎ) ಮತ್ತು ದಿ ತಾಂಗ್ ನ್ಯಾಷನಲ್ ಲಿಬರೇಷನ್ ಆರ್ಮಿ (ಟಿಎನ್‌ಎಲ್‌ಎ) ಈಚೆಗೆ ಹೇಳಿತ್ತು.

2021ರಲ್ಲಿ ಕ್ಷಿಪ್ರ ದಂಗೆಯ ಮೂಲಕ ಅಧಿಕಾರ ಪಡೆದಿದ್ದ ಸೇನಾಡಳಿತಕ್ಕೆ ಇದರಿಂದ ತೀವ್ರ ಹಿನ್ನಡೆಯಾಗಿತ್ತು.

ಲೌಕಾಯಿ ನಗರದಲ್ಲಿ ಸೇನೆ ಮತ್ತು ಬಂಡುಕೋರರ ನಡುವೆ ಹೋರಾಟ ತೀವ್ರಗೊಂಡಿದ್ದ ಕಾರಣ ಅಲ್ಲಿನ ಜನರು ಬೇರೆಡೆಗೆ ಪಲಾಯನ ಮಾಡಿದ್ದಾರೆ.

ಮ್ಯಾನ್ಮಾರ್ ಗಡಿ ಸಮೀಪ ಈಚೆಗೆ ಶೆಲ್ ದಾಳಿಗೆ ಚೀನಾದ ಪ್ರಜೆಗಳು ಗಾಯಗೊಂಡಿದ್ದರು. ಇದಕ್ಕೆ ಚೀನಾ ತೀವ್ರ ಅಸಮಾಧಾನ ವ್ಯಕ್ತಪಡಿಸಿತ್ತು. ಮ್ಯಾನ್ಮಾರ್‌ನಲ್ಲಿ ಸೇನೆ ಮತ್ತು ಬಂಡುಕೋರರ ನಡುವೆ ಅಕ್ಟೋಬರ್‌ನಿಂದ ಶಸ್ತ್ರಸಜ್ಜಿತ ಹೋರಾಟ ನಡೆಯುತ್ತಿದೆ.

### ಅಪಪ್ರಚಾರ: ಚೀನಾ ಆಕ್ರೋಶ

ಹಾಂಗ್‌ಕಾಂಗ್ (ರಾಯಿಟರ್ಸ್): ಹಿಂದೂ ಮಹಾಸಾಗರದಲ್ಲಿ ಚೀನಾದ ವೈಜ್ಞಾನಿಕ ಸಂಶೋಧನೆಯನ್ನು ಕೆಲ ದೇಶಗಳಿಗೆ ಬೆದರಿಕೆ ಒಡ್ಡುವ ಸಲುವಾಗಿ ಬಳಸಲಾಗುತ್ತದೆ ಎಂಬ ಸುಳ್ಳು ವರದಿಯನ್ನು ಅಮೆರಿಕ ಚಿಂತಕರ ಚಾವಡಿ ಪ್ರಕಟಿಸಿದೆ ಎಂದು ಚೀನಾದ ಸರ್ಕಾರಿ ಮಾಧ್ಯಮ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದೆ.

ವಾಷಿಂಗ್ಟನ್ ಮೂಲದ ಸೆಂಟರ್ ಫಾರ್ ಸ್ಟ್ರಾಟೆಜಿಕ್ ಆ್ಯಂಡ್ ಇಂಟರ್‌ನ್ಯಾಷನಲ್ ಸ್ಟಡೀಸ್ (ಸಿಎಸ್‌ಐಎಸ್) ಈ ಕುರಿತ ವರದಿಯನ್ನು ನೀಡಿದೆ. ಹಿಂದೂ ಮಹಾಸಾಗರ ಪ್ರದೇಶಕ್ಕೆ ಚೀನಾದಿಂದ ಬೆದರಿಕೆ ಇದೆ ಎಂದು ಸಾಬೀತುಪಡಿಸಲು ಕೆಲವು ದೇಶಗಳು ಯತ್ನಿಸುತ್ತಿದ್ದ ಸಂದರ್ಭದಲ್ಲಿಯೇ ಅವುಗಳಿಗೆ ಒಂದು 'ಅಸ್ತ್ರ' ಸಿಕ್ಕಂತಾಗಿದೆ' ಎಂದು 'ಗ್ಲೋಬಲ್ ಟೈಮ್ಸ್' ತನ್ನ ಸಂಪಾದಕೀಯದಲ್ಲಿ ಹೇಳಿದೆ.

'ಯಾವುದೇ ಗುಪ್ತ ಕಾರ್ಯಸೂಚಿ ಇಲ್ಲದೆ ನೈಸರ್ಗಿಕ ಪರಿಸರವನ್ನು ಚೀನಾ ಮತ್ತು ಪ್ರಾದೇಶಿಕ ಪಾಲುದಾರ ರಾಷ್ಟ್ರಗಳು ಅಧ್ಯಯನ ನಡೆಸುತ್ತಿವೆ' ಎಂದು ಅದು ಸಮರ್ಥಿಸಿಕೊಂಡಿದೆ.

ಸಮುದ್ರದ ಆಳ, ಪ್ರವಾಹ ಮತ್ತು ತಾಪಮಾನ ಕುರಿತ ವಿವರವಾದ ಮಾಹಿತಿಯು ಚೀನಾದ ಜಲಾಂತರ್ಗಾಮಿ ಕಾರ್ಯಾಚರಣೆಗಳಿಗೆ ಮಹತ್ವದ್ದಾಗಿದೆ. ವೈಜ್ಞಾನಿಕ ಮತ್ತು ವಾಣಿಜ್ಯ ಅನುಕೂಲದ ಜೊತೆಗೆ ಹಿಂದೂ ಮಹಾಸಾಗರದಲ್ಲಿ ತನ್ನ ಪ್ರಾಬಲ್ಯ ಸಾಧಿಸಲೂ ಸಂಶೋಧನೆಯನ್ನು ಚೀನಾ ಬಳಕೆ ಮಾಡಿಕೊಳ್ಳಲಿದೆ ಎಂದು ಸಿಎಸ್‌ಐಎಸ್ ವರದಿಯಲ್ಲಿ ತಿಳಿಸಿತ್ತು.

# ಜಪಾನ್: ಗುಪ್ತಚರ ಮಾಹಿತಿ ನೀಡುವ ಉಪಗ್ರಹ ಉಡಾವಣೆ

ಟೋಕಿಯೊ (ಎಪಿ): ಗುಪ್ತಚರ ಮಾಹಿತಿಯನ್ನು ಒದಗಿಸುವ ಉಪಗ್ರಹವನ್ನು ಒಳಗೊಂಡ ರಾಕೆಟ್ ಅನ್ನು ಜಪಾನ್ ಶುಕ್ರವಾರ ಯಶಸ್ವಿಯಾಗಿ ಉಡಾವಣೆ ಮಾಡಿತು. ಉತ್ತರ ಕೊರಿಯಾದ ಸೇನಾ ನೆಲೆಗಳ ಚಲನವಲನಗಳ ಮೇಲೆ ನಿಗಾ ಇಡಲು ಹಾಗೂ ನೈಸರ್ಗಿಕ ವಿಕೋಪ ತಡೆಗೆ ಕ್ರಮ ರೂಪಿಸುವ ಉದ್ದೇಶದಿಂದ ಈ ಉಪಗ್ರಹವನ್ನು ನಭಕ್ಕೆ ಕಳುಹಿಸಿದೆ.

ಮಿತ್ಸುಬಿಶಿ ಹೆವಿ ಇಂಡಸ್ಟ್ರೀಸ್ ಲಿಮಿಡೆಟ್, ತನೆಗಾಶಿಮಾ ಬಾಹ್ಯಾಕಾಶ ಕೇಂದ್ರದಿಂದ ಎಚ್2ಎ ರಾಕೆಟ್ ಮೂಲಕ ಉಪಗ್ರಹವನ್ನು ಅಂತರಿಕ್ಷಕ್ಕೆ ಕಳುಹಿಸಿತು.

ಆಪ್ಟಿಕಲ್–8 ಉಪಗ್ರಹವು ರಾಕೆಟ್‌ನಿಂದ ಯಶಸ್ವಿಯಾಗಿ ಪ್ರತ್ಯೇಕಗೊಂಡು ನಿಯೋಜಿತ ಕಕ್ಷೆ ಸೇರಿದೆ ಎಂದು ಸರ್ಕಾರ ಮಾಹಿತಿ ನೀಡಿದೆ.

ಪ್ರತಿಕೂಲ ಹವಾಮಾನದಲ್ಲಿ ಕಾರ್ಯನಿರ್ವಹಿಸುವ ಮಿತಿಗಳಿದ್ದರೂ ಉಪಗ್ರಹವು ಸ್ಪಷ್ಟ ಚಿತ್ರಗಳನ್ನು ಭೂಮಿಗೆ ರವಾನಿಸಲಿದೆ.

1998ರಲ್ಲಿ ಉತ್ತರ ಕೊರಿಯಾವು ಜಪಾನ್ ಮೇಲೆ ಕ್ಷಿಪಣಿ ದಾಳಿ ಆರಂಭಿಸಿದಾಗಿನಿಂದ ಜಪಾನ್ ಗುಪ್ತಚರ ಮಾಹಿತಿ ನೀಡುವ ಉಪಗ್ರಹಗಳನ್ನು ಉಡಾವಣೆ ಮಾಡುತ್ತಿದೆ.

ಗುಪ್ತಚರ ಮಾಹಿತಿಯನ್ನು ಒದಗಿಸುವ ಉಪಗ್ರಹಗಳನ್ನು ಒಳಗೊಂಡ ರಾಕೆಟ್ ಅನ್ನು ಜಪಾನ್ ಶುಕ್ರವಾರ ಯಶಸ್ವಿಯಾಗಿ ಉಡಾವಣೆ ಮಾಡಿತು —ಎಪಿ/ ಪಿಟಿಐ ಚಿತ್ರ

## ಅರ್ಜಿ ತಿರಸ್ಕರಿಸಿ: ಐಸಿಜೆಗೆ ಇಸ್ರೇಲ್ ಮನವಿ

ದಿ ಹೇಗ್ (ರಾಯಿಟರ್ಸ್): ಗಾಜಾ ಪಟ್ಟಿಯಲ್ಲಿ ನಡೆಸುತ್ತಿರುವ ಸೇನಾ ಆಕ್ರಮಣವನ್ನು ತಕ್ಷಣವೇ ಕೊನೆಗೊಳಿಸಬೇಕೆಂಬ ದಕ್ಷಿಣ ಆಫ್ರಿಕಾದ ಬೇಡಿಕೆ ತಿರಸ್ಕರಿಸುವಂತೆ ಇಸ್ರೇಲ್ ಶುಕ್ರವಾರ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ (ಐಸಿಜೆ) ಮನವಿ ಸಲ್ಲಿಸಿದೆ.

ಗಾಜಾದಲ್ಲಿ ಪ್ಯಾಲೆಸ್ಟೀನ್ ಬಂಡುಕೋರರ ಸಂಘಟನೆ ಹಮಾಸ್ ವಿರುದ್ಧ ಇಸ್ರೇಲ್ 'ಜನಾಂಗೀಯ ಹತ್ಯೆ' ನಡೆಸುತ್ತಿದೆ ಎಂದು ಆರೋಪಿಸಿರುವ ದಕ್ಷಿಣ ಆಫ್ರಿಕಾ, ತಕ್ಷಣವೇ ಇಸ್ರೇಲ್‌ನ ಸೇನಾ ಕಾರ್ಯಾಚರಣೆ ನಿಲ್ಲಿಸಲು ನಿರ್ದೇಶನ ನೀಡಬೇಕೆಂದು ಮನವಿ ಮಾಡಿ ಅಂತರರಾಷ್ಟ್ರೀಯ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದೆ.

ಈ ಅರ್ಜಿಯ ಎರಡನೇ ದಿನದ ವಿಚಾರಣೆ ಆರಂಭವಾದಾಗ ಇಸ್ರೇಲ್ ವಿದೇಶಾಂಗ ಸಚಿವಾಲಯದ ಕಾನೂನು ಸಲಹೆಗಾರ ಟಾಲ್ ಬೇಕರ್ ಅವರು ದಕ್ಷಿಣ ಆಫ್ರಿಕಾದ ಈ ಅರ್ಜಿಯು ಮಾನಹಾನಿಕಾರವಾದುದು. ಹಾಗಾಗಿ ತಿರಸ್ಕರಿಸಬೇಕು ಎಂದು ನ್ಯಾಯಾಲಯಕ್ಕೆ ಮನವಿ ಮಾಡಿದರು.

## ತವರಿನಲ್ಲಿ ಪಿಂಕ್ ಪ್ಯಾಂಥರ್ಸ್ ಶುಭಾರಂಭ

ಜೈಪುರ: ಆತಿಥೇಯ ಪಿಂಕ್ ಪ್ಯಾಂಥರ್ಸ್ ತಂಡ, ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯ ಪಂದ್ಯದಲ್ಲಿ ಶುಕ್ರವಾರ 38–35ರಲ್ಲಿ ತೆಲುಗು ಟೈಟನ್ಸ್ ತಂಡವನ್ನು ಸೋಲಿಸಿ ತವರಿನ ಲೆಗ್‌ನಲ್ಲಿ ಶುಭಾರಂಭ ಮಾಡಿತು.

ಇಲ್ಲಿನ ಸವಾಯಿ ಮಾನ್‌ಸಿಂಗ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಪ್ಯಾಂಥರ್ಸ್ ಪರ ಅಮೋಘ ರೈಡಿಂಗ್ ಮಾಡಿದ ಅರ್ಜುನ್ ದೇಶ್ವಾಲ್ (17 ಅಂಕ) ಮತ್ತು ರೆಜಾ ಮಿರ್ಬಗೇರಿ (5) ಮಿಂಚಿದರು.

ಟೈಟನ್ಸ್ ಪರ ರೈಡರ್ ಪವನ್ ಸೆಹ್ರಾವತ್ (12 ಪಾಯಿಂಟ್ಸ್) 'ಸೂಪರ್ ಟೆನ್' ಸಾಧನೆ ಮಾಡಿದರೂ ತಂಡವನ್ನು ಗೆಲ್ಲಿಸಲು ಆಗಲಿಲ್ಲ. ಸಹ ಆಟಗಾರರಾದ ಸಂದೀಪ್ ಧುಲ್ ಆರು ಪಾಯಿಂಟ್ ಮತ್ತು ರಾಬಿನ್ ಚೌಧರಿ ಐದು ಅಂಕ ಕಲೆ ಹಾಕಿ ಬೆಂಬಲ ನೀಡಿದರು.

ಪಂದ್ಯದ ಆರಂಭದಿಂದಲೂ ಉಭಯ ತಂಡಗಳ ಆಟಗಾರರು ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಪ್ಯಾಂಥರ್ಸ್ ತಂಡವು ರೈಡಿಂಗ್‌ನಿಂದ 19 ಅಂಕ ಗಳಿಸಿದರೆ, ಟ್ಯಾಕಲ್‌ನಿಂದ 11 ಅಂಕ ಸಂಪಾದಿಸಿತು. ಅಲ್ಲದೆ, ಉಭಯ ತಂಡಗಳು ಎರಡು ಬಾರಿ ಆಲೌಟ್ ಆದವು.

11 ಪಂದ್ಯಗಳಿಂದ ಏಳು ಗೆದ್ದು 43 ಅಂಕಗಳೊಂದಿಗೆ ಪಿಂಕ್ ಪ್ಯಾಂಥರ್ಸ್ ಎರಡನೇ ಸ್ಥಾನದಲ್ಲಿದ್ದರೆ, ಹನ್ನೆರಡು ಪಂದ್ಯಗಳಲ್ಲಿ ಹನ್ನೊಂದು ಸೋತ ಟೈಟನ್ಸ್ ಕೊನೆಯ ಸ್ಥಾನದಲ್ಲಿದೆ.

**ಪುಣೇರಿಗೆ ಗೆಲುವು:** ಮತ್ತೊಂದು ಪಂದ್ಯದಲ್ಲಿ ಪುಣೇರಿ ಪಲ್ಟನ್ ತಂಡವು 37–17 ರಿಂದ ಗುಜರಾತ್ ಜೇಂಟ್ಸ್ ತಂಡವನ್ನು ಸೋಲಿಸಿತು. ಪುಣೇರಿ ಪರ ಅಸ್ಲಾಂ ಇನಾಮ್ದಾರ್ ಸೂಪರ್ ಟೆನ್ ಸಾಧನೆ ಮಾಡಿದರು. ಟ್ಯಾಕಲ್‌ನಲ್ಲಿ ಗೌರವ್ ಖತ್ರಿ ಮಿಂಚಿದರು.

## ಫುಟ್‌ಬಾಲ್ ಕೋಚ್ ಸೋಮುಸುಂದರ್ ನಿಧನ

ಬೆಂಗಳೂರು: ಸರ್ಕಾರಿ ಮುದ್ರಣಾಲಯ ತಂಡದ ಮಾಜಿ ಆಟಗಾರ, ರಾಜ್ಯ ಫುಟ್‌ಬಾಲ್ ಮಹಿಳಾ ತಂಡದ ಮಾಜಿ ಕೋಚ್ ಸೋಮು ಸುಂದರ್ (78) ಅವರು ಗುರುವಾರ ಹೊಸಕೋಟೆಯಲ್ಲಿ ನಿಧನರಾದರು. ಅವರಿಗೆ ಪುತ್ರ ಹಾಗೂ ಮೂವರು ಪುತ್ರಿಯರು ಇದ್ದಾರೆ.

1979ರಲ್ಲಿ ಅವರು ರಾಷ್ಟ್ರೀಯ ಜೂನಿಯರ್ ತಂಡಕ್ಕೆ ಕೋಚ್ ಆಗಿದ್ದರು. ಬೆಂಗಳೂರಿನ ಎನ್‌ಐಎಸ್ ಸರ್ಟಿಫಿಕೇಷನ್ ಕೋರ್ಸ್ ಮಾಡಿದ್ದರು. ಕರ್ನಾಟಕದ ತಂಡಗಳಿಗೆ ಕೋಚ್ ಆಗಿದ್ದರು.

### ರಾಂಚಿ: ಒಲಿಂಪಿಕ್ ಮಹಿಳಾ ಹಾಕಿ ಅರ್ಹತಾ ಟೂರ್ನಿ ಇಂದಿನಿಂದ

# ಭಾರತ ತಂಡಕ್ಕೆ ಇಂದು ಅಮೆರಿಕದ ಸವಾಲು

ರಾಂಚಿ (ಪಿಟಿಐ): ಭಾರತ ಮಹಿಳಾ ಹಾಕಿ ತಂಡ, ಶನಿವಾರ ಇಲ್ಲಿ ಆರಂಭವಾಗುವ ಎಫ್‌ಐಎಚ್ ಒಲಿಂಪಿಕ್ ಅರ್ಹತಾ ಟೂರ್ನಿಯ ಮೊದಲ ಪಂದ್ಯದಲ್ಲಿ ಅಮೆರಿಕ ತಂಡವನ್ನು ಎದುರಿಸಲಿದೆ. ಆತಿಥೇಯ ತಂಡ ತವರಿನಲ್ಲಿ ಆಡುವ ಪ್ರಯೋಜನ ಪಡೆದು ಪ್ಯಾರಿಸ್ ಒಲಿಂಪಿಕ್ಸ್‌ಗೆ ಟಿಕೆಟ್ ಗಿಟ್ಟಿಸಲು ತವಕದಿಂದ ಇದೆ.

ಏಷ್ಯನ್ ಗೇಮ್ಸ್‌ನಲ್ಲಿ ಮೂರನೇ ಸ್ಥಾನ ಪಡೆದು ನಿರಾಸೆ ಅನುಭವಿಸಿದ್ದ ಅದನ್ನು ಮರೆತು ಇಲ್ಲಿ ಉತ್ತಮ ಪ್ರದರ್ಶನ ನೀಡುವ ವಿಶ್ವಾಸದಲ್ಲಿದ್ದಾರೆ. ಈ ಟೂರ್ನಿಯಲ್ಲಿ ಅಗ್ರ ಮೂರು ಸ್ಥಾನ ಗಳಿಸುವ ತಂಡಗಳಿಗೆ ಒಲಿಂಪಿಕ್ಸ್‌ಗೆ ಟಿಕೆಟ್ ದೊರೆಯಲಿದೆ. ಇದಕ್ಕಾಗಿ ಎಂಟು ತಂಡಗಳು– ಆತಿಥೇಯ ಭಾರತ, ಜರ್ಮನಿ, ಝೆಕ್ ರಿಪಬ್ಲಿಕ್, ಇಟಲಿ, ಜಪಾನ್, ಅಮೆರಿಕ, ಚಿಲಿ ಮತ್ತು ನ್ಯೂಜಿಲೆಂಡ್ ತಂಡಗಳು ಸೆಣಸಾಟ ನಡೆಸಲಿವೆ.

ಪ್ಯಾರಿಸ್ ಒಲಿಂಪಿಕ್ಸ್ ಬರುವ ಜುಲೈ 26 ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ.

ವಿಶ್ವದ ಐದನೇ ಕ್ರಮಾಂಕದ ಜರ್ಮನಿ ಇಲ್ಲಿ ಅತಿ ಹೆಚ್ಚಿನ ರ್‍ಯಾಂಕ್ ಪಡೆದ ತಂಡವಾಗಿದೆ. ಭಾರತ (ಆರನೇ ಕ್ರಮಾಂಕ) ಎರಡನೇ ಉತ್ತಮ ರ್‍ಯಾಂಕ್‌ನ ತಂಡವಾಗಿದೆ.

ಸವಿತಾ ಪೂನಿಯಾ

ಭಾರತ, ನ್ಯೂಜಿಲೆಂಡ್, ಇಟಲಿ, ಅಮೆರಿಕ ತಂಡಗಳು 'ಬಿ' ಗುಂಪಿನಲ್ಲಿವೆ. ಭಾರತ ಎರಡನೇ ಪಂದ್ಯವನ್ನು ನ್ಯೂಜಿಲೆಂಡ್ ವಿರುದ್ಧ (ಜ. 14) ಮತ್ತು 3ನೇ ಪಂದ್ಯವನ್ನು ಇಟಲಿ (ಜ. 16) ವಿರುದ್ಧ ಆಡಲಿದೆ. ಸೆಮಿಫೈನಲ್ ಪಂದ್ಯಗಳು ಜ. 18ರಂದು ಮತ್ತು ಫೈನಲ್ ಜ. 19ರಂದು ನಿಗದಿಯಾಗಿವೆ. 1983 ರಿಂದೀಚೆಗೆ ಭಾರತ ಮತ್ತು ಅಮೆರಿಕ ತಂಡಗಳು 15 ಸಲ ಮುಖಾಮುಖಿ ಆಗಿದ್ದು, ಅಮೆರಿಕ ಒಂಬತ್ತು ಪಂದ್ಯಗಳಲ್ಲಿ, ಭಾರತ ನಾಲ್ಕು ಪಂದ್ಯಗಳಲ್ಲಿ ಜಯಗಳಿಸಿವೆ. ಎರಡು ಡ್ರಾ ಆಗಿವೆ.

'ಏಷ್ಯನ್ ಗೇಮ್ಸ್‌ನಲ್ಲಿ ನಾವು ಅರ್ಹತೆ ಪಡೆಯಲಿಲ್ಲ. ನಾವು ಅವಕಾಶ ಕಳೆದುಕೊಂಡಿದ್ದೆವು. ಆದರೆ ಹಳೆಯದರ ಬಗ್ಗೆ ತಲೆಕೆಡಿಸಿಕೊಂಡು ಕೂರುವುದಿಲ್ಲ' ಎಂದು ಭಾರತ ತಂಡದ ಚೀಫ್ ಕೋಚ್ ಯಾನೆಕ್ ಷೋಪ್ಮನ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಆದರೆ ಫಾರ್ವರ್ಡ್ ಆಟಗಾರ್ತಿ ವಂದನಾ ಕಟಾರಿಯಾ ಅವರು ತಂಡದಿಂದ ಹೊರಬಿದ್ದಿರುವುದು ತಂಡದ ತಯಾರಿಗೆ ಕೊಂಚ ಹಿನ್ನಡೆ ಉಂಟುಮಾಡಿದೆ. ಕೆಲದಿನಗಳ ಹಿಂದೆ ತರಬೇತಿಯ ವೇಳೆ ದವಡೆಯ ಮೂಳೆಮುರಿದ ಕಾರಣ ಅವರು ಆಡುತ್ತಿಲ್ಲ. 300 ಪಂದ್ಯಗಳನ್ನು ಆಡಿರುವ ಭಾರತದ ಮೊದಲ ಆಟಗಾರ್ತಿಯಾದ ವಂದನಾ, ಮುನ್ಪಡೆಯಲ್ಲಿ ಪ್ರಮುಖ ಸ್ಥಾನದಲ್ಲಿದ್ದರು. ಅವರ ಸ್ಥಾನದಲ್ಲಿ ಬಲ್ಜೀತ್ ಕೌರ್ ಅವಕಾಶ ಪಡೆದಿದ್ದಾರೆ. ಸವಿತಾ ಪೂನಿಯಾ ತಂಡವನ್ನು ಮುನ್ನಡೆಸಲಿದ್ದಾರೆ.

ಭಾರತದ ಆಟಗಾರ್ತಿಯರು 'ಪೆನಾಲ್ಟಿ ಕಾರ್ನರ್' ಪರಿವರ್ತನೆಯ ಪ್ರಮಾಣ ಹೆಚ್ಚಿಸುವತ್ತ ಗಮನಹರಿಸುತ್ತಿದ್ದಾರೆ. ದೀರ್ಘಕಾಲದಿಂದ ತಂಡ ಈ ಸಮಸ್ಯೆ ಎದುರಿಸುತ್ತಿದೆ. ಈ ನಿಟ್ಟಿನಲ್ಲಿ ಭಾರತದ ಹಿರಿಯ ಆಟಗಾರ ರೂಪಿಂದರ್‌ಪಾಲ್ ಸಿಂಗ್ ಜೊತೆಗೆ ಮುನ್ನಡೆ ಆಟಗಾರ್ತಿಯರಿಗೆ ಅಲ್ಪಾವಧಿಯ ತರಬೇತಿ ನಡೆದಿತ್ತು.

ದಿನದ ಇತರ ಪಂದ್ಯಗಳಲ್ಲಿ ಜರ್ಮನಿ ತಂಡ, ಚಿಲಿ ಎದುರು ಆಡಲಿದೆ. ಜಪಾನ್, ಝೆಕ್ ರಿಪಬ್ಲಿಕ್ ವಿರುದ್ಧ, ನ್ಯೂಜಿಲೆಂಡ್, ಇಟಲಿ ವಿರುದ್ಧ ಆಡಲಿವೆ.

## ಬ್ಯಾಡ್ಮಿಂಟನ್: ಸೆಮಿಫೈನಲ್‌ಗೆ ಸಾತ್ವಿಕ್–ಚಿರಾಗ್ ಜೋಡಿ

ಕ್ವಾಲಾಲಂಪುರ (ಪಿಟಿಐ): ಚೀನಾದ ರೆನ್ ಷಿಯಾಂಗ್ ಯು ಮತ್ತು ಹೆ ಜಿ ಟಿಂಗ್ ಅವರನ್ನು ನೇರ ಸೆಟ್‌ಗಳಿಂದ ಹಿಮ್ಮೆಟ್ಟಿಸಿದ ಭಾರತದ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಲೇಷ್ಯಾ ಓಪನ್ ಸೂಪರ್ 1000 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಶುಕ್ರವಾರ ಸೆಮಿಫೈನಲ್ ತಲುಪಿದರು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಸಾತ್ವಿಕ್– ಚಿರಾಗ್ ಜೋಡಿ 21–11, 21–8 ರಿಂದ ವಿಶ್ವ ಕ್ರಮಾಂಕದಲ್ಲಿ 32ನೇ ಸ್ಥಾನದಲ್ಲಿರುವ ಚೀನಾ ಜೋಡಿಯನ್ನು ಸೋಲಿಸಲು ಕೇವಲ 35 ನಿಮಿಷ ತೆಗೆದುಕೊಂಡಿತು.

ಏಷ್ಯನ್ ಗೇಮ್ಸ್ ಚಾಂಪಿಯನ್ನರಾದ ಭಾರತದ ಆಟಗಾರರು ಸೆಮಿಫೈನಲ್‌ನಲ್ಲಿ ಕೊರಿಯಾದ ಕಾಂಗ್ ಮಿನ್ ಹ್ಯುಕ್– ಸಿಯೊ ಸಿಯುಂಗ್ ಜೇ ಮತ್ತು ಮಲೇಷ್ಯಾದ ಆರೋನ್ ಚಿಯಾ– ಸೊಹ್ ವುಯಿ ಯಿಕ್ ನಡುವಣ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಮಹಿಳೆಯರ ಡಬಲ್ಸ್‌ನ ಕ್ವಾರ್ಟರ್ ಫೈನಲ್‌ನಲ್ಲಿ ಅಶ್ವಿನಿ ಪೊನ್ನಪ್ಪ– ತನಿಶಾ ಕ್ರಾಸ್ಟೊ ಜೋಡಿ ಸೋಲನುಭವಿಸಿತು. ವಿಶ್ವ ಕ್ರಮಾಂಕದಲ್ಲಿ 15ನೇ ಸ್ಥಾನದಲ್ಲಿರುವ ಜಪಾನ್‌ನ ಇವಾನಾಗಾ– ನಕಾನಿಶಿ ಜೋಡಿ 21–15, 21–13 ರಿಂದ ಭಾರತದ ಆಟಗಾರ್ತಿಯರ ಮೇಲೆ ಗೆಲ್ಲಲು 39 ನಿಮಿಷ ತೆಗೆದುಕೊಂಡಿತು.